ಶನಿವಾರ, ಜುಲೈ 15, 2023 | ₹ 7.00

www.prajavani.net

prajavani.net prajavani prajavani prajavani

# ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

**ಚಂದ್ರಯಾನ**

‘ಚಂದ್ರಯಾನ–3’ ನೌಕೆ ಹೊತ್ತ ರಾಕೆಟ್ ನಭಕ್ಕೆ ಚಿಮ್ಮಿದ ಕ್ಷಣವನ್ನು ಶುಕ್ರವಾರ ಶಾಲಾ ವಿದ್ಯಾರ್ಥಿನಿಯರು ಕಣ್ತುಂಬಿಕೊಂಡರು




ಹೊಸ ಸೀಸನ್ ಕಲೆಕ್ಷನ್ ಈಗ ಸ್ಟೋರ್‌ಗಳಲ್ಲಿ

TRENDS MAN | TRENDS WOMAN | TRENDS junior | TRENDS FOOTWEAR

ಅಕ್ರಮ ವಹಿವಾಟು ಪತ್ತೆಗೆ ಪ್ರಯತ್ನ • ತಾಂತ್ರಿಕ ಪುರಾವೆ ಸಂಗ್ರಹಿಸಲು ನುರಿತ ಸಿಬ್ಬಂದಿಯ ತಂಡ ರಚನೆ

# ಬಿಟಿಸಿ 'ಅಡ್ರೆಸ್' ಜಾಡು ಬೆನ್ನತ್ತಿದ ಎಸ್‌ಐಟಿ

• ಸಂತೋಷ ಜಿಗಳಿಕೊಪ್ಪ

**ಬೆಂಗಳೂರು:** ಬಿಟ್ ಕಾಯಿನ್ (ಬಿಟಿಸಿ) ಅಕ್ರಮ ವಹಿವಾಟು ನಡೆದಿರುವ ನೂರಾರು 'ಯೂನಿಕ್ ಅಡ್ರೆಸ್'ಗಳ ಜಾಡು ಹಿಡಿದಿರುವ ವಿಶೇಷ ತನಿಖಾ ತಂಡ (ಎಸ್‌ಐಟಿ), ಪ್ರಕರಣಕ್ಕೆ ಅಗತ್ಯವಿರುವ ತಾಂತ್ರಿಕ ಪುರಾವೆಗಳನ್ನು ಸಂಗ್ರಹಿಸುತ್ತಿದೆ.

ಅಂತರರಾಷ್ಟ್ರೀಯ ಹ್ಯಾಕರ್ ಶ್ರೀಕೃಷ್ಣ ಅಲಿಯಾಸ್ ಶ್ರೀಕಿ ಹಾಗೂ ಇತರರ ವಿರುದ್ಧ ಕಾಟನ್‌ಪೇಟೆಯಲ್ಲಿ ದಾಖಲಾಗಿದ್ದ ಪ್ರಕರಣದ ತನಿಖೆ ಕೈಗೆತ್ತಿಕೊಂಡಿರುವ ಎಸ್‌ಐಟಿ ಅಧಿಕಾರಿಗಳು, ಪುರಾವೆಗಳನ್ನು ಸಂಗ್ರಹಿಸಲು ನುರಿತ ಸಿಬ್ಬಂದಿಯ ತಂಡ ರಚಿಸಿದ್ದಾರೆ.

ಕಾಟನ್‌ಪೇಟೆ ಪ್ರಕರಣದ ಕಡತಗಳನ್ನು ಪಡೆದಿರುವ ಸಿಬ್ಬಂದಿ, ಅದರ ತಾಂತ್ರಿಕ ಸಂಗತಿಗಳ ಬಗ್ಗೆ ತನಿಖೆ ನಡೆಸುತ್ತಿದ್ದಾರೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ಸಕ್ರಿಯವಾಗಿರುವ ಹಣ ವಿನಿಮಯ ಕಂಪನಿಗಳು, ಇತರೆ ಸಂಸ್ಥೆಗಳ ಮೂಲಕ ನಡೆದಿರುವ ವ್ಯವಹಾರದ ಬಗ್ಗೆ ತಿಳಿದುಕೊಳ್ಳುತ್ತಿದ್ದಾರೆ. ಡಾರ್ಕ್‌ನೆಟ್ ಮೂಲಕವೂ ಬಿಟ್ ಕಾಯಿನ್ ವರ್ಗಾವಣೆ ಆಗಿರುವ ಮಾಹಿತಿ ಇದೆ. ಈ ಆಯಾಮದಲ್ಲೂ ಎಸ್‌ಐಟಿ ತನಿಖೆ ಚುರುಕುಗೊಳಿಸಿದೆ.

**ನಿಗೂಢ ಹಣದ ವರ್ಗಾವಣೆಗೆ 'ಅಡ್ರೆಸ್' ಪುರಾವೆ:** ಕಂಪ್ಯೂಟರ್ ಅಥವಾ ಮೊಬೈಲ್‌ನಲ್ಲಿ ಅಂಕಿಗಳ ರೂಪದಲ್ಲಷ್ಟೇ ನೋಡಲು ಸಿಗುವ ನಾಣ್ಯವೇ ಬಿಟ್ ಕಾಯಿನ್ (ಬಿಟಿಸಿ). 2009ರಲ್ಲಿ 'ಕ್ರಿಪ್ಟೋಗ್ರಫಿ' ತಂತ್ರಜ್ಞಾನದ ಮೂಲಕ ಸೃಷ್ಟಿಸಲಾದ ಈ ಡಿಜಿಟಲ್ ಕರೆನ್ಸಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಚ್ಚು ಸದ್ದು ಮಾಡುತ್ತಿದೆ. ಬಿಟ್ ಕಾಯಿನ್ ವಹಿವಾಟು ಹಾಗೂ ಬಿಟ್ ಕಾಯಿನ್‌ಗಳನ್ನು ಆಯಾ ದೇಶದ ಕರೆನ್ಸಿಗಳಿಗೆ ವಿನಿಮಯ ಮಾಡಿಕೊಳ್ಳಲು ಹಲವು ಕಂಪನಿಗಳು ಕಾರ್ಯ ನಿರ್ವಹಿಸುತ್ತಿವೆ. ಬಳಕೆದಾರರ ವೈಯಕ್ತಿಕ ಮಾಹಿತಿ ಗೋಪ್ಯವಾಗಿರಿಸಿ ಬಿಟ್ ಕಾಯಿನ್ ವಹಿವಾಟಿಗೆ 'ಯೂನಿಕ್ ಅಡ್ರೆಸ್' ನೀಡಲಾಗುತ್ತದೆ.

ರಾಜ್ಯದಲ್ಲಿ ನಡೆದಿರುವ ಬಿಟ್ ಕಾಯಿನ್ ಪ್ರಕರಣದಲ್ಲೂ ಯೂನಿಕ್ ಅಡ್ರೆಸ್‌ಗಳು ಸದ್ಯದ ಪುರಾವೆಗಳಾಗಿವೆ. ಇವುಗಳನ್ನು ಬಳಸಿಕೊಂಡು ತನಿಖೆ ಮುಂದುವರಿಸಿರುವ ಎಸ್‌ಐಟಿ, ಆರೋಪಿಗಳ ವೈಯಕ್ತಿಕ ಮಾಹಿತಿ ಸಂಗ್ರಹಿಸಲು ಹೊರಟಿದೆ.

**ಪರಿಣಿತರ ತಂಡ, ಸದ್ಯಕ್ಕೆ ಸಹಾಯ ಬೇಕಿಲ್ಲ:** 'ಪ್ರಕರಣ ಭೇದಿಸಲು ರಚಿಸಿರುವ ಎಸ್‌ಐಟಿ ತಂಡದಲ್ಲಿ ಪರಿಣಿತರು, ತಾಂತ್ರಿಕ ಜ್ಞಾನವುಳ್ಳವರು ಇದ್ದಾರೆ. ಹೀಗಾಗಿ, ಬೇರೆ ದೇಶದವರ ಸಹಾಯ ಸದ್ಯಕ್ಕೆ ಬೇಕಿಲ್ಲ. ಯಾವುದಾದರೂ ಪುರಾವೆಗಳು ಸಿಕ್ಕರೆ, ಅದರ ಬಗ್ಗೆ ಹೆಚ್ಚಿನ ವಿವರಣೆ ಪಡೆಯಲು ಮಾತ್ರ ಸಂಪರ್ಕಿಸಲಾಗುವುದು' ಎಂದು ಮೂಲಗಳು ಹೇಳಿವೆ.

### 'ಬಿಟಿಸಿ ವ್ಯವಹಾರಕ್ಕೆ ಕೆವೈಸಿ ಕಡ್ಡಾಯ'

'ಬಿಟ್ ಕಾಯಿನ್ ವಹಿವಾಟು ನಡೆಸುವ ಜನರು ಕೆವೈಸಿ (ನಿಮ್ಮ ಗ್ರಾಹಕರನ್ನು ಅರಿತುಕೊಳ್ಳಿ) ನೀಡುವುದನ್ನು ಹಲವು ಕಂಪನಿಗಳು ಕಡ್ಡಾಯಗೊಳಿಸಿವೆ. ಇದರ ನಡುವೆಯೇ ಕೆಲ ಕಂಪನಿಗಳು, ಕೆವೈಸಿ ಇಲ್ಲದೇ ವ್ಯವಹಾರಕ್ಕೆ ಅವಕಾಶ ನೀಡಿವೆ' ಎಂದು ಮೂಲಗಳು ತಿಳಿಸಿವೆ.

'ಯಾರಿಂದ? ಯಾರಿಗೆ? ಯಾವ ರೂಪದಲ್ಲಿ ಹಣ ವರ್ಗಾವಣೆ ಆಗಿದೆ? ಎಂಬ ಮಾಹಿತಿ ತಿಳಿಯುವುದು ಸದ್ಯಕ್ಕೆ ಕಷ್ಟ. ಒಂದೊಂದೇ ಪುರಾವೆಗಳ ಜಾಡು ಹಿಡಿಯುತ್ತ ತನಿಖೆ ಮುಂದುವರಿಸಲಾಗಿದೆ. ಇದಕ್ಕೆ ತಾಂತ್ರಿಕ ತಜ್ಞರ ಸಹಾಯ ಪಡೆಯಲಾಗುತ್ತಿದೆ' ಎಂದು ಮೂಲಗಳು ಹೇಳಿವೆ.

### '11 ಪುಟಗಳ ಶ್ರೀಕಿ ಹೇಳಿಕೆ ಅಸಿಂಧು'

ಪ್ರಕರಣದ ಪ್ರಮುಖ ಆರೋಪಿ ಶ್ರೀಕೃಷ್ಣ ಅಲಿಯಾಸ್ ಶ್ರೀಕಿ, ಕಾಟನ್‌ಪೇಟೆ ಪ್ರಕರಣದಲ್ಲಿ 11 ಪುಟಗಳ ಸ್ವಹಸ್ತ ಹೇಳಿಕೆ ನೀಡಿದ್ದ. ಯಾವೆಲ್ಲ ಕಂಪನಿಗಳ ಸರ್ವರ್ ಹ್ಯಾಕ್ ಮಾಡಲಾಗಿದೆ? ಎಷ್ಟು ಬಿಟ್ ಕಾಯಿನ್ ಕದಿಯಲಾಗಿದೆ? ಕದ್ದ ಬಿಟ್ ಕಾಯಿನ್ ಯಾರಿಗೆ ವರ್ಗಾವಣೆ ಮಾಡಲಾಗಿದೆ? ಜಾಲತಾಣಗಳನ್ನು ಹೇಗೆ ಹ್ಯಾಕ್ ಮಾಡಲಾಗಿದೆ? ಎಂದಿತ್ಯಾದಿ ಮಾಹಿತಿ ಹೇಳಿಕೆಯಲ್ಲಿದೆ.

ಇದೇ ಹೇಳಿಕೆಯನ್ನು ಪರಿಶೀಲಿಸುತ್ತಿರುವ ಎಸ್‌ಐಟಿ, ಪ್ರತಿಯೊಂದು ಸಂಗತಿಗಳ ಬಗ್ಗೆ ಪುರಾವೆ ಸಂಗ್ರಹಿಸಲು ಮುಂದಾಗಿದೆ. ಆದರೆ, ಆರೋಪಿ ನೀಡಿರುವ ಈ ಹೇಳಿಕೆ ಕಾನೂನಿನಡಿ ಅಸಿಂಧು ಆಗುವುದರಿಂದ ಕಾನೂನು ತಜ್ಞರ ಸಲಹೆ ಪಡೆಯಲಾಗುತ್ತಿದೆ. ಹೀಗಾಗಿ, ನ್ಯಾಯಾಲಯದಲ್ಲಿ ಒಪ್ಪುವ ಪುರಾವೆಗಳನ್ನು ಸಂಗ್ರಹಿಸುವತ್ತ ಎಸ್‌ಐಟಿ ಚಿತ್ತ ಹರಿಸಿದೆ.

## ಸುದ್ದಿ 2 ನಿಮಿಷ

### ಸಂಸ್ಕೃತಿ ಸಚಿವಾಲಯದ ವಿದ್ಯಾರ್ಥಿ ವೇತನಕ್ಕೆ ಅದಿತಿ ಆಯ್ಕೆ

**ಬೆಂಗಳೂರು:** ಸಂಸ್ಕೃತಿ ಸಚಿವಾಲಯದ ಸಾಂಸ್ಕೃತಿಕ ಸಂಪನ್ಮೂಲ ಮತ್ತು ತರಬೇತಿ ಕೇಂದ್ರ ನಡೆಸಿದ ಯುವ ಪ್ರತಿಭಾ ಶೋಧದಲ್ಲಿ ಇಲ್ಲಿನ ಜಾನಪದ ಹಾಗೂ ಯಕ್ಷಗಾನ ಕಲಾವಿದ ಅದಿತಿ ಉರಾಳ ವಿದ್ಯಾರ್ಥಿ ವೇತನಕ್ಕೆ ಆಯ್ಕೆಯಾಗಿದ್ದಾರೆ.

ಇವರು ಕುಂದಾಪುರದ ಕೋಟ ಗ್ರಾಮದ ಉರಾಳದವರಾಗಿದ್ದಾರೆ. ಯಕ್ಷಗಾನ ಕಲಾವಿದ, ಕಲಾಕದಂಬ ಆರ್ಟ್ ಸೆಂಟರ್ ಸಾಂಸ್ಕೃತಿಕ ಸಂಸ್ಥೆಯ ನಿರ್ದೇಶಕ ರಾಧಾಕೃಷ್ಣ ಉರಾಳ ಹಾಗೂ ಶಿಕ್ಷಕಿ ಮಮತಾ ಉರಾಳ ಅವರ ಮಗಳಾಗಿದ್ದು, ಸ್ನಾತಕೋತ್ತರ ಪದವಿ ವ್ಯಾಸಂಗ ಮಾಡುತ್ತಿದ್ದಾರೆ.

ಜಾನಪದ, ರಂಗಭೂಮಿ ಹಾಗೂ ಯಕ್ಷಗಾನ ಕ್ಷೇತ್ರದಲ್ಲಿ ಇವರು ತಮ್ಮನ್ನು ತೊಡಗಿಸಿಕೊಂಡಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

### ಶ್ರವಣ ಪರೀಕ್ಷೆ: ಸಿ.ವಿ. ರಾಮನ್ ಆಸ್ಪತ್ರೆಯಲ್ಲಿ ಶಬ್ದರಹಿತ ಕೊಠಡಿ

**ಬೆಂಗಳೂರು:** ಶ್ರವಣ ಪರೀಕ್ಷೆಗೆ ಇಲ್ಲಿನ ಸರ್.ಸಿ.ವಿ. ರಾಮನ್ ಸಾರ್ವಜನಿಕ ಆಸ್ಪತ್ರೆಯಲ್ಲಿ ಶಬ್ದರಹಿತ ಕೊಠಡಿ (ಆಡಿಯೋ ಮೆಟ್ರಿ ರೂಮ್) ನಿರ್ಮಿಸಿ, ಪರೀಕ್ಷೆ ಪ್ರಾರಂಭಿಸಲಾಗಿದೆ.

ಈ ಕೇಂದ್ರ ನಿರ್ಮಾಣದಿಂದ ನಿಖರ ಪರೀಕ್ಷೆ ಸಾಧ್ಯವಾಗಿದೆ. ಇಲ್ಲಿ ಪರೀಕ್ಷೆ ನಡೆಸುವ ಸಂಬಂಧ ಆಸ್ಪತ್ರೆಯು ಖಾಸಗಿ ವಾಕ್–ಶ್ರವಣ ಸಂಸ್ಥೆಯೊಂದರ ಜತೆಗೆ ಒಪ್ಪಂದ ಮಾಡಿಕೊಂಡಿದೆ. ಪ್ರತಿ ಸೋಮವಾರ, ಬುಧವಾರ ಮತ್ತು ಗುರುವಾರದಂದು ಉಚಿತವಾಗಿ ಶ್ರವಣ ಪರೀಕ್ಷೆ ನಡೆಸಲಾಗುತ್ತಿದೆ. ₹ 6 ಲಕ್ಷದಲ್ಲಿ ಈ ಕೇಂದ್ರ ನಿರ್ಮಿಸಲಾಗಿದ್ದು, ಖಾಸಗಿ ಕೇಂದ್ರದ ಸಹಯೋಗದಲ್ಲಿ ಅತ್ಯಾಧುನಿಕ ಹಾಗೂ ಮುಂದುವರಿದ ತಂತ್ರಜ್ಞಾನದ ಉಪಕರಣಗಳನ್ನು ಅಳವಡಿಸಿಕೊಳ್ಳಲಾಗಿದೆ.

'ಶ್ರವಣ ಪರೀಕ್ಷೆಯ ನಿಖರ ಫಲಿತಾಂಶಕ್ಕೆ ಶಬ್ದ ರಹಿತ ಕೊಠಡಿ ಸಹಕಾರಿ. ಸಾಮಾನ್ಯ ಕೊಠಡಿಗಳಲ್ಲಿ ಸುತ್ತಮುತ್ತಲಿನ ಶಬ್ದಗಳು ಕೇಳಿಸುವುದರಿಂದ ನಿಖರ ಫಲಿತಾಂಶ ದೊರೆಯುವುದಿಲ್ಲ. ಹೀಗಾಗಿ, ಕೊಠಡಿಯನ್ನು ಶಬ್ದ ರಹಿತ ಮಾಡಲಾಗಿದೆ. ಇಲ್ಲಿ ಎಲ್ಲರೂ ಪರೀಕ್ಷೆ ಮಾಡಿಸಿಕೊಳ್ಳಬಹುದು. ನವಜಾತ ಶಿಶುಗಳ ಶ್ರವಣ ಪರೀಕ್ಷೆಗೆ ಕೇಂದ್ರದಲ್ಲಿ ಆದ್ಯತೆ ನೀಡಲಾಗಿದೆ' ಎಂದು ಆಸ್ಪತ್ರೆಯ ವೈದ್ಯರೊಬ್ಬರು ತಿಳಿಸಿದರು.

'6 ವರ್ಷದೊಳಗಿನ ಮಕ್ಕಳಿಗೆ ಗಂಭೀರ ಸ್ವರೂಪದ ಶ್ರವಣ ದೋಷ ಇದ್ದಲ್ಲಿ, ಕಾಕ್ಲಿಯರ್ ಇಂಪ್ಲಾಂಟ್ ಶಸ್ತ್ರಚಿಕಿತ್ಸೆಗೆ ಶಿಫಾರಸು ಮಾಡಲಾಗುವುದು. ಶ್ರವಣದೋಷ ಸಮಸ್ಯೆ ತಡೆಗೆ ನಿಯಮಿತ ಶ್ರವಣ ಪರೀಕ್ಷೆ ಅಗತ್ಯ. ನವಜಾತ ಶಿಶುಗಳು, ಗರ್ಭಿಣಿಯರಿಗೆ ಶ್ರವಣ ಪರೀಕ್ಷೆ ಸೇರಿ ವಿವಿಧ ಮುನ್ನೆಚ್ಚರಿಕೆ ಕ್ರಮಗಳಿಂದ ಶ್ರವಣದೋಷ ಸಮಸ್ಯೆ ತಡೆಯಲು ಸಾಧ್ಯ' ಎಂದು ಹೇಳಿದರು.

### ಪಾರ್ಥಿವ ಶರೀರ ರವಾನೆ: ಎಸ್‌ಒಪಿ ಪ್ರಚುರಪಡಿಸಿ

**ನವದೆಹಲಿ (ಪಿಟಿಐ):** ವಿದೇಶದಲ್ಲಿ ಮೃತರಾಗುವ ಭಾರತೀಯರ ಪಾರ್ಥಿವ ಶರೀರವನ್ನು ತಾಯ್ನಾಡಿಗೆ ತರುವ ವೇಳೆ ಅನುಸರಿಸುವ ಪ್ರಮಾಣಿತ ಕಾರ್ಯಾಚರಣೆ ವಿಧಾನವನ್ನು (ಎಸ್‌ಒಪಿ) ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಿ, ವ್ಯಾಪಕವಾಗಿ ಪ್ರಚುರಪಡಿಸುವಂತೆ ದೆಹಲಿ ಹೈಕೋರ್ಟ್ ನಿರ್ದೇಶನ ನೀಡಿದೆ.

ವಿದೇಶಗಳಲ್ಲಿರುವ ಭಾರತೀಯ ಸಮುದಾಯದವರಿಗಾಗಿ ಸ್ಥಾಪಿಸಿರುವ ಕಲ್ಯಾಣ ನಿಧಿಯ ಮಾರ್ಗಸೂಚಿಗಳ ಬಗ್ಗೆಯೂ ಸಾರ್ವಜನಿಕರಿಗೆ ಮಾಹಿತಿ ನೀಡಬೇಕು ಎಂದೂ ನ್ಯಾಯಮೂರ್ತಿ ನಜ್ಮಿ ವಜೀರಿ ನೇತೃತ್ವದ ನ್ಯಾಯಪೀಠವು ವಿದೇಶಾಂಗ ವ್ಯವಹಾರಗಳ ಸಚಿವಾಲಯಕ್ಕೆ ಸೂಚಿಸಿದೆ.

ಸಚಿವಾಲಯದ ವೆಬ್‌ಸೈಟ್‌ನಲ್ಲಿ ಎಸ್‌ಒಪಿ ಈಗಾಗಲೇ ಲಭ್ಯವಿಲ್ಲದಿದ್ದರೆ ಈ ಆದೇಶದ ಪ್ರತಿ ಲಭಿಸಿದ ಒಂದು ವಾರದೊಳಗೆ ಪ್ರಕಟಿಸಬೇಕು ಎಂದು ನ್ಯಾಯಮೂರ್ತಿ ಸುಧೀರ್ ಕುಮಾರ್ ಜೈನ್ ಅವರನ್ನೊಳಗೊಂಡ ನ್ಯಾಯಪೀಠ ಹೇಳಿದೆ.

ಮಾಲ್ದೀವ್ಸ್‌ನಲ್ಲಿ ಮೃತಪಟ್ಟಿದ್ದ ಭಾರತೀಯರೊಬ್ಬರ ಪಾರ್ಥಿವ ಶರೀರವನ್ನು ತಾಯ್ನಾಡಿಗೆ ತರುವ ವೇಳೆ ಎದುರಾದ ಸಮಸ್ಯೆಗಳ ಕುರಿತು ಸಲ್ಲಿಕೆಯಾಗಿದ್ದ ಅರ್ಜಿಯ ವಿಚಾರಣೆ ನಡೆಸಿ ನ್ಯಾಯಪೀಠವು ಈ ಆದೇಶ ನೀಡಿದೆ.

# ತರಕಾರಿ ಖರೀದಿಗೆ ದಿನಕ್ಕೆ ಒಂದೂವರೆ ರೂಪಾಯಿ!

## ಅಂಗನವಾಡಿ ಮೂಲಕ ಗರ್ಭಿಣಿಯರು, ಬಾಣಂತಿಯರಿಗೆ ಆಹಾರ: ಅವೈಜ್ಞಾನಿಕ ದರ

• ಪ್ರಮೋದ

ಪ್ರಜಾವಾಣಿ ವಿಶೇಷ

**ಕೊಪ್ಪಳ:** ಗರ್ಭಿಣಿಯರು ಹಾಗೂ ಬಾಣಂತಿಯರಿಗೆ ಅಂಗನವಾಡಿಗಳ ಮೂಲಕ ನೀಡುವ ಪೌಷ್ಟಿಕ ಆಹಾರಕ್ಕೆ ಬಳಸಲು ತರಕಾರಿ ಖರೀದಿಗಾಗಿ ಒಬ್ಬರಿಗೆ ವಾರದಲ್ಲಿ ಮೂರು ದಿನ ಒಂದೂವರೆ ರೂಪಾಯಿ, ಇನ್ನು ಮೂರು ದಿನ ಒಂದು ರೂಪಾಯಿಯನ್ನು ಸರ್ಕಾರ ಕೊಡುತ್ತಿದೆ!

ತರಕಾರಿ ಬೆಲೆ ದಿನದಿಂದ ದಿನಕ್ಕೆ ಏರುತ್ತಿರುವ ಸಂದರ್ಭದಲ್ಲಿ ಈ ಅತ್ಯಲ್ಪ ಹಣದಿಂದ ಸರ್ಕಾರದ ಆಶಯ ಈಡೇರುತ್ತಿಲ್ಲ. ಮಾತೃಪೂರ್ಣ ಯೋಜನೆ ಯಲ್ಲಿ ಪೌಷ್ಟಿಕಾಂಶ ಆಹಾರ ನೀಡುವ ಯೋಜನೆ ಜಾರಿಗೆ ಬಂದರೂ ಪರಿಣಾಮಕಾರಿಯಾಗಿಲ್ಲ ಎಂಬ ದೂರುಗಳು ಕೇಳಿಬಂದಿವೆ.

ಪ್ರತಿ ಸೋಮವಾರ, ಬುಧವಾರ, ಶುಕ್ರವಾರ ಅನ್ನ ಹಾಗೂ ಸಾಂಬಾರ್ ನೀಡಲಾಗುತ್ತಿದೆ. ಪೌಷ್ಟಿಕಾಂಶ ಒದಗಿಸುವ ತರಕಾರಿಗಳನ್ನು ಸಾಂಬಾರ್‌ನಲ್ಲಿ ಬಳಸಲು ಒಬ್ಬ ಗರ್ಭಿಣಿ ಹಾಗೂ ಬಾಣಂತಿಗೆ ಒಂದೂವರೆ ರೂಪಾಯಿ ಕೊಡಲಾಗುತ್ತಿದೆ. ಮಂಗಳವಾರ ಚಿತ್ರಾನ್ನ, ಗುರುವಾರ ಅಕ್ಕಿ ಕಿಚಡಿ ಮತ್ತು ಶನಿವಾರ ಉಪ್ಪಿಟ್ಟು ನೀಡಲಾಗುತ್ತಿದ್ದು, ಈ ಮೂರು ದಿನಗಳ ಅಡುಗೆಯ ತರಕಾರಿಗೆ ಒಬ್ಬರಿಗೆ ತಲಾ ಒಂದು ರೂಪಾಯಿ ನಿಗದಿ ಮಾಡಲಾಗಿದೆ.

ಆಯಾ ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿ ನೇತೃತ್ವದಲ್ಲಿ ಸಮಿತಿ ರಚಿಸಿ ಯಾವ ಆಹಾರ ನೀಡಬೇಕು ಎಂದು ನಿರ್ಧರಿಸಲಾಗುತ್ತದೆ. ಆದರೆ, ಅನುದಾನ ರಾಜ್ಯದಲ್ಲಿ ಒಂದೇ ರೀತಿಯಾಗಿದೆ. ಈಗ ಟೊಮೆಟೊ ಹಾಗೂ ಹಸಿ ಮೆಣಸಿನಕಾಯಿ ಪ್ರತಿ ಕೆ.ಜಿ.ಗೆ ₹100ರ ಗಡಿ ದಾಟಿವೆ. ಸಾಂಬಾರ್ ತಯಾರಿಸಲು ಬಳಸುವ ತರಕಾರಿ ಹಾಗೂ ಇತರ ವಸ್ತುಗಳ ಬೆಲೆ ಕೂಡ ಹೆಚ್ಚಾಗಿದೆ. ರಾಜ್ಯದಲ್ಲಿ ಸುಮಾರು 70 ಸಾವಿರ ಅಂಗನವಾಡಿ ಕೇಂದ್ರಗಳಿವೆ. 3.75 ಲಕ್ಷ ಗರ್ಭಿಣಿಯರು ಮತ್ತು 3.68 ಲಕ್ಷ ಬಾಣಂತಿಯರು ಇದ್ದಾರೆ.

ಸರ್ಕಾರ ತರಕಾರಿಗೆ ಕಡಿಮೆ ಹಣ ನಿಗದಿ ಮಾಡಿದ್ದರಿಂದ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರು ಇಕ್ಕಟ್ಟಿಗೆ ಸಿಲುಕಿದ್ದು, ರುಚಿಕಟ್ಟಾದ ಆಹಾರ ತಯಾರಿಸಲು ಸಾಧ್ಯವಾಗದೇ ಫಲಾನುಭವಿಗಳಿಂದ ಟೀಕೆ ಎದುರಿಸಬೇಕಾಗುತ್ತಿದೆ.

'ಬಹಳಷ್ಟು ಅಂಗನವಾಡಿಗಳಲ್ಲಿ ಮೂರ್ನಾಲ್ಕು ಜನ ಗರ್ಭಿಣಿಯರು ಹಾಗೂ ಬಾಣಂತಿಯರು ಬಂದರೆ ಅದೇ ಹೆಚ್ಚು. ಇಷ್ಟೊಂದು ಕಡಿಮೆ ಫಲಾನುಭವಿಗಳಿಗೆ ಹೆಚ್ಚು ತರಕಾರಿ ಬಳಸಿ ಸಾಂಬಾರ್ ತಯಾರಿಸುವುದು ಅಸಾಧ್ಯ. ಹೀಗಾಗಿ ಯಾವುದು ಕಡಿಮೆ ಬೆಲೆಗೆ ಸಿಗುತ್ತದೆಯೋ ಅದನ್ನು ತಂದು, ಇಲ್ಲವೇ ತರಕಾರಿ ಇಲ್ಲದೆ ಸಾಂಬಾರ್ ಮಾಡಿ ಕೊಡಲಾಗುತ್ತಿದೆ. ಬಹಳಷ್ಟು ಗರ್ಭಿಣಿಯರು ಅಂಗನವಾಡಿಗಳಿಗೆ ಬರಲು ಹಿಂದೇಟು ಹಾಕುತ್ತಿದ್ದಾರೆ. ತರಕಾರಿಗೆ ಹೊಸ ಬೆಲೆ ನಿಗದಿ ಮಾಡಬೇಕು' ಎಂದು ರಾಜ್ಯ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಫೆಡರೇಷನ್ (ಎಐಟಿಯುಸಿ ಸಂಯೋಜಿತ) ಜಿಲ್ಲಾ ಸಂಚಾಲಕಿ ಮುಮ್ತಾಜ್ ಬೇಗಂ ಕಂದಗಲ್ ಪ್ರತಿಪಾದಿಸುತ್ತಾರೆ.

### 'ಹಣಕಾಸು ಇಲಾಖೆಗೆ ಪತ್ರ ಬರೆಯುವೆ'

'ಅಂಗನವಾಡಿಗೆ ಬರುವ ಗರ್ಭಿಣಿಯರು ಮತ್ತು ಬಾಣಂತಿಯರಿಗೆ ತರಕಾರಿ ಹಾಗೂ ಗುಣಮಟ್ಟದ ಪೌಷ್ಟಿಕ ಆಹಾರ ನೀಡಲು ಮೂರು ವರ್ಷಗಳ ಹಿಂದೆ ಮೊತ್ತ ಪರಿಷ್ಕರಣೆ ಮಾಡಲಾಗಿದೆ. ಆಗ ನಿಗದಿ ಮಾಡಿದ ಮೊತ್ತಕ್ಕೆ ಈಗ ಏನೂ ಬರುವುದಿಲ್ಲ ಎನ್ನುವ ವಿಚಾರ ಗಮನಕ್ಕೆ ಬಂದಿದೆ. ಈ ಕುರಿತು ಹಣಕಾಸು ಇಲಾಖೆಗೆ ಪತ್ರ ಬರೆಯುತ್ತೇನೆ' ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ 'ಪ್ರಜಾವಾಣಿ' ಪ್ರತಿಕ್ರಿಯಿಸಿದರು.

'ಕೆಲ ದಿನಗಳಲ್ಲಿ ಗರ್ಭಿಣಿಯರು ಹಾಗೂ ಬಾಣಂತಿಯರಿಗೆ ಮನೆಗೆ ಪಡಿತರ ಕೊಡುವ ವ್ಯವಸ್ಥೆ ಜಾರಿಗೆ ಮಾಡಲಾಗುವುದು' ಎಂದರು.

### ಕೃಷಿ ಡೀಸೆಲ್ ಸಹಾಯ ಧನ ₹ 500ಕ್ಕೆ ಹೆಚ್ಚಿಸುವ ಸಾಧ್ಯತೆ

**ಬೆಂಗಳೂರು:** ರೈತ ಶಕ್ತಿ ಯೋಜನೆಯಡಿ ಕೃಷಿ ಬಳಕೆಗಾಗಿ ನೀಡುವ ಡೀಸೆಲ್ ಸಹಾಯ ಧನವನ್ನು ಪ್ರತಿ ಎಕರೆಗೆ ₹ 250ರಿಂದ ₹ 500ಕ್ಕೆ ಹೆಚ್ಚಳ ಮಾಡುವ ಕುರಿತು ಪರಿಶೀಲಿಸಲಾಗು ವುದು ಎಂದು ಕೃಷಿ ಸಚಿವ ಎನ್. ಚಲುವರಾಯ ಸ್ವಾಮಿ ಹೇಳಿದರು.

ವಿಧಾನಪರಿಷತ್‌ನಲ್ಲಿ ಶುಕ್ರವಾರ ಕಾಂಗ್ರೆಸ್‌ನ ಎಂ.ನಾಗರಾಜು ಅವರ ಪ್ರಶ್ನೆಗೆ ಉತ್ತರಿಸಿದ ಅವರು, ಕೃಷಿಯಲ್ಲಿ ಯಂತ್ರೋಪಕರಣಗಳ ಬಳಕೆಗೆ ಉತ್ತೇಜನ ಮತ್ತು ಇಂಧನ ವೆಚ್ಚದ ಭಾರ ತಗ್ಗಿಸಲು ಪ್ರತಿ ಎಕರೆಗೆ ₹ 250ರಂತೆ, ಗರಿಷ್ಠ ಐದು ಎಕರೆಗೆ ಸಬ್ಸಿಡಿ ಸಹಾಯಧನ ನೀಡಲಾಗುತ್ತಿದೆ ಎಂದರು.

ಕಳಪೆ ಬಿತ್ತನೆಬೀಜ ಮತ್ತು ರಸಗೊಬ್ಬರ ಮಾರಾಟ ಆರೋಪದ ಮೇಲೆ 61 ಪ್ರಕರಣ ದಾಖಲಿಸಲಾಗಿದೆ. ಕಳಪೆ ಬಿತ್ತನೆ ಬೀಜ ಮಾರಾಟ ಮಾಡುವವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಕಾಂಗ್ರೆಸ್‌ನ ಅಬ್ದುಲ್ ಜಬ್ಬಾರ್ ಪ್ರಶ್ನೆಗೆ ಉತ್ತರಿಸಿದರು.

## ನವೋದಯ ವಿದ್ಯಾಲಯ: ಹಳೆ ವಿದ್ಯಾರ್ಥಿಗಳ ಸಮ್ಮಿಲನ ನಾಳೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನವೋದಯ ವಿದ್ಯಾಲಯ ಸಮಿತಿಯ ಹೈದರಾಬಾದ್ ವಲಯದ ವತಿಯಿಂದ 'ಪ್ರಾದೇಶಿಕ ಮಟ್ಟದ ಹಳೆ ವಿದ್ಯಾರ್ಥಿಗಳ ಸಮಾವೇಶ'ವನ್ನು ಯಲಹಂಕ ಸಮೀಪದ ಬಾಗಲೂರು ಜವಾಹರ ನವೋದಯ ವಿದ್ಯಾಲಯದ ಆವರಣದಲ್ಲಿ ಜುಲೈ 16ರಂದು ಆಯೋಜಿಸಲಾಗಿದೆ.

ಕರ್ನಾಟಕ, ಕೇರಳ, ಆಂಧ್ರಪ್ರದೇಶ, ತೆಲಂಗಾಣ ಹಾಗೂ ಲಕ್ಷದ್ವೀಪ, ಪುದುಚೇರಿ, ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳಿಂದ 77ಕ್ಕೂ ಹೆಚ್ಚು ಜವಾಹರ ನವೋದಯ ವಿದ್ಯಾಲಯಗಳಲ್ಲಿ ಶಿಕ್ಷಣ ಪಡೆದ ಹಳೆಯ ವಿದ್ಯಾರ್ಥಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

ಬೆಳಿಗ್ಗೆ 10.30ಕ್ಕೆ ಸಮಾವೇಶ ಆರಂಭವಾಗಲಿದ್ದು, ಆರು ಸಾವಿಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸುವ ನಿರೀಕ್ಷೆ ಇದೆ. ಸಮಾವೇಶದಲ್ಲಿ 50ಕ್ಕೂ ಹೆಚ್ಚು ಮಳಿಗೆಗಳನ್ನು ಹಾಕಲಾಗಿದ್ದು, ಶಿಕ್ಷಣ, ಉದ್ಯಮ, ವೈದ್ಯಕೀಯ, ದಂತವೈದ್ಯಕೀಯ, ರಿಯಲ್ ಎಸ್ಟೇಟ್ ಇತ್ಯಾದಿ ಕ್ಷೇತ್ರಗಳಿಗೆ ಸಂಬಂಧಿಸಿದಂತೆ 50ಕ್ಕೂ ಹೆಚ್ಚು ಮಳಿಗೆಗಳನ್ನು ಹಾಕಲಾಗಿದೆ.

ಬೆಂಗಳೂರು ನಗರ ಜಿಲ್ಲೆಯ ಜವಾಹರ ನವೋದಯ ವಿದ್ಯಾಲಯವು ಈ ಸಮಾವೇಶ ಆಯೋಜಿಸುವ ಹೊಣೆ ವಹಿಸಿಕೊಂಡಿದೆ. ಕಳೆದ ನಾಲ್ಕು ವರ್ಷಗಳಿಂದ ಸತತವಾಗಿ ರಾಷ್ಟ್ರಮಟ್ಟದಲ್ಲಿ ಅತ್ಯುತ್ತಮ ವಸತಿ ಶಾಲೆ ಎನ್ನುವ ಕೀರ್ತಿಗೆ ಈ ವಿದ್ಯಾಲಯ ಪಾತ್ರವಾಗಿದೆ ಎಂದು ಪ್ರಾಂಶುಪಾಲ ಎಸ್. ಕಣ್ಣನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬೆಂಗಳೂರು ನಗರ ಜಿಲ್ಲಾಧಿಕಾರಿ ಕೆ.ಎ. ದಯಾನಂದ, ನವೋದಯ ವಿದ್ಯಾಲಯ ಸಮಿತಿಯ ಆಯುಕ್ತ ವಿನಾಯಕ ಗರ್ಗ್, ಹೈದರಾಬಾದ್ ವಲಯದ ನವೋದಯ ವಿದ್ಯಾಲಯ ಸಮಿತಿಯ ಡೆಪ್ಯೂಟಿ ಕಮಿಷನರ್ ಟಿ. ಗೋಪಾಲಕೃಷ್ಣ, ನವೋದಯ ವಿದ್ಯಾಲಯದ ಹಳೆಯ ವಿದ್ಯಾರ್ಥಿ ಮತ್ತು ಬಾದಾಮಿ ಶಾಸಕ ಬಿ.ಬಿ. ಚಿಮ್ಮನಕಟ್ಟಿ, ಬಾಗಲೂರು ಗ್ರಾಮ ಪಂಚಾಯಿತಿ ಅಧ್ಯಕ್ಷ ರೀತಿ ಜೆ. ಮುನೇಗೌಡ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.

## ಮಹಿಳೆಯ ಘನತೆಗೆ ಚ್ಯುತಿ ಆರೋಪ: ವಿಚಾರಣಾ ಕೋರ್ಟ್ ಆದೇಶ ರದ್ದು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಮಹಿಳೆಯ ಘನತೆಗೆ ಚ್ಯುತಿ ಉಂಟು ಮಾಡಿದ್ದಾರೆ ಎನ್ನಲಾದ ಪ್ರಕರಣವೊಂದರಲ್ಲಿ ಪ್ರಾಸಿಕ್ಯೂಷನ್ ಸಾಕ್ಷಿಗಳನ್ನು ಪಾಟಿ ಸವಾಲಿಗೆ ಒಳಪಡಿಸಲು ಆರೋಪಿಗೆ ಅವಕಾಶ ನೀಡದೆ ದೋಷಿ ಎಂದು ಪರಿಗಣಿಸಿ ಎರಡು ವರ್ಷಗಳ ಕಠಿಣ ಶಿಕ್ಷೆ ವಿಧಿಸಿದ್ದ ವಿಚಾರಣಾ ನ್ಯಾಯಾಲಯದ ಆದೇಶವನ್ನು ಹೈಕೋರ್ಟ್ ರದ್ದುಗೊಳಿಸಿದೆ.

ಈ ಸಂಬಂಧ ಬೆಂಗಳೂರಿನ ಎ. ಹರೀಶ್ ಕುಮಾರ್ ಸಲ್ಲಿಸಿದ್ದ ಕ್ರಿಮಿನಲ್ ಮೇಲ್ಮನವಿಯನ್ನು ನ್ಯಾಯಮೂರ್ತಿ ಕೆ. ನಟರಾಜನ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದೆ.

ಆರೋಪಿಗೆ ಷರತ್ತುಬದ್ಧ ಜಾಮೀನು ಮಂಜೂರು ಮಾಡಿರುವ ನ್ಯಾಯಪೀಠ, 'ಕಾನೂನಿನ ಅನ್ವಯ ಮುನ್ನಡೆಯಲು ಆರೋಪಿಗೆ ತನ್ನ ಪರ ವಕೀಲರನ್ನು ನೇಮಿಸಿಕೊಳ್ಳಲು ಅನುಮತಿ ನೀಡಿ' ಎಂದು ವಿಚಾರಣಾ ನ್ಯಾಯಾಲಯಕ್ಕೆ ನಿರ್ದೇಶಿಸಿದೆ.

ಆರೋಪಿಯು ತನ್ನ ವಕೀಲರ ಮೂಲಕ ಸಾಕ್ಷಿಗಳನ್ನು ಪಾಟಿ ಸವಾಲಿಗೆ ಒಳಪಡಿಸಲು ಅವಕಾಶ ನೀಡುವಂತೆಯೂ ಆದೇಶಿಸಿದೆ.

**ಪ್ರಕರಣವೇನು?:** 'ರಸ್ತೆಯಲ್ಲಿ ನಡೆದು ಹೋಗುತ್ತಿರುವಾಗ ಆರೋಪಿಯು ಸಂತ್ರಸ್ತೆಯ ಕೈ ಹಿಡಿದು ಎಳೆದು, ಆಕೆಯ ಖಾಸಗಿ ಅಂಗಾಂಗಗಳನ್ನು ಸ್ಪರ್ಶಿಸಿದ್ದಾರೆ. ನಂತರ ಓಡಲು ಯತ್ನಿಸಿದಾಗ ಸಂತ್ರಸ್ತೆ ಅವರನ್ನು ಹಿಡಿದು ನಮಗೆ ಒಪ್ಪಿಸಿದ್ದಾರೆ' ಎಂದು ಪೊಲೀಸರು ಆರೋಪಿಯ ವಿರುದ್ಧ ಪೋಕ್ಸೊ ಕಾಯ್ದೆ ಕಲಂ 12 ಮತ್ತು ಐಪಿಸಿ ಕಲಂ 354 (ಎ)ರ ಅಡಿ ಪ್ರಕರಣ ದಾಖಲಿಸಿಕೊಂಡಿದ್ದರು.

ಹರೀಶ್ ಕುಮಾರ್ ವಿರುದ್ಧದ ಆರೋಪ ಸಾಬೀತುಪಡಿಸಲು ಪ್ರಾಸಿಕ್ಯೂಷನ್ 10 ಸಾಕ್ಷಿಗಳನ್ನು ಪರಿಶೀಲಿಸಿತ್ತು. ಆದರೆ, ಹರೀಶ್ ಕುಮಾರ್ ಪರ ವಕೀಲರು ಗೈರಾಗಿದ್ದ ಕಾರಣ ಸಾಕ್ಷಿಗಳನ್ನು ಪಾಟಿ ಸವಾಲಿಗೆ ಒಳಪಡಿಸಿರಲಿಲ್ಲ. ನಂತರ ಹರೀಶ್ ಕುಮಾರ್ ಅವರನ್ನು ನ್ಯಾಯಾಲಯ ದೋಷಿ ಎಂದು ತೀರ್ಪು ನೀಡಿತ್ತು. ಇದನ್ನು ಪ್ರಶ್ನಿಸಿ ಅವರು ಹೈಕೋರ್ಟ್‌ಗೆ- ಮೇಲ್ಮನವಿ ಸಲ್ಲಿಸಿದ್ದರು. ಅರ್ಜಿದಾರರ ಪರ ವಕೀಲ ಎಚ್.ಕೆ.ಪವನ್ ವಾದ ಮಂಡಿಸಿದರು.

## ಆರ್‌ಟಿಪಿಎಸ್‌ನ 6ನೇ ಘಟಕ ಇಂದು ಪುನರಾರಂಭ

**ರಾಯಚೂರು:** ರಾಯಚೂರು ಶಾಖೋತ್ಪನ್ನ ವಿದ್ಯುತ್ ಸ್ಥಾವರದ (ಆರ್‌ಟಿಪಿಎಸ್) ಐದು ಘಟಕಗಳು ಈಗಾಗಲೇ ಕಾರ್ಯ ನಿರ್ವಹಿಸುತ್ತಿವೆ. ತುರ್ತು ನಿರ್ವಹಣೆ ಕಾರ್ಯ ಕೈಗೊಂಡಿದ್ದ ಎರಡು ಘಟಕಗಳಲ್ಲಿ ವಿದ್ಯುತ್ ಉತ್ಪಾದನೆ ಸ್ಥಗಿತಗೊಳಿಸಲಾಗಿತ್ತು ಎಂದು ಆರ್‌ಟಿಪಿಎಸ್ ಮುಖ್ಯ ಕಾರ್ಯ ನಿರ್ವಾಹಕ ನಿರ್ದೇಶಕ ಸಿ.ಎಂ.ದಿವಾಕರ್ ತಿಳಿಸಿದ್ದಾರೆ.

ಆರನೇ ಘಟಕ ಶನಿವಾರ ಮತ್ತೆ ಕಾರ್ಯಾರಂಭ ಮಾಡಲಿದೆ. 7ನೇ ಘಟಕದಲ್ಲಿ ನಿರ್ವಹಣೆ ಕಾರ್ಯ ನಡೆ ಯುತ್ತಿದ್ದು, ಕೆಲಸ ಮುಗಿಯಲು 30 ದಿನಗಳು ಬೇಕು. ಅದು ಸಹ ಆ ನಂತರ ಕಾರ್ಯಾರಂಭ ಆಗಲಿದೆ ಎಂದು ಹೇಳಿದ್ದಾರೆ.

'ವಿದ್ಯುತ್ ಉತ್ಪಾದಿಸುವ 1ನೇ ಘಟಕದಲ್ಲಿ ಕಳೆದ ವರ್ಷ ಕಲ್ಲಿದ್ದಲು ಸಾಗಣೆ ಬಂಕರ್ ಕುಸಿದು ಬಿದ್ದು ಸ್ಥಗಿತಗೊಂಡಿದೆ. ಉಳಿದ ಏಳು ಘಟಕಗಳು ಸುಸ್ಥಿತಿಯಲ್ಲಿ ಇವೆ. ಯಂತ್ರಗಳು ದಿನದ 24 ಗಂಟೆಯೂ ಕಾರ್ಯ ನಿರ್ವಹಿಸುವ ಕಾರಣ ಸಣ್ಣಪುಟ್ಟ ತಾಂತ್ರಿಕ ದೋಷ ಕಾಣಿಸಿಕೊಳ್ಳುವುದು ಸಹಜ. ಅವುಗಳನ್ನು ಸಕಾಲದಲ್ಲಿ ಸರಿಪಡಿಸಲಾಗಿದೆ. ಪ್ರಸ್ತುತ 740 ಮೆಗಾವಾಟ್ ವಿದ್ಯುತ್ ಉತ್ಪಾದನೆಯಾಗುತ್ತಿದೆ' ಎಂದು ಅವರು ತಿಳಿಸಿದ್ದಾರೆ.

ಲಖನೌದಲ್ಲಿ ಶುಕ್ರವಾರ ಡಾ. ಶ್ರೀಕೃಷ್ಣ ಇಸಳೂರು ಅವರಿಗೆ ಪ್ರತಿಷ್ಠಿತ ಲೂಯಿಪ್ಯಾಶ್ಚರ್ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು. ಡಾ. ಜಿ.ವಿ.ಸಿಂಗ್, ಪ್ರೊ. ಎಂ.ಕೆ. ಸುದರ್ಶನ್, ಡಾ. ರಶ್ಮಿ ಶುಕ್ಲಾ ಇದ್ದಾರೆ

## ಲಖನೌದಲ್ಲಿ ಡಾ.ಇಸಳೂರಿಗೆ ಲೂಯಿಪ್ಯಾಶ್ಚರ್ ಪ್ರಶಸ್ತಿ ಪ್ರದಾನ

ಪ್ರಜಾವಾಣಿ ವಾರ್ತೆ

**ಶಿರಸಿ (ಉತ್ತರ ಕನ್ನಡ ಜಿಲ್ಲೆ):** ಬೆಂಗಳೂರಿನ ಪಶು ವೈದ್ಯಕೀಯ ಮಹಾವಿದ್ಯಾಲಯದ ರೇಬಿಸ್ ರೋಗ ನಿರ್ಣಯ ಪ್ರಯೋಗಾಲಯದ ನಿರ್ದೇಶಕ ಡಾ. ಶ್ರೀಕೃಷ್ಣ ಇಸಳೂರು ಅವರಿಗೆ ಪ್ರತಿಷ್ಠಿತ ಲೂಯಿ ಪ್ಯಾಶ್ಚರ್ ಪ್ರಶಸ್ತಿಯನ್ನು ಉತ್ತರ ಪ್ರದೇಶದ ಲಖನೌದಲ್ಲಿ ಶುಕ್ರವಾರ ಪ್ರದಾನ ಮಾಡಲಾಯಿತು.

ಸಂಶೋಧನಾ ಕ್ಷೇತ್ರದಲ್ಲಿ ಅಸಾಧಾರಣ ಸಾಧನೆ ಮಾಡಿದ ಇಸಳೂರು ಅವರಿಗೆ ಡಾ. ಜಿ.ವಿ.ಸಿಂಗ್, ಪ್ರೊ. ಎಂ.ಕೆ. ಸುದರ್ಶನ್, ಡಾ. ರಶ್ಮಿ ಶುಕ್ಲ ಅವರು ಈ ಪ್ರಶಸ್ತಿ ಪ್ರದಾನ ಮಾಡಿದರು.

ವಿಶ್ವ ಪ್ರಾಣಿ ಆರೋಗ್ಯ ಸಂಸ್ಥೆಯ ಮಾನ್ಯತೆ ಪಡೆದ ದಕ್ಷಿಣ ಏಷ್ಯಾ ಮತ್ತು ಆಗ್ನೇಯ ಏಷ್ಯಾದ ಏಕೈಕ ರೇಬಿಸ್ ಪ್ರಯೋಗಾಲಯದಲ್ಲಿ ಡಾ. ಇಸಳೂರು ಅವರು ಕೆಲಸ ಮಾಡುತ್ತಿದ್ದಾರೆ. ಪ್ರಾಣಿಗಳಲ್ಲಿ ರೇಬಿಸ್ ಕಾಯಿಲೆಯ ಬಗ್ಗೆ ಅಂತರರಾಷ್ಟ್ರೀಯ ಮಟ್ಟದ ಸಂಶೋಧನೆ ತರಬೇತಿ ಮತ್ತು ನಿಯಂತ್ರಣಕ್ಕೆ ನೀಡಿರುವ ಕೊಡುಗೆಯನ್ನು ಗಮನಿಸಿ ಅವರಿಗೆ ಈ ಪ್ರಶಸ್ತಿ ನೀಡಲಾಗಿದೆ.

ಇಸಳೂರು ಅವರು ಶಿರಸಿಯ ರಾಯರಪೇಟೆಯ ನಿವಾಸಿ, ನಿವೃತ್ತ ಶಿಕ್ಷಕ ಮೋಹನ ಇಸಳೂರು ಅವರ ಪುತ್ರ.

## ಚಿತ್ರಾವಳಿ

ಕೆಆರ್‌ಇಡಿಎಲ್ ವತಿಯಿಂದ ಲಾಭಾಂಶದ ₹ 20.96 ಕೋಟಿ ಮೊತ್ತದ ಚೆಕ್ ಅನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಇಂಧನ ಸಚಿವ ಕೆ.ಜೆ. ಜಾರ್ಜ್ ಸಲ್ಲಿಸಿದರು. ಇಂಧನ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ ಹಾಗೂ ಕೆಆರ್‌ಇಡಿಎಲ್ ವ್ಯವಸ್ಥಾಪಕ ನಿರ್ದೇಶಕ ರುದ್ರಪ್ಪಯ್ಯ ಇದ್ದರು.

ಬನಿಯಾನ್ ಟ್ರೀಸ್ ನಗರದಲ್ಲಿ ಶುಕ್ರವಾರ ಆಯೋಜಿಸಿದ್ದ 'ಬರ್ಖಾ ರಿತು' ಸಂಗೀತ ಕಾರ್ಯಕ್ರಮದಲ್ಲಿ ರಾಹುಲ್ ಶರ್ಮಾ ಅವರು ಸಂತೂರ್ ವಾದನ ನುಡಿಸಿದರು. ರಾಮಕುಮಾರ್ ಮಿಶ್ರಾ ತಬಲಾ ಸಾಥ್ ನೀಡಿದರು

–ಪ್ರಜಾವಾಣಿ ಚಿತ್ರ

ರೂಫ್ ಪ್ಲಾಜಾ ಕಾಮಗಾರಿ ಚುರುಕು: 2 ವರ್ಷದಲ್ಲಿ ಯೋಜನೆ ಪೂರ್ಣ

# ಯಶವಂತಪುರ ರೈಲು ನಿಲ್ದಾಣದ ಮಾರುಕಟ್ಟೆ ಬದಿ ಪ್ರವೇಶ ನಿರ್ಬಂಧ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಯಶವಂತಪುರ ರೈಲು ನಿಲ್ದಾಣದಲ್ಲಿ ಮರುಅಭಿವೃದ್ಧಿ ಕಾಮಗಾರಿ ಚುರುಕುಗೊಂಡಿದೆ. ಅದಕ್ಕಾಗಿ ಪ್ಲಾಟ್‌ಫಾರಂ 1 ಕಡೆಯಿಂದ (ಯಶವಂತಪುರ ಮಾರುಕಟ್ಟೆ ಕಡೆಯಿಂದ) ಪ್ರವೇಶವನ್ನು ಜುಲೈ 17ರ ಮಧ್ಯರಾತ್ರಿಯಿಂದ ತಾತ್ಕಾಲಿಕವಾಗಿ ನಿರ್ಬಂಧಿಸಲಾಗುವುದು.

ಸಾರ್ವಜನಿಕರು ಪ್ಲಾಟ್‌ಫಾರಂ 6 ಕಡೆಯಿಂದ ಅಂದರೆ ಯಶವಂತಪುರ ಮೆಟ್ರೊ ರೈಲು ನಿಲ್ದಾಣ ಕಡೆಯಿಂದ ಇರುವ ಪ್ರವೇಶವನ್ನು ಬಳಸಿಕೊಳ್ಳಬೇಕು. ಎಲ್ಲ ಪ್ಲಾಟ್‌ಫಾರಂಗಳು ಎರಡೂ ಬದಿಗಳಲ್ಲಿ ಪಾದಚಾರಿ ಸೇತುವೆ ಸಂಪರ್ಕ ಹೊಂದಿವೆ. ನಿಗದಿತ ಶುಲ್ಕ ನೀಡಿ ಬಳಸಬಹುದಾದ ಬ್ಯಾಟರಿಚಾಲಿತ ಕಾರ್ ವ್ಯವಸ್ಥೆಯೂ ಇದೆ. ವಾಹನ ನಿಲುಗಡೆ ವ್ಯವಸ್ಥೆ ಕೂಡ ಯಶವಂತಪುರ ಮಾರುಕಟ್ಟೆ ಕಡೆಯಿಂದ ಇರುವುದಿಲ್ಲ.

ನಿಲ್ದಾಣದಲ್ಲಿ ಡಿಜಿಟಲ್ ಮಾಹಿತಿ ಫಲಕಗಳ ಸೇವೆಯನ್ನು ಕೆಲವು ದಿನಗಳ ಕಾಲ ಸ್ಥಗಿತಗೊಳಿಸಲಾಗಿದೆ. ಈ ಅವಧಿಯಲ್ಲಿ ಹಸ್ತಚಾಲಿತ ಪ್ರಕಟಣೆಗಳ ಮೂಲಕ ಮಾಹಿತಿಯನ್ನು ಪ್ರಸಾರ ಮಾಡಲಾಗುವುದು. ಪ್ರಯಾಣಿಕರು ಯಾವುದೇ ಸಹಾಯಕ್ಕಾಗಿ ಸ್ಟೇಷನ್ ಮಾಸ್ಟರ್, ಡೆಪ್ಯುಟಿ ಸ್ಟೇಷನ್ ಮಾಸ್ಟರ್, ಮುಖ್ಯ ಟಿಕೆಟ್ ಇನ್‌ಸ್ಪೆಕ್ಟರ್ ಅಥವಾ ಟಿಕೆಟ್ ತಪಾಸಣೆ ಸಿಬ್ಬಂದಿಯನ್ನು ಸಂಪರ್ಕಿಸಬಹುದು ಎಂದು ನೈರುತ್ಯ ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ಯಶವಂತಪುರ ಮಾರುಕಟ್ಟೆ ಬದಿಯಲ್ಲಿ ನಿರ್ಮಾಣಗೊಳ್ಳುತ್ತಿರುವ ರೂಫ್ ಪ್ಲಾಜಾ

**ಕಾಮಗಾರಿ ಚುರುಕು:** ₹ 377 ಕೋಟಿ ವೆಚ್ಚದಲ್ಲಿ ಯಶವಂತಪುರ ರೈಲು ನಿಲ್ದಾಣದ ಪುನರಾಭಿವೃದ್ಧಿಯ 1ನೇ ಹಂತದ ಕಾಮಗಾರಿ ಶುರುವಾಗಿದೆ. ಮಾರುಕಟ್ಟೆ ಬದಿಯ ಎಲಿವೇಟೆಡ್ ರಸ್ತೆ ಕಾಮಗಾರಿ, ಮಲ್ಟಿ ಲೆವೆಲ್ ಕಾರ್ ಪಾರ್ಕಿಂಗ್ ಕಾಮಗಾರಿ ಇತ್ತೀಚೆಗೆ ಆರಂಭಿಸಲಾಗಿದೆ. ಲಿನೆನ್ ಸ್ಟೋರ್ ಮತ್ತು ಆರ್‌ಪಿಎಫ್‌ನಂಥ ರೈಲ್ವೆ ಕಚೇರಿಗಳು ನೆಲಮಹಡಿಯವರೆಗೆ ಪೂರ್ಣಗೊಂಡಿವೆ ಎಂದು ನೈರುತ್ಯ ರೈಲ್ವೆ ಬೆಂಗಳೂರು ವಿಭಾಗೀಯ ಹೆಚ್ಚುವರಿ ವ್ಯವಸ್ಥಾಪಕಿ (ಆಡಳಿತ) ಕುಸುಮಾ ಹರಿಪ್ರಸಾದ್ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

ಫೆಬ್ರುವರಿಯಲ್ಲಿ ಆರಂಭಗೊಂಡಿದ್ದ ಕಾಮಗಾರಿ ಇತ್ತೀಚೆಗೆ ವೇಗ ಪಡೆದುಕೊಂಡಿದೆ. 2025ರ ಜುಲೈ ಒಳಗೆ ಕಾಮಗಾರಿ ಪೂರ್ಣಗೊಳ್ಳಲಿದೆ. ಮೆಟ್ರೊ ಬದಿಯ ಪ್ರವೇಶದಲ್ಲಿ ಹೊಸ ನಿಲ್ದಾಣದ ಕಟ್ಟಡ, ಮಾರುಕಟ್ಟೆ ಬದಿಯಲ್ಲಿ ಎಲಿವೇಟೆಡ್ ರಸ್ತೆ, ಮಲ್ಟಿ ಲೆವೆಲ್ ಕಾರ್ ಪಾರ್ಕಿಂಗ್, ವಿಶ್ವದರ್ಜೆಯ ಸೌಲಭ್ಯಗಳೊಂದಿಗೆ 216 ಮೀಟರ್ ಉದ್ದದ ಏರ್ ಕಾನ್ಕೋರ್ಸ್, ಲಾಂಜ್, ವೇಟಿಂಗ್ ಹಾಲ್‌ಗಳು, ಕಿಯೋಸ್ಕ್‌ಗಳು, ಚಿಲ್ಲರೆ ಅಂಗಡಿಗಳು, ಎಸ್ಕಲೇಟರ್‌ಗಳು, ಲಿಫ್ಟ್‌ಗಳು ಇತ್ಯಾದಿಗಳನ್ನು ಪುನರಾಭಿವೃದ್ಧಿ ಯೋಜನೆ ಒಳಗೊಂಡಿದೆ ಎಂದು ಮಾಹಿತಿ ನೀಡಿದ್ದಾರೆ.

## ನಗರದಲ್ಲಿ ಇಂದು

**ಸುಸ್ಥಿರ ಆರ್ಥಿಕ ಬೆಳವಣಿಗೆ ಕುರಿತು ಅಂತರರಾಷ್ಟ್ರೀಯ ಸಮ್ಮೇಳನ:** ಉದ್ಘಾಟನೆ: ವಿನಾಯಕ್ ಶೇಷಾದ್ರಿ, ಅಧ್ಯಕ್ಷತೆ: ವಿ. ನಾಗರಾಜ್, ಆಯೋಜನೆ ಹಾಗೂ ಸ್ಥಳ: ಸಂಭ್ರಮ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಎಂ.ಎಸ್. ಪಾಳ್ಯ, ಬೆಳಿಗ್ಗೆ 10

**'ಸೈಬರ್ ಸುರಕ್ಷತೆ–ಕೃತಕ ಬುದ್ಧಿಮತ್ತೆ ಸಾಮರ್ಥ್ಯ' ವಿಷಯದ ಬಗ್ಗೆ ವಿಚಾರ ಗೋಷ್ಠಿ:** ಮುಖ್ಯ ಅತಿಥಿ: ಎಂ.ಎ. ಸಲೀಂ, ಭಾಷಣಕಾರರು: ಉದಯ್ ಶಂಕರ್ ಪುರಾಣಿಕ್, ವೆಂಕಟೇಶ್ ಮೂರ್ತಿ ಕೆ., ಫ್ಲಾಯ್ಡ್ ಬ್ರಿಟ್ಟೊ, ಮಂಜೇಶ್ ಶೆಟ್ಟಿ, ಆಯೋಜನೆ ಮತ್ತು ಸ್ಥಳ: ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ (ಎಫ್‌ಕೆಸಿಸಿಐ), ಕೆ.ಜಿ. ರಸ್ತೆ, ಮಧ್ಯಾಹ್ನ 2.30

ಎಂ.ಎ. ಸಲೀಂ

**ಕನ್ನಡೇತರರಿಗೆ ಕನ್ನಡ ಕಲಿಕಾ ಶಿಬಿರ ಉದ್ಘಾಟನೆ:** ಶಿವರಾಜ್ ಎಸ್. ತಂಗಡಗಿ, ಮುಖ್ಯ ಅತಿಥಿ: ಎನ್. ಮಂಜುಳಾ, ಅತಿಥಿ: ಸಂತೋಷ ಹಾನಗಲ್, ಅಧ್ಯಕ್ಷತೆ: ಬಿ. ಸುದರ್ಶನ್, ಉಪಸ್ಥಿತಿ: ಕೆ.ಎನ್.ರಮೇಶ್, ಆಯೋಜನೆ: ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಸ್ಥಳ: ಮಂಗಳೂರು ರಿಫೈನರಿ ಆ್ಯಂಡ್ ಪೆಟ್ರೋಕೆಮಿಕಲ್ಸ್ ಲಿಮಿಟೆಡ್, ಪ್ಲಾಟ್ ಎ–1, ಕೆಎಸ್‌ಎಸ್‌ಐಡಿಸಿ ಎ.ಒ. ಕಟ್ಟಡ, ಇಂಡಸ್ಟ್ರಿಯಲ್ ಎಸ್ಟೇಟ್, ರಾಜಾಜಿನಗರ, ಮಧ್ಯಾಹ್ನ 3

**'ವೋಗ್ ಮಿಸ್ಟಿಕ್ ಡಿಸೈನರ್' ಪ್ರಶಸ್ತಿ ಪ್ರದಾನ:** ಮುಖ್ಯ ಅತಿಥಿ: ಪ್ರೊ.ವಿ. ಶಿವಲಿಂಗಂ ಶಿವಾ, ಗೌರವ ಅತಿಥಿಗಳು: ರಾಧಿಕಾ ನಾರಾಯಣ್, ಭವ್ಯಾ, ಆಯೋಜನೆ ಹಾಗೂ ಸ್ಥಳ: ವೋಗ್ ಇನ್‌ಸ್ಟಿಟ್ಯೂಟ್ ಆಫ್ ಆರ್ಟ್ ಆ್ಯಂಡ್ ಡಿಸೈನ್, ಅಪಾರೆಲ್ ಪಾರ್ಕ್, ವಿನೋಭಾ ನಗರ, ಮಧ್ಯಾಹ್ನ 4

**ಸುವರ್ಣ ಮಹೋತ್ಸವ ಸಮಾರಂಭ:** 'ಲಲಿತಕಲಾ ರತ್ನ' ಮತ್ತು 'ಲಲಿತಕಲಾ ಸಿರಿ' ಪುರಸ್ಕಾರ, ಮುಖ್ಯ ಅತಿಥಿ: ರಮೇಶ್ ಭಟ್, ಉಪಸ್ಥಿತಿ: ಮಹೇಶ್ ಅಂಗಡಿ, ಎಚ್. ಲಿಂಗರಾಜ, ಕುಸುಮಾ ರಾಜಶೇಖರ್, ಬಿ.ಎನ್. ಶಿವಲಿಂಗ, ರಾಮಸ್ವಾಮಿ ಆರ್., ಎಸ್. ರಾಜುಹಾಸನ್, ನಾಟಕ ಪ್ರದರ್ಶನ: 'ಕರಿಭಂಟ', ಆಯೋಜನೆ: ಎಚ್‌ಎಎಲ್ ಲಲಿತಕಲಾ ಸಂಘ, ಸ್ಥಳ: ಡಾ.ವಿ.ಎಂ. ಘಾಟ್ಗೆ ಸಭಾಂಗಣ, ಎಚ್‌ಎಎಲ್ ಮಧ್ಯ ಬಡಾವಣೆ, ಮಾರತ್ತಹಳ್ಳಿ ಮಧ್ಯಾಹ್ನ 4



ರಮೇಶ್ ಭಟ್

**ಚಾತುರ್ಮಾಸ್ಯ ವ್ರತ ಪ್ರಯುಕ್ತ ಶೋಭಾ ಯಾತ್ರೆ:** ಸುಗುಣೇಂದ್ರತೀರ್ಥ ಸ್ವಾಮೀಜಿ, ಸುಶೀಂದ್ರತೀರ್ಥ ಸ್ವಾಮೀಜಿ, ಆಯೋಜನೆ: ಪುತ್ತಿಗೆಶ್ರೀ ಸುವರ್ಣ ಚಾತುರ್ಮಾಸ್ಯ ಸಮಿತಿ, ಸ್ಥಳ: ಗುರುನರಸಿಂಹ ಕಲ್ಯಾಣ ಮಂಟಪದಿಂದ ಗೋವರ್ಧನ ಕ್ಷೇತ್ರ, ಉಡುಪಿ ಪುತ್ತಿಗೆ ಶಾಖಾ ಮಠ, ಬಸವನಗುಡಿ, ಸಂಜೆ 4.30

**ದತ್ತಿ ಉಪನ್ಯಾಸ:** 'ಸಮೇತನಹಳ್ಳಿ ರಾಮರಾಯರ ಬದುಕು–ಬರಹ', ಉಪನ್ಯಾಸಕರು: ಸವಿತಾ ರವಿಶಂಕರ್, ಅಧ್ಯಕ್ಷತೆ: ಪಿ.ವಿ. ನಾರಾಯಣ, ಆಯೋಜನೆ: ಬಿ.ಎಂ.ಶ್ರೀ. ಪ್ರತಿಷ್ಠಾನ, ಸ್ಥಳ: ಎಂ.ವಿ.ಸೀ. ಸಭಾಂಗಣ, ಬಿ.ಎಂ. ಶ್ರೀ. ಕಲಾಭವನ, ಎನ್.ಆರ್. ಕಾಲೊನಿ, ಸಂಜೆ 5

**ವೈದ್ಯರ ದಿನ ಆಚರಣೆ:** ಉದ್ಘಾಟನೆ: ಡಾ.ಎಚ್.ಡಿ. ರಂಗನಾಥ್, ಮುಖ್ಯ ಅತಿಥಿ: ಡಾ. ಶಿವಕುಮಾರ್ ಬಿ., ಗೌರವ ಅತಿಥಿಗಳು: ಡಾ. ರವೀಂದ್ರನಾಥ್ ಮೇಟಿ, ಡಾ. ಶ್ರೀನಿವಾಸ್ ಎಸ್., ಅಧ್ಯಕ್ಷತೆ: ಡಾ. ವೇಣುಗೋಪಾಲ್ ಕರಿಗೌಡ, ಆಯೋಜನೆ: ಭಾರತೀಯ ವೈದ್ಯಕೀಯ ಸಂಘದ ಬೆಂಗಳೂರು ಶಾಖೆ, ಸ್ಥಳ: ದಿ ಚಾನ್ಸರಿ ಫೆವಿಲಿಯನ್, ರೆಸಿಡೆನ್ಸಿ ರಸ್ತೆ, ಸಂಜೆ 5

**ಸಂಗೀತ ಕಛೇರಿ:** ಗಾಯನ: ಜಿ. ರವಿಕಿರಣ್, ಪಿಟೀಲು: ಎಚ್.ಎಂ.ಸ್ಮಿತಾ, ಮೃದಂಗ, ಆನೂರು ಅನಂತಕೃಷ್ಣ ಶರ್ಮಾ, ಮೋರ್ಸಿಂಗ್: ಬಿ.ಎಸ್. ಅರುಣ್ ಕುಮಾರ್, ಆಯೋಜನೆ ಹಾಗೂ ಸ್ಥಳ: ಅನನ್ಯಾ ಸಭಾಂಗಣ, 4ನೇ ಮುಖ್ಯ ರಸ್ತೆ, ಮಲ್ಲೇಶ್ವರ, ಸಂಜೆ 6

**ಪೌರಾಣಿಕ ಯಕ್ಷ ಹಬ್ಬ: ಪ್ರಸಂಗಗಳು:** 'ಕೃಷ್ಣಾರ್ಜುನ', 'ವೀರವರ್ಮ', 'ಬಬ್ರುವಾಹನ', ಅತಿಥಿ ಕಲಾವಿದರು: ಕೊಂಡದಕುಳಿ ರಾಮಚಂದ್ರ ಹೆಗಡೆ, ತೋಟಿಮನೆ ಗಣಪತಿ ಭಟ್, ಜಲವಳ್ಳಿ ವಿದ್ಯಾಧರ ರಾವ್, ಕಟೀಲು ಸೀತಾರಾಮ ಕುಮಾರ್, ತೊಂಬಟ್ಟು ವಿಶ್ವನಾಥ್ ಆಚಾರ್, ಆಯೋಜನೆ: ಪೆರ್ಡೂರು ಮೇಳ, ಅಂಪಾರು ಮಿತ್ರ ಬಳಗ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ.ರಸ್ತೆ, ರಾತ್ರಿ 10

**ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ ಕಳುಹಿಸಿ nagaradalli_indu@prajavani.co.in**

ಶನಿವಾರ, ಜುಲೈ 15, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 195 | ಪುಟ 20

www.prajavani.net

prajavani.net prajavani prajavani prajavani

# ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

**ಭೂಮಿಕಾ**
ಮಕ್ಕಳಲ್ಲಿ ಅಸಹಜ ವರ್ತನೆ ಕಂಡಾಗೆಲ್ಲ ಪೋಷಕರು ಜಾಗ್ರತರಾಗಿ.

**ಚರ್ಚೆ**
ರಾಷ್ಟ್ರೀಯ ಶಿಕ್ಷಣ ನೀತಿಗೆ ರಾಜ್ಯ ರೂಪಿಸುವ ನೀತಿಯು ಪರ್ಯಾಯ ಆಗಬಹುದೇ?

ಕುದುರೆಮುಖ; ಚಾರಣಕ್ಕೆ ನೂಕುನುಗ್ಗಲು! 6

15 ತಿಂಗಳಲ್ಲೇ ಮೂರು ವರ್ಗಾವಣೆ 7

| ಸೆನ್ಸೆಕ್ಸ್ | ನಿಫ್ಟಿ | ಚಿನ್ನ (Std. 10g) | ಶುದ್ಧ ಬೆಳ್ಳಿ (kg) | ₹/$ |
|---|---|---|---|---|
| 65,060 ▲ | 19,564 ▲ | ₹61,220 (ಬೆಂಗಳೂರು) ▲ | ₹77,200 (ಬೆಂಗಳೂರು) ▲ | 82.17 ▼ |

**ಚಂದ್ರಯಾನ-3**

# ಚಂದಿರನತ್ತ ಯಾನ ಶುರು

## ಭೂಕಕ್ಷೆ ಸೇರಿದ ಗಗನನೌಕೆ

- ಮತ್ತೊಂದು ಸಾಧನೆಯತ್ತ ಇಸ್ರೊ

**ಪಯಣದ ಹಾದಿ ...**

**2020:** ಬಾಹ್ಯಾಕಾಶ ಕಾರ್ಯಕ್ರಮ ಘೋಷಣೆ. ಆದರೆ, ಕೋವಿಡ್–19 ಪಿಡುಗಿನ ಹಿನ್ನೆಲೆಯಲ್ಲಿ ಅನುಷ್ಠಾನ ಮುಂದೂಡಿಕೆ

**ಜುಲೈ 7 2023:** ಜುಲೈ 14ರಂದು 'ಚಂದ್ರಯಾನ–3'ರ ಉಡ್ಡಯನ, ಇಸ್ರೊ ಘೋಷಣೆ

**ಜುಲೈ 12:** ಕಾರ್ಯಕ್ರಮ ಸಿದ್ಧತೆ ಪೂರ್ಣಗೊಂಡ ಬಗ್ಗೆ ಇಸ್ರೊ ಘೋಷಣೆ

**ಜುಲೈ 13:** ಗಗನನೌಕೆ ಉಡ್ಡಯನಕ್ಕೆ 25.30 ಗಂಟೆ ಕ್ಷಣಗಣನೆ ಆರಂಭ

**ಜುಲೈ 14**
- ಬೆಳಿಗ್ಗೆ 9.35: ಕರಾರುವಾಕ್ಕಾದ ಕ್ಷಣಗಣನೆ– ಇಸ್ರೊ ಹೇಳಿಕೆ
- ಮಧ್ಯಾಹ್ನ 2.35: ಶ್ರೀಹರಿಕೋಟಾದಲ್ಲಿರುವ ಉಡಾವಣಾ ನೆಲೆಯಿಂದ ಆಕಾಶಕ್ಕೆ ಚಿಮ್ಮಿದ 'ಚಂದ್ರಯಾನ–3'
- ಮಧ್ಯಾಹ್ನ 2.51: 'ಚಂದ್ರಯಾನ–3' ಗಗನನೌಕೆಯನ್ನು 'ಎಲ್‌ವಿಎಂ3–ಎಂ4' ರಾಕೆಟ್ ಯಶಸ್ವಿಯಾಗಿ ಭೂಕಕ್ಷೆಗೆ ಸೇರಿಸಿದ್ದಾಗಿ ಘೋಷಣೆ

**ಶ್ರೀಹರಿಕೋಟಾ (ಪಿಟಿಐ):** ಚಂದ್ರಯಾನ–3 ಕಾರ್ಯಕ್ರಮದ ಗಗನನೌಕೆಯನ್ನು ಹೊತ್ತ ರಾಕೆಟ್ ಶುಕ್ರವಾರ ಮಧ್ಯಾಹ್ನ ನಭಕ್ಕೆ ಚಿಮ್ಮಿದಾಗ, ಕೋಟ್ಯಂತರ ಕನಸುಗಳನ್ನೂ ಅದು ಹೊತ್ತೊಯ್ದಿತು. ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದತ್ತ ಬೆಳಗಿನಿಂದಲೇ ಸಾಗರೋಪಾದಿಯಲ್ಲಿ ಹರಿದುಬಂದಿದ್ದ ಜನ ಈ ಅವಿಸ್ಮರಣೀಯ ಕ್ಷಣಕ್ಕೆ ಸಾಕ್ಷಿಯಾದರು.

ಮಧ್ಯಾಹ್ನ 2.15 ಆಗುತ್ತಿದ್ದಂತೆ ಇಸ್ರೊ ವಿಜ್ಞಾನಿಗಳ ತಂಡ ಉಸಿರು ಬಿಗಿಹಿಡಿದು ಮುಂದಿನ ಬೆಳವಣಿಗೆಗಳನ್ನು ವೀಕ್ಷಿಸಲು ಆರಂಭಿಸಿತ್ತು. ಎರಡನೇ ಲಾಂಚ್ ಪ್ಯಾಡ್‌ನಿಂದ ಕಿತ್ತಲೆ ಬಣ್ಣದ ಬೆಂಕಿಯುಂಡೆಗಳನ್ನೂ, ಹೊಗೆಯ ಮೋಡಗಳನ್ನೂ ಉಗುಳುತ್ತಾ, ರಾಕೆಟ್ ಆಕಾಶದತ್ತ ಚಿಮ್ಮುತ್ತಿದ್ದಂತೆಯೇ ಸತೀಶ್ ಧವನ್ ಕೇಂದ್ರದಲ್ಲಿ ಹರ್ಷೋದ್ಗಾರಗಳೂ ಮುಗಿಲು ಮುಟ್ಟಿದವು.

'ಚಂದ್ರಯಾನ–3' ಕಾರ್ಯಕ್ರಮದ ಪ್ರೊಪಲ್ಷನ್ ಮಾಡ್ಯೂಲ್, ಲ್ಯಾಂಡರ್ ಹಾಗೂ ರೋವರ್‌ಗಳನ್ನು 'ಎಲ್‌ವಿಎಂ3–ಎಂ4' ರಾಕೆಟ್ ಯಶಸ್ವಿಯಾಗಿ ಭೂಕಕ್ಷೆಗೆ ಸೇರಿಸಿತು.

13ನೇ ಪುಟ ನೋಡಿ

> ಭಾರತವು ಬಾಹ್ಯಾಕಾಶ ಕ್ಷೇತ್ರದಲ್ಲಿ ಮತ್ತೊಂದು ಮಹತ್ತರ ಮೈಲಿಗಲ್ಲು ಸಾಧಿಸಿದಂತಾಗಿದೆ. ಇದಕ್ಕಾಗಿ ಅವಿರತವಾಗಿ ಶ್ರಮಿಸಿದ ಇಸ್ರೊ ತಂಡಕ್ಕೆ ಅಭಿನಂದನೆಗಳು
> **ದ್ರೌಪದಿ ಮುರ್ಮು,** ರಾಷ್ಟ್ರಪತಿ

> ಭಾರತವು ಬಾಹ್ಯಾಕಾಶ ಕ್ಷೇತ್ರದಲ್ಲಿ ಹೊಸ ಅಧ್ಯಾಯ ಬರೆದಿದೆ. ಇದು ಪ್ರತಿ ಭಾರತೀಯರ ಕನಸು ಮತ್ತು ಮಹತ್ವಾಕಾಂಕ್ಷೆಯನ್ನು ಹೆಚ್ಚಿಸಿದೆ
> **ನರೇಂದ್ರ ಮೋದಿ,** ಪ್ರಧಾನಿ

> ಭಾರತದ ಬಾಹ್ಯಾಕಾಶ ಸಂಶೋಧನೆ ಹಾಗೂ ಆವಿಷ್ಕಾರದಲ್ಲಿ ಹೊಸ ಮೈಲಿಗಲ್ಲು. ಈ ಸಾಧನೆಯು ಭಾರತದ ಯುವ ಮನಸ್ಸುಗಳನ್ನು ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಸಂಶೋಧನೆ ಮಾಡಲು ಪ್ರೇರೇಪಿಸುತ್ತದೆ
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

ನಕಲಿ ಸುದ್ದಿಗಳ ವಿರುದ್ಧದ ಐಟಿ ನಿಯಮಾವಳಿ ವಿಪರೀತ: ಬಾಂಬೆ ಹೈಕೋರ್ಟ್

# ಇರುವೆ ಕೊಲ್ಲಲು ಸುತ್ತಿಗೆ ಯಾಕೆ?

**ಮುಂಬೈ (ಪಿಟಿಐ):** 'ಸರ್ಕಾರದ ವಿಷಯವಾಗಿ ಸಾಮಾಜಿಕ ಜಾಲತಾಣದಲ್ಲಿ ಪ್ರಕಟಗೊಳ್ಳುವ ನಕಲಿ ಸುದ್ದಿಗಳ ವಿರುದ್ಧ ಕ್ರಮ ಕೈಗೊಳ್ಳಲು ಮಾಹಿತಿ ತಂತ್ರಜ್ಞಾನ (ಐಟಿ) ನಿಯಮಾವಳಿಗೆ ಈಚೆಗೆ ತಂದಿರುವ ತಿದ್ದುಪಡಿ ವಿಪರೀತವಾದಂತಿದೆ' ಎಂದು ಬಾಂಬೆ ಹೈಕೋರ್ಟ್ ಶುಕ್ರವಾರ ಹೇಳಿದೆ. 'ಇರುವೆಯನ್ನು ಕೊಲ್ಲಲು ಯಾರೂ ಸುತ್ತಿಗೆಯನ್ನು ತರುವುದಿಲ್ಲ' ಎಂದೂ ಕುಟುಕಿದೆ.

'ಸುಳ್ಳು ಅಥವಾ ದಾರಿ ತಪ್ಪಿಸುವ ಸುದ್ದಿ ಯಾವುದು ಎಂಬುದನ್ನು ನಿರ್ಧರಿಸಲು ಸರ್ಕಾರದ ಒಂದು ಪ್ರಾಧಿಕಾರಕ್ಕೆ ಅಧಿಕಾರ ಕೊಡಮಾಡುವ ಈ ತಿದ್ದುಪಡಿಯ ಹಿಂದಿನ ಅಗತ್ಯವನ್ನು ಅರ್ಥ ಮಾಡಿಕೊಳ್ಳಲು ಆಗುತ್ತಿಲ್ಲ' ಎಂದು ನ್ಯಾಯಮೂರ್ತಿಗಳಾದ ಗೌತಮ್ ಪಟೇಲ್ ಮತ್ತು ನೀಲಾ ಗೋಖಲೆ ಅವರನ್ನೊಳಗೊಂಡ ವಿಭಾಗೀಯ ಪೀಠ ಹೇಳಿದೆ.

'ಪ್ರಜಾಪ್ರಭುತ್ವ ಪ್ರಕ್ರಿಯೆಯಲ್ಲಿ ಸರ್ಕಾರವು ಸಹ ನಾಗರಿಕರಷ್ಟೇ ಸಹಭಾಗಿಯಾಗಿದೆ. ಪ್ರಶ್ನಿಸುವುದು ಮತ್ತು ಉತ್ತರಕ್ಕೆ ಆಗ್ರಹಿಸುವುದು ಜನರ ಮೂಲ ಹಕ್ಕು. ಇದಕ್ಕೆ ಸ್ಪಂದಿಸುವುದು ಸರ್ಕಾರದ ಕರ್ತವ್ಯವಾಗಿದೆ' ಎಂದು ಅಭಿಪ್ರಾಯಪಟ್ಟಿದೆ.

'ತಿದ್ದುಪಡಿಗೊಂಡ ನಿಯಮಗಳಡಿ ಸತ್ಯ ಶೋಧನಾ ಘಟಕವನ್ನು (ಎಫ್‌ಸಿಯು) ಯಾರು ಸ್ಥಾಪಿಸಬೇಕು? ಈ ಘಟಕ ನಿರಾಕರಿಸಲಾಗದ ಸತ್ಯವನ್ನೇ ಹೇಳುತ್ತದೆ ಎಂದು ಹೇಗೆ ಊಹಿಸುತ್ತೀರಿ' ಎಂದು ನ್ಯಾಯಮೂರ್ತಿ ಪಟೇಲ್ ಪ್ರಶ್ನಿಸಿದರು. 'ಯಾವ ಆತಂಕಕ್ಕಾಗಿ ಈ ತಿದ್ದುಪಡಿ ತರಲಾಗಿದೆ? ಯಾವ ಭಯ ಇದರ ಹಿಂದೆ ಅಡಗಿದೆ? ನನಗೆ ಅರ್ಥವಾಗುತ್ತಿಲ್ಲ' ಎಂದೂ ಅವರು ಸೋಜಿಗ ವ್ಯಕ್ತಪಡಿಸಿದರು.

13ನೇ ಪುಟ ನೋಡಿ

## ಕುನೊ: ಎಂಟನೇ ಚೀತಾ ಸಾವು

**ಭೋಪಾಲ್ (ಪಿಟಿಐ):** ಮಧ್ಯ ಪ್ರದೇಶದ ಕುನೊ ರಾಷ್ಟ್ರೀಯ ಉದ್ಯಾನದಲ್ಲಿ 'ಸೂರಜ್' ಹೆಸರಿನ ಗಂಡು ಚೀತಾ ಶುಕ್ರವಾರ ಮೃತಪಟ್ಟಿದೆ ಎಂದು ಅರಣ್ಯ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ. ಈ ಚೀತಾವನ್ನು ಆಫ್ರಿಕಾದಿಂದ ತರಲಾಗಿತ್ತು.

ಮಾರ್ಚ್‌ನಿಂದ ಇದುವರೆಗೆ ಇಲ್ಲಿ ಮೃತಪಟ್ಟಿರುವ ಚೀತಾಗಳ ಸಂಖ್ಯೆ ಎಂಟಕ್ಕೇರಿದೆ ಎಂದೂ ವಿವರಿಸಿದ್ದಾರೆ.

ಕುನೋ ರಾಷ್ಟ್ರೀಯ ಉದ್ಯಾನದ ಪಾಲ್ಪುರ ಪೂರ್ವ ಅರಣ್ಯ ಶ್ರೇಣಿಯಲ್ಲಿ ಕಳೇಬರ ಪತ್ತೆಯಾಗಿದ್ದು, ಮುಕ್ತ ಪ್ರದೇಶದಲ್ಲಿ ಚೀತಾ ಸತ್ತಿರುವುದು ಇದೇ ಮೊದಲು. ಅದರ ಬೆನ್ನು ಮತ್ತು ಕುತ್ತಿಗೆಯಲ್ಲಿ ಗಾಯದ ಗುರುತುಗಳು ಪತ್ತೆಯಾಗಿವೆ ಎಂದೂ ಹೇಳಿದ್ದಾರೆ.

ಮೂರು ದಿನಗಳ ಹಿಂದೆ 'ತೇಜಸ್' ಹೆಸರಿನ ಗಂಡು ಚೀತಾ ಮೃತಪಟ್ಟಿತ್ತು.

ಪ್ರಧಾನಿ ನರೇಂದ್ರ ಮೋದಿ ಅವರಿಗೆ ಫ್ರಾನ್ಸ್ ಅಧ್ಯಕ್ಷ ಇಮ್ಯಾನುಯೆಲ್ ಮ್ಯಾಕ್ರನ್ ಅವರು ಫ್ರಾನ್ಸ್‌ನ ಅತ್ಯುನ್ನತ ನಾಗರಿಕ ಪ್ರಶಸ್ತಿ 'ಗ್ರ್ಯಾಂಡ್ ಕ್ರಾಸ್ ಆಫ್ ದ ಲೀಜನ್ ಆಫ್ ಆನರ್' ನೀಡಿ ಗೌರವಿಸಿದರು –ಪಿಟಿಐ ಚಿತ್ರ 12

## ಹೈಕೋರ್ಟ್ ತೀರ್ಪಿಗೆ 'ಸುಪ್ರೀಂ' ತಡೆ

**ನವದೆಹಲಿ:** ಖಾಸಗಿ ಅನುದಾನರಹಿತ ಶಾಲೆಗಳಲ್ಲಿ ಶುಲ್ಕ ನಿಗದಿ ಹಾಗೂ ನೇಮಕಾತಿಗೆ ಸಂಬಂಧಿಸಿ ಕರ್ನಾಟಕ ಶಿಕ್ಷಣ ಕಾಯ್ದೆಯ ಕೆಲ ಅವಕಾಶಗಳು ರಾಜ್ಯ ಸರ್ಕಾರಕ್ಕೆ ನೀಡಿದ್ದ ಅಧಿಕಾರವನ್ನು ರದ್ದುಗೊಳಿಸಿ ಕರ್ನಾಟಕ ಹೈಕೋರ್ಟ್ ಕಳೆದ ಡಿಸೆಂಬರ್ 1ರಂದು ನೀಡಿದ್ದ ತೀರ್ಪಿಗೆ ಸುಪ್ರೀಂಕೋರ್ಟ್ ಶುಕ್ರವಾರ ತಡೆ ನೀಡಿದೆ. 7

**ಒಳ ಪುಟ**

ದೆಹಲಿಯಲ್ಲಿ ಯಮುನೆಯ ರುದ್ರನರ್ತನ 13

**ಚಿನಕುರಳಿ**
ಪ್ರಕಾಶ್ ಶೆಟ್ಟಿ

# ಮೆಟ್ರೊ ಸುರಂಗ ಮಾರ್ಗ, ನಿಲ್ದಾಣಗಳು 2025ಕ್ಕೆ ಪೂರ್ಣ: ಡಿಸಿಎಂ ಹೇಳಿಕೆ

**ಬೆಂಗಳೂರು:** ಮೆಟ್ರೊ ರೈಲು ಮಾರ್ಗ ವಿಸ್ತರಣೆಗಾಗಿ ನಡೆಯುತ್ತಿರುವ ಸುರಂಗ ಮಾರ್ಗಗಳು ಮತ್ತು ಸುರಂಗ ನಿಲ್ದಾಣಗಳ ಕಾಮಗಾರಿಗಳು 2025ರ ಮಾರ್ಚ್ ಒಳಗೆ ಪೂರ್ಣಗೊಳ್ಳಲಿವೆ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ನಗರದ ಲಕ್ಕಸಂದ್ರ ಸುರಂಗ ಮಾರ್ಗ ಹಾಗೂ ಮಹಾತ್ಮ ಗಾಂಧಿ ರಸ್ತೆಯ ಸುರಂಗ ಸ್ಟೇಷನ್ ಬಳಿ ನಡೆಯುತ್ತಿರುವ ಕಾಮಗಾರಿ ಸ್ಥಳಕ್ಕೆ ಶುಕ್ರವಾರ ಭೇಟಿ ನೀಡಿ ಪರಿಶೀಲನೆ ನಡೆಸಿದ ಬಳಿಕ ಸುದ್ದಿಗಾರರಿಗೆ ಮಾಹಿತಿ ನೀಡಿದರು.

ಕಾಳೇನ ಅಗ್ರಹಾರದಿಂದ ನಾಗವಾರದವರೆಗೆ 21.26 ಕಿಲೋಮೀಟರ್ ಇದೆ. ಅದರಲ್ಲಿ ಕಾಳೇನ ಅಗ್ರಹಾರದಿಂದ ತಾವರೆಕೆರೆವರೆಗೆ 7.5 ಕಿ.ಮೀ. ಎತ್ತರಿಸಿದ ಮಾರ್ಗ ನಿರ್ಮಾಣಗೊಳ್ಳುತ್ತಿದ್ದು, 6 ನಿಲ್ದಾಣಗಳಿವೆ. ಡೈರಿ ವೃತ್ತದಿಂದ ನಾಗವಾರದವರೆಗೆ 13.76 ಕಿ.ಮೀ. ಸುರಂಗ ಮಾರ್ಗ ನಿರ್ಮಾಣಗೊಳ್ಳುತ್ತಿದೆ. ಅದರಲ್ಲಿ 12 ಸುರಂಗ ನಿಲ್ದಾಣಗಳು ನಿರ್ಮಾಣಗೊಳ್ಳಲಿವೆ. ಕೆಲವೆಡೆ ಶೇ 70ರಿಂದ 80ವರೆಗೆ ಕಾಮಗಾರಿ ಆಗಿದೆ. ನಿಗದಿತ ಅವಧಿಯೊಳಗೆ ಕಾಮಗಾರಿ ಪೂರ್ಣಗೊಳಿಸಲು ಅಧಿಕಾರಿಗಳು, ಗುತ್ತಿಗೆದಾರರು ಸಹಕಾರ ನೀಡಬೇಕು ಎಂದು ತಿಳಿಸಿದರು.

'ಬ್ರ್ಯಾಂಡ್ ಬೆಂಗಳೂರು' ನಿರ್ಮಾಣ ಮಾಡಲು ಟ್ರಾಫಿಕ್ ಸಮಸ್ಯೆ ನಿವಾರಣೆಯಾಗಬೇಕು. ಅದಕ್ಕೆ ಆದ್ಯತೆ ನೀಡಿ ಕಾಮಗಾರಿ ತೀವ್ರಗತಿಯಲ್ಲಿ ಮಾಡಲಾಗುತ್ತಿದೆ. ತಾಂತ್ರಿಕವಾಗಿ ನಡೆಯುವ ಕಾಮಗಾರಿಗಳು ಇದಾಗಿರುವುದರಿಂದ ಬಹಳ ಸುರಕ್ಷಿತವಾಗಿ ಮಾಡಬೇಕಿದೆ. ಹಾಗಾಗಿ ಅದಕ್ಕೆ ಸಮಯ ಬೇಕಾಗುತ್ತದೆ ಎಂದು ಹೇಳಿದರು.

5ನೇ ಪುಟ ನೋಡಿ

ವಿಧಾನಸೌಧ: ಪ್ರವೇಶ ದ್ವಾರಗಳಲ್ಲಿ ಬಿಗಿ ಭದ್ರತೆ

# ನಕಲಿ ಪಾಸ್, ಗುರುತಿನ ಚೀಟಿ ಪತ್ತೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ವಿಧಾನಸೌಧದಲ್ಲಿ ಬಜೆಟ್ ಮಂಡನೆ ವೇಳೆ ಅಕ್ರಮವಾಗಿ ಪ್ರವೇಶಿಸಿ ಶಾಸಕರ ಕುರ್ಚಿಯಲ್ಲಿ ವಕೀಲ ತಿಪ್ಪೇರುದ್ರಪ್ಪ ಕುಳಿತಿದ್ದ ಪ್ರಕರಣದ ನಂತರ, ವಿಧಾನಸೌಧ ಹಾಗೂ ಸುತ್ತಮುತ್ತ ಭದ್ರತೆ ಬಿಗಿಗೊಳಿಸಲಾಗಿದೆ. ಇದರ ಬೆನ್ನಲ್ಲೇ, ನೂರಕ್ಕೂ ಹೆಚ್ಚು ನಕಲಿ ಪಾಸ್ ಹಾಗೂ ನಕಲಿ ಗುರುತಿನ ಚೀಟಿಗಳು ಪತ್ತೆಯಾಗಿವೆ.

'ಮೊಳಕಾಲ್ಮುರು ಕ್ಷೇತ್ರದ ಶಾಸಕ' ಎಂದು ಹೇಳಿಕೊಂಡು ತಿಪ್ಪೇರುದ್ರಪ್ಪ ಒಳಗೆ ನುಗ್ಗಿದ್ದರು. ಇಂಥ ಘಟನೆಗಳು ಮರುಕಳಿಸದಂತೆ ಮಾರ್ಷಲ್ ಹಾಗೂ ಭದ್ರತಾ ಸಿಬ್ಬಂದಿಗಳಿಗೆ ವಿಶೇಷ ಕಾರ್ಯಾಗಾರ ನಡೆಸಿರುವ ಪೊಲೀಸ್ ಅಧಿಕಾರಿಗಳು, ಎಲ್ಲರಿಗೂ ಫೋಟೊ ಸಮೇತ ಶಾಸಕರ ಪರಿಚಯ ಮಾಡಿಸಿದ್ದಾರೆ.

ಜಪ್ತಿ ಮಾಡಿರುವ ನಕಲಿ ಪಾಸ್‌ಗಳು

ಜೊತೆಗೆ, ವಿಧಾನಸೌಧ ಪ್ರವೇಶ ದ್ವಾರ ಹಾಗೂ ಸುತ್ತಮುತ್ತ ಸ್ಥಳಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಿಬ್ಬಂದಿಯನ್ನು ಭದ್ರತೆಗೆ ನಿಯೋಜಿಸಲಾಗಿದೆ. ಪ್ರವೇಶ ದ್ವಾರದಲ್ಲಿ ಪ್ರತಿಯೊಬ್ಬರ ಮೇಲೆ ನಿಗಾ ವಹಿಸಿ ತಪಾಸಣೆ ನಡೆಸಲಾಗುತ್ತಿದೆ. ಇದರಿಂದಾಗಿ, ನಾಲ್ಕು ದಿನಗಳ ಅವಧಿಯಲ್ಲಿ 100ಕ್ಕೂ ಹೆಚ್ಚು ನಕಲಿ ಪಾಸ್‌ಗಳು ಹಾಗೂ ಗುರುತಿನ ಚೀಟಿಗಳು ಸಿಕ್ಕಿವೆ.

'ಅಹಿತಕರ ಘಟನೆಗೆ ಆಸ್ಪದ ನೀಡದಂತೆ ಭದ್ರತೆ ಹೆಚ್ಚಿಸಲಾಗಿದೆ. ವಿಧಾನಸೌಧದೊಳಗೆ ಹೊರಟಿದ್ದ ಹಲವರ ಬಳಿ ಬಣ್ಣದ ಜೆರಾಕ್ಸ್‌ನ ನಕಲಿ ಪಾಸ್, ಉದ್ಯೋಗಿಗಳ ಹೆಸರಿನಲ್ಲಿ ನಕಲಿ ಗುರುತಿನ ಚೀಟಿ ಹಾಗೂ ಶಾಸಕರ ಹೆಸರಿನಲ್ಲಿ ನಕಲಿ ಪಾಸ್‌ಗಳು ಪತ್ತೆಯಾಗಿವೆ. ನಕಲಿ ದಾಖಲೆ ಸೃಷ್ಟಿಸಿ, ವಿಧಾನಸೌಧದೊಳಗೆ ಅಕ್ರಮವಾಗಿ ಪ್ರವೇಶಿಸಲು ಮುಂದಾಗಿದ್ದವರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಶಾಸಕರ ಹೆಸರಿನ ಪಾಸ್‌ಗಳನ್ನು ಕೆಲವರು ಕಾರುಗಳ ಮೇಲೆ ಅಂಟಿಸಿಕೊಂಡು, ವಿಧಾನಸೌಧ ಆವರಣದೊಳಗೆ ಹೊರಟಿದ್ದರು. ಅಂಥ ಕಾರುಗಳನ್ನು ತಡೆದು ಪರಿಶೀಲಿಸಿದಾಗ, ನಕಲಿ ಪಾಸ್ ಎಂಬುದು ಗೊತ್ತಾಗಿದೆ. ಈ ಬಗ್ಗೆ ಸಂಬಂಧಪಟ್ಟ ಶಾಸಕರಿಗೂ ಮಾಹಿತಿ ನೀಡಲಾಗಿದೆ' ಎಂದು ತಿಳಿಸಿದರು.

'ಅಸಲಿ ಪಾಸ್ ಹೋಲುವ ರೀತಿಯಲ್ಲಿ ನಕಲಿ ಪಾಸ್ ಸೃಷ್ಟಿಸಲಾಗಿದೆ. ಪಾಸ್ ಮುದ್ರಣ ಮಾಡುವ ವ್ಯಕ್ತಿಗಳ ಮೇಲೆ ಅನುಮಾನವಿದೆ. ವೈಯಕ್ತಿಕ ಕೆಲಸ ಹಾಗೂ ಬೇರೆಯವರನ್ನು ವಂಚಿಸುವ ಉದ್ದೇಶದಿಂದ ಹಲವರು ಈ ಕೃತ್ಯ ಎಸಗುತ್ತಿದ್ದಾರೆ. ಕೆಲವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುವುದು' ಎಂದರು.

ರಾಜ್ಯದಲ್ಲಿ ಆಗಸ್ಟ್ 15ರ ಒಳಗೆ 70 ಕೇಂದ್ರ ತೆರೆಯಲು ಅಂಚೆ ಇಲಾಖೆ ನಿರ್ಧಾರ

# ರಫ್ತು ಉತ್ತೇಜಿಸಲು 'ಡಾಕ್ ನಿರ್ಯಾತ್ ಕೇಂದ್ರ'

● ಬಾಲಕೃಷ್ಣ ಪಿ.ಎಚ್.

ಪ್ರಜಾವಾಣಿ ವಿಶೇಷ

**ಬೆಂಗಳೂರು:** ಯಾವುದೇ ಜಿಲ್ಲೆಯ ಯಾವುದೇ ವಸ್ತುವನ್ನು ರಫ್ತು ಮಾಡಲು ಬೆಂಗಳೂರಿಗೆ ಬರುವುದನ್ನು ತಪ್ಪಿಸಲು ಅಂಚೆ ಇಲಾಖೆ ಮುಂದಾಗಿದೆ. ಅದಕ್ಕಾಗಿ ಆಗಸ್ಟ್ 15ರ ಒಳಗೆ ರಾಜ್ಯದ ಪ್ರಮುಖ 70 ಅಂಚೆ ಕಚೇರಿಗಳಲ್ಲಿ 'ಡಾಕ್ ನಿರ್ಯಾತ್ ಕೇಂದ್ರ' ತೆರೆಯುವ ಗುರಿ ಇಟ್ಟುಕೊಂಡಿದೆ.

ಸಣ್ಣ ಮತ್ತು ಮಧ್ಯಮ ಉದ್ದಿಮೆದಾರರಿಗೆ ಉತ್ತೇಜನ ನೀಡಲು ಮತ್ತು ರಫ್ತು ಹೆಚ್ಚಿಸಲು ಡಾಕ್ ನಿರ್ಯಾತ್ ಕೇಂದ್ರಗಳನ್ನು ದೇಶದಾದ್ಯಂತ ತೆರೆಯಲು ಕೇಂದ್ರ ಅಂಚೆ ಇಲಾಖೆ ನಿರ್ಧರಿಸಿದೆ. ಕರ್ನಾಟಕದಲ್ಲಿ ಜೂನ್‌ನಲ್ಲಿ 10 ಕೇಂದ್ರಗಳನ್ನು ತೆರೆಯಲಾಗಿದೆ. ಬೆಂಗಳೂರಿನಲ್ಲಿ 2, ಮೈಸೂರಿನಲ್ಲಿ 2, ಬಾಗಲಕೋಟೆ, ವಿಜಯಪುರ, ಧಾರವಾಡ, ಬೆಳಗಾವಿ, ಬೀದರ್, ಚನ್ನಪಟ್ಟಣಗಳಲ್ಲಿ ತಲಾ 1 ಕೇಂದ್ರ ಆರಂಭಗೊಂಡಿವೆ.

**ಆನ್‌ಲೈನ್‌ನಲ್ಲಿ ದಾಖಲೆ ಅಪ್‌ಲೋಡ್:** ರಫ್ತು ಮಾಡಲು ಪರವಾನಗಿ, ಪ್ರಮಾಣಪತ್ರ, ವಸ್ತು ವಿವರ, ರಫ್ತುದಾರರ ವಿವರ ಹೀಗೆ ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ನೀಡಲು ಕೂಡ ಬೆಂಗಳೂರಿಗೆ ಬರಬೇಕಿತ್ತು. ಈಗ ರಫ್ತುದಾರರು ಇರುವಲ್ಲಿಂದಲೇ ಡಾಕ್ ನಿರ್ಯಾತ್ ಕೇಂದ್ರ ಪೋರ್ಟಲ್‌ನಲ್ಲಿ (https://dnk.cept.gov.in/customers.web/) ಭರ್ತಿ ಮಾಡಲು ಅವಕಾಶ ನೀಡಲಾಗಿದೆ ಎಂದು ಮುಖ್ಯ ಪೋಸ್ಟ್ ಮಾಸ್ಟರ್ ಜನರಲ್ ಎಸ್. ರಾಜೇಂದ್ರ ಕುಮಾರ್ 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

35 ಕೆ.ಜಿ.ವರೆಗೆ ರಫ್ತಿಗೆ ಅವಕಾಶ ನೀಡಲಾಗಿದೆ. ಬೆಳಗಾವಿಯ ಹೋಮಿಯೋಪಥಿ ವೈದ್ಯರು ಮಾತ್ರೆಗಳನ್ನು ರಫ್ತು ಮಾಡುತ್ತಾರೆ. ಅದು ಒಂದು ಕೆ.ಜಿ. ಕೂಡ ಇರುವುದಿಲ್ಲ. ಇದೇ ರೀತಿ ಪ್ರತಿ ಜಿಲ್ಲೆಯಲ್ಲಿ ರಫ್ತು ಮಾಡುವವರು ಬಹಳ ಮಂದಿ ಇರುತ್ತಾರೆ. ಅವರಿಗೆ ಡಾಕ್ ನಿರ್ಯಾತ್ ಕೇಂದ್ರದಿಂದಾಗಿ ವೆಚ್ಚ ಕಡಿಮೆಯಾಗಲಿದೆ. ಸಮಯವೂ ಉಳಿಯಲಿದೆ ಎಂದು ವಿವರಿಸಿದರು.

ದೇಶದಾದ್ಯಂತ 1.5 ಅಂಚೆ ಕಚೇರಿಗಳು, 5.2 ಲಕ್ಷಕ್ಕೂ ಹೆಚ್ಚು ಸಾಮಾನ್ಯ ಸೇವಾ ಕೇಂದ್ರಗಳಿವೆ. ಎಲ್ಲ ಜಿಲ್ಲೆಗಳಲ್ಲಿ ಡಾಕ್ ನಿರ್ಯಾತ್ ಕೇಂದ್ರ ಇರಬೇಕು ಎಂಬ ಗುರಿಯನ್ನು ಕೇಂದ್ರ ಸರ್ಕಾರ ಹೊಂದಿದೆ. ಆಗಸ್ಟ್ 15ರ ಒಳಗೆ ದೇಶದಲ್ಲಿ 1,000ಕ್ಕೂ ಅಧಿಕ ಡಾಕ್ ನಿರ್ಯಾತ್ ಕೇಂದ್ರ ಆರಂಭಗೊಳ್ಳಲಿವೆ. ರಫ್ತು ಸೊತ್ತುಗಳು ಬಲ್ಕ್ ಆಗಿದ್ದರೆ, ಅಲ್ಲೇ ಸಂಗ್ರಹಿಸುವ ವ್ಯವಸ್ಥೆಯೂ ಇದೆ. ಬಲ್ಕ್ ಅಲ್ಲದೇ ಇದ್ದರೆ ಡಾಕ್ ನಿರ್ಯಾತ್ ಕೇಂದ್ರ ಇರುವ ಅಂಚೆ ಕಚೇರಿಗೆ ಬರಬೇಕು. ರಾಜ್ಯದ ಪ್ರತಿ ಜಿಲ್ಲೆಯಲ್ಲಿ ಕನಿಷ್ಠ ಎರಡು ಕೇಂದ್ರಗಳು ಇರಲಿವೆ.



**ಕಡಿಮೆ ವೆಚ್ಚ, ಸರಳ ಪ್ರಕ್ರಿಯೆಯಿಂದಾಗಿ ಡಾಕ್ ನಿರ್ಯಾತ್ ಕೇಂದ್ರ ಯೋಜನೆ ಜನಪ್ರಿಯಗೊಳ್ಳಲಿದೆ. ರಫ್ತುದಾರರ ಸಂಖ್ಯೆಯೂ ಹೆಚ್ಚಲಿದೆ.**

**ಎಸ್. ರಾಜೇಂದ್ರ ಕುಮಾರ್,** ಮುಖ್ಯ ಪೋಸ್ಟ್ ಮಾಸ್ಟರ್ ಜನರಲ್, ಬೆಂಗಳೂರು

## ಅಕ್ರಮ ಗಣಿಗಾರಿಕೆ ನಿಯಂತ್ರಿಸಲು ಒತ್ತಾಯ

**ಯಲಹಂಕ:** ಜಾಲಾ ಹೋಬಳಿ ಹುಣಸಮಾರನಹಳ್ಳಿ ಗ್ರಾಮದ ಸರ್ವೆ ನಂಬರ್ 179ರಲ್ಲಿ 16 ಎಕರೆ 32 ಗುಂಟೆ ಸರ್ಕಾರಿ ಜಮೀನಿನಲ್ಲಿ ಶಾಸಕ ಮುನಿರತ್ನ ಅವರು ಅಕ್ರಮ ಗಣಿಗಾರಿಕೆ ನಡಸುತ್ತಿದ್ದರೂ ಸರ್ಕಾರ ಮೌನ ವಹಿಸಿದೆ. ಇದನ್ನು ನಿಯಂತ್ರಿಸಿ ಆರೋಪಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಸ್ಥಳೀಯರು ಆಗ್ರಹಿಸಿದ್ದಾರೆ.

ಜೈಭೀಮ್ ಸೇನೆ ಸಂಸ್ಥಾಪಕ ಕೃಷ್ಣಮೂರ್ತಿ ಈ ಬಗ್ಗೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ಅಕ್ರಮವಾಗಿ ಗಣಿಗಾರಿಕೆ ಮಾಡುವವರ ವಿರುದ್ಧ ಎಫ್.ಐ.ಆರ್ ದಾಖಲಿಸಿ, ಆರೋಪಿಗಳನ್ನು ಬಂಧಿಸಬೇಕು. ಗಣಿಗಾರಿಕೆಗೆ ಬಳಸುತ್ತಿದ್ದ ಜೆಸಿಬಿ ಸಹಿತ ಎಲ್ಲ ಸಾಮಗ್ರಿಗಳನ್ನು ವಶಪಡಿಸಿಕೊಳ್ಳಬೇಕು. ಆದರೆ, ಇದುವರೆಗೂ ಯಾವುದೇ ವಸ್ತುಗಳನ್ನು ವಶಕ್ಕೆ ಪಡೆದಿಲ್ಲ. ಈಗಲೂ ಸಹ ಕಲ್ಲುಗಳನ್ನು ಲಾರಿಗಳಲ್ಲಿ ತುಂಬಿ ಸಾಗಣೆ ಮಾಡಲಾಗುತ್ತಿದೆ' ಎಂದು ಆರೋಪಿಸಿದರು.

ಕಂದಾಯ ಸಚಿವ ಕೃಷ್ಣಬೈರೇಗೌಡರ ವಿಧಾನಸಭಾ ಕ್ಷೇತ್ರವಾದ ಬ್ಯಾಟರಾಯನಪುರ ವ್ಯಾಪ್ತಿಯಲ್ಲಿ ಈ ಅಕ್ರಮ ಗಣಿಗಾರಿಕೆ ನಡೆಯುತ್ತಿದ್ದರೂ ಸಚಿವರು ದಿವ್ಯಮೌನ ವಹಿಸಿರುವುದು ಸರಿಯಲ್ಲ ಎಂದು ತಿಳಿಸಿದರು.

ಸಾಮಾಜಿಕ ಕಾರ್ಯಕರ್ತ ಎಂ.ಬಸವರಾಜು ಮಾತನಾಡಿ, 'ಶಾಸಕ ಮುನಿರತ್ನ, ಹುಣಸಮಾರನಹಳ್ಳಿ ಗ್ರಾಮದ ಸರ್ವೆ ನಂಬರ್ 179, 177/3, 178/1,2,3 34/1,2,3 ಹಾಗೂ 17/7,8,9ರಲ್ಲಿ 12.16 ಎಕರೆ ಪ್ರದೇಶದಲ್ಲಿ ಅಕ್ರಮ ಕಲ್ಲುಗಣಿಗಾರಿಕೆ ನಡೆಸುತ್ತಿದ್ದಾರೆ. ಈ ಸಂಬಂಧ ತಹಶೀಲ್ದಾರ್ ಮತ್ತು ಪ್ರಾದೇಶಿಕ ಆಯುಕ್ತರಿಗೆ ದೂರು ನೀಡಿದ್ದರೂ ಯಾವುದೇ ಕ್ರಮಕೈಗೊಂಡಿಲ್ಲ' ಎಂದು ದೂರಿದರು.

ಸಂಸದ ಡಿ.ವಿ. ಸದಾನಂದ ಗೌಡರಿಗೆ ಮೂರು ವರ್ಷಗಳ ಹಿಂದೆ ದೂರು ನೀಡಿದಾಗ ಅವರು ಕಾನೂನು ಕ್ರಮ ಕೈಗೊಳ್ಳಲು ಸೂಚಿಸಿದ್ದರು. ಪ್ರಾದೇಶಿಕ ಅಧಿಕಾರಿಗಳಿಗೆ ದೂರು ನೀಡಿದಾಗ ಆರೋಪಿಗಳ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಲು ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದರು. ಆದರೆ ಯಾವುದೇ ಕ್ರಮಗಳಾಗಿಲ್ಲ ಎಂದು ತಿಳಿಸಿದರು.

# 'ಸೀಮಾತೀತ ವಿಮರ್ಶೆ ದೂರ ಮಾಡುವುದು ಸಲ್ಲ'

## 'ದಲಿತ ಸಾಹಿತ್ಯ ಮತ್ತು ಚಳವಳಿ: ಎಲ್. ಎನ್' ಕುರಿತ ವಿಚಾರ ಸಂಕಿರಣ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ನವೋದಯ, ನವ್ಯ ಸೇರಿದಂತೆ ಎಲ್ಲರೂ ಪಾಶ್ಚಿಮಾತ್ಯ ವಿಮರ್ಶೆಯ ನೆಲೆಯಲ್ಲಿ ಕನ್ನಡ ಸಾಹಿತ್ಯವನ್ನು ವಿಮರ್ಶಿಸಿದರು. ಅದಕ್ಕೆ ಭಿನ್ನವಾಗಿ ದೇಸಿ ನೆಲೆಯಲ್ಲಿ ನೋಡುವ ಕ್ರಮವನ್ನು ದಲಿತ ಬಂಡಾಯ ಚಳವಳಿ ಮಾಡಿತು. ಸೀಮಾತೀತ ವಿಮರ್ಶೆ ಎಂದೂ ಕರೆಯಲಾಗುವ ಈ ದೇಸಿ ವಿಮರ್ಶೆಯನ್ನು ದೂರ ಮಾಡಬಾರದು' ಎಂದು ಸಾಹಿತಿ ಪ್ರೊ. ಅರವಿಂದ ಮಾಲಗತ್ತಿ ಹೇಳಿದರು.

ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರ ಮತ್ತು ಶೂದ್ರ ಪ್ರತಿಷ್ಠಾನದಿಂದ ಶುಕ್ರವಾರ ನಡೆದ 'ದಲಿತ ಸಾಹಿತ್ಯ ಮತ್ತು ಚಳವಳಿ: ಎಲ್. ಹನುಮಂತಯ್ಯ' ಕುರಿತ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

'ಸಾಹಿತ್ಯದಲ್ಲಿ ಅಂಬೇಡ್ಕರ್‌ವಾದ ಬಳಕೆಯಲ್ಲಿದೆ. ಮತ್ತೆ ಅಂಬೇಡ್ಕರ್ ಕಟ್ಟರ್‌ವಾದ, ಉಗ್ರವಾದ, ಸೌಮ್ಯವಾದ ಎಂದು ವಿಂಗಡಿಸುವುದು ಸರಿಯಾದ ಕ್ರಮವಲ್ಲ. ಎಲ್ಲವನ್ನು ಒಟ್ಟಾಗಿ ಗ್ರಹಿಸಬೇಕೇ ಹೊರತು, ವಿಂಗಡಿಸಿ ಗ್ರಹಿಸುವುದಲ್ಲ' ಎಂದು ತಿಳಿಸಿದರು.

'ಉಪನ್ಯಾಸಕರಾಗಿರುವವರು ಸಾಹಿತ್ಯ ಕ್ಷೇತ್ರಕ್ಕೆ ಬರುವುದು ಸುಲಭ. ಬೇರೆ ಕ್ಷೇತ್ರದಲ್ಲಿ ಕೆಲಸ ಮಾಡಿಕೊಂಡು ಸಾಹಿತ್ಯ ಕ್ಷೇತ್ರಕ್ಕೆ ಬಂದು ಸಾಮಾಜಿಕ ಶಿಕ್ಷಕನಾಗುವುದು ಸುಲಭವಲ್ಲ. ಅಂತಹ ಸಾಮಾಜಿಕ ಶಿಕ್ಷಕನಾಗಿ ಹನುಮಂತಯ್ಯ ಇದ್ದಾರೆ. ಅವರು ಕನಸಿನ ಕವಿ. ಬಿಡುಗಡೆಯ ಕವಿ. ಕನಸು ಕಾಣುತ್ತಲೇ ಬಿಡುಗಡೆಯ ದಾರಿಯನ್ನು ತೋರುವ ಕವಿ. ಭೂತಕಾಲವನ್ನು ತೋರುತ್ತಲೇ ಭವಿಷ್ಯತ್ತನ್ನು ಕಂಡುಕೊಳ್ಳುವ ಕವಿ' ಎಂದು ಬಣ್ಣಿಸಿದರು.

ವಿಚಾರ ಸಂಕಿರಣ ಉದ್ಘಾಟಿಸಿದ ಕವಿ ಎಚ್.ಎಸ್. ಶಿವಪ್ರಕಾಶ್, 'ಲಂಕೇಶ್ ಅವರ ಅವ್ವ ಕವಿತೆಯು ಭೂಮಿ ಜತೆಗೆ ಸಮೀಕರಿಸುವುದರ ಜೊತೆಗೆ ಭಿನ್ನವಾಗಿ ತಾಯಿಯನ್ನು ಕಟ್ಟಿಕೊಟ್ಟರೆ, ಹನುಮಂತಯ್ಯ ಅವರ ಅವ್ವ ಕವಿತೆಯು ಬಡತನದ ಆತ್ಯಂತಿಕ ಸ್ಥಿತಿಯನ್ನು ಅದ್ಭುತವಾಗಿ ಕಟ್ಟಿಕೊಡುತ್ತಾರೆ. ಹನುಮಂತಯ್ಯ ಅವರ ಎಲ್ಲ ಬರಹಗಳು ಸಂಸ್ಕೃತಿಮುಖಿಯಾದುದು' ಎಂದು ಹೇಳಿದರು.

ಬಳಿಕ ವಿವಿಧ ಗೋಷ್ಠಿಗಳು, ಎಲ್. ಹನುಮಂತಯ್ಯರೊಂದಿಗೆ ಸಂವಾದ ಕಾರ್ಯಕ್ರಮಗಳು ನಡೆದವು.

'ದಲಿತ ಸಾಹಿತ್ಯ ಮತ್ತು ಚಳವಳಿ: ಎಲ್. ಹನುಮಂತಯ್ಯ' ಕುರಿತ ರಾಷ್ಟ್ರೀಯ ವಿಚಾರಸಂಕಿರಣದಲ್ಲಿ ಬೆಂಗಳೂರು ವಿಶ್ವವಿದ್ಯಾಲಯ ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕ ಮುನಿಯಪ್ಪ, ಕವಿ ಎಚ್.ಎಸ್. ಶಿವಪ್ರಕಾಶ್, ಸಾಹಿತಿ ಅರವಿಂದ ಮಾಲಗತ್ತಿ, ಶೂದ್ರ ಪ್ರತಿಷ್ಠಾನದ ಅಧ್ಯಕ್ಷ ಎಚ್. ಲಕ್ಷ್ಮೀನಾರಾಯಣಸ್ವಾಮಿ ಇದ್ದರು

# ಉರುಳಿಬಿದ್ದ ಮರ: ವಾಹನಗಳು ಜಖಂ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಹೈಗ್ರೌಂಡ್ಸ್ ಠಾಣೆ ಎದುರಿನ ರಸ್ತೆಯಲ್ಲಿದ್ದ ಬೃಹತ್ ಗಾತ್ರದ ಮರವೊಂದು ಉರುಳಿಬಿದ್ದಿದ್ದು, ಅದರಡಿ ಸಿಲುಕಿ ವಾಹನಗಳು ಜಖಂಗೊಂಡಿವೆ. ಬೈಕ್ ಸವಾರ ರಾಜಶೇಖರ್ ಗಾಯಗೊಂಡಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

'ಕನ್ನಿಂಗ್‌ಹ್ಯಾಮ್ ರಸ್ತೆಗೆ ಹೊಂದಿಕೊಂಡಿರುವ ಚಂದ್ರಿಕಾ ಹೋಟೆಲ್ ವೃತ್ತದಲ್ಲಿರುವ ಮರ, ಶುಕ್ರವಾರ ರಾತ್ರಿ ಏಕಾಏಕಿ ಉರುಳಿಬಿದ್ದಿದೆ. ರಸ್ತೆಯಲ್ಲಿ ಹೊರಟಿದ್ದ ಮೂರು ಕಾರುಗಳು ಹಾಗೂ ಬೈಕ್ ಮೇಲೆಯೇ ಮರದ ಟೊಂಗೆಗಳು ಬಿದ್ದಿದ್ದವು' ಎಂದು ಪೊಲೀಸರು ಹೇಳಿದರು.

'ಕನ್ನಿಂಗ್‌ಹ್ಯಾಮ್ ರಸ್ತೆಯಲ್ಲಿ ವಾಹನಗಳ ದಟ್ಟಣೆ ಹೆಚ್ಚಿದ್ದ ಸಂದರ್ಭದಲ್ಲಿ ಮರ ಉರುಳಿ ಬಿದ್ದಿದೆ.

ಉರುಳಿಬಿದ್ದಿರುವ ಮರದಡಿ ಸಿಲುಕಿ ಜಖಂಗೊಂಡಿರುವ ಕಾರುಗಳು

ಟೊಂಗೆ ಅಡಿ ಸಿಲುಕಿದ್ದ ಕಾರಿನಲ್ಲಿದ್ದ ಪ್ರಯಾಣಿಕರು ಸುರಕ್ಷಿತವಾಗಿ ಹೊರಗೆ ಬಂದಿದ್ದಾರೆ. ಬೈಕ್ ಸವಾರನಿಗೆ ಮಾತ್ರ ಗಾಯಗಳಾಗಿವೆ' ಎಂದು ತಿಳಿಸಿದರು.

'ಇಡೀ ರಸ್ತೆಯಲ್ಲಿ ಮರದ ಟೊಂಗೆಗಳು ಬಿದ್ದಿದ್ದವು. ಇದರಿಂದಾಗಿ ಕನ್ನಿಂಗ್‌ಹ್ಯಾಮ್ ರಸ್ತೆಯಲ್ಲಿ ವಾಹನಗಳ ಸಂಚಾರ ಸಂಪೂರ್ಣ ಬಂದ್ ಆಗಿ, ದಟ್ಟಣೆ ಉಂಟಾಯಿತು. ಪರ್ಯಾಯ ರಸ್ತೆಗಳ ಮೂಲಕ ವಾಹನಗಳ ಸಂಚಾರಕ್ಕೆ ಅನುಕೂಲ ಕಲ್ಪಿಸಲಾಯಿತು' ಎಂದು ಹೇಳಿದರು.

## ವಿದ್ಯಾರ್ಥಿವೇತನ ಪರೀಕ್ಷೆ ನಾಳೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಮಯ್ಯ ಸಮೂಹ ಸಂಸ್ಥೆಗಳ ಸಂಸ್ಥಾಪಕ ಅಧ್ಯಕ್ಷ ಎಂ.ಎಸ್. ರಾಮಯ್ಯನವರ ಶತಮಾನೋತ್ಸವ ಆಚರಣೆಯ ಅಂಗವಾಗಿ ರಾಮಯ್ಯ ಆಫೀಸರ್ಸ್ ಐಎಎಸ್ ಅಕಾಡೆಮಿಯಿಂದ ಜುಲೈ 16ರಂದು ಬೆಳಿಗ್ಗೆ 11ಕ್ಕೆ ವಿದ್ಯಾರ್ಥಿ ವೇತನ ಪರೀಕ್ಷೆ ಹಮ್ಮಿಕೊಳ್ಳಲಾಗಿದೆ.

2024ರ ನಾಗರಿಕ ಸೇವೆ ಪರೀಕ್ಷೆಗೆ ತರಬೇತಿ ಪಡೆಯಲು ಸಿದ್ಧವಿರುವ ಪ್ರತಿಭಾವಂತ ಆಕಾಂಕ್ಷಿಗಳನ್ನು ಗುರುತಿಸಿ ಬೆಂಬಲಿಸುವುದು ಹಾಗೂ 100 ರ‍್ಯಾಂಕ್‌ಗಳನ್ನು ಪಡೆದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡುವುದು ಇದರ ಉದ್ದೇಶವಾಗಿದೆ.

ಮಾಹಿತಿಗಾಗಿ 080 29912829, 7397442266, admin@roiasa.in ಸಂಪರ್ಕಿಸಬಹುದು.

# ಪರೀಕ್ಷಾರ್ಥಿಗಳಿಗೆ 29ರಿಂದ ಉಚಿತ ಕಾರ್ಯಾಗಾರ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕನಕ ಎಕ್ಸ್‌ಪ್ರೆಸ್ ಮೀಡಿಯಾ ಗ್ರೂಪ್ಸ್ ಹಾಗೂ ಕನಕ ಎಕ್ಸ್‌ಪ್ರೆಸ್ ಮಹಿಳಾ ಪದವೀಧರರ ಒಕ್ಕೂಟದಿಂದ ನಗರದ ಚಂದ್ರಾ ಲೇಔಟ್‌ನಲ್ಲಿರುವ ಕನಕ ಭವನದಲ್ಲಿ ಜುಲೈ 29 ಮತ್ತು 30ರಂದು ಕುರುಬ ಸಮುದಾಯದ ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ಹಾಗೂ ಕಾನ್‌ಸ್ಟೆಬಲ್ ಪರೀಕ್ಷಾರ್ಥಿಗಳಿಗೆ ಉಚಿತ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿದೆ.

ಇನ್‌ಸೈಟ್ಸ್ ಐಎಎಸ್ ಸಂಸ್ಥಾಪಕ ಜಿ.ಬಿ. ವಿನಯಕುಮಾರ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ.

ಹೊಸದುರ್ಗದ ಈಶ್ವರಾನಂದಪುರಿ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಹಿರಿಯ ಪೊಲೀಸ್ ಅಧಿಕಾರಿಗಳು ಮಾರ್ಗದರ್ಶನ ನೀಡಲಿದ್ದಾರೆ.

ಸಮಾರೋಪದಲ್ಲಿ ಸಿದ್ಧ ರಾಮಾನಂದ ಸ್ವಾಮೀಜಿ, ಮುಖಂಡ ಎಚ್.ಎಂ. ರೇವಣ್ಣ ಭಾಗವಹಿಸುವರು.

ಕಾರ್ಯಾಗಾರದಲ್ಲಿ ಭಾಗವಹಿಸಲಿಚ್ಛಿಸುವ ಪರೀಕ್ಷಾರ್ಥಿಗಳು ಜುಲೈ 23ರ ಒಳಗೆ ಮೊಬೈಲ್: 9620590789ಗೆ ವಾಟ್ಸ್‌ಆ್ಯಪ್ ಮೂಲಕ ಹೆಸರು, ವಿದ್ಯಾರ್ಹತೆ, ವಿಳಾಸ, ಮೊಬೈಲ್ ಸಂಖ್ಯೆ ನೀಡಿ ನೋಂದಾಯಿಸಿಕೊಳ್ಳಬಹುದು ಎಂದು ಕನಕ ಎಕ್ಸ್‌ಪ್ರೆಸ್ ಮೀಡಿಯಾ ಗ್ರೂಪ್ಸ್ ವ್ಯವಸ್ಥಾಪಕ ನಿರ್ದೇಶಕ ಲಕ್ಷ್ಮೀಕಾಂತ ಎನ್. ತೋಂಟಾಪುರ ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

## ಅಕ್ರಮ ಕಲ್ಲು ಗಣಿಗಾರಿಕೆ : ನಿರ್ದೇಶಕರಿಂದ ಸಮೀಕ್ಷೆ

**ಬೆಂಗಳೂರು:** ಯಶವಂತಪುರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ನಡೆಯುತ್ತಿರುವ ಕ್ರಷರ್‌ಗಳಿಂದ ಆಗುತ್ತಿರುವ ಸಮಸ್ಯೆಗಳ ಕುರಿತು ಗಣಿ ಇಲಾಖೆ ನಿರ್ದೇಶಕರನ್ನು ಸ್ಥಳಕ್ಕೆ ಕಳುಹಿಸಿ ವರದಿ ಪಡೆಯಲಾಗುವುದು ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ಭರವಸೆ ನೀಡಿದರು.

ವಿಧಾನಸಭೆಯಲ್ಲಿ ಪ್ರಶ್ನೋತ್ತರ ಅವಧಿಯಲ್ಲಿ ಬಿಜೆಪಿಯ ಎಸ್.ಟಿ.ಸೋಮಶೇಖರ್ ಅವರ ಪ್ರಶ್ನೆಗೆ ಗಣಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ ಪರವಾಗಿ ಉತ್ತರಿಸಿದರು.

'ನಿಯಮವನ್ನು ಉಲ್ಲಂಘಿಸಿ ಗಣಿಗಾರಿಕೆ ಮಾಡುವುದೂ ಅಲ್ಲದೇ, ರಾತ್ರಿ ವೇಳೆಯಲ್ಲಿ ಸ್ಫೋಟಗಳನ್ನು ಮಾಡಲಾಗುತ್ತಿದೆ. ನಿಗದಿತ ಗಡಿ ಮೀರಿ ಗಣಿಗಾರಿಕೆ ನಡೆಸಲಾಗುತ್ತಿದೆ. ಇದರ ಮೇಲೆ ನಿಗಾ ಇಡಲು ಡ್ರೋನ್‌ಗಳನ್ನು ಬಳಸಲಾಗುತ್ತಿದೆ. ಈ ಬಗ್ಗೆ ಹೆಚ್ಚಿನ ಉತ್ತರವನ್ನು ಗಣಿ ಸಚಿವರಿಂದಲೇ ಕೊಡಿಸುತ್ತೇವೆ' ಎಂದರು.

ಸೋಮಶೇಖರ್ ಮಾತನಾಡಿ, 'ನಮ್ಮ ಕ್ಷೇತ್ರ ವ್ಯಾಪ್ತಿಯಲ್ಲಿ ರಾತ್ರಿ 8 ಗಂಟೆ ಬಳಿಕ ಸ್ಫೋಟಗಳು ನಡೆಯುತ್ತಿವೆ. ಬಾಂಬ್ ಬಿದ್ದ ಹಾಗೆ ಸದ್ದು ಕೇಳಿಸುತ್ತದೆ. ಗುತ್ತಿಗೆದಾರರು ಈ ಕೆಲಸಕ್ಕೆ ತಮಿಳುನಾಡಿನಿಂದ ಜನರನ್ನು ಕರೆತರುತ್ತಾರೆ. ಈ ಬಗ್ಗೆ ಯಾರಾದರೂ ಪ್ರಶ್ನಿಸಿದರೆ ಧಮಕಿ ಹಾಕುತ್ತಾರೆ' ಎಂದರು.

46 ಎಕರೆ ಪ್ರದೇಶದಲ್ಲಿ ಗಣಿಗಾರಿಕೆಗೆ ಪರವಾನಗಿ ನೀಡಲಾಗಿದೆ. ಆದರೆ ನೂರಾರು ಎಕರೆಯಲ್ಲಿ ಗಣಿಗಾರಿಕೆ ಮಾಡುತ್ತಿದ್ದಾರೆ. ಕೆರೆಗಳ ಪಕ್ಕದಲ್ಲೂ ಗಣಿಗಾರಿಕೆ ಮಾಡುತ್ತಿದ್ದಾರೆ ಎಂದರು.

ಕಾಂಗ್ರೆಸ್ ಎನ್. ಶ್ರೀನಿವಾಸಯ್ಯ ಮಾತನಾಡಿ, 'ನಾನು ಕಲ್ಲು ಗಣಿಗಾರಿಕೆಯ ಸಂತ್ರಸ್ತ. ಇವರ ದಬ್ಬಾಳಿಕೆಯಿಂದ ಜನರು ನಲುಗಿ ಹೋಗಿದ್ದಾರೆ. ನನಗೂ ಧಮಕಿ ಹಾಕಿದ್ದಾರೆ. ಪಿಡಿಒಗಳೂ ಇವರ ಬಳಿ ಹೋಗಲು ಹೆದರುತ್ತಾರೆ' ಎಂದು ಹೇಳಿದರು.



## ರೇವಣ್ಣ– ಶಿವಲಿಂಗೇಗೌಡ ಸದನದಲ್ಲಿ ಜಟಾಪಟಿ

**ಬೆಂಗಳೂರು:** ಹಾಸನ ಜಿಲ್ಲೆಯಲ್ಲಿನ ಜಲ್ಲಿ ಕ್ರಷರ್‌ಗಳ ಅಕ್ರಮಗಳ ಬಗ್ಗೆ ಜೆಡಿಎಸ್‌ನ ಎಚ್.ಡಿ.ರೇವಣ್ಣ ಪ್ರಸ್ತಾಪ ಮಾಡಿದ್ದು, ಕಾಂಗ್ರೆಸ್‌ನ ಕೆ.ಎಂ.ಶಿವಲಿಂಗೇಗೌಡರನ್ನು ಕೆರಳಿಸಿತು. ಇದು ಇಬ್ಬರ ಮಧ್ಯೆ ಜಟಾಪಟಿಗೆ ಕಾರಣವಾಯಿತು.

ಜಿಎಸ್‌ಟಿ ಮಸೂದೆ ಮೇಲಿನ ಚರ್ಚೆಯಲ್ಲಿ ಮಾತನಾಡಿದ ರೇವಣ್ಣ ಅವರು, ಜಲ್ಲಿ ಕ್ರಷರ್‌ಗಳ ಮಾಲೀಕರು ಜಿಎಸ್‌ಟಿ ಸರಿಯಾಗಿ ಪಾವತಿಸದೇ ತೆರಿಗೆ ವಂಚನೆ ಮಾಡುತ್ತಿವೆ. ಇವುಗಳ ಮೇಲೆ ನಿಗಾ ಇಟ್ಟು ತೆರಿಗೆ ವಸೂಲಿ ಮಾಡಬೇಕು. ಡ್ರೋನ್ ಮೂಲಕ ಎಷ್ಟು ಪ್ರಮಾಣದಲ್ಲಿ ಗಣಿಗಾರಿಕೆ ನಡೆಸುತ್ತಿದ್ದಾರೆ ಎಂಬುದನ್ನು ಸರ್ವೆ ಮಾಡಬೇಕು. ಹಾಸನ ಜಿಲ್ಲೆಯಲ್ಲೂ ಸಾಕಷ್ಟು ಕ್ರಷರ್‌ಗಳಿವೆ ಎಂದರು.

ಇದರಿಂದ ಕಿರಿಕಿರಿಗೊಳಗಾದ ಶಿವಲಿಂಗೇಗೌಡ ಅವರು, 'ನಂದೂ ಒಂದು ಕ್ರಷರ್ ಇದೆ. ನಾವು ರಾಯಲ್ಟಿ ಮತ್ತು ಜಿಎಸ್‌ಟಿ ಕಟ್ಟುತ್ತೇವೆ. ಪರೋಕ್ಷವಾಗಿ ನನ್ನ ವಿರುದ್ಧ ಮಾತನಾಡುತ್ತಿದ್ದಾರೆ' ಎಂದು ಹರಿಹಾಯ್ದರು.

'ನಾನು ನಿನ್ನ ಬಗ್ಗೆ ಹೇಳುತ್ತಿಲ್ಲ. ಅವರಿಗೆ (ಶಿವಲಿಂಗೇಗೌಡ) ಅಳುಕು ಏಕೆ. ಅವರು ದೊಡ್ಡವರು, ಅವರ ಲೆವೆಲ್ಲಿಗೆ ಮಾತನಾಡುವ ಶಕ್ತಿ ಇಲ್ಲ' ಎಂದು ರೇವಣ್ಣ ವ್ಯಂಗ್ಯವಾಡಿದರು.

'ದಿನವೂ ಕ್ರಷರ್‌ಗಳಿಂದ ಎಷ್ಟು ಲೋಡ್ ಹೊಡೆಯುತ್ತಾರೆ. ಎಷ್ಟು ವಿದ್ಯುತ್ ಎಷ್ಟು ಖರ್ಚಾಗುತ್ತದೆ ಎಲ್ಲ ಲೆಕ್ಕಹಾಕಿ. ಡ್ರೋನ್ ಸರ್ವೆ ಮಾಡಿಸಿದರೆ ಯಾರು ಯಾರು ಲೂಟಿ ಹೊಡೆದಿದ್ದಾರೆ ಎಂಬುದು ಗೊತ್ತಾಗುತ್ತದೆ' ಎಂದು ಅವರು ಹೇಳಿದರು.


ಪ್ರಜಾವಾಣಿ @75

ಪತ್ರಿಕೆ ಚಂದಾದಾರರಾಗಲು / ದೂರುಗಳಿಗೆ
(ಪತ್ರಿಕೆ ಬಾರದಿರುವುದು, ತಡವಾಗಿ ಪತ್ರಿಕೆ ಬರುವುದು, ಬೇರೆ ಪತ್ರಿಕೆ ಹಾಕುವುದು ಇತ್ಯಾದಿ)

ಸಂಪರ್ಕಕ್ಕೆ
8147623791
080 45557204
readerservicecell@deccanherald.co.in

ಸಂಪರ್ಕಿಸಲು ಕೋಡ್ ಸ್ಕ್ಯಾನ್ ಮಾಡಿ ಅಥವಾ ಕೆಳಗಿನ ಲಿಂಕ್‌ಗೆ ಭೇಟಿಮಾಡಿ
bit.ly/40dPCqy



ಸುಧಾ ಮಯೂರ ಓದಿರಿ


## ಕೃತಕ ಅಂಗಾಂಗ ಜೋಡಣಾ ಶಿಬಿರ ನಾಳೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಾರಾಯಣ್ ಸೇವಾ ಸಂಸ್ಥಾನ್ ಸೇವಾ ಸಂಸ್ಥೆಯಿಂದ ಜುಲೈ 16ರಂದು ಬೆಳಿಗ್ಗೆ 9ರಿಂದ ಸಂಜೆ 5ರ ವರೆಗೆ ವಿವಿಪುರದಲ್ಲಿರುವ ಅರಸೋಜಿ ರಾವ್ ಕಲ್ಯಾಣ ಮಂಟಪದಲ್ಲಿ ಅಂಗಾಂಗ ಜೋಡಣೆಗಾಗಿ ಅಂಗಾಂಗ ಮಾಪನ ಶಿಬಿರ ಆಯೋಜಿಸಲಾಗಿದೆ ಎಂದು ನಾರಾಯಣ್ ಸೇವಾ ಸಂಸ್ಥಾನದ ಸಾರ್ವಜನಿಕ ಸಂಪರ್ಕಾಧಿಕಾರಿ ಭಗವಾನ್ ಪ್ರಸಾದ್ ಗೌರ್ ತಿಳಿಸಿದರು.

ಪರಿಶಿಷ್ಟ ಪಂಗಡಗಳ ಕಲ್ಯಾಣ, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವ ಬಿ. ನಾಗೇಂದ್ರ, ಅದಮ್ಯ ಚೇತನ ಸಂಸ್ಥೆಯ ಮುಖ್ಯಸ್ಥೆ ತೇಜಸ್ವಿನಿ ಅನಂತ್ ಕುಮಾರ್, ಆಚಾರ್ಯ ವಿಮಲ್ ಸಾಗರ್ ಮಹಾರಾಜ್ ಶಿಬಿರದಲ್ಲಿ ಭಾಗವಹಿಸಲಿದ್ದಾರೆ.

ಅರ್ಹ ಫಲಾನುಭವಿಗಳಿಗೆ ಹೊಂದಿಕೆಯಾಗುವಂತೆ ಕೃತಕ ಅಂಗಾಂಗಗಳ ಅಳತೆ ತೆಗೆದುಕೊಂಡು ನಂತರ ಸಿದ್ಧಪಡಿಸಲಾಗುವುದು. ಒಂದು ತಿಂಗಳ ಒಳಗೆ ನಡೆಯಲಿರುವ ಬೃಹತ್ ಶಿಬಿರದಲ್ಲಿ ಅಳವಡಿಸಲಾಗುವುದು ಎಂದು ಸುದ್ದಿಗೋಷ್ಠಿಯಲ್ಲಿ ವಿವರಿಸಿದರು.

38 ವರ್ಷಗಳಿಂದ ನಾರಾಯಣ್ ಸೇವಾ ಸಂಸ್ಥಾನ್ ಕೃತಕ ಅಂಗಾಂಗ ಜೋಡಣೆಗಳನ್ನು ನಡೆಸುತ್ತಾ ಬಂದಿದೆ. ಇದು 988ನೆ ಶಿಬಿರವಾಗಿದೆ ಎಂದು ತಿಳಿಸಿದರು.

ವಕ್ತಾರ ರಜತ್ ಗೌರ್ ಮಾತನಾಡಿ, 'ಸಂಸ್ಥೆಯ ಅನುಭವಿ ಮೂಳೆ ತಜ್ಞರು, ಪ್ರಾಸ್ತೆಟಿಕ್ ವೈದ್ಯರ ತಂಡದಿಂದ ಅಂಗವಿಕಲರ ಆರೈಕೆ ಜೊತೆಗೆ ಅಂಗಾಂಗ ಅಳವಡಿಸಲು ನೆರವು ನೀಡಲಾಗುವುದು. ರೋಗಿಗಳು ತಮ್ಮ ಅಗತ್ಯತೆಗಳಿಗೆ ಅನುಗುಣವಾಗಿ ಉತ್ತಮ ಗುಣಮಟ್ಟದ ಹಗುರ ಮತ್ತು ದೀರ್ಘಕಾಲ ಬಾಳಿಕೆ ಬರುವ ಕೃತಕ ಅಂಗಾಂಗಗಳನ್ನು ತಯಾರಿಸಿ ಅಳವಡಿಸಲಾಗುವುದು' ಎಂದರು.

ಫಲಾನುಭವಿಗಳು ಶಿಬಿರಕ್ಕೆ ಆಧಾರ್ ಕಾರ್ಡ್, ಅಂಗವಿಕಲ ಇಲಾಖೆ ನೀಡಿರುವ ಪ್ರಮಾಣ ಪತ್ರ, ಅಂಗಾಂಗ ನ್ಯೂನತೆ ಪ್ರತಿಬಿಂಬಿಸುವ ಎರಡು ಭಾವಚಿತ್ರ ತರಬೇಕು. ಶಿಬಿರದಲ್ಲಿ ಉಚಿತ ಊಟೋಪಚಾರದ ವ್ಯವಸ್ಥೆ ಮಾಡಲಾಗಿದೆ ಎಂದು ಶಿಬಿರದ ಸಮನ್ವಯಕಾರ ರೋಹಿತ್ ತಿವಾರಿ ಮಾಹಿತಿ ನೀಡಿದರು.

**BEFORE THE HON'BLE HIGH COURT OF KARNATAKA, PRINCIPAL BENCH, AT BENGALURU**

**PROBATE CIVIL PETITION No. 09/2023**

**(Original Jurisdiction)**

**(In the matter concerning grant of probate to the Last Will and Testament dated 14.04.2022 executed by Late Christopher Pramanik)**

**BETWEEN:PULI BALAJI RAO** Aged about 56 years, Son of Puli Harsha Rao, residing at H-1003, Aparna Cyber Commune, Nallagandla, Serilingampally, Lingampally, K V Rangareddy, Andhra Pradesh- 500 019 ...PETITIONER

**AND:NIL** ...RESPONDENTS

Whereas the above-named Petitioner has filed the Probate Civil Petition before the said Hon'ble Court under Petition under Section 276 of the Indian Succession Act, 1925 Read with Rule 5(a)(i) of the Karnataka High Court Rules (Governing Probate and Administration Matters,1964) seeking grant of Probate of the Last Will and Testament dated 14.04.2022 executed by late Christopher Pramanik, and to consequently appoint the Petitioner herein as the administrator/executor of the said Will and to consequently hold that the sole beneficiary namely Mr.Oniel Micheal Pramanik is entitled to the Schedule A and Schedule B Properties respectively;

Be it known that no caveat has been entered and that the said petition is posted for hearing on 31/7/2023 and all persons claiming to have any interest in the estate of the deceased may come and see the proceedings before the grant of the probate.

Given under my hand and seal of the Hon'ble High Court of Karnataka, at Bangalore on this 8th day of June, 2023.

**BY ORDER OF THE HON'BLE COURT,**
Sd/-ASST. REGISTRAR,
HIGH COURT OF KARNATAKA,
BANGALORE-560 001.

**ADVOCATE FOR PETITIONER:**
**M/s. AGRAA LEGAL,**
Advocates and Consultants,
2nd Floor, Shivshankar Plaza, No. 19, Lalbagh Road, Richmond Circle, Bangalore 560 027.
PH:+91-80-41680004/22114370
EMAIL: admin@agraalegal.com

## PUBLIC NOTICE

Public are hereby notified that my client proposes to purchase the property mentioned in the schedule herein from its owners Smt.Shantha, wife of late Sri.Gopalakrishna and her children, Smt. G. Shashikala Smt. G. Rekha, Smt. G. Pushpa, Sri. G. Shiv Kumar and Sri.G.Prem Kumar, residing at No 15, 1st Cross, Anjaneya Temple Street, Adugodi, Bangalore-560 030, who have represented that they acquired item No.1 of the Schedule Property by way of inheritance and item No.II of the Schedule Property in terms of a Gift Deed dated 09/06/2010 registered as Document No.564/2010-11 in Book-I and stored in CD.No.ABLD41 in the office of the Sub-Registrar, Attibel, Bangalore. Persons objecting for the proposed sale or having any right in the said property may lodge his/their objections and/or claims with the undersigned along with supporting documentary evidence within 15 days from the date of this publication and objections and/or claims received thereafter will not be binding on my Client and my Client will proceed to purchase the Schedule Property as if there are no claims/objections.

**SCHEDULE**

**Item No.1**: All that piece and parcel of Property measuring 00 Acre 26 Guntas (out of 01 Acre 34 Guntas) in Sy.No.97, situated at Banahalli Village, Attibele Hobli, Anekal Taluk, Bangalore Urban District, Bangalore and bounded by:
East : Land belonging to Sri.Gullappa;
West : Land belonging to Sri. Ravindranatha Reddy;
North : Raja Kaluve; and
South : Land belonging to Sri.Y.Gopalakrishna.

**Item No.2**: All that piece and parcel of Property measuring 00 Acre 20 Guntas (out of 01 Acre 34 Guntas) in Sy.No.97, situated at Banahalli Village, Attibele Hobli, Anekal Taluk, Bangalore Urban District Bangalore and bounded by:
East : Land in Sy. No. 97;
West : Land in Sy. no. 73/P2;
North : Raja Kaluve; and
South : Land in Sy. No. 97.

**Mr. K. P. RUPESH KUMAR,**
Advocates & Consultants,
**M/s. LAW CORP,**
No.G3,Ground Floor,
Mohan Towers, No. 98/2-27,
Residency Road,
Bangalore. (M) 9886761765.

**ಕೋಚಿಮುಲ್ ಹಾಲು ಉತ್ಪಾದಕರ, ಹಾಲು ಉತ್ಪಾದಕರ ಸಹಕಾರಿ ಸಂಘಗಳ ನೌಕರರ ಸಾಮಾನ್ಯ ಕಲ್ಯಾಣ ಟ್ರಸ್ಟ್**
**ಎನ್.ಹೆಚ್.–75, ಹುತ್ತೂರು ಅಂಚೆ. ಕೋಲಾರ–563 102.**

ಕ್ರ.ಸಂ.ಕೋಚಿಹಾಂ/ಶೇ.ತಾಂ./ಟಸ್ಟ್/ಇ ಟೆಂಡರ್/2433/ 2023–2024 ದಿನಾಂಕ: 13.07.2023

**ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ**

ಕೋಚಿಮುಲ್ ಹಾಲು ಉತ್ಪಾದಕರ, ಹಾಲು ಉತ್ಪಾದಕರ ಸಹಕಾರಿ ಸಂಘಗಳ ನೌಕರರ ಸಾಮಾನ್ಯ ಕಲ್ಯಾಣ ಟ್ರಸ್ಟ್ ಎನ್.ಹೆಚ್–75, ಹುತ್ತೂರು ಅಂಚೆ, ಕೋಲಾರ–563102. ರವರಿಂದ ಕೋಮುಲ್ ಟ್ರಸ್ಟ್ ಮಂಡಳಿ ಸದಸ್ಯರು ಹಾಗೂ ಅವರ ಅವಲಂಬಿತರಿಗೆ **ಮೆಡಿಕ್ಲೈಮ್ ವಿಮಾ ಸೌಲಭ್ಯವನ್ನು** ವಾರ್ಷಿಕ ಗುತ್ತಿಗೆ ಆಧಾರದ ಮೇಲೆ IRDAI ನಲ್ಲಿ ನೋಂದಾಯಿಸಿರುವ ಅರ್ಹ ವಿಮಾ ಕಂಪನಿಗಳಿಂದ ತಾಂತ್ರಿಕ ಮತ್ತು ವಾಣಿಜ್ಯ ಟೆಂಡರ್‌ಗಳನ್ನು ಇ–ಟೆಂಡರ್ ಮೂಲಕ ಅಹ್ವಾನಿಸಲಾಗಿದೆ.

**ವಿವರಗಳು ಈ ಕೆಳಕಂಡಂತಿವೆ**

| | | |
|---|---|---|
| 1 | ಇ–ಟೆಂಡರ್ ಲಭಿಸುವ ದಿನಾಂಕ | ದಿನಾಂಕ: 15.07.2023 ರಿಂದ 22.07.2023 |
| 2 | ಟೆಂಡರ್ ಬಗ್ಗೆ ಸ್ಪಷ್ಟನೆ/ ಆಕ್ಷೇಪಣೆ ಪಡೆಯುವ ಕೊನೆಯ ದಿನಾಂಕ: & ಸಮಯ | ದಿನಾಂಕ: 19.07.2023 ರಂದು ಸಂಜೆ 5.30 ಗಂಟೆಯವರೆಗೆ. |
| 3 | ಟೆಂಡರ್ ಸಲ್ಲಿಸುವ / ನಮೂದಿಸುವ ಕೊನೆಯ ದಿನಾಂಕ: & ಸಮಯ | ದಿನಾಂಕ: 22.07.2023 ರಂದು ಸಂಜೆ 5.30 ಗಂಟೆಯವರೆಗೆ. |
| 4 | ತಾಂತ್ರಿಕ ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ | ದಿನಾಂಕ: 25.07.2023 ರಂದು ಬೆಳಗ್ಗೆ 10.00 ಗಂಟೆಗೆ |
| 5 | ವಾಣಿಜ್ಯ ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ | ದಿನಾಂಕ: 26.07.2023 ರಂದು ಬೆಳಗ್ಗೆ 10.00 ಗಂಟೆಗೆ |
| 6 | ತಾಂತ್ರಿಕ / ವಾಣಿಜ್ಯ ಟೆಂಡರ್‌ಗಳನ್ನು ತೆರೆಯುವ ಸ್ಥಳ | ಕೋಲಾರ–ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರಿ ಹಾಲು ಒಕ್ಕೂಟದ ಮಂಡಳಿ ಸಭಾಂಗಣ ಕೋಲಾರ ಡೇರಿ, ಎನ್.ಹೆಚ್.–75, ಹುತ್ತೂರು ಅಂಚೆ. ಕೋಲಾರ–563 102. |

ಟೆಂಡರ್ ಸಂಬಂಧ ನೀಡಬೇಕಾದ ಅರ್ಜಿ ಶುಲ್ಕ, ಇ.ಎಂ.ಡಿ ಮೊತ್ತ, ಭದ್ರತಾ ಠೇವಣೆ ಹಾಗೂ ಟೆಂಡರ್ ಷರತ್ತು ನಿಬಂಧನೆಗಳಿಗಾಗಿ ವೆಬ್‌ಸೈಟ್ https;//www.eproc.karnataka.gov.in ನಲ್ಲಿ ಲಭ್ಯವಿರುತ್ತದೆ.

**ಮ್ಯಾನೇಜಿಂಗ್ ಟ್ರಸ್ಟೀ, ಇ–ಟೆಂಡರ್ ಅಹ್ವಾನ ಪ್ರಾಧಿಕಾರ, ಕೋಚಿಮುಲ್ ಹಾಲು ಉತ್ಪಾದಕರ, ಹಾಲು ಉತ್ಪಾದಕರ ಸಹಕಾರಿ ಸಂಘಗಳ ನೌಕರರ ಸಾಮಾನ್ಯ ಕಲ್ಯಾಣ ಟ್ರಸ್ಟ್**

**ಯಶವಂತಪುರ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ**
ಪ್ರಧಾನ ಕಚೇರಿ : ನಂ 61, 7ನೇ ಮುಖ್ಯರಸ್ತೆ ಗೋಕುಲ 1ನೇ ಹಂತ ಯಶವಂತಪುರ, ಬೆಂಗಳೂರು – 560 022 E-mail: manager@yccs.co.in
ದೂರವಾಣಿ : 080–23372744, 9449867653/4
ಶಾಖೆ : ಕೆ.ಇ.ಬಿ. ಬಡಾವಣೆ, ಮೊ :9449867655
ಶಾಖೆ : ಅಟ್ಟೂರು ಬಡಾವಣೆ ದೂ : 080–29522744 ಮೊ : 9449867651

**49ನೇ ಸಾಮಾನ್ಯ ವಾರ್ಷಿಕ ಸರ್ವಸದಸ್ಯರ ಸಭೆಯ ತಿಳುವಳಿಕೆ ಪತ್ರ 2022–23 ನೋಟೀಸ್**

2022–23ನೇ ಸಾಲಿನ 49ನೇ ಸಾಮಾನ್ಯ ವಾರ್ಷಿಕ ಸರ್ವಸದಸ್ಯರ ಸಭೆಯನ್ನು ಸೊಸೈಟಿಯ ಅಧ್ಯಕ್ಷರಾದ ಶ್ರೀ ಮುನಿಸ್ವಾಮಿ. ಎನ್ ರವರ ಘನ ಅಧ್ಯಕ್ಷತೆಯಲ್ಲಿ ದಿ. 16.07.2023ರ ಭಾನುವಾರ ಬೆಳಗ್ಗೆ 10.00 ಗಂಟೆಗೆ ಶ್ರೀ ವೈ.ಮುನಿಸ್ವಾಮಪ್ಪ ಕಲ್ಯಾಣ ಮಂಟಪ ಯಶವಂತಪುರದಲ್ಲಿ ಏರ್ಪಡಿಸಲಾಗಿದೆ. ಸದಸ್ಯರ ವಿಳಾಸಗಳಿಗೆ ಸರ್ವಸದಸ್ಯರ ಸಭೆಯ ಪತ್ರವನ್ನು ಅಂಚೆ ಮೂಲಕ ಕಳುಹಿಸಲಾಗಿದೆ. ಒಂದು ವೇಳೆ ನೋಟೀಸ್ ತಲುಪದೇ ಇದ್ದಲ್ಲಿ ಇದನ್ನೇ ಸರ್ವಸದಸ್ಯರ ಸಭೆಯ ನೋಟೀಸ್ ಎಂದು ಪರಿಗಣಿಸಿ, ಸಭೆಗೆ ಭಾಗವಹಿಸಲು ಕೋರಲಾಗಿದೆ.

ಆಡಳಿತ ಮಂಡಲಿ ಅಪ್ಪಣೆ ಮೇರೆಗೆ
ರಾಜೀವ್ ಎಸ್.ಎನ್. ವ್ಯವಸ್ಥಾಪಕರು

**ಪುರಸಭಾ ಕಾರ್ಯಾಲಯ ಮಾಲೂರು,**
ದೂರವಾಣಿ ಸಂ: 08151–232238/232840/232847
**E-mail:** ka.malur.tmc@gmail.com

ಸಂಖ್ಯೆ:ಪುಸಮಾ/ಕಿಅ/ಇ–ಪ್ರೊಕ್/ಸಿಆರ್/01/2023–24 ದಿನಾಂಕ:07.07.2023

**ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ) (ಏಕ ಮತ್ತು ದ್ವಿ–ಲಕೋಟೆ ಪದ್ಧತಿ)**

ಮಾಲೂರು ಪುರಸಭಾ ವ್ಯಾಪ್ತಿಯಲ್ಲಿ ಎಸ್.ಎಫ್.ಸಿ ಕುಡಿಯುವ ನೀರು ಮತ್ತು ಮಾಲೂರು ಯೋಜನಾ ಪ್ರಾಧಿಕಾರದ ಅನುದಾನದಡಿಯಲ್ಲಿ ಕಾಮಗಾರಿಗಳನ್ನು ನಿರ್ವಹಿಸುವ ಸಲುವಾಗಿ ಅರ್ಹ ನೊಂದಾಯಿತ ಗುತ್ತಿಗೆದಾರರು/ಏಜೆನ್ಸಿಗಳಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕ ಅಧಿನಿಯಮ **(ಕೆ.ಟಿ.ಪಿ.ಪಿ–1999 ನಿಯಮಗಳು 2000)** ಅನ್ವಯ ಐಟಂವಾರು ದರಗಳ ಏಕ ಮತ್ತು ದ್ವಿ–ಲಕೋಟೆ ಪದ್ಧತಿ ಟೆಂಡರ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಲಾಗಿದೆ. ಗುತ್ತಿಗೆದಾರರು ಟೆಂಡರ್‌ಗಳನ್ನು ದಿನಾಂಕ: **24.07.2023** ರ ಅಪರಾಹ್ನ **5.30** ಗಂಟೆ ಒಳಗೆ ಸಲ್ಲಿಸತಕ್ಕದ್ದು. ಆಯಾ ಕಾಮಗಾರಿಗಳಿಗೆ ಅನ್ವಯಿಸುವ ಟೆಂಡರ್ ದಾಸ್ತಾವೇಜಿನ ನಿಯಮಾವಳಿಗಳಿಗೆ ಒಳಪಟ್ಟಿರುತ್ತದೆ. ಹೆಚ್ಚಿನ ಮಾಹಿತಿಗಳನ್ನು ತಾಂತ್ರಿಕ ಶಾಖೆ ಪುರಸಭೆ ಮಾಲೂರು ಇ–ಪ್ರಕ್ಯೂರ್‌ಮೆಂಟ್ ಮೂಲಕ ಪಡೆಯಬಹುದಾಗಿದೆ. ದೂರವಾಣಿ ಸಂ: **08151–232238. ಕಾಮಗಾರಿಗಳ ವಿವರ: ಕ್ರ. ಸಂ (01) DMA/2023-24/WS/WORK_INDENT339** ಅಂದಾಜು ಮೊತ್ತ: **ರೂ.3.00** ಲಕ್ಷಗಳು, **ಮೀಸಲಾತಿ:** General, (2) **DMA/2023-24/WS/WORK_INDENT194** ಅಂದಾಜು ಮೊತ್ತ: **ರೂ.50.00** ಲಕ್ಷಗಳು, **ಮೀಸಲಾತಿ:** General **ಸೂಚನೆ:** ಮೇಲ್ಕಾಣಿಸಿದ ದಿನಾಂಕಗಳಲ್ಲಿ ಸಾರ್ವತ್ರಿಕ ರಜೆ ಎಂದು ಘೋಷಣೆ ಮಾಡಿದ್ದಲ್ಲಿ ರಜಾ ದಿನದ ಮುಂದಿನ ಕೆಲಸದ ದಿನಾಂಕವನ್ನು ಪರಿಗಣಿಸಿಕೊಳ್ಳತಕ್ಕದ್ದು, ಹಾಗೂ ಮೇಲ್ಕಂಡ ಟೆಂಡರ್‌ಗಳಿಗೆ ನಿಗಧಿಪಡಿಸಿದ ಸಮಯದಲ್ಲಿ ಯಾರೂ ಭಾಗವಹಿಸದಿದ್ದ ಸಂದರ್ಭಲ್ಲಿ ಏಳು ದಿನಗಳ ಅಧಿಕ ಅವಧಿಯನ್ನು ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ಅಳವಡಿಸಿದೆ. ತಿದ್ದುಪಡಿ ಪ್ರಕಟಣೆಗಳು ಇದ್ದಲ್ಲಿ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/–
(ಶ್ರೀ ರಮೇಶ್ ಕೆ)
ತಹಶೀಲ್ದಾರ್ & ಆಡಳಿತಾಧಿಕಾರಿಗಳು
ಪುರಸಭೆ, ಮಾಲೂರು

ಸಹಿ/–
(ಶ್ರೀ ಪ್ರದೀಪ್ ಕುಮಾರ್ ಎ.ಬಿ)
ಮುಖ್ಯಾಧಿಕಾರಿ, ಶ್ರೇಣಿ–2
ಪುರಸಭೆ, ಮಾಲೂರು

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:59/ಕೆಎಸ್‌ಎಂ.ಸಿ.ಎ/2023–24

**Government of Madhya Pradesh**
**Office of the Engineer-in-Chief Water Resources Department,**
**Jal Sansadhan Bhawan, Tulsi Nagar, Bhopal (M.P.)**
**Email Id: ceproc.encwrd.bpl@nic.in Tel: 0755-2767635 Fax: 0755-2552406**

**N.I.T. No. 1011/2023-24/E-in-C/e-tendering** **Bhopal, Dated 13.07.2023**

Bids for following works are invited on website https://www.mptenders.gov.in Last Date of purchase/ download of Bid Document and submission of bid is 04-08-2023, 17:30 hrs. Any amendment/ modification can be seen only on the website. Detailed N.I.T. and other details can be viewed on above mentioned website.

| Sl. No. | Tender No. | Work | District | Amount (Lakhs) |
|---|---|---|---|---|
| 1. | 2023_WRD_291164 | Repair of damaged CC lining of Handiya branch canal between RD 0.00 to 12.09km of Tawa Project. | Harda | 20.36 |
| 2. | 2023_WRD_291165 | Repair of damaged structures of main canal and minors/ subminors between RD 12.00 to 21.00 km of Handiya Branch canal system.. | Harda | 27.41 |
| 3. | 2023_WRD_291166 | Construction of High Level Bridge at near RD 850m of Sajali spill channel and approach road from Keolari village to Sajali Dam. | Damoh | 800.56 |
| 4. | 2023_WRD_291167 | Providing & fixing commissioning, with test & trial of 15 Passenger Cum Freight 1000 kg. Capacity 02 Stops Elevator at Madia Irrigation Project complete work with material and labour at work site (as per 'G"Schedule & Drawing, and direction fo Engineer in-charge.) | Sagar | 42.78 |
| 5. | 2023_WRD_291169 | For Construction of Cement Concrete road from Ghatwas Sikhedi main road to Ghatwas Barrage site etc. | Ratlam | 44.64 |
| 6. | 2023_WRD_291170 | Construction of balance work of dam and canal of Patna tank Scheme. | Panna | 106.77 |
| 7. | 2023_WRD_291171 | Repair of Cross Regulator at chain 247 of Bhiladiya Distributary of Tawa left Bank main canal.(SR Work) | Narmadapuram | 21.50 |
| 8. | 2023_WRD_291173 | Turnkey Basis: Construction of Nayapura Barrage, as per detail given in scope of work but not limited to that. | Sehore | 248.54 |
| 9. | 2023_WRD_291175 | Turnkey Basis: Construction of Karadiya Bheel Barrage, as per detail given in scope of work but not limited to that. | Sehore | 279.91 |
| 10. | 2023_WRD_291176 | Turnkey Basis: Construction of Udpura Barrage, as per detail given in scope of work but not limited to that. | Sehore | 193.11 |
| 11. | 2023_WRD_291177 | Shifting of 11 KV & LT line affected by submergence of Hanota Irrigation Project district Sagar complete work. | Sagar | 40.80 |
| 12. | 2023_WRD_291181 | Turnkey Basis: Construction of Halduni Barrage, as per detail given in scope of work but not limited to that. | Ratlam | 200.00 |

**G-16582/23** **Sd/- Chief Engineer (Procurement)**

**दो पहिया वाहन पर तीन सवारी ना बैठाएं सतर्क रहें, सुरक्षित रहें ।**

ಉಚಿತ ಡಾನ್ಸ್ ಕ್ಲಾಸ್‌ಗಳು
ಸ್ಯಾಟಿನ್ ಶರ್ಟ್ ₹499
ಬೆಲ್ಟೆಡ್ ಟ್ರೌಸರ್ ₹699
ಚೆನ್ನಾಗಿ ಕಾಣಿಸಿಕೊಳ್ಳಿ
VISHAL MEGA MART®
***** ಬಟ್ಟೆಗಳ ಅತ್ಯುತ್ತಮ ಗುಣಮಟ್ಟ ಅದು ನಿಮ್ಮನ್ನು ಆಶ್ಚರ್ಯ ಗೊಳಿಸುತ್ತದೆ *****
ಕುರ್ತಾ ₹899+ 2 ಖರೀದಿಸಿ ಪಡೆಯಿರಿ ₹400 ರಿಯಾಯಿತಿ
ಶರ್ಟ್ ₹499 2 ಖರೀದಿಸಿ ಪಡೆಯಿರಿ ₹100 ರಿಯಾಯಿತಿ
ಜೀನ್ಸ್ ₹799 2 ಖರೀದಿಸಿ ಪಡೆಯಿರಿ ₹400 ರಿಯಾಯಿತಿ
ಟೀ–ಶರ್ಟ್ ₹299
ಟೀ–ಶರ್ಟ್ ₹199+ 3 ಖರೀದಿಸಿ 1 ಉಚಿತವಾಗಿ ಪಡೆಯಿರಿ
ಪ್ರಿಂಟೆಡ್ ಶರ್ಟ್ ₹499 1 ಖರೀದಿಸಿ ಪಡೆಯಿರಿ 1 ಉಚಿತ
ಜೀನ್ಸ್ ₹799 1 ಖರೀದಿಸಿ ಪಡೆಯಿರಿ 1 ಉಚಿತ

# ಅಪರಾಧ ಹಿನ್ನೆಲೆ: ಖರ್ಚಿಗೆ ಹಣ ಹೊಂದಿಸಲು ಕಳ್ಳತನ

**ಬೆಂಗಳೂರು:** ಚಾವಣಿ ಶೀಟ್ ತೆರೆದು ಕಂಪನಿಯ ಕಚೇರಿಯೊಂದಕ್ಕೆ ನುಗ್ಗಿ ಕಳ್ಳತನ ಮಾಡಿದ್ದ ಮೂವರು ಆರೋಪಿಗಳನ್ನು ಮಾಗಡಿ ರಸ್ತೆ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಉತ್ತರ ಕನ್ನಡ ಜಿಲ್ಲೆಯ ಹಳಿಯಾಳದ ಆಸಿಫ್ (26), ಬೆಂಗಳೂರು ಕಾಮಾಕ್ಷಿಪಾಳ್ಯದ ಸಲೀಂ (32) ಹಾಗೂ ಹುಬ್ಬಳ್ಳಿ ಉಣಕಲ್‌ನ ನೌಶಾದ್ (50) ಬಂಧಿತರು. ಇವರಿಂದ ₹ 5.45 ಲಕ್ಷ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಗುಬ್ಬಣ್ಣ ಕೈಗಾರಿಕಾ ಪ್ರದೇಶದಲ್ಲಿರುವ ಕಚೇರಿಯೊಂದರಲ್ಲಿ ಕಳ್ಳತನ ನಡೆದಿರುವ ಬಗ್ಗೆ ದೂರು ದಾಖಲಾಗಿತ್ತು. ತನಿಖೆ ನಡೆಸಿ ಆರೋಪಿಗಳನ್ನು ಬಂಧಿಸಲಾಗಿದೆ' ಎಂದರು.

'ಮೂವರು ಆರೋಪಿಗಳು, ಅಪರಾಧ ಹಿನ್ನೆಲೆಯುಳ್ಳವರು. ಪ್ರಮುಖ ಆರೋಪಿ ಆಸಿಫ್ ವಿರುದ್ಧ ಹಲವು ಠಾಣೆಗಳಲ್ಲಿ ಪ್ರಕರಣಗಳು ದಾಖಲಾಗಿದ್ದವು. ಜೈಲು ವಾಸ ಅನುಭವಿಸಿ ಜಾಮೀನು ಮೇಲೆ ಹೊರಬಂದಿದ್ದ ಆಸಿಫ್, ಸಹಚರರನ್ನು ಕಟ್ಟಿಕೊಂಡಿದ್ದ. ತನ್ನ ಮೇಲಿನ ಪ್ರಕರಣ ಇತ್ಯರ್ಥಪಡಿಸಿಕೊಳ್ಳಲು ಹಾಗೂ ಖರ್ಚಿಗೆ ಹಣ ಹೊಂದಿಸಲು ಕಳ್ಳತನ ಮಾಡಲಾರಂಭಿಸಿದ್ದ' ಎಂದು ಪೊಲೀಸರು ತಿಳಿಸಿದರು.


## ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

ಬೆಂಗಳೂರು ಕೇಂದ್ರೀಯ ವಿಭಾಗ, ಬೆಂಗಳೂರು

ಕ್ರ.ಸಂ: ಕರಾಸಾ/ಬೆಂ.ಕೇ.ವಿ/ಸಂ/ವಾಣಿಜ್ಯ/852/2023-24 ದಿನಾಂಕ: 13.07.2023

**"ಇ-ಟೆಂಡರ್ ಪ್ರಕಟಣೆ ಸಂಖ್ಯೆ: 03/2023"**

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು ಕೇಂದ್ರೀಯ ವಿಭಾಗದ ವ್ಯಾಪ್ತಿಯಲ್ಲಿರುವ ನೆಲಮಂಗಲ ವಾಹನ ನಿಲ್ದಾಣದ ವಾಣಿಜ್ಯ ಸಂಕೀರ್ಣದಲ್ಲಿ ಖಾಲಿಯಿರುವ ಮಳಿಗೆ ಸಂಖ್ಯೆ - 1, 6, 8 ಮತ್ತು 9 ಹಾಗೂ ಖಾಲಿಯಾಗಲಿರುವ ಮಳಿಗೆ ಸಂಖ್ಯೆ- 2, 3, 4, 5, 7, 10, 11, 12 ಮತ್ತು 13 ಮಳಿಗೆಗಳಲ್ಲಿ ಜನರಲ್ ಸ್ಟೋರ್ಸ್ ವ್ಯಾಪಾರ ಮಾಡಲು ಆರು (06) ತಿಂಗಳ ಅವಧಿಗೆ ಅಥವಾ ನೆಲಮಂಗಲ ಬಸ್ ನಿಲ್ದಾಣದ ವಾಣಿಜ್ಯ ಸಂಕೀರ್ಣದ ಕಾಮಗಾರಿ ಕೆಲಸವನ್ನು ಯಾವಾಗ ಪ್ರಾರಂಭಿಸಲಾಗುವುದೋ, ಇದರಲ್ಲಿ ಯಾವುದು ಮೊದಲೋ ಆ ದಿನದಿಂದ ತೆರವುಗೊಳಿಸುವ ಷರತ್ತಿನೊಂದಿಗೆ ಪರವಾನಿಗೆದಾರರನ್ನು ಆಯ್ಕೆ ಮಾಡಲು ದಿನಾಂಕ: 09.08.2023 ರಂದು ಇ-ಟೆಂಡರ್ ನಿಗದಿಪಡಿಸಲಾಗಿದೆ. ಇ-ಟೆಂಡರ್ ಅರ್ಜಿಗಳನ್ನು/ದಸ್ತಾವೇಜುಗಳನ್ನು ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ದಿನಾಂಕ: 07.08.2023 ರಂದು 11.00 ಗಂಟೆಗೆ ಆನ್‌ಲೈನ್ ಅರ್ಜಿ ಸಲ್ಲಿಕೆಗೆ ಕೊನೆಯ ದಿನವಾಗಿರುತ್ತದೆ. ಇ-ಟೆಂಡರ್ ಡಿಡಿ (ಅರ್ಜಿ ಶುಲ್ಕ/ ಇ.ಎಂ.ಡಿ ಮೂಲ ಡಿಡಿ) ಇನ್ನಿತರ ದಾಖಲಾತಿಗಳನ್ನು ದಿನಾಂಕ: 07.08.2023 ರಂದು 13.00 ಗಂಟೆಯವರೆಗೆ ವಿಭಾಗೀಯ ಕಛೇರಿಯಲ್ಲಿ ಸ್ವೀಕರಿಸಲಾಗುವುದು. ದಿನಾಂಕ: 09.08.2023 ರಂದು 11.00 ಗಂಟೆಗೆ ಇ-ಟೆಂಡರ್ ತೆರೆಯುವ ದಿನವಾಗಿರುತ್ತದೆ. (ಯಾವುದೇ ತಾಂತ್ರಿಕ ದೋಷ ಇಲ್ಲದಿದ್ದಲ್ಲಿ ಮಾತ್ರ).

ಹೆಚ್ಚಿನ ವಿವರಗಳಿಗಾಗಿ ದೂರವಾಣಿ ಸಂಖ್ಯೆ: 7760990267 & 7760990252 ಗಳನ್ನು ಸಂಪರ್ಕಿಸಲು ಕೋರಲಾಗಿದೆ.

ಸಹಿ/-
ವಿಭಾಗೀಯ ನಿಯಂತ್ರಣಾಧಿಕಾರಿ,
ಕ.ರಾ.ರ.ಸಾ.ನಿಗಮ, ಬೆಂಗಳೂರು ಕೇಂದ್ರೀಯ ವಿಭಾಗ,
ಶಾಂತಿನಗರ, ಬೆಂಗಳೂರು

ವಾಸಾಸಂಇ/ಬೆಂ.ನಗರ/551/
ಆಕಾರ್/2022-23



## ನಗರಸಭಾ ಕಾರ್ಯಾಲಯ, ಚನ್ನಪಟ್ಟಣ

ನಂ. ನಸಚ/ಕಂಶಾ/ನಿ/ಸಿಆರ್/02/2023-23 ದಿನಾಂಕ: 13-07-2023

**2023-24ನೇ ಸಾಲಿನ ಬಹಿರಂಗ ಹರಾಜು ಇಸ್ತಿಹಾರ್**

ಈ ಮೂಲಕ ಚನ್ನಪಟ್ಟಣ ನಗರದ ಸಾರ್ವಜನಿಕರಲ್ಲಿ ತಿಳಿಯಪಡಿಸುವುದೇನೆಂದರೆ, ದಿನಾಂಕ: 01-08-2023 ರಂದು ಮಂಗಳವಾರ ಬೆಳಿಗ್ಗೆ 11.00 ಗಂಟೆಗೆ ಪುರಭವನ ಆವರಣದಲ್ಲಿ 2023-24ನೇ ಸಾಲಿನ ಈ ಕೆಳಕಂಡ ಬಾಬ್ತುಗಳನ್ನು ಬಹಿರಂಗ ಹರಾಜು ಮೂಲಕ ವಿಲೇ ಮಾಡಲಾಗುವುದು. ಹರಾಜಿನಲ್ಲಿ ಭಾಗವಹಿಸಲು ಇಚ್ಛೆಯುಳ್ಳವರು ಪೌರಾಯುಕ್ತರು ನಗರಸಭೆ, ಚನ್ನಪಟ್ಟಣರವರ ಹೆಸರಿನಲ್ಲಿ ನಿಗಧಿತ ಠೇವಣಿಯನ್ನು ಡಿ.ಡಿ. ಅಥವಾ ನಗದು ಮೂಲಕ ಪಾವತಿಸಿ ನಗರಸಭೆಯು ವಿಧಿಸುವ ಷರತ್ತುಗಳಿಗೆ ಒಳಪಟ್ಟು ಹರಾಜಿನಲ್ಲಿ ಭಾಗವಹಿಸತಕ್ಕದ್ದು.

| ಕ್ರ. ಸಂ. | ಹರಾಜಿನ ವಿವರ | ಪ್ರಮಾಣ | ಮುಂಗಡ ಠೇವಣಿ ಮೊತ್ತ |
|---|---|---|---|
| 1. | ಆರೋಗ್ಯ ಶಾಖೆಯ ನಿರುಪಯುಕ್ತ ವಸ್ತುಗಳಾದ ಆಟೋ ಟಿಪ್ಪರ್ ಮತ್ತು ಡಂಪರ್ ಪ್ಲೇಸರ್ ವೆಹಿಕಲ್ | 14 | 50,000/- |
| 2. | ಹಳೇ ವಿದ್ಯುತ್ ಸ್ಟಾಟರ್, ಟ್ಯೂಬ್ ಚೌಕ್ ಇತರೆ | 38 | 50,000/- |
| 3. | ಕಬ್ಬಿಣದ ಕೋದ್ರೇಜ್ ಬೀರುಗಳು, ಚೇರ್‌ಗಳು, ಕಬ್ಬಿಣದ ಟೇಬಲ್ ಇತರೆ ಅನುಪಯುಕ್ತ ಸಾಮಾಗ್ರಿಗಳು | 62 | 10,000/- |

ಷರತ್ತುಗಳು:-

1. ಹರಾಜಿನಲ್ಲಿ ಭಾಗವಹಿಸುವವರು ಮೇಲ್ಕಂಡ ಬಾಬ್ತಿಗೆ ನಿಗಧಿಪಡಿಸಿದ ಠೇವಣಿಯನ್ನು ಹರಾಜು ವೇಳೆಯ ಒಂದು ಗಂಟೆ ಮುಂಚಿತವಾಗಿ ಡಿಡಿ ಅಥವಾ ನಗದು ರೀತಿಯಲ್ಲಿ ಹಣ ಪಾವತಿ ಮಾಡುವುದು ಹಾಗೂ ಸದರಿ ವೇಳೆಯಲ್ಲಿ ಪ್ರಸ್ತುತ ವಾಸಿಸುತ್ತಿರುವ ವಿಳಾಸದ ಕುರಿತು ಆಧಾರ್ ಕಾರ್ಡ್ / ಗುರುತಿನ ಚೀಟಿ / ಪಡಿತರ ಚೀಟಿ / ಇತ್ಯಾದಿ ದಾಖಲೆಗಳು ಮತ್ತು ಪಾಸ್‌ಪೋರ್ಟ್ ಅಳತೆಯ 01 ಭಾವಚಿತ್ರ ಸಲ್ಲಿಸಿ ಹರಾಜಿನಲ್ಲಿ ಭಾಗವಹಿಸತಕ್ಕದ್ದು, ಹರಾಜಿನಲ್ಲಿ ಭಾಗವಹಿಸುವವರು 18 ವರ್ಷ ವಯಸ್ಸು ಮೀರಿರಬೇಕು.
2. ಅಖೈರು ಬಿಡ್ಡುದಾರರನ್ನು ಹೊರತುಪಡಿಸಿ ಉಳಿದವರಿಗೆ ಠೇವಣಿ ಹಣವನ್ನು ಹರಾಜು ಖೈದಾದ ಕೂಡಲೇ ಹಿಂತಿರುಗಿಸಲಾಗುತ್ತೆ.
3. ಅಖೈರು ಸವಾಲುದಾರರು ಹರಾಜು ಮೂಲಕ ಪಡೆದ ಬಾಬ್ತಿನ ಸಂಪೂರ್ಣ ಮೊತ್ತವನ್ನು ಆ ದಿನವೇ ಕಛೇರಿಯ ವೇಳೆಯಲ್ಲಿ ಪಾವತಿ ಮಾಡಿ ಕ್ರಮವಾದ ಚಲನ್ ಪಡೆಯತಕ್ಕದ್ದು ತಪ್ಪಿದ್ದಲ್ಲಿ ಪಾವತಿಸಿದ ಅಖೈರು ಸವಾಲುದಾರರ ಹೆಸರಿನಲ್ಲಿ ನಿಂತ ಬಿಡ್ಡನ್ನು ಯಾವುದೇ ಮುನ್ಸೂಚನೆ ನೀಡದೇ ರದ್ದುಪಡಿಸಿ ಸದರಿ ಮೊತ್ತವನ್ನು ನಗರಸಭೆಗೆ ಮುಟ್ಟುಗೋಲು ಹಾಕಿಕೊಂಡು ಮರು ಹರಾಜು ಮಾಡಲಾಗುವುದು. ಆಕ್ಷೇಪಣೆಗಳಿಗೆ ಅವಕಾಶವಿರುವುದಿಲ್ಲ.
4. ಹರಾಜನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ನಗರಸಭೇಯು ಕಾಯ್ದಿರಿಸಿಕೊಂಡಿದೆ.

| ಸಹಿ/- | ಸಹಿ/- | ಸಹಿ/- |
|---|---|---|
| ಶ್ರೀ ಪ್ರಶಾಂತ್ ಪಿ. | ಶ್ರೀಮತಿ ಹಸೀನ್ ಫಾರ್ಹೀನ್ | ಶ್ರೀ ಸಿ. ಪುಟ್ಟಸ್ವಾಮಿ |
| ಅಧ್ಯಕ್ಷರು | ಉಪಾಧ್ಯಕ್ಷರು | ಪೌರಾಯುಕ್ತರು |
| ನಗರಸಭೆ, ಚನ್ನಪಟ್ಟಣ | ನಗರಸಭೆ, ಚನ್ನಪಟ್ಟಣ | ನಗರಸಭೆ, ಚನ್ನಪಟ್ಟಣ |


ಪತ್ನಿ, ಇಬ್ಬರು ಮಕ್ಕಳ ಜೊತೆ ಐಷಾರಾಮಿ ಜೀವನ

# ಹೆಣ್ಣಿನ ವೇಷ ತೊಟ್ಟು ಭಿಕ್ಷಾಟನೆ: ಮೆಟ್ರೊ ಜಾಗ ಕಬಳಿಸಿ ಸಿಕ್ಕಿಬಿದ್ದ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಹೆಣ್ಣಿನ ವೇಷಭೂಷಣ ತೊಟ್ಟು ಮಂಗಳಮುಖಿಯರ ಜತೆ ಸೇರಿ ಭಿಕ್ಷಾಟನೆ ಮಾಡುವುದನ್ನೇ ರೂಢಿಸಿಕೊಂಡಿದ್ದ ಆರೋಪಿ ಚೇತನ್‌ನನ್ನು ಬಾಗಲಗುಂಟೆ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಸ್ಥಳೀಯ ನಿವಾಸಿ ಚೇತನ್, ಪತ್ನಿ ಹಾಗೂ ಇಬ್ಬರು ಮಕ್ಕಳ ಜೊತೆ ಐಷಾರಾಮಿ ಜೀವನ ನಡೆಸುತ್ತಿದ್ದ. ಇದಕ್ಕೆ ಹಣ ಹೊಂದಿಸಲು ಹೆಣ್ಣಿನ ವೇಷ ಧರಿಸಿ, ಮಂಗಳಮುಖಿಯರ ಜೊತೆ ಸೇರಿ ಹಲವು ವರ್ಷಗಳಿಂದ ಭಿಕ್ಷಾಟನೆ ಮಾಡುತ್ತಿದ್ದ. ಚೇತನ್‌ನ ನಿಜ ಬಣ್ಣ ತಿಳಿದ ಸ್ಥಳೀಯರು, ಆತನನ್ನು ಹಿಡಿದು ಹೊಯ್ಸಳ ಗಸ್ತು ವಾಹನ ಸಿಬ್ಬಂದಿ ಸುಪರ್ದಿಗೆ ಒಪ್ಪಿಸಿದ್ದಾರೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಸ್ಥಳೀಯ ಮಹಿಳೆಯರು ನೀಡಿರುವ ದೂರು ಆಧರಿಸಿ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ. ಆರೋಪಿಯನ್ನು ಸದ್ಯ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ' ಎಂದು ಹೇಳಿವೆ.

**ಮನೆಯಲ್ಲಿ ಗಂಡು, ಹೊರಗೆ ಹೆಣ್ಣು:** 'ಬಾಗಲಗುಂಟೆ ಕೆರೆ ಸಮೀಪದ ಮನೆಯಲ್ಲಿ ಚೇತನ್ ದಂಪತಿ ಹಾಗೂ ಇಬ್ಬರು ಮಕ್ಕಳು ವಾಸವಿದ್ದಾರೆ. ಮನೆಯಲ್ಲಿ ಗಂಡಿನ ವೇಷದಲ್ಲಿರುತ್ತಿದ್ದ ಈತ, ಹೊರಗೆ ಬಂದ ನಂತರ ಸೀರೆಯುಟ್ಟು ಹೆಣ್ಣಿನ ರೀತಿಯಲ್ಲಿ ವೇಷ ಧರಿಸುತ್ತಿದ್ದ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ತನ್ನ ಕುಟುಂಬದ ಬಗ್ಗೆ ಯಾರಿಗೂ ಗೊತ್ತಾಗಬಾರದೆಂದು, ಮಂಜುನಾಥ್‌ನಗರದ ಕೊಠಡಿಯೊಂದನ್ನು ಬಾಡಿಗೆಗೆ ಪಡೆದಿದ್ದ. ಆಗಾಗ ಕೊಠಡಿಯಲ್ಲಿ ಉಳಿದುಕೊಳ್ಳುತ್ತಿದ್ದ ಆರೋಪಿ, ಸುತ್ತಮುತ್ತಲಿನ ಮಂಗಳಮುಖಿಯರ ಜೊತೆ ಸ್ನೇಹ ಬೆಳೆಸಿದ್ದ. ಅವರ ರೀತಿಯಲ್ಲೇ ಮಾತನಾಡುತ್ತಿದ್ದ. ಅವರಿಗೂ ಗಂಡು ಎಂಬುದು ಗೊತ್ತಾಗಿರಲಿಲ್ಲ' ಎಂದು ಹೇಳಿವೆ.

**ಸ್ಥಳೀಯರಿಗೆ ಕಿರುಕುಳ:** 'ತುಮಕೂರು ರಸ್ತೆಯ ಮಂಜುನಾಥನಗರ ಬಸ್ ತಂಗುದಾಣ ಹಾಗೂ ಸುತ್ತಮುತ್ತ ಓಡಾಡುತ್ತಿದ್ದ, ಸ್ಥಳೀಯರನ್ನು ಅಡ್ಡಗಟ್ಟಿ ಹಣ ಕೇಳುತ್ತಿದ್ದ. ಹಣ ಕೊಡದಿದ್ದರೆ, ಸುಲಿಗೆ ರೀತಿಯಲ್ಲಿ ಕಸಿದುಕೊಳ್ಳುತ್ತಿದ್ದ. ಹಣ ನೀಡದ ವ್ಯಾಪಾರಿಗಳ ಜೊತೆ ಜಗಳ ಮಾಡುತ್ತಿದ್ದ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಕೃತ್ಯವನ್ನು ಯಾರಾದರೂ ಪ್ರಶ್ನಿಸಿದರೆ, ಇತರ ಮಂಗಳಮುಖಿಯರನ್ನು ಕರೆತಂದು ಗಲಾಟೆ ಮಾಡಿಸುವುದಾಗಿ ಚೇತನ್ ಬೆದರಿಕೆ ಹಾಕುತ್ತಿದ್ದ. ಈತನ ವರ್ತನೆಯಿಂದ ಸ್ಥಳೀಯರು ಬೇಸತ್ತಿದ್ದರು' ಎಂದು ತಿಳಿಸಿವೆ.

**ಮೆಟ್ರೊ ಜಾಗದಲ್ಲಿ ಶೆಡ್:** 'ಮಂಜುನಾಥ್‌ನಗರದಲ್ಲಿ ಮೆಟ್ರೊ ಕಾಮಗಾರಿ ಪ್ರಗತಿಯಲ್ಲಿದೆ. ಬಿಎಂಆರ್‌ಸಿಎಲ್‌ಗೆ ಸೇರಿದ್ದ ಜಾಗದಲ್ಲಿ ಆರೋಪಿ ತಗಡಿನ ಶೆಡ್ ನಿರ್ಮಿಸುತ್ತಿದ್ದ. ಮುಂಬರುವ ದಿನಗಳಲ್ಲಿ ಅದೇ ಸ್ಥಳದಲ್ಲಿ ತಾತ್ಕಾಲಿಕವಾಗಿ ಮಳಿಗೆಯೊಂದನ್ನು ಆರಂಭಿಸಿ ಬಾಡಿಗೆ ನೀಡುವುದು ಈತನ ಉದ್ದೇಶವಾಗಿತ್ತೆಂದು ಸ್ಥಳೀಯರು ಅನುಮಾನ ವ್ಯಕ್ತಪಡಿಸಿದ್ದಾರೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಶೆಡ್ ನಿರ್ಮಾಣದ ಮಾಹಿತಿ ಪಡೆದ ಮೆಟ್ರೊ ಅಧಿಕಾರಿಗಳು ಹಾಗೂ ಸ್ಥಳೀಯರು ಸ್ಥಳಕ್ಕೆ ಬಂದು ಪರಿಶೀಲಿಸಿದ್ದರು. ಅವರ ಮೇಲೆಯೇ ಆರೋಪಿ ಹರಿಹಾಯ್ದಿದ್ದ. ಕೆಲ ಸ್ಥಳೀಯ ಮಹಿಳೆಯರ ಸೀರೆ ಹಿಡಿದು ಎಳೆದಾಡಿ, ಅನುಚಿತವಾಗಿ ವರ್ತಿಸಿದ್ದ. ತಕ್ಕಪಾಠ ಕಲಿಸಲು ಮುಂದಾದ ಜನ, ಚೇತನ್‌ನನ್ನು ಹಿಡಿದು ಥಳಿಸಿದ್ದರು. ಅವಾಗಲೇ ಆತ, ಗಂಡು ಎಂಬುದು ತಿಳಿದಿದೆ.'

'ಚೇತನ್ ಆಧಾರ್ ಹಾಗೂ ಇತರೆ ಗುರುತಿನ ಚೀಟಿಗಳನ್ನು ಪರಿಶೀಲಿಸಲಾಗಿದೆ. ಎಲ್ಲ ಕಡೆಯೂ 'ಗಂಡು' ಎಂಬುದು ಉಲ್ಲೇಖವಾಗಿದೆ. ಜೊತೆಗೆ, ಪತ್ನಿಯೂ ಈ ಬಗ್ಗೆ ಮಾಹಿತಿ ನೀಡಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

### 'ಭಿಕ್ಷಾಟನೆ ಹಣದಲ್ಲಿ ಮನೆ ನಿರ್ಮಾಣ'

'ಚೇತನ್, ಭಿಕ್ಷಾಟನೆಯಿಂದ ಬಂದ ಹಣದಲ್ಲಿ ಮನೆ ನಿರ್ಮಿಸಿದ್ದಾನೆ. ಈ ಬಗ್ಗೆ ಆತನೇ ಹೇಳಿಕೆ ನೀಡಿದ್ದಾನೆ. ಅದೇ ಮನೆಯಲ್ಲಿ ಪತ್ನಿ ಹಾಗೂ ಮಕ್ಕಳಿದ್ದಾರೆ. ಆರೋಪಿ ಬಂಧನವಾಗುತ್ತಿದ್ದಂತೆ ಮನೆಗೆ ಹೋಗಿ ಪರಿಶೀಲನೆ ನಡೆಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಅಪರಾಧ ಸುದ್ದಿ

## ಪೊಲೀಸರ ಸೋಗಿನಲ್ಲಿ ಸುಲಿಗೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಪೊಲೀಸರ ಸೋಗಿನಲ್ಲಿ ಮನೆಯೊಂದಕ್ಕೆ ನುಗ್ಗಿ ನಿವಾಸಿಗಳನ್ನು ಬೆದರಿಸಿ ಸುಲಿಗೆ ಮಾಡಲಾಗಿದ್ದು, ಈ ಸಂಬಂಧ ವಿದ್ಯಾರಣ್ಯಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ರಾಮಚಂದ್ರಾಪುರದಲ್ಲಿ ವಾಸವಿರುವ ಯುವಕರು ಕೃತ್ಯದ ಬಗ್ಗೆ ದೂರು ನೀಡಿದ್ದಾರೆ. ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಬಾಡಿಗೆ ಮನೆಯಲ್ಲಿ ನಾಲ್ವರು ಯುವಕರು ವಾಸವಿದ್ದಾರೆ. ಮೂವರು, ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದಾರೆ. ಒಬ್ಬ, ಕಾಲೇಜು ವಿದ್ಯಾರ್ಥಿ. ಬುಧವಾರ ಬೆಳಿಗ್ಗೆ ನಾಲ್ವರು ದುಷ್ಕರ್ಮಿಗಳು, ಮನೆಯೊಳಗೆ ನುಗ್ಗಿದ್ದರು. 'ನಾವು ಪೊಲೀಸರು. ನಿಮ್ಮ ಮನೆಯಲ್ಲಿ ಡ್ರಗ್ಸ್ ಇರುವ ಮಾಹಿತಿ ಬಂದಿದೆ. ಅದಕ್ಕೆ ದಾಳಿ ಮಾಡಲಾಗಿದೆ' ಎಂದಿದ್ದರು. ಅದನ್ನು ಯುವಕರು ನಂಬಿದ್ದರು' ಎಂದು ತಿಳಿಸಿವೆ.

'ತಮ್ಮ ಬಳಿ ಇರುವ ಚಿನ್ನಾಭರಣ, ಮೊಬೈಲ್ ಹಾಗೂ ಹಣ ನೀಡುವಂತೆ ಆರೋಪಿಗಳು ಒತ್ತಾಯಿಸಿದ್ದರು. ಅದನ್ನು ಪ್ರಶ್ನಿಸುತ್ತಿದ್ದಂತೆ ಯುವಕರಿಗೆ ಚಾಕು ತೋರಿಸಿ ಬೆದರಿಸಿದ್ದರು. ಇದಾದ ನಂತರ, ಚಿನ್ನದ ಉಂಗುರಗಳನ್ನು ಕಸಿದುಕೊಂಡಿದ್ದರು. ಬಳಿಕ, ಫೋನ್ ಪೇ ಆ್ಯಪ್‌ನಿಂದ ₹ 13 ಸಾವಿರವನ್ನು ತಮ್ಮ ಖಾತೆಗೆ ವರ್ಗಾಯಿಸಿಕೊಂಡು ಆರೋಪಿಗಳು ಪರಾರಿಯಾಗಿದ್ದಾರೆ' ಎಂದು ಮೂಲಗಳು ಹೇಳಿವೆ.

## ಜಾಬ್ ಪೋರ್ಟಲ್ ಅನಾವರಣ

ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನದ ಮೂಲಕ 9 ಲಕ್ಷ ಹೊಸ ಪದವೀಧರರಿಗೆ ಉದ್ಯೋಗ ನೀಡುವ 'ಜಾಬ್ ಪೋರ್ಟಲ್' ಅನ್ನು ಕಾಗ್ನವಿ ಇಂಡಿಯಾ ಮತ್ತು ಶೈಕ್ಷಣಿಕ ಮತ್ತು ಕನ್ಸಲ್ಟಿಂಗ್ ಗ್ರೂಪ್ ಎಸ್‌ಆರ್‌ಎಂ ಗ್ಲೋಬಲ್ ಕನ್ಸಲ್ಟಿಂಗ್ ಕಂಪನಿ ವತಿಯಿಂದ ಚೆನ್ನೈನಲ್ಲಿ ಅನಾವರಣಗೊಳಿಸಲಾಯಿತು. ಕಾಗ್ನವಿ ಇಂಡಿಯಾ ವ್ಯವಸ್ಥಾಪಕ ನಿರ್ದೇಶಕ ಮಿತ್ಸುಟಕ ಸೆಕಿನೊ, ಜಪಾನ್‌ನ ಕ್ರೆಸ್ಕೊ ಅಧ್ಯಕ್ಷ ಹಿರೊಶಿ ತೊಮಿನಗ, ಜಪಾನ್‌ನ ಫೋರಂ ಎಂಜಿನಿಯರಿಂಗ್ ಅಧ್ಯಕ್ಷ ಸುಟೊಮು ಸಾಟೊ, ಕನ್ಸಲ್ ಜನರಲ್ ಆಫ್ ಜಪಾನ್ ಟಗ ಮಸಯುಕಿ, ಎಸ್‌ಆರ್‌ಎಂ ಸಮೂಹದ ಅಧ್ಯಕ್ಷ ಡಾ. ಪಿ. ಸತ್ಯನಾರಾಯಣನ್, ಕಾಗ್ನವಿ ಇಂಡಿಯದ ವ್ಯವಸ್ಥಾಪಕ ನಿರ್ದೇಶಕ ವರುಣ್ ಮೊದ್ಗಿಲ್ ಇದ್ದರು

# ರೌಡಿ ಹತ್ಯೆ: ಐವರ ಬಂಧನ

ಹಿಡಿತ ಸಾಧಿಸಲು ಯತ್ನ • ತಲೆಮರೆಸಿಕೊಂಡ ನಾಲ್ವರು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ದೇವರ ಜೀವನಹಳ್ಳಿ (ಡಿ.ಜೆ.ಹಳ್ಳಿ) ಠಾಣೆ ವ್ಯಾಪ್ತಿಯಲ್ಲಿ ರೌಡಿ ಕಪಿಲ್‌ನನ್ನು ಕೊಲೆ ಮಾಡಿದ್ದ ಐವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

'ನವೀನ್ ಕುಮಾರ್, ರಾಹುಲ್, ಪುನೀತ್ ಕುಮಾರ್, ಪವನ್ ಕುಮಾರ್ ಹಾಗೂ ಶಂಕರ್ ಬಂಧಿತರು. ಪ್ರಕರಣದ ಪ್ರಮುಖ ಆರೋಪಿ ಸೇರಿ ನಾಲ್ವರು ತಲೆ ಮರೆಸಿಕೊಂಡಿದ್ದಾರೆ. ಅವರ ಪತ್ತೆಗಾಗಿ ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಆರ್‌.ಟಿ.ನಗರ ಹಾಗೂ ಹೆಬ್ಬಾಳ ನಿವಾಸಿಗಳಾಗಿರುವ ಆರೋಪಿಗಳು, ಸಂಚು ರೂಪಿಸಿ ಜುಲೈ 11ರಂದು ಕಪಿಲ್‌ನನ್ನು ಕೊಲೆ ಮಾಡಿ ಪರಾರಿಯಾಗಿದ್ದರು. ಹಲವು ಪುರಾವೆಗಳನ್ನು ಸಂಗ್ರಹಿಸಿ ಆರೋಪಿಗಳನ್ನು ಬಂಧಿಸಲಾಗಿದ್ದು, ಹಳೇ ವೈಷಮ್ಯದಿಂದ ಕೊಲೆ ನಡೆದಿರುವುದು ಮೇಲ್ನೋಟಕ್ಕೆ ಗೊತ್ತಾಗಿದೆ' ಎಂದು ತಿಳಿಸಿದರು.

'ರೌಡಿ ಕಪಿಲ್, ಹಲವು ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗಿದ್ದ. ಮಡಿವಾಳ ಠಾಣೆ ರೌಡಿ ಪಟ್ಟಿಯಲ್ಲಿ ಈತನ ಹೆಸರಿತ್ತು. ಕೆಲ ವರ್ಷ ಜೈಲು ವಾಸ ಅನುಭವಿಸಿದ್ದ ಕಪಿಲ್, ಜಾಮೀನು ಮೇಲೆ ಹೊರ ಬಂದಿದ್ದ. ಇದಾದ ಬಳಿಕವೂ ಅಪರಾಧ ಕೃತ್ಯ ಎಸಗುತ್ತಿದ್ದ. ಹೆಬ್ಬಾಳ, ಆರ್‌.ಟಿ.ನಗರ ಹಾಗೂ ಗೋವಿಂದಪುರ ಪ್ರದೇಶಗಳಲ್ಲಿ ಹಿಡಿತ ಸಾಧಿಸಲು ಯತ್ನಿಸುತ್ತಿದ್ದ. ಹಲವರನ್ನು ಬೆದರಿಸಿ ಹಣ ವಸೂಲಿ ಮಾಡಲು ಮುಂದಾಗಿದ್ದ' ಎಂದು ಅವರು ಹೇಳಿದರು.

**ತಂಡ ಕಟ್ಟಿ ಹತ್ಯೆ:** 'ರೌಡಿ ಕಪಿಲ್, ಆರೋಪಿಗಳಾದ ನವೀನ್ ಹಾಗೂ ರೋಹಿತ್‌ಗೆ ಕೆಲ ತಿಂಗಳ ಹಿಂದೆಯಷ್ಟೇ ಬೆದರಿಕೆಯೊಡ್ಡಿದ್ದ. ಜೊತೆಗೆ, ಇತರೆ ಆರೋಪಿಗಳಾದ ಪವನ್ ಕುಮಾರ್ ಹಾಗೂ ಶಂಕರ್ ಜೊತೆಯೂ ಗಲಾಟೆ ಮಾಡಿಕೊಂಡಿದ್ದ. ನಾಲ್ವರೂ ಗುಂಪು ಕಟ್ಟಿಕೊಂಡು ಕಪಿಲ್‌ನನ್ನು ಕೊಲ್ಲಲು ಸಂಚು ರೂಪಿಸಿದ್ದರು' ಎಂದು ಪೊಲೀಸರು ಹೇಳಿದರು.

'ತಲೆಮರೆಸಿಕೊಂಡಿರುವ ಪ್ರಮುಖ ಆರೋಪಿ, 'ಕಪಿಲ್‌ನನ್ನು ಕೊಂದರೆ, ಪ್ರತಿ ತಿಂಗಳು ಹಣ ನೀಡುತ್ತೇನೆ' ಎಂದು ಸುಪಾರಿ ನೀಡಿದ್ದ. ಒಗ್ಗಟ್ಟಾಗಿದ್ದ ಎಲ್ಲ ಆರೋಪಿಗಳು, ನೋಂದಣಿ ಸಂಖ್ಯೆ ಫಲಕವಿಲ್ಲದ ಬೈಕ್‌ನಲ್ಲಿ ಬಂದು ಕಪಿಲ್‌ನನ್ನು ಕೊಂದು ಪರಾರಿಯಾಗಿದ್ದರು' ಎಂದು ಅವರು ಮಾಹಿತಿ ನೀಡಿದರು.

## ಸುದ್ದಿ 2 ನಿಮಿಷ

### ಗರ್ಭಿಣಿಯಾಗಿದ್ದ ಬಾಲಕಿ: ಅತ್ಯಾಚಾರ ಎಸಗಿದ್ದವನಿಗೆ 20 ವರ್ಷ ಜೈಲು

**ಬೆಂಗಳೂರು:** ಹದಿನಾರು ವರ್ಷ ವಯಸ್ಸಿನ ಬಾಲಕಿ ಮೇಲೆ ಅತ್ಯಾಚಾರ ಎಸಗಿ ಗರ್ಭಿಣಿಯನ್ನಾಗಿ ಮಾಡಿದ್ದ ಅಪರಾಧಿಗೆ 20 ವರ್ಷಗಳ ಕಠಿಣ ಕಾರಾಗೃಹ ಶಿಕ್ಷೆ ವಿಧಿಸಿ ನಗರದ 2ನೇ ತ್ವರಿತ ವಿಶೇಷ ನ್ಯಾಯಾಲಯ (ಎಫ್‌ಟಿಎಸ್‌ಸಿ) ಆದೇಶ ಹೊರಡಿಸಿದೆ.

ತಲಘಟ್ಟಪುರ ಠಾಣೆ ವ್ಯಾಪ್ತಿಯಲ್ಲಿ ವಾಸವಿದ್ದ ಬಾಲಕಿ ಮೇಲೆ 2018ರಲ್ಲಿ ಅತ್ಯಾಚಾರ ನಡೆದಿತ್ತು. ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ (ಪೋಕ್ಸೊ) ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು, ಪರಿಚಯಸ್ಥನೇ ಆಗಿದ್ದ ಅಪರಾಧಿಯನ್ನು ಬಂಧಿಸಿ ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಿದ್ದರು.

'ಪೋಷಕರ ಜೊತೆ ಬಾಲಕಿ ವಾಸವಿದ್ದಳು. ಮನೆಯಲ್ಲಿ ಯಾರೂ ಇಲ್ಲದ ಸಂದರ್ಭದಲ್ಲಿ ನುಗ್ಗಿದ್ದ ಆರೋಪಿ, ಅತ್ಯಾಚಾರ ಎಸಗಿದ್ದ. ಈ ಬಗ್ಗೆ ಯಾರಿಗೂ ಹೇಳದಂತೆ ಬೆದರಿಸಿದ್ದ. ನಾಲ್ಕು ತಿಂಗಳ ನಂತರ ಬಾಲಕಿ ಆರೋಗ್ಯದಲ್ಲಿ ಏರುಪೇರಾಗಿತ್ತು. ತಪಾಸಣೆ ನಡೆಸಿದ್ದ ವೈದ್ಯರು, ಬಾಲಕಿ ಗರ್ಭಿಣಿಯಾಗಿರುವುದಾಗಿ ಹೇಳಿದ್ದಾರೆ. ಬಳಿಕವೇ ಬಾಲಕಿ, ಅತ್ಯಾಚಾರ ಸಂಗತಿಯನ್ನು ಪೋಷಕರಿಗೆ ತಿಳಿಸಿದ್ದರು' ಎಂದು ಪೊಲೀಸರು ಹೇಳಿದರು.

### ಮಹಿಳೆ ಅಡ್ಡಗಟ್ಟಿ ಮೊಬೈಲ್ ಸುಲಿಗೆ: ಇಬ್ಬರ ಬಂಧನ

**ಬೆಂಗಳೂರು:** ವಿಧಾನಸೌಧ ಠಾಣೆ ವ್ಯಾಪ್ತಿಯಲ್ಲಿ ನಡೆದುಕೊಂಡು ಹೊರಟಿದ್ದ ಮಹಿಳೆಯನ್ನು ಅಡ್ಡಗಟ್ಟಿ ಮೊಬೈಲ್ ಸುಲಿಗೆ ಮಾಡಿದ್ದ ಇಬ್ಬರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

'ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿರುವ ಮಹಿಳೆ, ಕೆಲಸ ಮುಗಿಸಿಕೊಂಡು ರಾತ್ರಿಗೆ ಮನೆಯತ್ತ ಹೊರಟಿದ್ದರು. ಅವರನ್ನು ಅಡ್ಡಗಟ್ಟಿದ್ದ ಆರೋಪಿಗಳು ಕೃತ್ಯ ಎಸಗಿ ಪರಾರಿಯಾಗಿದ್ದರು. ಪ್ರಕರಣ ದಾಖಲಾಗುತ್ತಿದ್ದಂತೆ ತನಿಖೆ ನಡೆಸಿ ಆರೋಪಿಗಳನ್ನು ಸೆರೆ ಹಿಡಿಯಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಆರೋಪಿಗಳಿಂದ 3 ಮೊಬೈಲ್ ಹಾಗೂ ₹ 5 ಸಾವಿರ ನಗದು ಜಪ್ತಿ ಮಾಡಲಾಗಿದೆ. ಎರಡು ಕಡೆ ಕೃತ್ಯ ಎಸಗಿರುವುದು ತನಿಖೆಯಿಂದ ಗೊತ್ತಾಗಿದೆ' ಎಂದಿವೆ.

# 'ಸ್ವಾಮೀಜಿ' ಆಗಲು ಹೊರಟಿದ್ದ ಆರೋಪಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಏರೋನಿಕ್ಸ್ ಕಂಪನಿ ವ್ಯವಸ್ಥಾಪಕ ನಿರ್ದೇಶಕ ಫಣೀಂದ್ರ ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ (ಸಿಇಒ) ವಿನುಕುಮಾರ್ ಕೊಲೆ ಪ್ರಕರಣದಲ್ಲಿ ಬಂಧಿಸಲಾಗಿರುವ ಜಿ-ನೆಟ್ ಕಂಪನಿ ಮಾಲೀಕ ಅರುಣ್‌ಕುಮಾರ್ ಆಜಾದ್, ಸ್ವಾಮೀಜಿಯಾಗಲು ತಯಾರಿ ನಡೆಸುತ್ತಿದ್ದ ಸಂಗತಿ ತನಿಖೆಯಿಂದ ಗೊತ್ತಾಗಿದೆ.

ಜುಲೈ 11ರಂದು ನಡೆದಿದ್ದ ಕೊಲೆ ಪ್ರಕರಣದಲ್ಲಿ ಅರುಣ್‌ಕುಮಾರ್‌ನನ್ನು ಬಂಧಿಸಿರುವ ಪೊಲೀಸರು, ಕಸ್ಟಡಿಗೆ ಪಡೆದು ವಿಚಾರಣೆ ಮುಂದುವರಿಸಿದ್ದಾರೆ.

'ಅಂತರ್ಜಾಲ ಸಂಪರ್ಕ ವ್ಯವಹಾರದಲ್ಲಿ ಉತ್ತಮ ಲಾಭ ಪಡೆಯುತ್ತಿದ್ದ ಅರುಣ್, ಆಮ್ ಆದ್ಮಿ ಪಾರ್ಟಿಯಲ್ಲೂ ಗುರುತಿಸಿಕೊಂಡಿದ್ದ. ಯುವಕರಿಗಾಗಿ ಕಬಡ್ಡಿ ಪಂದ್ಯಾವಳಿಗಳನ್ನು ಆಯೋಜಿಸುತ್ತಿದ್ದ. ಆದರೆ, ಇತ್ತೀಚೆಗೆ ವ್ಯವಹಾರದಲ್ಲಿ ನಷ್ಟ ಹೆಚ್ಚಾಗಿತ್ತು. ಹೀಗಾಗಿ, ಆಧ್ಯಾತ್ಮದತ್ತ ಒಲುವು ಬೆಳೆಸಿಕೊಂಡಿದ್ದ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಹಲವು ಧಾರ್ಮಿಕ ಕ್ಷೇತ್ರಗಳಿಗೆ ಆಗಾಗ ಭೇಟಿ ನೀಡಲಾರಂಭಿಸಿದ್ದ ಆರೋಪಿ, ಜ್ಯೋತಿಷ್ಯ ಹಾಗೂ ವಾಸ್ತು ಬಗ್ಗೆ ತರಬೇತಿ ಪಡೆಯಲಾರಂಭಿಸಿದ್ದ. ಇದಕ್ಕೆ ಸಂಬಂಧಪಟ್ಟ ಫೋಟೊಗಳು ಆತನ ಮೊಬೈಲ್‌ನಲ್ಲಿ ಪತ್ತೆಯಾಗಿವೆ. ಫಿಲಿಕ್ಸ್ ಹಾಗೂ ಇತರರ ಮೂಲಕ ಜೋಡಿ ಕೊಲೆ ಮಾಡಿಸಿದ್ದ ಅರುಣ್, ಪ್ರಕರಣದಲ್ಲಿ ತನ್ನ ಬಂಧನವಾಗುವುದಿಲ್ಲವೆಂದು ತಿಳಿದಿದ್ದ. ಇದೊಂದು ಕೊಲೆ ನಂತರ, ಸ್ವಾಮೀಜಿಯಾಗಲು ಈತ ಸಿದ್ಧತೆ ಮಾಡುತ್ತಿದ್ದ. ಇದಕ್ಕಾಗಿಯೇ ಉದ್ದನೆಯ ಕೂದಲು ಬೆಳೆಸುತ್ತಿದ್ದ' ಎಂದು ತಿಳಿಸಿವೆ.

## ಬ್ಯಾಂಕ್ ಹಣ ಸ್ವಂತಕ್ಕೆ ಬಳಕೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಗರದ ವಿವಿಧ ಬ್ಯಾಂಕ್‌ಗಳ ಎಟಿಎಂ ಯಂತ್ರಗಳಿಗೆ ತುಂಬಬೇಕಿದ್ದ ₹ 20 ಲಕ್ಷವನ್ನು ಸ್ವಂತಕ್ಕೆ ಬಳಸಿಕೊಂಡಿದ್ದ ಇಬ್ಬರು ಆರೋಪಿಗಳನ್ನು ವಿಲ್ಸನ್ ಗಾರ್ಡನ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಮಂಜುನಾಥ್ ಹಾಗೂ ಚಿತ್ತೂರಿನ ಸಾಯಿ ಪವನ್ ಬಂಧಿತರು. ಇವರಿಂದ ₹ 8 ಲಕ್ಷ ನಗದು ಹಾಗೂ ₹ 1.50 ಲಕ್ಷ ಮೌಲ್ಯ ಐಫೋನ್ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ರೈಟರ್ ಸೇಫ್‌ಗಾರ್ಡ್ ಕಂಪನಿಯಲ್ಲಿ ಆರೋಪಿಗಳು ಕೆಲಸ ಮಾಡುತ್ತಿದ್ದರು. ಬ್ಯಾಂಕ್‌ಗಳಿಂದ ಸಂಗ್ರಹಿಸಿದ್ದ ಹಣವನ್ನು ಎಟಿಎಂ ಘಟಕಗಳಿಗೆ ತುಂಬುವ ಜವಾಬ್ದಾರಿ ವಹಿಸಿಕೊಂಡಿದ್ದರು. ಜೂನ್ 19ರಿಂದ 21ರ ಅವಧಿಯಲ್ಲಿ ಎಟಿಎಂ ಘಟಕಗಳಿಗೆ ತುಂಬಬೇಕಿದ್ದ ₹ 20 ಲಕ್ಷವನ್ನು ಸ್ವಂತಕ್ಕೆ ಬಳಸಿಕೊಂಡಿದ್ದರು.'

'ಲೆಕ್ಕ ತಪಾಸಣೆ ವೇಳೆ ಆರೋಪಿಗಳ ಕೃತ್ಯ ಪತ್ತೆಯಾಗಿತ್ತು. ಕಂಪನಿ ಪ್ರತಿನಿಧಿ, ಇಬ್ಬರ ವಿರುದ್ಧವೂ ದೂರು ನೀಡಿದ್ದರು. ತನಿಖೆ ಕೈಗೊಂಡು ಆರೋಪಿಗಳನ್ನು ಬಂಧಿಸಲಾಗಿದೆ' ಎಂದರು.

ಭೂಮಿಕಾ ಪುರವಣಿ ಓದಿರಿ


## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮುಖ್ಯ ಆಯುಕ್ತರವರ ಕಛೇರಿ, ಅನೆಕ್ಸ್ ಕಟ್ಟಡ-1, ಎನ್.ಆರ್. ಚೌಕ, ಬೆಂಗಳೂರು - 560002

ನಂ.: ಬಿಬಿಎಂಪಿ/ಮು.ಆಯುಕ್ತರು/ಪಿಎಸ್‌ಆರ್(ಜ)/843/2022-23 ದಿನಾಂಕ: 12.07.2023

ಫಾರಂ-III
**ಸಾರ್ವಜನಿಕ ಪ್ರಕಟಣೆ**

ಕರ್ನಾಟಕ ನಗರ ಮತ್ತು ಪಟ್ಟಣ ಯೋಜನಾ ಕಾಯಿದೆ 1961ರ ಸೆಕ್ಷನ್ 14-ಬಿ ರಡಿ ಪ್ರದತ್ತವಾದ ಹಕ್ಕನ್ನು ಚಲಾಯಿಸುತ್ತಾ, ಉಪ ಸಂ. 256/21-22, ದಿನಾಂಕ: 03.09.2021ರ ಅಡಿಯಲ್ಲಿ ಸ್ಥಳೀಯ ಪ್ರಾಧಿಕಾರದ ಅನುಮೋದನೆಯ ಪ್ರಸ್ತಾವನೆಗಳನ್ನು ಅನುಷ್ಠಾನಗೊಳಿಸಲು **ಹೆಣ್ಣೂರು - ಬಾಗಲೂರು ಮುಖ್ಯ ರಸ್ತೆಯಿಂದ ಬೈರತಿ ಬಂಡೆ ನಗರೇಶ್ವರ ನಾಗೇನಹಳ್ಳಿ ಮಾರ್ಗವಾಗಿ ಥಣಿಸಂದ್ರ ಮುಖ್ಯ ರಸ್ತೆವರೆಗೆ 10 ಮೀ ಅಗಲದ ರಸ್ತೆಯ ಅಗಲೀಕರಣ / ನಿರ್ಮಾಣಕ್ಕಾಗಿ** ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಎನ್.ಆರ್. ಚೌಕ, ಬೆಂಗಳೂರು - 560002 ಇವರಿಗೆ ಈ ಕೆಳಗಿನ ಷೆಡ್ಯೂಲ್‌ನಲ್ಲಿ ತಿಳಿಸಲಾದ ಪ್ರದೇಶಗಳು ಅವಶ್ಯಕವಿರುತ್ತದೆ.

ಈ ಕೆಳಗಿನ ಜಮೀನು/ಕಟ್ಟಡದ ಮಾಲೀಕರು ನ್ಯಾಯೋಚಿತ ಪರಿಹಾರ ಮತ್ತು ಭೂಸ್ವಾಧೀನ, ಪುನರ್ವಸತಿ ಮತ್ತು ರೀಸೆಟಲ್‌ಮೆಂಟ್ ಪಾರದರ್ಶಕ ಕಾಯಿದೆ 2013ರಂತೆ ವಿತ್ತೀಯ ಪರಿಹಾರದ ಬದಲಾಗಿ ಅಭಿವೃದ್ಧಿ ಹಕ್ಕುಗಳನ್ನು ಆಯ್ಕೆಯನ್ನು ಹೊಂದಿರುತ್ತಾರೆ. ಅಭಿವೃದ್ಧಿ ಹಕ್ಕುಗಳನ್ನು/ಮೌಲ್ಯವನ್ನು ಪ್ರಾಧಿಕಾರವು ಭೂಮಿಯನ್ನು ನೀಡಿದ/ಒಪ್ಪಿಸಿದ ದುಪ್ಪಟ್ಟು ಮತ್ತ ನೀಡಿದ/ಒಪ್ಪಿಸಿದ ಕಟ್ಟಡ ಪ್ರದೇಶದ ಎರಡರಷ್ಟು ಹಾಗೂ ನೀಡಿದ/ಒಪ್ಪಿಸಿದ ಕಟ್ಟಡದ ಪ್ರದೇಶದ ಅಂದಾಜು ಮೌಲ್ಯವನ್ನು (ಲೋಕೋಪಯೋಗಿ ಇಲಾಖೆ ಮಾನದಂಡಗಳಂತೆ) ಭೂಮಿಯ ಪೈಕಿ ಕಟ್ಟಡ ನಿರ್ಮಿಸಿರುವ ಭಾಗದ ಮಾರುಕಟ್ಟೆ ಮೌಲ್ಯದಂತೆ ವಿಂಡಿಸಿ ನೀಡಲಾಗುವುದು.

ಈ ನಿಟ್ಟಿನಲ್ಲಿ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಸಾರ್ವಜನಿಕ ಉದ್ದೇಶಕವಿರುವ ಸ್ವತ್ತು ಮತ್ತು ಸ್ವತ್ತಿನ ಮಾಲೀಕರು ಹಾಗೂ ಆಸಕ್ತ ವ್ಯಕ್ತಿಗಳಿಗೆ ವಿತ್ತೀಯ ಪರಿಹಾರದ ಬದಲಿಗೆ ಅಭಿವೃದ್ಧಿ ಹಕ್ಕುಗಳ ಪ್ರಮಾಣ ಪತ್ರಗಳನ್ನು (ಡಿಆರ್‌ಸಿಗಳು) ವಿತರಿಸಲಾಗುವುದು. ಯಾವುದೇ ಆಕ್ಷೇಪಣೆಗಳು ಮತ್ತು ಸಲಹೆಗಳಿದ್ದಲ್ಲಿ ಡೆಪ್ಯೂಟಿ ಕಮಿಷನರ್‌ರವರ ಕಛೇರಿ, (ಭೂಸ್ವಾಧೀನ ಮತ್ತು ಟಿಡಿಆರ್), ಕೇಂದ್ರ ಕಛೇರಿ, ಬೃ.ಬೆಂ.ಮ.ಪಾಲಿಕೆ ಇವರನ್ನು ಈ ಪ್ರಕಟಣೆಯ ದಿನಾಂಕದಿಂದ 30 ದಿನಗಳೊಳಗಾಗಿ ಸಂಪರ್ಕಿಸಬಹುದು.

**ಭೂಮಿ/ಕಟ್ಟಡ ಪ್ರದೇಶವನ್ನು ನೀಡಿದ/ಒಪ್ಪಿಸಿದವರು ಹಾಗೂ ಡಿಆರ್‌ಸಿ ನೀಡುವ ಭೂ ಮಾಲೀಕರ ಪಟ್ಟಿ**

ಜಿಲ್ಲೆಯ ಹೆಸರು: **ಬೆಂಗಳೂರು ನಗರ** ತಾಲ್ಲೂಕಿನ ಹೆಸರು: **ಬೆಂಗಳೂರು ಪೂರ್ವ** ಗ್ರಾಮದ ಹೆಸರು: **ಬೈರತಿ**

| Sl. No. | Sy. No. / Khata No. | Type of land: Vacant | Type of land: Built up | Nature of Land: Agriculture | Nature of Land: Converted undeveloped | Nature of Land: Approved layout / developed land Building site | Dimension of the land / plot and extent in Sq.m: Dimension | Extent | Boundaries: North | South | East | West | Building Details: Extent in Sq.m | Type of Construction and No. Of floors | Floor Area Ratio | Present activity on land / Building (Specify Specific activity such as shop, office, factory, apartment, individual house etc.,) | Market (guide lines) value of the land per Sq.m (in Rs.) | Name and address of the owner of the plot / land for which DRC is to be issued. |
|---|---|---|---|---|---|---|---|---|---|---|---|---|---|---|---|---|---|---|
| 1 | Sy.No. 149 Khatha Sl. No. 658 | Vacant | | Converted BBMP `A' Khatha Land | | | 1228.98 Sqm | | Remaining portion Sy. No. 149 | Sy. No. 136 | Road | Sy. No. 28 | Nill | | | - | 55,000/- | Sri C.L. Kishore Kumar S/o. G.L. Narayana Rao, No. 38, Vinayaka Layout, 1st Stage, Magadi Main Road, Bengaluru- 560079 |

ಆಕ್ಷೇಪಣೆ ಮತ್ತು ಸಲಹೆಗಳನ್ನು ಈ ಕೆಳಕಂದಂತೆ ನಿರ್ಧಿಷ್ಟಪಡಿಸಿರುವ ವಿಳಾಸಕ್ಕೆ ಸಲ್ಲಿಸಬಹುದು.

| ವಿಭಾಗ / ಉಪ-ವಿಭಾಗ / ಶಾಖಾ ಕಛೇರಿಗಳ ಹೆಸರು ಮತ್ತು ವಿಳಾಸ | ವಿಶೇಷ ಭೂಸ್ವಾಧೀನ ಅಧಿಕಾರಿ, 1ನೇ ಮಹಡಿ, ಕೊಠಡಿ ಸಂ. 107, ಅನೆಕ್ಸ್ ಕಟ್ಟಡ-3, ನರಸಿಂಹರಾಜ ಚೌಕ, ಬೃ.ಬೆಂ.ಮ.ಪಾಲಿಕೆ, ಬೆಂಗಳೂರು - 560002 |
|---|---|

ಸಹಿ/-,
ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ



## ಆಕ್ಸಿಸ್ ಬ್ಯಾಂಕ್

**ಹರಾಜಿಗೆ ಸಾರ್ವಜನಿಕ ಸೂಚನೆ**
ಸಾರ್ವಜನಿಕ ಸೂಚನೆ - ಅಡಮಾನ ಚಿನ್ನಾಭರಣಗಳ ಇ-ಹರಾಜು ನೋಟಿಸ್

ಈ ಮೂಲಕ ಸಾಲಗಾರರರಿಗೆ ಹಾಗೂ ನಿರ್ದಿಷ್ಟವಾಗಿ ಸಾರ್ವಜನಿಕರಿಗೆ ತಿಳಿಸುವುದೇನೆಂದರೇ ಈ ಕೆಳಗಿನ ಖಾತೆಗಳಲ್ಲಿ ಒತ್ತೆಯಿಡಲಾದ ಚಿನ್ನಾಭರಣಗಳ ಸಾರ್ವಜನಿಕ ಹರಾಜನ್ನು ಕೆಳಗೆ ಸೂಚಿಸಿದ ಶಾಖೆಯಲ್ಲಿ ನಡೆಸಲು ಆಕ್ಸಿಸ್ ಬ್ಯಾಂಕ್ ಉದ್ದೇಶಿಸಲಾಗಿದೆ.

ಈ ಕೆಳಗೆ ತಿಳಿಸಲಾದ ಸಾಲಗಾರರು ಭದ್ರತೆಗಾಗಿ ಬ್ಯಾಂಕ್ ಪರವಾಗಿ ಚಿನ್ನದ ಆಭರಣಗಳ ("ಚಿನ್ನದ ಸಾಲ ಸೌಲಭ್ಯ") ಭರವಸೆಯ ವಿರುದ್ಧ **ಆಕ್ಸಿಸ್ ಬ್ಯಾಂಕ್ ಲಿಮಿಟೆಡ್**ನಿಂದ ಕ್ರೆಡಿಟ್ ಸೌಲಭ್ಯವನ್ನು ಪಡೆದುಕೊಂಡಿದ್ದಾರೆ. ಸಾಲಗಾರರು/ಜಾಮೀನುದಾರರಿಗೆ ಡಿಮ್ಯಾಂಡ್ ನೋಟಿಸ್‌ಗಳನ್ನು ನೀಡಲಾಗಿದ್ದು, ಪಡೆದ ಚಿನ್ನದ ಸಾಲ ಸೌಲಭ್ಯಕ್ಕೆ ತಮ್ಮ ಬಾಕಿ ಮೊತ್ತವನ್ನು ಪಾವತಿಸಲು ಸಾಲಗಾರರು/ಜಾಮೀನುದಾರರಿಗೆ ಈ ಮೂಲಕ ತಿಳಿಸಲಾಗಿದೆ. ಸಾಲಗಾರರು/ಜಾಮೀನುದಾರರು ಬಾಕಿ ಇರುವ ಸಾಲದ ಮೊತ್ತವನ್ನು ಮರುಪಾವತಿಸಲು ವಿಫಲವಾಗಿರುವುದರಿಂದ, ಬ್ಯಾಂಕ್ ಈ ಮೂಲಕ ನಿರ್ಬಂಧಿಸಲಾದ ಆಸ್ತಿಯ ವೇಳಾಪಟ್ಟಿಯಲ್ಲಿ ಹೆಚ್ಚು ನಿರ್ದಿಷ್ಟವಾಗಿ ವಿವರಿಸಲಾದ ಗಿರವಿ ಇಟ್ಟಿರುವ ಚಿನ್ನದ ಆಭರಣಗಳ ಇ-ಹರಾಜು ಮಾರಾಟವನ್ನು **"ಎಲ್ಲಿ ಹೇಗಿದೆಯೋ ಹಾಗೇ" ಎಲ್ಲಿ ಏನಿದೆಯೋ ಹಾಗೇ" "ಯಾವುದೇ ಆಧಾರ ಇಲ್ಲದೆ" ದಿನಾಂಕ : 25.07.2023 ರಂದು ಮಧ್ಯಾಹ್ನ 12:30 ಗಂಟೆಯಿಂದ 3:30 ವರೆಗೆ** ಹರಾಜು ನಡೆಸಲು ಪ್ರಸ್ತಾಪಿಸಲಾಗಿದೆ.

**ಸಾಲಗಾರರು ಮತ್ತು ಬಾಕಿ ಮೊತ್ತಗಳ ವಿವರಗಳು**

| ಕ್ರ. ಸಂ. | ಶಾಖೆಯ ಹೆಸರು | ಖಾತೆ ಸಂಖ್ಯೆ | ಗ್ರಾಹಕರ ಹೆಸರು | ಬರಬೇಕಾದ ಬಾಕಿ ಮೊತ್ತ | ಡಿಮ್ಯಾಂಡ್ ನೋಟೀಸ್ ದಿ: | ಒಟ್ಟು ತೂಕ | ನಿವ್ವಳ ತೂಕ |
|---|---|---|---|---|---|---|---|
| 1 | ಬಸವೇಶ್ವರ ನಗರ, ಬೆಂಗಳೂರು | XXXXXXXXXXX1494 | ಪವನ್ ಪಿ | 412750 | 30-May-23 | 152.300 | 115.600 |
| 2 | ಬಸವೇಶ್ವರ ನಗರ, ಬೆಂಗಳೂರು | XXXXXXXXXXX5996 | ಅರ್ಚನ ಸೂರ್ಯವಂಶಿ | 143259 | 30-May-23 | 49.400 | 46.900 |
| 3 | ಬಂಗಾರಪೇಟೆ (ಕ) | XXXXXXXXXXX0862 | ಸೀಮಾ ಅಂಜೂಮ್ | 57690 | 30-May-23 | 19.200 | 18.700 |
| 4 | ಚಾಮರಾಜಪೇಟೆ, ಬೆಂಗಳೂರು | XXXXXXXXXXX5453 | ರಂಜನ್ ಕುಮಾರ್ | 28689 | 9-Jan-23 | 10.000 | 9.700 |
| 5 | ಚನ್ನಪಟ್ಟಣ (ಕ) | XXXXXXXXXXX2457 | ನಯನ್ ಹೆಚ್ ಕೆ | 116319 | 30-May-23 | 43.000 | 33.000 |
| 6 | ಚನ್ನಪಟ್ಟಣ (ಕ) | XXXXXXXXXXX2431 | ನಯನ್ ಹೆಚ್ ಕೆ | 40643.72 | 30-May-23 | 11.600 | 11.500 |
| 7 | ಜಯನಗರ, ಬೆಂಗಳೂರು | XXXXXXXXXXX6318 | ಎಂ ಮಹೇಶ್ ಕುಮಾರ್ ಯಾದವ್ | 557109 | 30-May-23 | 126.900 | 116.500 |
| 8 | ಜಯನಗರ, ಬೆಂಗಳೂರು | XXXXXXXXXXX7159 | ಎಂ ಮಹೇಶ್ ಕುಮಾರ್ ಯಾದವ್ | 446594 | 30-May-23 | 164.300 | 150.500 |
| 9 | ಜಯನಗರ, ಬೆಂಗಳೂರು | XXXXXXXXXXX4340 | ಎಂ ಮಹೇಶ್ ಕುಮಾರ್ ಯಾದವ್ | 364097 | 30-May-23 | 95.700 | 94.000 |
| 10 | ಕೋರಮಂಗಲ, ಬೆಂಗಳೂರು | XXXXXXXXXXX4973 | ಮೊಹಮ್ಮದ್ ವಾಸಿಂಉದ್ದೀನ್ | 168635 | 30-May-23 | 83.400 | 54.000 |
| 11 | ಕೋಲಾರ (ಕ) | XXXXXXXXXXX8585 | ಆಸಿಫ್ ಅಹಮ್ಮದ್ | 302959.15 | 30-May-23 | 97.700 | 91.800 |
| 12 | ನೆಲಮಂಗಲ, ಬೆಂಗಳೂರು | XXXXXXXXXXX5717 | ರತ್ನಮ್ಮ | 675581.33 | 15-Jun-23 | 228.000 | 217.000 |
| 13 | ನೆಲಮಂಗಲ, ಬೆಂಗಳೂರು | XXXXXXXXXXX3807 | ಜಿ ಶ್ರೀನಿವಾಸ್ | 435748.92 | 30-May-23 | 140.900 | 133.700 |
| 14 | ವಿಜಯನಗರ, ಬೆಂಗಳೂರು | XXXXXXXXXXX2999 | ಬಿ ಸುರೇಖಾ | 258244.03 | 15-Jun-23 | 89.600 | 76.700 |
| 15 | ಯಲಹಂಕ, ಬೆಂಗಳೂರು | XXXXXXXXXXX5481 | ವಿಶ್ವನಾಥ್ ಸಿ ಎ | 140065 | 30-May-23 | 41.200 | 41.100 |
| 16 | ಯಲಹಂಕ, ಬೆಂಗಳೂರು | XXXXXXXXXXX8901 | ಲಕ್ಷ್ಮೀ ಜೆ | 138361.76 | 25-Aug-22 | 53.400 | 41.300 |
| 17 | ಯಲಹಂಕ, ಬೆಂಗಳೂರು | XXXXXXXXXXX7146 | ದಿಲೀಪ್ ರೆಡ್ಡಿ | 38496 | 26-Jul-22 | 13.500 | 12.800 |

**ಆಕ್ಸಿಸ್ ಬ್ಯಾಂಕ್** ಯಾವುದೇ ಪೂರ್ವ ಸೂಚನೆ ಇಲ್ಲದೆ ಖಾತೆಯನ್ನು ತೆಗೆದುಹಾಕುವ/ಹರಾಜು ದಿನಾಂಕವನ್ನು ಮುಂದೂಡುವ ಅಧಿಕಾರವನ್ನು ಹೊಂದಿದೆ. ಹರಾಜು ಆನ್‌ಲೈನ್ **https://gold.samil.in** ನಲ್ಲಿ ದಿನಾಂಕ : **25.07.2023 ರಂದು ಮಧ್ಯಾಹ್ನ 12:30 ಗಂಟೆಯಿಂದ 3:30 ವರೆಗೆ** ನಡೆಯಲಿದೆ.
ಹೆಚ್ಚಿನ ನಿಯಮಗಳು ಮತ್ತು ಷರತ್ತುಗಳಿಗಾಗಿ, ದಯವಿಟ್ಟು ವೆಬ್‌ಸೈಟ್ **https://gold.samil.in** ಗೆ ಲಾಗ್ ಇನ್ ಮಾಡಿ (ಆನ್‌ಲೈನ್ ಮಾರಾಟಗಾರರ ವೆಬ್‌ಸೈಟ್)

ಸ್ಥಳ: ಬೆಂಗಳೂರು ಸಹಿ/- ಅಧಿಕೃತ ಅಧಿಕಾರಿ, ಆಕ್ಸಿಸ್ ಬ್ಯಾಂಕ್ ಲಿಮಿಟೆಡ್

# ‘ಬ್ರ್ಯಾಂಡ್ ಬೆಂಗಳೂರು’: ನೋಡಲ್ ಅಧಿಕಾರಿಗಳ ನೇಮಕ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಗರದ ಸಮಗ್ರ ಅಭಿವೃದ್ಧಿಗೆ ರೂಪಿಸಲಾಗುತ್ತಿರುವ ‘ಬ್ರ್ಯಾಂಡ್ ಬೆಂಗಳೂರು’ ಯೋಜನೆಗೆ ನೋಡಲ್ ಅಧಿಕಾರಿಗಳನ್ನು ನೇಮಿಸಲಾಗಿದೆ.

‘ಬ್ರ್ಯಾಂಡ್ ಬೆಂಗಳೂರು’ ರಚಿಸಲು ಪೋರ್ಟಲ್ ಮೂಲಕ ನಾಗರಿಕರಿಂದ ಬರುವ ಸಲಹೆಗಳನ್ನು ಒಟ್ಟುಗೂಡಿಸಲು ಶೈಕ್ಷಣಿಕ ಸಂಸ್ಥೆಗಳನ್ನೂ ನೋಡಲ್ ಅಧಿಕಾರಿಗಳೊಂದಿಗೆ ಪಾಲುದಾರರನ್ನಾಗಿಸಿಕೊಳ್ಳಲಾಗಿದೆ. ಇವರು ಎಲ್ಲ ಸಲಹೆಗಳನ್ನು ಥೀಮ್‌ವಾರು ಒಟ್ಟುಗೂಡಿಸಿ, ಅವುಗಳನ್ನು ಪ್ರಕಟಿಸಬೇಕು. ಅಲ್ಲದೆ, ವಿಚಾರ ಸಂಕಿರಣಗಳನ್ನು ನಡೆಸಿ ಮಾಹಿತಿಗಳನ್ನು ಒಟ್ಟುಗೂಡಿಸುವ ಜವಾಬ್ದಾರಿಯನ್ನು ವಹಿಸಲಾಗಿದೆ.

ಬಿಬಿಎಂಪಿ ಮುಖ್ಯ ಆಯುಕ್ತರು ‘ಬ್ರ್ಯಾಂಡ್ ಬೆಂಗಳೂರು’ ಥೀಮ್‌ಗಳನ್ನು ನಿಗದಿಪಡಿಸಿ, ಬಿಬಿಎಂಪಿ, ಬಿಎಂಟಿಸಿ, ಬಿಡಬ್ಲ್ಯುಎಸ್‌ಎಸ್‌ಬಿ ಹಿರಿಯ ಅಧಿಕಾರಿಗಳಿಗೆ ಜವಾಬ್ದಾರಿ ವಹಿಸಿದ್ದಾರೆ. ಶೈಕ್ಷಣಿಕ ಸಂಸ್ಥೆಗಳನ್ನೂ ಗುರುತಿಸಿ, ಜುಲೈ 14ರಂದು ಸುತ್ತೋಲೆ ಹೊರಡಿಸಿದ್ದಾರೆ. www.brandbengluru.karnataka.gov.in ಪೋರ್ಟಲ್‌ನಲ್ಲಿ ನಾಗರಿಕರು, ಸಂಘ–ಸಂಸ್ಥೆಗಳು ಜುಲೈ 20ರವರೆಗೆ ಸಲಹೆಗಳನ್ನು ಸಲ್ಲಿಸಬಹುದು.

| ಥೀಮ್ | ನೋಡಲ್ ಅಧಿಕಾರಿಗಳು | ಶೈಕ್ಷಣಿಕ ಪಾಲುದಾರ |
|---|---|---|
| ಸಾರಿಗೆ ಬೆಂಗಳೂರು/ ಸಂಚಾರಯುಕ್ತ | ಸೂರ್ಯಸೇನ್, ನಿರ್ದೇಶಕ–ಐಟಿ, ಬಿಎಂಟಿಸಿ/ ಪ್ರಹ್ಲಾದ್, ಮುಖ್ಯ ಎಂಜಿನಿಯರ್, ಮೂಲಸೌಕರ್ಯ, ಬಿಬಿಎಂಪಿ | ಎಂ.ಎಸ್. ರಾಮಯ್ಯ ಇನ್‌ಸ್ಟಿಟ್ಯೂಟ್ ಮತ್ತು ಐಐಎಸ್‌ಸಿ, ಬೆಂಗಳೂರು |
| ಆರೋಗ್ಯಕರ ಬೆಂಗಳೂರು/ ಆರೋಗ್ಯ | ಡಾ. ತ್ರಿಲೋಕಚಂದ್ರ, ವಿಶೇಷ ಆಯುಕ್ತ (ಆರೋಗ್ಯ), ಬಿಬಿಎಂಪಿ | ಐಐಎಸ್‌ಸಿ, ಬೆಂಗಳೂರು |
| ಹಸಿರು ಬೆಂಗಳೂರು/ ಪರಿಸರ | ಪ್ರೀತಿ ಗೆಹ್ಲೋಟ್, ವಿಶೇಷ ಆಯುಕ್ತೆ (ಅರಣ್ಯ), ಬಿಬಿಎಂಪಿ/ ಸರೀನಾ ಸಿಕ್ಕಲಿಗರ್, ಡಿಸಿಎಫ್, ಬಿಬಿಎಂಪಿ | ಆರ್‌.ವಿ. ಕಾಲೇಜ್ ಆಫ್ ಎಂಜಿನಿಯರಿಂಗ್ |
| ಸ್ವಚ್ಛ ಬೆಂಗಳೂರು/ ಘನ ತ್ಯಾಜ್ಯ ನಿರ್ವಹಣೆ | ಡಾ. ಹರೀಶ್, ವಿಶೇಷ ಆಯುಕ್ತ (ಘನತ್ಯಾಜ್ಯ ನಿರ್ವಹಣೆ)/ ಪ್ರವೀಣ್ ಲಿಂಗಯ್ಯ, ಮುಖ್ಯ ಎಂಜಿನಿಯರ್ (ಎಸ್‌ಡಬ್ಲ್ಯುಎಂ) | ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ. |
| ಆಕರ್ಷಕ ಬೆಂಗಳೂರು | ಜಯರಾಂ ರಾಯಪುರ, ವಿಶೇಷ ಆಯುಕ್ತ (ಹಣಕಾಸು), ಬಿಬಿಎಂಪಿ | ಸೃಷ್ಟಿ ಮಣಿಪಾಲ್ ಇನ್‌ಸ್ಟಿಟ್ಯೂಟ್ ಆಫ್ ಆರ್ಟ್, ಡಿಸೈನ್ ಆ್ಯಂಡ್ ಟೆಕ್ನಾಲಜಿ. |
| ತೃಪ್ತಿಕರ ಬೆಂಗಳೂರು/ ನೀರು ಸರಬರಾಜು | ಸುರೇಶ್, ಪ್ರಧಾನ ಎಂಜಿನಿಯರ್, ಬಿಡಬ್ಲ್ಯುಎಸ್‌ಎಸ್‌ಬಿ | ದಯಾನಂದ ಸಾಗರ್ ಕಾಲೇಜ್ ಆಫ್ ಎಂಜಿನಿಯರಿಂಗ್. |
| ಟೆಕ್ ಬೆಂಗಳೂರು | ಉಜ್ವಲ್‌ಕುಮಾರ್ ಘೋಷ್, ವಿಶೇಷ ಆಯುಕ್ತ (ಐಟಿ)/ ಪ್ರತೀಕ್ ಬಾಯಲ್, ನಿರ್ದೇಶಕ (ಐಟಿ),ಬಿಬಿಎಂಪಿ | ಐಐಐಟಿ, ಬೆಂಗಳೂರು. |

ಮೆಟ್ರೊ 2ನೇ ಹಂತದಲ್ಲಿ ನಡೆಯುತ್ತಿರುವ ಲಕ್ಕಸಂದ್ರ ಸುರಂಗ ಮಾರ್ಗವನ್ನು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪರಿಶೀಲನೆ ನಡೆಸಿದರು –ಪ್ರಜಾವಾಣಿ ಚಿತ್ರ

## ಮೆಟ್ರೊ ಸುರಂಗ ಮಾರ್ಗ, ನಿಲ್ದಾಣಗಳು 2025ಕ್ಕೆ ಪೂರ್ಣ: ಡಿಸಿಎಂ ಹೇಳಿಕೆ

ಒಂದನೇ ಪುಟದಿಂದ...

**ಯೋಜನೆ:** ಹಂತರ 2ರ ಯೋಜನೆಯಡಿ ರೀಚ್–6 ಮಾರ್ಗ ಇದಾಗಿದೆ. ಒಟ್ಟು ₹ 5,925.94 ಕೋಟಿ ವೆಚ್ಚದಲ್ಲಿ ನಾಲ್ಕು ಪ್ಯಾಕೇಜ್‌ಗಳಲ್ಲಿ ನಿರ್ಮಾಣಗೊಳ್ಳುತ್ತಿದೆ. ಸುರಂಗ ಮಾರ್ಗವು ಪ್ಯಾಕೇಜ್ 1ರಲ್ಲಿ ಶೇ 80ರಷ್ಟು (5346 ಮೀಟರ್‌ಗಳಲ್ಲಿ 4327 ಮೀಟರ್) ಪೂರ್ಣಗೊಂಡಿದೆ. ಪ್ಯಾಕೇಜ್ 2 ಸಂಪೂರ್ಣವಾಗಿದೆ(4423 ಮೀಟರ್), ಮೂರನೇ ಪ್ಯಾಕೇಜ್ ಶೇ 98 (5116ರಲ್ಲಿ 4827 ಮೀಟರ್) ಹಾಗೂ ನಾಲ್ಕನೇ ಪ್ಯಾಕೇಜ್ ಶೇ 54ರಷ್ಟು (6375ರಲ್ಲಿ 3122 ಮೀಟರ್) ಪೂರ್ಣಗೊಂಡಿದೆ.

ಡೈರಿ ಸರ್ಕಲ್, ಲಕ್ಕಸಂದ್ರ, ಲ್ಯಾಂಗ್‌ಫೋರ್ಡ್ ಸುರಂಗ ನಿಲ್ದಾಣಗಳು ಶೇ 48ರಷ್ಟು ಆಗಿವೆ. ಆರ್‌ಎಂಎಸ್, ಎಂಜಿ ರೋಡ್, ಶಿವಾಜಿನಗರ ನಿಲ್ದಾಣಗಳು ಶೇ 79ರಷ್ಟು ಪೂರ್ಣಗೊಂಡಿವೆ. ಕಂಟೋನ್ಮೆಂಟ್, ಪಾಟರಿಟೌನ್ ನಿಲ್ದಾಣಗಳು ಶೇ 75ರಷ್ಟು ಹಾಗೂ ಟ್ಯಾನರಿ ರಸ್ತೆ, ವೆಂಕಟೇಶಪುರ, ಕೆ.ಜಿ. ಹಳ್ಳಿ, ನಾಗವಾರ ಮೆಟ್ರೊ ನಿಲ್ದಾಣಗಳು ಶೇ 49 ಪೂರ್ಣಗೊಂಡಿವೆ.

## ಮ್ಯಾಕ್ರನ್‌ಗೆ ಶ್ರೀಗಂಧದ ಸಿತಾರ್ ಪ್ರತಿಕೃತಿ

**ಪ್ಯಾರಿಸ್ (ಪಿಟಿಐ):** ಪ್ರಧಾನಿ ನರೇಂದ್ರ ಮೋದಿ ಅವರು ಫ್ರಾನ್ಸ್ ಅಧ್ಯಕ್ಷ ಇಮ್ಯಾನುಯೆಲ್ ಮ್ಯಾಕ್ರನ್ ಅವರಿಗೆ ಸಂಗೀತ ವಾದ್ಯ ಸಿತಾರ್ ನ ಶ್ರೀಗಂಧದ ಪ್ರತಿಕೃತಿ ಹಾಗೂ ಅವರ ಪತ್ನಿ ಬ್ರಿಗಿಟಿ ಮ್ಯಾಕ್ರನ್ ಗೆ ಪೊಚಂಪಲ್ಲಿ ಸಿಲ್ಕ್ ಇಕ್ಕತ್ ಸೀರೆಯನ್ನು ಶ್ರೀಗಂಧದ ಪೆಟ್ಟಿಗೆಯಲ್ಲಿಟ್ಟು ಉಡುಗೊರೆಯಾಗಿ ನೀಡಿದ್ದಾರೆ ಎಂದು ಅಧಿಕಾರಿಗಳು ಶುಕ್ರವಾರ ತಿಳಿಸಿದ್ದಾರೆ.

ಈ ಅಲಂಕಾರಿಕ ಪ್ರತಿಕೃತಿಯು ಕಲಿಕೆಯ ದೇವತೆ ಎಂದು ಪರಿಗಣಿಸಲಾದ ಸರಸ್ವತಿ ಚಿತ್ರ ಹಾಗೂ ಗಣೇಶನ ಚಿತ್ರವನ್ನು ಹೊಂದಿದೆ. ಸಂಗೀತ ವಾದ್ಯದ ವಿಶಿಷ್ಟ ಪ್ರತಿಕೃತಿಯನ್ನು ಶುದ್ಧ ಶ್ರೀಗಂಧದಿಂದ ತಯಾರಿಸಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಸೀರೆಗಳು ₹ 395 ರಿಂದ ಆರಂಭ | ಡ್ರೆಸ್ ಮೆಟೀರಿಯಲ್ ₹ 74 / ಮೀ.ನಿಂದ ಆರಂಭ | ಸ್ಪೆಷಲ್ ಕೌಂಟರ್‌ನಿಂದ ₹ 790 ರಲ್ಲಿ ಯಾವುದೇ 2 ಸೀರೆಗಳನ್ನು ಖರೀದಿಸಿರಿ.

ಮಾರಾಟ ಈಗ ಲೈವ್ ಆಗಿದೆ

ಪ್ರೇಮ ಚಂದ್ರ ಕಲ್ಯಾಣ ಮಂಟಪ, ನಂ-264/266, ಟಿ.ಮರಿಯಪ್ಪ ರಸ್ತೆ, 2ನೇ ಬ್ಲಾಕ್, ಅಶೋಕ್ ಪಿಲ್ಲರ್ ಹತ್ತಿರ, ಜಯ ನಗರ, ಬೆಂಗಳೂರು – 560011.

ಐದು "ಓ" ಗ್ಯಾಲರಿ, # 51, 17 ನೇ ಅಡ್ಡ ರಸ್ತೆ, ಎಂ. ಸಿ. ರಸ್ತೆ, ವಿಜಯನಗರ, ಬೆಂಗಳೂರು - 560040.

ಶ್ರೀ ಗುರುರಾಜ ಕಲ್ಯಾಣ ಮಂಟಪ, ನಂ. 29, ಕ್ರೆಸೆಂಟ್ ರಸ್ತೆ, ಶಿವಾನಂದ ಸರ್ಕಲ್ ಹತ್ತಿರ, ಬೆಂಗಳೂರು - 560001

ಸಮಯ– ಬೆಳಗ್ಗೆ ಗಂಟೆ 10.00 ರಿಂದ ರಾತ್ರಿ ಗಂಟೆ 8.00 (ರವಿವಾರವೂ ತೆರೆದಿರುತ್ತದೆ)

ಸಗಟು ಮತ್ತು ಚಿಲ್ಲರೆ ವಿಚಾರಣೆಗಾಗಿ 9342940284, 6357406278

# ಕಾರು ಅಡ್ಡಗಟ್ಟಿ ಗಾಜು ಒಡೆದವರ ಬಂಧನ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

**ಬೆಂಗಳೂರು:** ರಸ್ತೆಯಲ್ಲಿ ದಾರಿ ಬಿಡುವಂತೆ ಹಾರ್ನ್ ಮಾಡಿದ್ದ ಕಾರಣಕ್ಕೆ ಕಾರು ಅಡ್ಡಗಟ್ಟಿ ಗಾಜು ಒಡೆದು ಹಾಕಿದ್ದ ಮೂವರು ಆರೋಪಿಗಳನ್ನು ವರ್ತೂರು ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಕೇಶವಮೂರ್ತಿ, ರವೀಂದ್ರ ಹಾಗೂ ಗಣೇಶ್ ಬಂಧಿತರು. ಮೂವರು ಸೇರಿಕೊಂಡು ಗುರುವಾರ ವ್ಯಕ್ತಿಯೊಬ್ಬರ ಕಾರು ಅಡ್ಡಗಟ್ಟಿ ಕೃತ್ಯ ಎಸಗಿದ್ದರು. ಇದರ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿತ್ತು. ಅದನ್ನು ಆಧರಿಸಿ ಪ್ರಕರಣ ದಾಖಲಿಸಿಕೊಂಡು, ಆರೋಪಿಗಳನ್ನು ಸೆರೆ ಹಿಡಿಯಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

ಆರೋಪಿಗಳಾದ ಕೇಶವಮೂರ್ತಿ, ರವೀಂದ್ರ ಹಾಗೂ ಗಣೇಶ್

‘ದೂರುದಾರ ಕಾರಿನಲ್ಲಿ ಹೊರಟಿದ್ದರು. ಬೈಕ್‌ನಲ್ಲಿ ತೆರಳುತ್ತಿದ್ದ ಆರೋಪಿಗಳು, ಅಡ್ಡಾದಿಡ್ಡಿಯಾಗಿ ಚಾಲನೆ ಮಾಡಿದ್ದರು. ಕಾರು ಮುಂದಕ್ಕೆ ಹೋಗಲು ಜಾಗ ಬಿಟ್ಟಿರಲಿಲ್ಲ. ಹೀಗಾಗಿ, ದಾರಿ ಬಿಡುವಂತೆ ದೂರುದಾರ ಹಾರ್ನ್ ಮಾಡಿದ್ದರು. ಅಷ್ಟಕ್ಕೆ ಕೋಪಗೊಂಡ ಆರೋಪಿಗಳು, ಕಾರು ಅಡ್ಡಗಟ್ಟಿದ್ದರು. ದೂರುದಾರನ ಮೇಲೆ ಹಲ್ಲೆ ಮಾಡಲು ಹೊರಟಿದ್ದರು.’

‘ಗಾಬರಿಗೊಂಡ ದೂರುದಾರ, ಕಾರಿನ ಸಮೇತ ಸ್ಥಳದಿಂದ ಪರಾರಿಯಾಗಿದ್ದರು. ಈ ದೃಶ್ಯ ಕಾರಿನಲ್ಲಿದ್ದ ಕ್ಯಾಮೆರಾದಲ್ಲಿ ಸೆರೆಯಾಗಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

**ಕಾರು ಹಿಂಬಾಲಿಸಿ ಕೃತ್ಯ:** ‘ಆರೋಪಿಗಳು, ಕಾರು ಬೆನ್ನಟ್ಟಿದ್ದರು. ದೂರುದಾರ ತಾವು ವಾಸವಿದ್ದ ಅಪಾರ್ಟ್‌ಮೆಂಟ್ ಸಮುಚ್ಚಯ ಬಳಿ ಹೋಗಿದ್ದರು. ಪುನಃ ಕಾರು ಅಡ್ಡಗಟ್ಟಿದ್ದ ಆರೋಪಿಗಳು, ಗಲಾಟೆ ಮಾಡಿದ್ದರು. ಕಾರಿನ ಕಿಟಕಿ ಗಾಜುಗಳನ್ನು ಒಡೆದಿದ್ದರು. ಈ ದೃಶ್ಯ ಸಹ ಕ್ಯಾಮೆರಾದಲ್ಲಿ ಸೆರೆಯಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

ದಿ ಕಂಟ್ರೋಲರ್ಸ್ ಆಫೀಸ್ ಕೋ–ಆಪರೇಟಿವ್ ಬ್ಯಾಂಕ್ ಲಿ.,
ಮಹಾಲಕ್ಷ್ಮೀ, ನಂ.209, ಕಬ್ಬನ್‌ಪೇಟೆ ಮುಖ್ಯ ರಸ್ತೆ, ಬೆಂಗಳೂರು–560002.

ಪತ್ರಿಕಾ ಪ್ರಕಟಣೆ

ಮಾನ್ಯ ಸದಸ್ಯರೇ,

ದಿ ಕಂಟ್ರೋಲರ್ಸ್ ಆಫೀಸ್ ಕೋ–ಆಪರೇಟಿವ್ ಬ್ಯಾಂಕ್ ಲಿ. ಮಹಾಲಕ್ಷ್ಮಿ, ನಂ.209, ಕಬ್ಬನ್‌ಪೇಟೆ ಮುಖ್ಯ ರಸ್ತೆ, ಬೆಂಗಳೂರು – 560002 ಈ ಬ್ಯಾಂಕಿನ ಆಡಳಿತ ಮಂಡಳಿ ನಿರ್ದೇಶಕರ ಮುಂದಿನ 5 ವರ್ಷಗಳ ಅವಧಿಯ ಆಯ್ಕೆಗೆ ದಿನಾಂಕ: 30–07–2023, ಭಾನುವಾರ ಬೆಳಿಗ್ಗೆ 9–00 ಗಂಟೆಯಿಂದ ಅಪರಾಹ್ನ 4–00 ಗಂಟೆಯವರೆಗೆ "ದೇವಾಂಗ ಸಂಘ" ಹಾಸ್ಟೆಲ್ ರಸ್ತೆ, ಬಿಬಿಎಂಪಿ ಕಛೇರಿ ಹಿಂಭಾಗ, ಸಿಲ್ವರ್ ಜೂಬಿಲಿ ಕಟ್ಟಡ, ಸಂಪಂಗಿರಾಮನಗರ, ಬೆಂಗಳೂರು–560027 ಇಲ್ಲಿ ಚುನಾವಣೆ ನಡೆಸುವ ಸಲುವಾಗಿ ಚುನಾವಣಾ ವೇಳಾಪಟ್ಟಿಯನ್ನು ಪ್ರಕಟಿಸಿದೆ. ದಿನಾಂಕ : 18–07–2023 ರಿಂದ 22–07–2023ರವರೆಗೆ ನಾಮಪತ್ರ ಸಲ್ಲಿಸಲು ಅವಕಾಶವಿರುತ್ತದೆ. ಈ ಚುನಾವಣಾ ವೇಳಾಪಟ್ಟಿಯಂತೆ ಚುನಾವಣಾ ಪ್ರಕ್ರಿಯೆಯಲ್ಲಿ ಭಾಗವಹಿಸಲು ಕೋರಲಾಗಿದೆ.

(ಸೋಮಶೇಖರಯ್ಯ)
ರಿಟರ್ನಿಂಗ್ ಅಧಿಕಾರಿ
ದಿ ಕಂಟ್ರೋಲರ್ಸ್ ಆಫೀಸ್ ಕೋ–ಆಪರೇಟಿವ್ ಬ್ಯಾಂಕ್ ಲಿ.
ಹಾಗೂ, ಸಹಕಾರ ಅಭಿವೃದ್ಧಿ ಅಧಿಕಾರಿ

ದಿನಾಂಕ : 14–07–2023
ಸ್ಥಳ : ಬೆಂಗಳೂರು

PUBLIC NOTICE

My client proposes to purchase the property more particularly described in the schedule hereunder from its present owners **(1) Mr. N. SHEKAR,** aged about 47 years, son of Sri.V. Narayanaswamy & **(2) Mr. N. THARUN CHANDRA**, aged about 39 years, son of Sri. V. Narayanaswamy, both Residing at No.230, 18th Cross, Sadashivanagar, Bengaluru – 560 080. It is represented by the present owners that they have a clear and marketable title to the Schedule Property. Any person/persons who claims any right, title or interest of any nature or any lien, charge or enforceable right in relation to the Schedule Property and/or has any objections of any nature to the transaction should lodge such claim and/or objections in writing to the undersigned together with supporting documents within fifteen (15) days hereof, failing which it will presumed that no valid claims or objections subsist and my clients would proceed to complete the transaction with the present owners thereof subject to compliance with other statutory and legal formalities.

**SCHEDULE PROPERTY**

All that piece and parcel of the Residential Property bearing No.477 (PID No. 100-767-477), measuring East to West 18.40 meters, North to South 16.70 meters, in all measuring about 307.28 sq.mtrs or 3306 sq.ft, situated at 35th Block, Rajamahal Vilas Extension, 2nd Stage, HIG House, Bangalore – 560 080, BBMP Ward No.100 together with a building constructed thereon measuring about 1800 sq.ft and bounded on the: **East by**: 5th Main Road, **West by:** House No.487, **North by:** House No.478, **South by:** House No.476.

**ARVIND RAGHAVAN, Advocate**
No.48, “ISHITHA”, 2nd Floor, 2nd Main Road, Vyalikaval, Bangalore – 560 003. Mobile: 98450 04419.

**Bangalore.**
**Dated: 14/07/2023**

# ಬಿಜೆಪಿ ಟೀಕೆ ಹತಾಶೆಯ ಪ್ರತೀಕ: ಬಿ.ಕೆ. ಚಂದ್ರಶೇಖರ್

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಅಸ್ತಿತ್ವಕ್ಕೆ ಬಂದ ದಿನದಿಂದ ಬಿಜೆಪಿ ನಾಯಕರು ಒಂದೇ ಸಮನೆ ಮಾಡುತ್ತಿರುವ ಟೀಕೆಗಳು ಚುನಾವಣೆಯ ಸೋಲು ಅವರಿಗೆ ಉಂಟುಮಾಡಿರುವ ಹತಾಶೆಯನ್ನು ಬಿಂಬಿಸುತ್ತದೆ’ ಎಂದು ಕಾಂಗ್ರೆಸ್ ಮುಖಂಡ ಬಿ.ಕೆ. ಚಂದ್ರಶೇಖರ್ ಅಭಿಪ್ರಾಯಪಟ್ಟಿದ್ದಾರೆ.

‘ಮಹಿಳೆಯರಿಗೆ ‘ಶಕ್ತಿ’ ಯೋಜನೆಯಡಿ ಉಚಿತ ಪ್ರಯಾಣದ ಗ್ಯಾರಂಟಿ ಪ್ರಕಟಿಸಿದ ಕೂಡಲೇ ಬಿಜೆಪಿ ನಾಯಕರು ಟಿಕೆಟ್ ತೆಗೆದುಕೊಳ್ಳದಂತೆ ಮಹಿಳೆಯರನ್ನು ಪ್ರಚೋದಿಸಿದ್ದಲ್ಲದೆ, ತಾವೂ ಟಿಕೆಟ್ ತೆಗೆದುಕೊಳ್ಳುವುದಿಲ್ಲವೆಂದು ಧೀರೋದ್ಧಾತವಾಗಿ ಘೋಷಿಸಿದರು. 10 ಕೆಜಿಗಿಂತ ಒಂದು ಕಾಳು ಅಕ್ಕಿ ಕಡಿಮೆ ಕೊಟ್ಟರೂ ಹೋರಾಟಕ್ಕಿಳಿಯುವುದಾಗಿ ಹೇಳಿಕೆ ನೀಡಿದರು. ಇಂದಿನ ಪರಿಸ್ಥಿತಿಯ ಅನಿವಾರ್ಯಗಳ ಹಿನ್ನೆಲೆಯಲ್ಲಿ ಕೆಲವು ತಿಂಗಳಾದರೂ ಕಾಯದೆ ಸರ್ಕಾರದ ವಿರುದ್ಧ ಸಮರ ಘೋಷಿಸುತ್ತಿರುವ ಬಿಜೆಪಿ ನಾಯಕರ ನಡೆ, ಗರ್ಭಿಣಿಗೆ ದಿನ ತುಂಬುವ ಮೊದಲೇ ಹೆರಿಗೆ ಬೇನೆ ಆರಂಭವಾದಾಗ ಆಕೆಯ ಕುಟುಂಬ ಅನುಭವಿಸುವ ಆತಂಕದಂತಿದೆ’ ಎಂದಿದ್ದಾರೆ.

‘ಆಳುವ ಪಕ್ಷಗಳು ಬದಲಾಗಬಹುದು. ಆದರೆ, ಆಡಳಿತ ಎನ್ನುವುದು ನಿರಂತರ ಪ್ರಕ್ರಿಯೆ. ನೀತಿನಿರೂಪಣೆಗಳ ಮುಂದುವರಿಕೆ ಅತ್ಯಗತ್ಯ. ಕಾರ್ಯಯೋಜನೆಗಳನ್ನು ಬದಲಾಯಿಸಬಹುದೇ ಹೊರತು ನೀತಿ ನಿರೂಪಣೆಯನ್ನಲ್ಲ’ ಎಂದು ಹೇಳುತ್ತಾ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಯಿ, ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯ (ಎನ್‌ಇಪಿ) ಸ್ಥಾನದಲ್ಲಿ ರಾಜ್ಯ ಶಿಕ್ಷಣ ನೀತಿ ಜಾರಿಗೆ ತರಬೇಕೆಂಬ ಕಾಂಗ್ರೆಸ್ ಸರ್ಕಾರದ ನಿರ್ಧಾರಕ್ಕೆ ಉದಾಹರಣೆ ನೀಡುತ್ತಾರೆ. ಯೋಜನೆಗಳು ಕಾರ್ಯರೂಪಕ್ಕೆ ಬರುವುದು ನೀತಿನಿರೂಪಣೆಯ ಅಡಿಯಲ್ಲಾದರೆ ಕೇವಲ ಯೋಜನೆಗಳನ್ನು ಮಾತ್ರ ಬದಲಾಯಿಸಲು ಹೇಗೆ ಸಾಧ್ಯ? ಎಲ್ಲ ಸರ್ಕಾರಗಳು ಮಾಡಿರುವುದೂ ಅದನ್ನೇ. ಇದನ್ನು ಸಂವಿಧಾನದ ಯಾವ ವಿಧಿಯೂ ವಿರೋಧಿಸುವುದಿಲ್ಲ. ಕರ್ನಾಟಕದಲ್ಲಿ ಜಾರಿಯಲ್ಲಿದ್ದ ಶಿಕ್ಷಣ ನೀತಿಯನ್ನು ಕಿತ್ತೊಗೆದು ಬಿಜೆಪಿ ಸರ್ಕಾರ ಜಾರಿಗೆ ತರಲಿಲ್ಲವೇ? ಅದು ಕೇವಲ ಕಾರ್ಯನೀತಿಯ ಬದಲಾವಣೆಯಾಗಿರದೆ, ನೀತಿ ನಿರೂಪಣೆಯ ಬದಲಾವಣೆಯೂ ಆಗಿರಲಿಲ್ಲವೇ’ ಎಂದೂ ಪ್ರಶ್ನಿಸಿದ್ದಾರೆ.

## ಎಕ್ಸ್‌ಪ್ರೆಸ್ ಹೆದ್ದಾರಿಯಲ್ಲಿ ಸರಣಿ ಅಫಘಾತ

**ರಾಮನಗರ:** ಬಿಡದಿ ಬಳಿಯ ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್ ಹೆದ್ದಾರಿ ನೆಲ್ಲಿಗುಂಟಕೆರೆ ಬಳಿ ಶುಕ್ರವಾರ ಬೆಳಿಗ್ಗೆ ಲಾರಿ, ಕೆಎಸ್‌ಆರ್‌ಟಿಸಿ ಸ್ಲೀಪರ್ ಬಸ್ ಹಾಗೂ ಎರಡು ಕಾರುಗಳ ನಡುವೆ ಸರಣಿ ಅಪಘಾತ ನಡೆದಿದೆ.

ಘಟನೆಯಲ್ಲಿ ಕಾರಿನಲ್ಲಿದ್ದ ಕೆಲವರಿಗೆ ಸಣ್ಣಪುಟ್ಟ ಗಾಯಗಳಾಗಿದ್ದು, ಚಿಕಿತ್ಸೆ ಕೊಡಿಸಲಾಗಿದೆ. ಮೂರೂ ವಾಹನಗಳ ಮುಂಭಾಗ ಜಖಂಗೊಂಡಿದೆ. ಬೆಂಗಳೂರು ಕಡೆಗೆ ಹೋಗುತ್ತಿದ್ದ ಲಾರಿ ಹಿಂದಿಕ್ಕುವ ಭರದಲ್ಲಿ ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿ ಹೊಡೆದಿದೆ. ಘಟನೆಯಿಂದಾಗಿ ವಿಚಲಿತಗೊಂಡ ಪಕ್ಕದ ಪಥದಲ್ಲಿ ಹಿಂದೆ ಬರುತ್ತಿದ್ದ ಕಾರು ಚಾಲಕ ಮುಂದೆ ಹೋಗುತ್ತಿದ್ದ ಕಾರಿಗೆ ಡಿಕ್ಕಿ ಹೊಡೆದಿದ್ದಾರೆ ಎಂದು ಪೊಲೀಸರು ತಿಳಿಸಿದರು. ಪ್ರಕರಣ ದಾಖಲಾಗಿದೆ.

## ಕೌಟುಂಬಿಕ ಕಲಹ: ಪತ್ನಿ ಕೊಲೆ

**ಬೆಂಗಳೂರು:** ಕಾಮಾಕ್ಷಿಪಾಳ್ಯ ಠಾಣೆ ವ್ಯಾಪ್ತಿಯಲ್ಲಿ ಚಿಕ್ಕ ತಾಯಿ (43) ಎನ್ನುವವರನ್ನು ಕೊಲೆ ಮಾಡಲಾಗಿದ್ದು, ಕೃತ್ಯ ಎಸಗಿದ ಆರೋಪದ ಮೇಲೆ ಪತಿ ನಾಗರತ್ನಂ ಅವರನ್ನು ಪೊಲೀಸರು ಬಂಧಿಸಿದ್ದಾರೆ.

‘ಕರೇಕಲ್ಲು ಬಳಿಯ ಗುರುಪ್ರಿಯಾ ಚೌಟ್ರಿ ರಸ್ತೆ ನಿವಾಸಿ ಚಿಕ್ಕತಾಯಿ ಅವರನ್ನು ಆಯುಧದಿಂದ ಹೊಡೆದು ಗುರುವಾರ ರಾತ್ರಿ ಕೊಲೆ ಮಾಡಲಾಗಿದೆ. ಮಗ ರಾಜುವಿನ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ. ಗುರುಪ್ರಿಯಾ ಚೌಟ್ರಿ ರಸ್ತೆಯ ಮನೆಯಲ್ಲಿ ಮಗನ ಜೊತೆ ದಂಪತಿ ವಾಸವಿದ್ದರು. ನಾಗರತ್ನಂ, ಮದ್ಯ ವ್ಯಸನಿ. ಭದ್ರತಾ ಸಿಬ್ಬಂದಿ ಕೆಲಸ ಮಾಡುತ್ತಿದ್ದ. ನಿತ್ಯವೂ ಮದ್ಯ ಕುಡಿದು ಬಂದು ಪತ್ನಿ ಜೊತೆ ಜಗಳ ಮಾಡುತ್ತಿದ್ದ. ಹಲವು ಬಾರಿ ಹಲ್ಲೆ ಸಹ ಮಾಡಿದ್ದ’ ಎಂದು ಪೊಲೀಸರು ತಿಳಿಸಿದರು.

‘ಮಗ ರಾಜು, ಕಾರ್ಖಾನೆಯೊಂದರಲ್ಲಿ ಕೆಲಸ ಮಾಡುತ್ತಿದ್ದಾರೆ. ಗುರುವಾರ ರಾತ್ರಿ 8 ಗಂಟೆಗೆ ರಾತ್ರಿ ಪಾಳಿಯ ಕೆಲಸಕ್ಕೆ ಹೋಗಿದ್ದರು. ಇದೇ ವೇಳೆ ಪತ್ನಿ ಜೊತೆ ಜಗಳ ತೆಗೆದಿದ್ದ ನಾಗರತ್ನಂ, ಆಯುಧದಿಂದ ಹೊಡೆದು ಕೊಲೆ ಮಾಡಿದ್ದ. ಸೋಫಾ ಮೇಲೆ ಮೃತದೇಹ ಇರಿಸಿ, ಸ್ಥಳದಿಂದ ಪರಾರಿಯಾಗಿದ್ದ.’

‘ದಂಪತಿ ಜಗಳ ಗಮನಿಸಿದ್ದ ಸಂಬಂಧಿಕರು, ಮಗನಿಗೆ ಕರೆ ಮಾಡಿ ವಿಷಯ ತಿಳಿಸಿದ್ದರು. ಕಾರ್ಖಾನೆಯಿಂದ ಮನೆಗೆ ಬಂದಿದ್ದ ಮಗನಿಗೆ ತಾಯಿಯ ಮೃತದೇಹ ಕಂಡಿತ್ತು. ಬಳಿಕವೇ ಠಾಣೆಗೆ ಮಾಹಿತಿ ನೀಡಿದ್ದರು. ಸ್ಥಳಕ್ಕೆ ಹೋಗಿ ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆಂದು ಆಸ್ಪತ್ರೆಗೆ ಸಾಗಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

## ಬೆಂಗಳೂರು ರೇಸ್

### ಪ್ರಾಣ ಗೆಲ್ಲುವ ನಿರೀಕ್ಷೆ

**ಆರ್.ಆರ್.ಬೈರಾಮ್ಜಿ ಮೆಮೋರಿಯಲ್ ಕಪ್ ಶನಿವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಪ್ರಾಣ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1.30ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:**

1ನೇ ರೇಸ್: ಸೆರಾಯ್ 3, ರಿಕ್ರಿಯೇಟರ್ 2, ಮಾಸ್ಟರ್ ಆಫ್ ಕರೇಜ್ 1
2ನೇ ರೇಸ್: ಗೋಲ್ಡನ್ ಪೀಕ್ಸ್ 6, ಸ್ನೋ ಪೀಯರ್ಸರ್ 5, ಆಗಸ್ಟ್ 1
3ನೇ ರೇಸ್: ಅರೇಲಿನ 1, ಪ್ಲಾನೆಟ್ ರಾಯಲ್ 5, ಬ್ರೀಝ್ ಬ್ಲಸ್ಟರ್ 7
4ನೇ ರೇಸ್: ಆಲ್ಡಿವ 1, ವಂಡರ್ ವುಮನ್ 6, ಆರ್ಟ್ ಗ್ಯಾಲರಿ 2
5ನೇ ರೇಸ್: ಸ್ಯಾಂಟೊರಿನೊ 5, ಪ್ಲೇಸ್ ವೆಂಡೋಮ್ 6, ಲಾಸ್ಟ್ ವಿಶ್ 2
6ನೇ ರೇಸ್: ಪ್ರಾಣ 9, ಫಾಸ್ಟ್ ಪೇಸ್ 1, ಕ್ವಾರ್ 3
7ನೇ ರೇಸ್: ಸಿರೇನಿಯಸ್ 5, ಎರಿಡಾನಿ 7, ವಿಕ್ಟೋರಿಯಾ ಪಂಚ್ 1
8ನೇ ರೇಸ್: ಮೈಟಿ ಸ್ವಾಲೊ 8, ಕ್ಲಿಮ್ಟ್ 4, ಬ್ಲೂಸ್ ಬಲ್ಲದ್ 2

ಉತ್ತಮ ಬೆಟ್: ಅರೇಲಿನ

| ಜಾಕ್‌ಪಾಟ್ | 1ನೇ ಟ್ರಿಬಲ್ | 2ನೇ ಟ್ರಿಬಲ್ |
|---|---|---|
| 4,5,6,7,8 | 3,4,5 | 6,7,8 |

PUBLIC NOTICE

NOTICE is hereby given to the public that we are investigating the right, title, interest, benefits, entitlements of whatsoever nature of the respective owners of the respective Survey Numbers, as mentioned hereinbelow, all are situated at Samethanahalli Village, Anugondanahalli Hobli, Hosakote Taluk, Bangalore Rural District, which is more particularly described in the Schedule hereunder written and hereinafter called “**Schedule Property**”. ALL persons including an individual, a Hindu Undivided Family, a company, banks, financial institution(s), non- banking financial institution(s), a firm, an association of persons or a body of individuals whether incorporated or not, lenders and/or creditors having any objection, claim, right, title and/or interest in respect of Schedule Property or any part or portion thereof by way of sale, memorandum of understanding, exchange, mortgage, pledge, charge, gift, trust, inheritance, succession, possession, lease, tenancy, maintenance easement, license, bequeath, share, assignment, lien, attachment, development rights, right of way, lis pendens, reservation, agreement, FSI consumption, development rights, or any liability or commitment or otherwise or demand of any nature whatsoever are hereby requested to inform the same in writing, supported with the original documents, to the undersigned having their office at 6/12, Gurappa Avenue, Primrose Road Bengaluru 560 025 within a period of **14 (Fourteen) days** from the date of publication of this notice, failing which, the claim or claims, if any, of such person or persons shall be considered to have been waived and/or abandoned.

**SCHEDULE PROPERTY**

**Item No. 01 :**
All that piece and parcel of residentially converted land bearing Survey No. 10/4 (old Survey No. 10/1) measuring 37 Guntas and 0-02 ¼ Gunta of “A” Kharab measuring in all 39 ¼ Guntas situated at Samethanahalli village, Anugondanahalli Hobli, Hosakote Taluk, and bounded by;
EAST : Property in Survey No 10 belonging to Krishnappa;
WEST : Property in Survey No 13 belonging to Rathanma and Gowramma;
NORTH : Property in Survey No 12/1 and
SOUTH : Property in Survey No 10/5.

**Item No. 02 :**
All that piece and parcel of residentially converted land bearing Survey No. 10/5 (old Survey No. 10/4) measuring 10 Guntas and 0-01 ¼ Gunta of “A” Kharab, measuring in all 11 ¼ Guntas situated at Samethanahalli village, Anugondanahalli Hobli, Hosakote Taluk, and bounded by;
EAST : Property in Survey No 10/2; WEST : Property in Survey No 13;
NORTH : Property in Survey No 10/4; and SOUTH : Property in Survey No 10/6.

**Item No. 03 :**
All that piece and parcel of residentially converted land bearing Survey No. 10/6 (old Survey No. 10/4) measuring 10 Guntas and 0-01 ¼ Gunta of “A” Kharab, in all measuring 11 ¼ Guntas situated at Samethanahalli village, Anugondanahalli Hobli, Hosakote Taluk, and bounded by;
EAST : Property in Survey Nos. 10/1 and 10/2; WEST : Property in Survey No 13;
NORTH : Property in Survey No 10/5; and SOUTH : Property in Survey No 10/7.

**Item No. 04 :**
All that piece and parcel of residentially converted land bearing Survey No. 11/17 (Old Survey No. 11/1B), measuring 14 Gunats, and 1 ½ Guntas of Kharab, in all measuring 15 ½ Guntas situated at Samethanahalli Village, Anugondanahalli Hobli, Hosakote Taluk, Bangalore Rural District, and bounded by;
EAST : Road; WEST : Survey No. 12/1;
NORTH : Survey No. 11/1A; and SOUTH : Remaining land in Survey No. 11/1B.

**Item No. 05 :**
All that piece and parcel of residentially converted land bearing Survey No. 12/1 (earlier bearing Survey No. 12), measuring 01 Acre 30 Gunats, and 05 Guntas of kharab, in all measuring 1 Acre 35 Guntas situated at Samethanahalli Village, Anugondanahalli Hobli, Hosakote Taluk, Bangalore Rural District and bounded by;
EAST : Land in Survey No. 11 (belongs to Pavan C and children of Malur Narayanappa and Marappa, Pillabbaiah, and Kenchappa;
WEST : Chanal;
NORTH : Land in Survey No. 12/2; and
SOUTH : Land in Survey No. 10 & 13 belongs to Venkataramanappa urf Appaiah and Bommanna Bande Appaiah Land.

**Item No. 06 :**
All that piece and parcel of residentially converted land bearing Survey No. 34/3 (old Survey No. 34), measuring 01 Acre, and ¼ Gunta of kharab, measuring in all about 01 Acre ¼ Gunta, situated at Samethanahalli Village, Anugondanahalli Hobli, Hosakote Taluk, Bangalore Rural District and bounded by;
EAST : Land bearing Survey No. 34/2 belongs to Muniyappa urf Dodda Muniyappa and Kaluve;
WEST : Land in Survey No. 34/4;
NORTH : Land in Survey No. 35 belongs to Munichikkappa and Badrappa; and
SOUTH : Land in Survey No. 33 belongs to Munichikkappa and Badrappa.

**Item No. 07 :**
All that piece and parcel of residentially converted land bearing Survey No. 34/4 (old Survey No. 34), measuring 01 Acre, and ¼ Gunta of kharab, measuring in all about 01 Acre ¼ Gunta, situated at Samethanahalli Village, Anugondanahalli Hobli, Hosakote Taluk, Bangalore Rural District and bounded by;
EAST : Land bearing Survey No. 34/3;
WEST : Land in Survey No. 31 belongs to Venugopal Naidu;
NORTH : Land in Survey No. 35 belongs to Munichikkappa and Badrappa; and
SOUTH : Land in Survey No. 33 belongs to Munichikkappa and Badrappa,

**Item No. 8 :**
All that piece and parcel of the residentially converted land bearing Survey No. 10/7 (old Survey No. 10/4) measuring 37 Guntas and 3 ¼ Guntas of “A” Kharab land, admeasuring 1 Acre ¼ Guntas and situated at Samethanahalli village, Anugondanahalli Hobli, Hoskote Taluk and bounded as follows:
EAST : Property in Survey No 10/1; WEST : Property in Survey No 13;
NORTH : Property in Survey No 10/6; and SOUTH : Property in Survey No 9

Dated: 15/07/2023

**Mr. S T Prashantha Kumar, Mr. B.C. Keerthi Kishore**
**Fox Mandal & Associates,** Solicitors & Advocates,
FM House, 6/12, Primrose Road, Bangalore 560025,
Karnataka, India. Phone: +91 80 2559 5911

# ವಿಐಎಸ್‌ಎಲ್ ಬಂದ್ ಬೇಡ: ಕೇಂದ್ರಕ್ಕೆ ರಾಜ್ಯ ಪತ್ರ

ನವದೆಹಲಿ: ಭದ್ರಾವತಿಯಲ್ಲಿರುವ ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯನ್ನು (ವಿಐಎಸ್‌ಎಲ್) ಮುಚ್ಚಬಾರದು ಎಂದು ಒತ್ತಾಯಿಸಿ ಕೇಂದ್ರ ಉಕ್ಕು ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಹಾಗೂ ಭಾರತೀಯ ಉಕ್ಕು ಪ್ರಾಧಿಕಾರದ ಅಧ್ಯಕ್ಷರಿಗೆ ಕರ್ನಾಟಕ ಸರ್ಕಾರ ಮತ್ತೊಮ್ಮೆ ಪತ್ರ ಬರೆದಿದೆ.

'ಕಾರ್ಖಾನೆಯನ್ನು ಪುನರುಜ್ಜೀವನಗೊಳಿಸಲು ಕೇಂದ್ರ ಸರ್ಕಾರ ಕೈಗೊಂಡ ಎಲ್ಲ ಕ್ರಮಗಳು ವಿಫಲಗೊಂಡ ಕಾರಣ ಕಾರ್ಖಾನೆಯನ್ನು ಮುಚ್ಚಲು ತೀರ್ಮಾನಿಸಲಾಗಿದೆ' ಎಂದು ಉಕ್ಕು ಸಚಿವರು ಲೋಕಸಭೆಗೆ ತಿಳಿಸಿದ್ದರು.

ಸಂಸ್ಥೆ ಖಾಸಗೀಕರಣ ಮಾಡಲು ಕೇಂದ್ರ ಸಚಿವ ಸಂಪುಟವು 2016ರಲ್ಲಿ ಒಪ್ಪಿಗೆ ನೀಡಿತ್ತು. ಸಂಸ್ಥೆಯನ್ನು ಸಂಪೂರ್ಣ ವಾಗಿ ಮಾರಾಟ ಮಾಡಲು ಹೂಡಿಕೆ ಮತ್ತು ಸಾರ್ವಜನಿಕ ಆಸ್ತಿ ನಿರ್ವಹಣಾ ಇಲಾಖೆಯು (ಡಿಐಪಿಎಎಂ) ಈ ಹಿಂದೆ ಬಿಡ್ ಕರೆದಿತ್ತು. ಬಿಡ್‌ದಾರರು ಆಸಕ್ತಿ ವಹಿಸದ ಕಾರಣಕ್ಕೆ ಖಾಸಗೀಕರಣ ಮಾಡುವ ಪ್ರಕ್ರಿಯೆಯನ್ನು ಕೇಂದ್ರ 2022ರ ನವೆಂಬರ್‌ನಲ್ಲಿ ಕೈ ಬಿಟ್ಟಿತ್ತು. ನಂತರ ಸರ್ಕಾರವು ಕಾರ್ಖಾನೆಯನ್ನು ಮುಚ್ಚಲು ತೀರ್ಮಾನಿಸಿತ್ತು.

'ಕಾರ್ಖಾನೆಯನ್ನು ಮುಚ್ಚಬಾರದು ಎಂದು ಒತ್ತಾಯಿಸಿ ರಾಜ್ಯ ಸರ್ಕಾರವು 2019, 2020 ಹಾಗೂ 2021ರಲ್ಲಿ ಪತ್ರ ಬರೆದು ಒತ್ತಾಯಿಸಿತ್ತು. ಆದರೆ, ಕಾರ್ಖಾನೆಯನ್ನು ಬಂದ್ ಮಾಡಲು ಕೇಂದ್ರ ಸರ್ಕಾರ ತೀರ್ಮಾನಿಸಿದೆ. ಅದರ ಬದಲು ಉಕ್ಕು ಪ್ರಾಧಿಕಾರವು ಕಾರ್ಖಾನೆಗೆ ಹೆಚ್ಚಿನ ಬಂಡವಾಳ ಹೂಡಬೇಕು. ಅಗತ್ಯವಿದ್ದರೆ, ಖಾಸಗಿಯವರಿಗೆ ವಹಿಸಲು ಮತ್ತೊಮ್ಮೆ ಬಿಡ್ ಕರೆಯಬೇಕು' ಎಂದು ರಾಜ್ಯ ಸರ್ಕಾರವು ಪತ್ರದಲ್ಲಿ ತಿಳಿಸಿದೆ.

**ಕುವೆಂಪು ವಿಶ್ವವಿದ್ಯಾಲಯ**
ವಿಶ್ವವಿದ್ಯಾಲಯ ಕಾರ್ಯಾಲಯ, ಜ್ಞಾನ ಸಹ್ಯಾದ್ರಿ, ಶಂಕರಘಟ್ಟ – 577451,
No.KU/HRM-5/ / 2023-24 Date: 14.07.2023
**ADDENDUM**
ANNEXURE IV and ANNEXURE-V are updated in the E-tender for the Supply of Man Power Services through Outsourcing (No.KU.HRM-5/1232:2023-24 Dated: 01.07.2023)
ANNEXURE IV and ANNEXURE-VI are updated in the E-tender for the Supply of Man Power for Cleaning. Maintenance Work, Gardening/Horticulture and Security Services on Outsourcing basis (No.KU/EST: MP:1230:2023-24 Dated:06.07.2023)
ಸಹಿ/– ಕುಲಸಚಿವ.
ವಾ.ಸಾ.ಸಂ.ಇ/ಕೆ.ಎಸ್.ಎಂ.ಸಿ.ಎ/ಶಿ/63/07/23–24/204

**ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಹೊಸಪೇಟೆ–583203**
ಸಂಖ್ಯೆ:ಕೃಉಮಾಸ/ಅಭಿಕೆ/ಹೊ/ಟೆಂಡರ್/140/2023–24 ದಿನಾಂಕ:07.07.2023
**ಸಂಕ್ಷಿಪ್ತ ಇ–ಟೆಂಡರ್ ಪ್ರಕಟಣೆ**
ಹೊಸಪೇಟೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ವತಿಯಿಂದ 2023–24ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಡಿಯಲ್ಲಿ ಮಂಜೂರಾದ ವಿವಿಧ 03 ಸಂಖ್ಯೆ ಅಭಿವೃದ್ಧಿ ಕಾಮಗಾರಿಗಳನ್ನು ಕಾರ್ಯಗತಗೊಳಿಸಲು ಕರ್ನಾಟಕ ಸರ್ಕಾರದ ಲೋಕೋಪಯೋಗಿ ಮತ್ತು ಒಳನಾಡು ಜಲಸಾರಿಗೆ ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕ ಅಧಿನಿಯಮ 1999 ನಿಯಮಗಳು 2020ರ ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮದನ್ವಯ ಐಟಂವಾರು ಟೆಂಡರುಗಳನ್ನು ಇ–**ಪ್ರೊಕ್ಯೂರ್‌ಮೆಂಟ್** ಮೂಲಕ ದ್ವಿ ಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳನ್ನು ಸಮಿತಿ ಕಾರ್ಯಾಲಯದ ದೂ.ಸಂ:08394 231652 ಹಾಗೂ ಇ–ಪೋರ್ಟಲ್ ಸಹಾಯವಾಣಿ ಸಂಖ್ಯೆ: 91–8046010000, **ಅಥವಾ** 91–8068948777 ಮತ್ತು ವೆಬ್‌ಸೈಟ್ **https://kppp.karnataka.gov.in/** ಮಾಹಿತಿಗಾಗಿ ಸಂಪರ್ಕಿಸಬಹುದು.
ಕಾಮಗಾರಿಗಳ ವಿವರ : **APMC/2023-24/BD/WORK_INDENT11.**
ಟೆಂಡರ್‌ಗಿಟ್ಟ ಮೊತ್ತ: **55,56,766–08**
**ವೇಳಾಪಟ್ಟಿ:** 1.ಭರ್ತಿ ಮಾಡಿದ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: **28–07–2023 ಸಂಜೆ 4–00 ಗಂಟೆಗೆ.** 2.ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **30–07–2023 ಸಂಜೆ 4–30 ಗಂಟೆಗೆ.** 3.ಆರ್ಥಿಕ ಬಿಡ್ ತೆರೆಯುವ ದಿನಾಂಕ: **07–08–2023 ಬೆಳಿಗ್ಗೆ 11–00 ಗಂಟೆಗೆ**
ಸಹಿ/– ಕಾರ್ಯದರ್ಶಿ, ಕೃ.ಉ.ಮಾ.ಸ.,ಹೊಸಪೇಟೆ
ಸಹಿ/–ಆಡಳಿತಾಧಿಕಾರಿ, ಕೃ.ಉ.ಮಾ.ಸ., ಹೊಸಪೇಟೆ
ಡಿಐಪಿಆರ್/ವಿಜಯನಗರ/69/ಕೆಎಸ್‌ಎಂಸಿಎ/2023–24

ದಿನಕ್ಕೆ 300 ಜನರಿಗೆ ಮಾತ್ರ ಅವಕಾಶ • ಚಾರಣ ಪ್ರಿಯರಿಗೆ ನಿರಾಸೆ ತಂದ ಅರಣ್ಯ ಇಲಾಖೆ ನಿಯಮ

# ಕುದುರೆಮುಖ; ಚಾರಣಕ್ಕೆ ನೂಕುನುಗ್ಗಲು!

• ರವಿ ಕೆಳಂಗಡಿ



ಕುದುರೆಮುಖ ಗಿರಿಶ್ರೇಣಿಯ ಮನೋಹರ ನೋಟ

ಕಳಸ (ಚಿಕ್ಕಮಗಳೂರು): ಮಲೆನಾಡಿನಲ್ಲಿ ಮಳೆಗಾಲದ ಚಾರಣ ಜನಪ್ರಿಯಗೊಳ್ಳುತ್ತಿದ್ದು, ಕುದುರೆಮುಖ ಗಿರಿಶ್ರೇಣಿಯನ್ನು ಏರಲು ವಾರಾಂತ್ಯದಲ್ಲಿ ನೂರಾರು ಯುವಜನರು ರಾಜ್ಯದ ವಿವಿಧೆಡೆಯಿಂದ ಕುದುರೆಮುಖದತ್ತ ಮುಖ ಮಾಡುತ್ತಿದ್ದಾರೆ.

ದಿನಕ್ಕೆ 300 ಜನರಿಗೆ ಮಾತ್ರ ಚಾರಣಕ್ಕೆ ಅವಕಾಶ ಎಂಬ ಅರಣ್ಯ ಇಲಾಖೆ ನಿಯಮ ಚಾರಣ ಪ್ರಿಯರಲ್ಲಿ ನಿರಾಶೆ ತರುತ್ತಿದೆ. ಕಳೆದ ಬೇಸಿಗೆಯಲ್ಲಿ ಕಾಡ್ಗಿಚ್ಚಿನ ಕಾರಣಕ್ಕೆ ಕುದುರೆಮುಖ ಚಾರಣ ನಿಲ್ಲಿಸಲಾಗಿತ್ತು. ಜೂನ್ ತಿಂಗಳಿನಿಂದ ಮತ್ತೆ ಅವಕಾಶ ನೀಡಲಾಗಿದ್ದು, ಆಸಕ್ತರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ.

'ಕಳೆದ ವರ್ಷ ದಿನವೊಂದಕ್ಕೆ 200 ಜನರಿಗೆ ಮಾತ್ರ ಅವಕಾಶ ನೀಡಲಾಗಿತ್ತು. ಈ ಬಾರಿ ವಾರಾಂತ್ಯದಲ್ಲಿ ಚಾರಣಕ್ಕೆ ಬರುತ್ತಿರುವವರ ಸಂಖ್ಯೆ ಸಾವಿರಕ್ಕೂ ಹೆಚ್ಚು ಇರುವುದರಿಂದ 300 ಜನರಿಗೆ ಅವಕಾಶವನ್ನು ನೀಡಿದೆ. ಚಾರಣಕ್ಕೆ ಹೋಗಲು ಬಯಸುವವರಿಗೆ ಆನ್‌ಲೈನ್ ಮೂಲಕ (https://kudremukhanationalpark.in/) ಮುಂಗಡ ಬುಕಿಂಗ್ ಮಾಡುವ ಅವಕಾಶ ಕಲ್ಪಿಸಲಾಗಿದೆ. ಈ ವರ್ಷ ಜುಲೈ ಮತ್ತು ಆಗಸ್ಟ್ ತಿಂಗಳ ಬಹುತೇಕ ವಾರಾಂತ್ಯದ ದಿನಗಳ ಚಾರಣದ ಬುಕಿಂಗ್ (300 ಜನರ ಮಿತಿಯಲ್ಲಿ) ಮುಗಿದಿದೆ' ಎಂಬುದು ಮೂಲಗಳ ಮಾಹಿತಿ.

'ಸಂಸೆ ಗ್ರಾಮದಲ್ಲಿ 30ಕ್ಕೂ ಹೆಚ್ಚು ಹೋಂ ಸ್ಟೇ ಗಳಿವೆ. ಕುದುರೆಮುಖ ಚಾರಣಕ್ಕೆ ಬರುವ ಪ್ರವಾಸಿಗರೇ ಇಲ್ಲಿನ ಅತಿಥಿಗಳು. ಆದರೆ, ಸ್ಥಳೀಯ ಹೋಂ ಸ್ಟೇ ಅತಿಥಿಗಳಿಗೆ ಚಾರಣಕ್ಕೆ ಅವಕಾಶ ಸಿಗದೆ ಅವರು ನಿರಾಸೆಯಿಂದ ಮರಳುವಂತಾಗಿದೆ' ಎಂದು ಹೋಂ ಸ್ಟೇ ಮಾಲೀಕ ಕಡೇಪಾಲ್ ಪ್ರದೀಪ್ ಹೇಳಿದರು.

ಬೆಂಗಳೂರು ಮೂಲದ ಪ್ರವಾಸ ನಿರ್ವಹಣೆ ಸಂಸ್ಥೆಗಳು ಆನ್‌ಲೈನ್ ಮೂಲಕ ನೂರಿನ್ನೂರು ಟಿಕೆಟ್‌ಗಳನ್ನು ಬುಕ್ ಮಾಡುತ್ತಿವೆ. ಇದರಿಂದ ಸ್ಥಳೀಯ ಹೋಂ ಸ್ಟೇ ಅತಿಥಿಗಳಿಗೆ ಟಿಕೆಟ್ ಸಿಗುತ್ತಿಲ್ಲ. ಪರಿಣಾಮವಾಗಿ ಅನೇಕ ಹೋಂ ಸ್ಟೇ ಗಳಿಗೆ ಈಗ ಜನರೇ ಬರುತ್ತಿಲ್ಲ ಎನ್ನುತ್ತಾರೆ ಅವರು.

'300 ಜನರ ಮಿತಿ ದಾಟದ ಮೇಲೂ ಅರಣ್ಯ ಇಲಾಖೆಯು ಹೆಚ್ಚುವರಿ ಟಿಕೆಟ್‌ಗಳನ್ನು ನಿಯಮ ಬಾಹಿರವಾಗಿ 'ಕೊಡುತ್ತಿದೆ' ಎಂಬ ಸ್ಥಳೀಯರ ಆರೋಪವನ್ನು ವಲಯ ಅರಣ್ಯಾಧಿಕಾರಿ ಜ್ಯೋತಿ ಮಣಸಿನಕಾಯಿ ತಳ್ಳಿಹಾಕಿದರು.

ಆಗಸ್ಟ್‌ವರೆಗೆ ವಾರಾಂತ್ಯದ ಚಾರಣದ ಟಿಕೆಟ್‌ಗಳು ಸಿಗುತ್ತಿಲ್ಲ ಎಂಬ ಕಾರಣಕ್ಕೆ, ಕೆಲವರು ವಾರದ ಇತರ ದಿನಗಳಲ್ಲಿ ಕುದುರೆಮುಖ ಗಿರಿ ಏರುವ ಯೋಜನೆ ರೂಪಿಸುತ್ತಿದ್ದಾರೆ. ಕುರಿಂಜಾಲು, ಬಂಡಾಜೆ, ಬಲ್ಲಾಳರಾಯನದುರ್ಗ ಮತ್ತು ನೇತ್ರಾವತಿ ಚಾರಣದ ಸಾಧ್ಯತೆಗಳ ಬಗ್ಗೆಯೂ ಪ್ರವಾಸಿಗರು ಗಮನ ಹರಿಸುತ್ತಿದ್ದಾರೆ.

### ಒಂದು ಐಡಿ ಮೂಲಕ 10 ಟಿಕೆಟ್

'ಒಂದು ಇಮೇಲ್ ಐಡಿಯ ಮೂಲಕ ಗರಿಷ್ಠ 10 ಜನರಿಗೆ ಬುಕ್ಕಿಂಗ್ ಮಾಡುವ ಅವಕಾಶ ಇದೆ. ಈ ನಿಯಮದ ಅಡಿಯಲ್ಲೇ ಜನರು ಚಾರಣ ಬುಕಿಂಗ್ ಮಾಡುತ್ತಿದ್ದಾರೆ. ಬುಕಿಂಗ್ ಮಾಡಿದ ವ್ಯಕ್ತಿ ಜೊತೆಗೆ ಇದ್ದರೆ ಮಾತ್ರ ಆ ತಂಡವನ್ನು ಚಾರಣಕ್ಕೆ ಕಳಿಸುತ್ತೇವೆ' ಎಂದು ಕುದುರೆಮುಖ ವನ್ಯಜೀವಿ ವಿಭಾಗದ ಉಪ ವಲಯ ಅರಣ್ಯಾಧಿಕಾರಿ ಹರೀಶ್ ಹೇಳಿದರು. ಸ್ಥಳೀಯರಿಗೆ ಅವಕಾಶ ಸಿಗುತ್ತಿಲ್ಲ ಎಂಬ ದೂರಿನ ಬಗ್ಗೆ ಅವರ ಗಮನ ಸೆಳೆದಾಗ, 'ಕೆಲವೊಮ್ಮೆ ಬುಕಿಂಗ್ ಮಾಡಿದವರು ಬರದಿದ್ದಾಗ ಸ್ಥಳದಲ್ಲಿ ಇದ್ದವರಿಗೆ 300 ಜನರ ಮಿತಿ ಮೀರದಂತೆ ಟಿಕೆಟ್ ನೀಡುತ್ತೇವೆ' ಎಂದರು.

## ₹200ರ ಗಡಿ ದಾಟಿದ ಹುಣಸೆ ಹಣ್ಣು

ರಾಮನಗರ: ಟೊಮೆಟೊ ಹಣ್ಣಿನ ದರ ಗಗನಕ್ಕೇರಿರುವ ಬೆನ್ನಲ್ಲೇ ಇದಕ್ಕೆ ಪರ್ಯಾಯವಾಗಿ ಬಳಸುವ ಹುಣಸೆ ಹಣ್ಣಿನ ದರವೂ ದುಪ್ಪಟ್ಟಾಗಿದೆ. ಎರಡು–ಮೂರು ದಿನಗಳ ಹಿಂದೆ ಕೆ.ಜಿ.ಗೆ ₹100ರ ಗಡಿಯಲ್ಲಿದ್ದ ಹುಣಸೆ ದರ ಈಗ ₹200– 220ಕ್ಕೆ ಏರಿಕೆಯಾಗಿದೆ.

ನಗರದ ಮಾರುಕಟ್ಟೆ ಮತ್ತು ಅಂಗಡಿಗಳಲ್ಲಿ ಅತ್ಯುತ್ತಮ ಗುಣಮಟ್ಟದ ಹುಣಸೆ ದರ ₹200–220 ಇದ್ದರೆ ಮಧ್ಯಮ ₹170–200 ಹಾಗೂ ಮೂರನೇ ದರ್ಜೆ ಹುಣಸೆ ₹150–160 ತಲುಪಿದೆ.

## ಕಳಪೆ ಮೊಟ್ಟೆ: ಗುತ್ತಿಗೆದಾರರಿಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಹಾವೇರಿ: ಅಂಗನವಾಡಿ ಕೇಂದ್ರಗಳಿಗೆ ಕಳಪೆ ಮೊಟ್ಟೆ ಪೂರೈಸಿದ ದೂರಿನ ಕಾರಣದಿಂದ ಹಾವೇರಿ ಜಿಲ್ಲೆಯ ನಾಲ್ವರು ಗುತ್ತಿಗೆದಾರರಿಗೆ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಯ ನಿರ್ದೇಶನದ ಮೇರೆಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕರು ನೋಟಿಸ್ ಜಾರಿ ಮಾಡಿದ್ದಾರೆ.

ಎಷ್ಟು ತೂಕದ ಕೋಳಿಮೊಟ್ಟೆಗಳನ್ನು ತಿಂಗಳಿಗೆ ಯಾವ ದಿನಾಂಕದಿಂದ ಯಾವ ದಿನಾಂಕದವರೆಗೆ ಪೂರೈಸಲಾಗಿದೆ ಎಂಬ ಮಾಹಿತಿಯನ್ನು ಕಚೇರಿಗೆ ಸಲ್ಲಿಸಲು ಗುತ್ತಿಗೆದಾರರಿಗೆ ಸೂಚಿಸಲಾಗಿದೆ.

ಅಂಗನವಾಡಿ ಕೇಂದ್ರಗಳಿಗೆ ಖುದ್ದು ಭೇಟಿ ನೀಡಿ, ಪರಿಶೀಲಿಸಿ ಸ್ಪಷ್ಟವಾದ ವರದಿ ನೀಡಲು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕರಿಗೆ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಅಕ್ಷಯ ಶ್ರೀಧರ್ ಸೂಚಿಸಿದ್ದರು.

'ಅಂಗನವಾಡಿಗಳಿಗೆ ದಿಢೀರ್ ಭೇಟಿ ನೀಡಿ, ಯಾವ ರೀತಿಯ ಮೊಟ್ಟೆಗಳನ್ನು ಮಕ್ಕಳಿಗೆ ಕೊಡಲಾಗುತ್ತಿದೆ ಎಂಬುದನ್ನು ಪರಿಶೀಲಿಸುತ್ತೇವೆ. ಕಳಪೆ ಮೊಟ್ಟೆಗಳು ಕಂಡು ಬಂದರೆ ಸಂಬಂಧಪಟ್ಟವರ ವಿರುದ್ಧ ಕ್ರಮ ಜರುಗಿಸಲಾಗುವುದು' ಎಂದು ಅಕ್ಷಯ ಶ್ರೀಧರ್ ತಿಳಿಸಿದ್ದಾರೆ.

'ಪ್ರಜಾವಾಣಿ'ಯ ಜುಲೈ 13ರ ಸಂಚಿಕೆಯಲ್ಲಿ ಅಂಗನವಾಡಿಗಳಿಗೆ ಕಳಪೆ ಮೊಟ್ಟೆ ಪೂರೈಕೆಯಾಗುತ್ತಿರುವ ಕುರಿತು ವಿಶೇಷ ವರದಿ ಪ್ರಕಟವಾಗಿತ್ತು.

## ಅಕ್ರಮ ಗಣಿ: ಮುನಿರತ್ನಗೆ ನೋಟಿಸ್

ಬೆಂಗಳೂರು: ಅಕ್ರಮವಾಗಿ ಬಂಡೆಗಳನ್ನು ಸ್ಫೋಟಿಸಿ ಕಲ್ಲು ಗಣಿಗಾರಿಕೆ ನಡೆಸಿರುವ ಆರೋಪದಡಿ ದಾಖಲಾಗಿರುವ ಪ್ರಕರಣದ ವಿಚಾರಣೆಗೆ ಹಾಜರಾಗುವಂತೆ ರಾಜರಾಜೇಶ್ವರಿ ನಗರ ವಿಧಾನಸಭಾ ಕ್ಷೇತ್ರದ ಶಾಸಕ ಎನ್. ಮುನಿರತ್ನ ಅವರಿಗೆ ಚಿಕ್ಕಜಾಲ ಠಾಣೆ ಪೊಲೀಸರು ನೋಟಿಸ್ ನೀಡಿದ್ದು, ಕೆಲ ಷರತ್ತುಗಳನ್ನೂ ವಿಧಿಸಿದ್ದಾರೆ.

ಯಲಹಂಕ ತಹಶೀಲ್ದಾರ್ ಅನಿಲ್ ಅರೋಳಿಕರ್ ನೀಡಿರುವ ದೂರು ಆಧರಿಸಿ ಎಫ್‌ಐಆರ್ ದಾಖಲಿಸಿಕೊಂಡಿರುವ ಪೊಲೀಸರು, ದಾಖಲೆಗಳ ಪರಿಶೀಲನೆ ಮುಂದುವರಿಸಿದ್ದಾರೆ. ತಮ್ಮ ವಿರುದ್ಧದ ಆರೋಪದ ಬಗ್ಗೆ ಪ್ರತಿಕ್ರಿಯೆ ನೀಡಲು ಹಾಗೂ ದಾಖಲೆ ಒದಗಿಸುವಂತೆ ತಿಳಿಸಿ ಆರೋಪಿ ಮುನಿರತ್ನಗೆ ನೋಟಿಸ್ ಜಾರಿ ಮಾಡಲಾಗಿದೆ. 'ನೋಟಿಸ್ ಪ್ರತಿ ತಲುಪಿದ ಮೂರು ದಿನದೊಳಗಾಗಿ ತನಿಖಾಧಿಕಾರಿ ಎದುರು ವಿಚಾರಣೆಗೆ ಹಾಜರಾಗಬೇಕು. ಜಿಲೆಟಿನ್ ಕಡ್ಡಿ ಬಳಕೆ ಸಂಬಂಧ ತಮ್ಮ ಬಳಿ ಇರುವ ದಾಖಲೆಗಳನ್ನು ಒದಗಿಸಬೇಕು' ಎಂದು ನೋಟಿಸ್‌ನಲ್ಲಿ ತಿಳಿಸಲಾಗಿದೆ.

'ಪ್ರಕರಣದ ಸಾಕ್ಷಿದಾರರ ಮೇಲೆ ಪ್ರಭಾವ ಬೀರಬಾರದು. ಜೀವ ಬೆದರಿಕೆಯೊಡ್ಡಬಾರದು. ಸಾಕ್ಷ್ಯ ನಾಶಕ್ಕೆ ಯತ್ನಿಸಬಾರದು. ಷರತ್ತುಗಳನ್ನು ಉಲ್ಲಂಘಿಸಿದರೆ, ಕಾನೂನು ಕ್ರಮ ಕೈಗೊಳ್ಳಲಾಗುವುದು' ಎಂದೂ ನೋಟಿಸ್‌ನಲ್ಲಿ ಎಚ್ಚರಿಸಲಾಗಿದೆ.

ಕರ್ನಾಟಕ ಸರ್ಕಾರ
**ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ)**
No. RD 285 TNR 2020 Dated: 10-07-2023
ಕರ್ನಾಟಕ ಸರ್ಕಾರದ ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ)ಗೆ ಸಂಯೋಜನೆಯಾಗಿರುವ ನೋಂದಾಯಿತ ಸ್ವಾಯತ್ತ ಸಂಸ್ಥೆಯಾದ ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ ನಿರ್ದೇಶಕರ ಹುದ್ದೆಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ.
ಕೆಎಸ್‌ಎನ್‌ಡಿಎಂಸಿಯ ನಿರ್ದೇಶಕರ ಹುದ್ದೆಗೆ ನಿಯೋಜನೆ ಆಧಾರದ ಮೇಲೆ ನೇಮಕಾತಿಗಾಗಿ ರಾಜ್ಯ / ಕೇಂದ್ರ ಸರ್ಕಾರದಲ್ಲಿ ಅಥವಾ ರಾಜ್ಯ / ಕೇಂದ್ರ ಸರ್ಕಾರದ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. (ಹುದ್ದೆಯ ವೇತನ ಶ್ರೇಣಿ ರೂ. 90,500/– – 1,23,300 /– ಹೆಚ್ಚಿನ ಶ್ರೇಣಿಗಳಿಗೆ ವೇತನ ರಕ್ಷಣೆಯನ್ನು ನೀಡಲಾಗುವುದು) ಅಭ್ಯರ್ಥಿಯು ಕನ್ನಡದಲ್ಲಿ ವ್ಯವಹಾರ ಜ್ಞಾನ ಹೊಂದಿರುವುದರ ಜೊತೆಗೆ ಕೆಳಕಂಡ ಕನಿಷ್ಠ ಅಗತ್ಯ ವಿದ್ಯಾರ್ಹತೆ ಮತ್ತು ಅನುಭವ ಹೊಂದಿರಬೇಕು.
i) ಭೂವಿಜ್ಞಾನ/ ಅನ್ವಯಿಕ ಭೂವಿಜ್ಞಾನ/ಹೈಡ್ರಾಲಜಿ/ಅಗ್ರೋ–ಮೀಟಿಯರಾಲಜಿ/ ಭೌತಶಾಸ್ತ್ರ/ ಕೃಷಿ ವಿಜ್ಞಾನ(ಅಗ್ರಾನಮಿ) ವಿಷಯದಲ್ಲಿ ಸ್ನಾತಕೋತ್ತರ ಪದವಿ. (ii) ಸ್ನಾತಕೋತ್ತರ ಪದವಿಯಲ್ಲಿ ಅಧ್ಯಯನ ಮಾಡಿರುವ ವಿಷಯದಲ್ಲಿ ಪಿಹೆಚ್. ಡಿ ಪದವಿ. (iii) ಸಂಬಂಧಪಟ್ಟ ಕ್ಷೇತ್ರದಲ್ಲಿ 20 ವರ್ಷಗಳ ಅನುಭವ (ಖಾಯಂ ಸೇವೆ). ಇದರಲ್ಲಿ 6 ವರ್ಷ ಪ್ರಧಾನ ವೈಜ್ಞಾನಿಕಾಧಿಕಾರಿ/ಜಂಟಿ ನಿರ್ದೇಶಕ ಅಥವಾ ತತ್ಸಮಾನ ದರ್ಜೆಯಲ್ಲಿ ಅನುಭವ ಹೊಂದಿರಬೇಕು. (iv) ಹೊರಗಿನ ಅಭ್ಯರ್ಥಿಗಳಿಗೆ ವಯಸ್ಸು 50 ವರ್ಷಗಳಿಗೆ ಮೇಲ್ಪಟ್ಟಿರಬೇಕು ಮತ್ತು 55 ವರ್ಷಗಳಿಗಿಂತ ಕೆಳಪಟ್ಟಿರಬೇಕು. (v) ಆಂತರಿಕ ಅಭ್ಯರ್ಥಿಗಳಿಗೆ ವಯಸ್ಸು 50 ವರ್ಷಗಳಿಗೆ ಮೇಲ್ಪಟ್ಟಿರಬೇಕು ಮತ್ತು 58 ವರ್ಷಗಳಿಗೆ ಕೆಳಪಟ್ಟಿರಬೇಕು. ಹೆಚ್ಚಿನ ವಿವರಗಳನ್ನು www.ksndmc.org ಇಂದ ಪಡೆದುಕೊಳ್ಳಬಹುದು. ಅರ್ಹ ಅಭ್ಯರ್ಥಿಗಳು ತಮ್ಮ ಅರ್ಜಿಯನ್ನು ಅಧಿಕೃತ ದಾಖಲೆಗಳೊಂದಿಗೆ ತಮ್ಮ ಮೇಲಾಧಿಕಾರಿಯ ಅನುಮೋದನೆಯೊಂದಿಗೆ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ), ಕರ್ನಾಟಕ ಸರ್ಕಾರ, ಕೊಠಡಿ ಸಂಖ್ಯೆ 627, 6 ನೇ ಮಹಡಿ, 1 ನೇ ಗೇಟ್, ಬಹುಮಹಡಿ ಕಟ್ಟಡ, ಬೆಂಗಳೂರು– 560001 ವಿಳಾಸಕ್ಕೆ ನೊಂದಾಯಿತ ಅಂಚೆಯ ಮೂಲಕ/ ಇ–ಮೇಲ್ secyrelief-rev@karnataka.gov.in, secy.dm@gmail.com ಗೆ ದಿನಾಂಕ:10.08.2023 ರೊಳಗೆ ಸಲ್ಲಿಸಬೇಕು. ಲಕೋಟೆಯ ಎಡಭಾಗದ ಮೂಲೆಯಲ್ಲಿ "ಕೆಎಸ್‌ಎನ್‌ಡಿಎಂಸಿಯ ನಿರ್ದೇಶಕರ ಹುದ್ದೆಗೆ ಅರ್ಜಿ" ಎಂದು ಬರೆದು ಅಗತ್ಯ ದೃಢೀಕೃತ ದಾಖಲೆಗಳನ್ನೊಳಗೊಂಡ ಅರ್ಜಿಯ ಲಕೋಟೆಯನ್ನು ಸಲ್ಲಿಸಬೇಕು. ಹೆಚ್ಚಿನ ವಿವರಗಳನ್ನು www.ksndmc.org ಇಂದ ಪಡೆದುಕೊಳ್ಳಬಹುದು.
DIPR/CP/543/Zenkar/2023-24

## ವೈದ್ಯಕೀಯ ಪ್ರವೇಶ: ಅರ್ಜಿ ಸಲ್ಲಿಕೆಗೆ 21 ಕೊನೆ ದಿನ

ಬೆಂಗಳೂರು: 'ನೀಟ್'ನಲ್ಲಿ ತೇರ್ಗಡೆ ಹೊಂದಿರುವ ರಾಜ್ಯದ ಅರ್ಹ ಅಭ್ಯರ್ಥಿಗಳು ವೈದ್ಯಕೀಯ ಕೋರ್ಸ್ ಪ್ರವೇಶಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಜುಲೈ 21ರವರೆಗೆ ಅವಕಾಶ ನೀಡಿದೆ.

ವೈದ್ಯಕೀಯ, ದಂತ ವೈದ್ಯಕೀಯ, ಆಯುರ್ವೇದ, ಯುನಾನಿ ಮತ್ತು ಹೋಮಿಯೋಪತಿ ಕೋರ್ಸ್‌ಗಳ ಅಭ್ಯರ್ಥಿಗಳಿಗೆ ಇದು ಅನ್ವಯವಾಗಲಿದೆ. ಆನ್‌ಲೈನ್ ಅರ್ಜಿ ತುಂಬಿದ ನಂತರ ನಿಗದಿತ ಶುಲ್ಕವನ್ನು ಜುಲೈ 22ರ ಸಂಜೆ 6ರ ಒಳಗೆ ಪಾವತಿಸಬೇಕು. ಮಾಹಿತಿಗೆ ಪ್ರಾಧಿಕಾರದ ವೆಬ್‌ಸೈಟ್ http://kea.kar.nic.in ನಲ್ಲಿರುವ ಸೂಚನೆಗಳನ್ನು ಪಾಲಿಸಬೇಕು ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕಿ ಎಸ್. ರಮ್ಯಾ ಮಾಹಿತಿ ನೀಡಿದ್ದಾರೆ.

ರಾಜ್ಯದಲ್ಲಿ ವೈದ್ಯಕೀಯ ಕೋರ್ಸ್‌ಗಳಿಗೆ ಪ್ರವೇಶ ಬಯಸುವ ಹೊರರಾಜ್ಯದ ಅಭ್ಯರ್ಥಿಗಳಿಗೆ ಮೀಸಲಾತಿ ಸವಲತ್ತುಗಳು ಅನ್ವಯಿಸುವುದಿಲ್ಲ. ಈಗಾಗಲೇ ಸಿಇಟಿ ಬರೆದು ದಾಖಲೆಗಳ ಪರಿಶೀಲನೆಗೆ ಹಾಜರಾದವರು ಮತ್ತೆ ಹಾಜರಾಗಬೇಕಾದ ಆವಶ್ಯಕತೆ ಇಲ್ಲ ಎಂದಿದ್ದಾರೆ.

## ವಿಧಾನಸೌಧದಲ್ಲಿ ನಮಾಜ್‌ಗೆ ಅವಕಾಶ ನೀಡಿದರೆ ಭಜನೆ ಪ್ರತಿರೋಧ: ಮುತಾಲಿಕ್

ಧಾರವಾಡ: 'ವಿಧಾನಸೌಧದಲ್ಲಿ ನಮಾಜ್ ಮಾಡಲು ಅವಕಾಶ ನೀಡಿದರೆ, ಅದರ ವಿರುದ್ಧ ಶ್ರೀರಾಮ ಸೇನೆಯಿಂದ ಅಲ್ಲಿ ದಿನವೂ ಹನುಮಾನ್ ಚಾಲೀಸಾ, ಭಜನೆ ಮಾಡುತ್ತೇವೆ' ಎಂದು ಶ್ರೀರಾಮಸೇನೆ ಅಧ್ಯಕ್ಷ ಪ್ರಮೋದ್ ಮುತಾಲಿಕ್ ಹೇಳಿದರು.

'ನಮಾಜ್ ಮಾಡಲು ವಿಧಾನ ಸೌಧದಲ್ಲಿ ಕೊಠಡಿ ನೀಡಬೇಕು ಎಂದು ಕೇಳಿರುವುದೇ ತಪ್ಪು. ವಿಧಾನಸೌಧ ಮಕ್ಕಾ, ಮದೀನ ಅಲ್ಲ' ಎಂದು ಅವರು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಏಕರೂಪ ನಾಗರಿಕ ಸಂಹಿತೆ (ಯುಸಿಸಿ) ರಚನೆ ಬೆಂಬಲಿಸಿ ಜುಲೈ 18 ರಿಂದ 28ರವರೆಗೆ ರಾಜ್ಯದಾದ್ಯಂತ ಸಹಿ ಸಂಗ್ರಹ ಅಭಿಯಾನ ನಡೆಸಲಾಗುವುದು. 18ರಂದು ಜಿಲ್ಲೆಗಳಲ್ಲಿ ಅಭಿಯಾನದ ಉದ್ಘಾಟನೆ ನೆರವೇರಲಿದೆ' ಎಂದರು.

ಕರ್ನಾಟಕ ಸರ್ಕಾರ
**ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ, ದಾವಣಗೆರೆ.**
ಜಿಲ್ಲಾ ಆರ್.ಸಿ.ಹೆಚ್. ವಿಭಾಗ, ಕೊಠಡಿ ಸಂಖ್ಯೆ: 1, ಎಸ್.ಎಸ್.ಐ.ಎಂ.ಎಸ್. ಆಸ್ಪತ್ರೆ ಹಿಂಭಾಗ, ಎನ್.ಸಿ.ಸಿ.ಕ್ಯಾಂಪ್ ಹತ್ತಿರ, ಶ್ರೀ ರಾಮ ನಗರರಸ್ತೆ, ಶ್ರೀ ರಾಮ ನಗರ, ದಾವಣಗೆರೆ–577005, , ಈ ಮೇಲ್–rchodavangere@gmail.com
ಸಂ:ಜಿನಿಘ/ದಾಗೆರೆ/ಎನ್‌ಹೆಚ್‌ಎಂ/ ನೇಮಕ/36/2023–24 ದಿನಾಂಕ:12/07/2023
**ಸಂಕ್ಷಿಪ್ತ ನೇಮಕಾತಿ ಅಧಿಸೂಚನೆ**
ರಾಷ್ಟ್ರೀಯ ಆರೋಗ್ಯ ಅಭಿಯಾನದ ವಿವಿಧ ಉಪ ಕಾರ್ಯಕ್ರಮಗಳಡಿ ಮಂಜೂರಾಗಿ ಖಾಲಿ ಇರುವ ಈ ಕೆಳಕಂಡ ಹುದ್ದೆಗಳಿಗೆ ತಾತ್ಕಾಲಿಕವಾಗಿ ಗುತ್ತಿಗೆ ಅಧಾರದಲ್ಲಿ 31/03/2024ರವರೆಗೆ ಹಾಗೂ 2024–25ನೇ ಸಾಲಿನ ಹುದ್ದೆಗಳ ಮುಂದುವರಿಕೆ ಪಿಐಪಿ ಅನುಮೋದನೆ ಷರತ್ತಿಗೊಳಪಟ್ಟಿರುತ್ತದೆ. ಎನ್‌ಹೆಚ್‌ಎಂ ನಿಯಾಮನುಸಾರ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘದಿಂದ ಆಯ್ಕೆ ಮಾಡುವ ಹಾಗೂ ರಾಷ್ಟ್ರೀಯ ಆರೋಗ್ಯ ಅಭಿಯಾನದ ನಿಯಾಮನುಸಾರ "ರೋಸ್ಟರ್ ಕಂ ಮೆರಿಟ್ ಸಿಸ್ಟಮ್" ಅಧಾರದಲ್ಲಿ ನೇಮಕ ಮಾಡಲು ಆಸಕ್ತರಿಂದ ಅರ್ಜಿಗಳನ್ನು ಅಹ್ವಾನಿಸಲಾಗಿದೆ.
**ಹುದ್ದೆಗಳ ವಿವರ:– ಪದನಾಮ:–** ಪ್ರಸೂತಿತಜ್ಞರು. **ಹುದ್ದೆ ಸಂಖ್ಯೆ:–** 01 **ಕಾರ್ಯಕ್ರಮ:–** ಲಕ್ಷ್ಯಕಾರ್ಯಕ್ರಮ. **ವಿದ್ಯಾರ್ಹತೆ:– DGO/ DNB /MD (OBG)** (2) **ಪದನಾಮ:–** ಅರವಳಿಕೆ ತಜ್ಞರು. **ಹುದ್ದೆ ಸಂಖ್ಯೆ:–** 02 **ಕಾರ್ಯಕ್ರಮ:–** ಲಕ್ಷ್ಯಕಾರ್ಯಕ್ರಮ /Obsteric ICU/HDU **ವಿದ್ಯಾರ್ಹತೆ:– DA/DNB/MD(Anaesthesia)** (3) **ಪದನಾಮ:–** ತಜ್ಞವೈದ್ಯರು **ಹುದ್ದೆ ಸಂಖ್ಯೆ:–**02 **ಕಾರ್ಯಕ್ರಮ:–** ಎನ್‌ಪಿಸಿಸಿ ಕಾರ್ಯಕ್ರಮ **ವಿದ್ಯಾರ್ಹತೆ:–** ಎಂಬಿಬಿಎಸ್: (ಆದ್ಯತೆ:– ಮೆಡಿಸಿನ್/ಅನ್‌ಸ್ತೀಷಿಯ (ಡಿಪ್ಲೋಮೊ/ಸ್ನಾತಕೋತ್ತರ) ರೆಡಿಯೋಥೆರಪಿ (ಡಿಪ್ಲೋಮೊ/ಸ್ನಾತಕೋತ್ತರ) **ವಯೋಮಿತಿ:–40 ವರ್ಷ** (4) **ಪದನಾಮ:–**ಮನೋವೈದ್ಯರು **ಹುದ್ದೆ ಸಂಖ್ಯೆ:–** 01 **ಕಾರ್ಯಕ್ರಮ:–** ಎನ್‌ಎಂಹೆಚ್‌ಪಿ ಕಾರ್ಯಕ್ರಮ **ವಿದ್ಯಾರ್ಹತೆ:–** ಎಂಸಿಐ ಯಿಂದಗುರುತಿಸಲ್ಪಟ್ಟ ಸಂಸ್ಥೆಯಿಂದ ಎಂಬಿಬಿಎಸ್ ಡಿಗ್ರಿ ಮತ್ತು ಎಂ.ಡಿ ಸೈಕಿಯಾಟ್ರಿ ಆಥವಾ ಡಿಪಿಎಂ ಆಥವಾ ಡಿಎನ್‌ಬಿ ಸೈಕಿಯಾಟ್ರಿ **ಆದ್ಯತೆ:–** ಯಾವುದೇ ಆಸ್ಪತ್ರೆಯಲ್ಲಿ ಮನೋವೈದ್ಯರಾಗಿ 2 ವರ್ಷಗಳ ಕೆಲಸ ಮಾಡಿದ ಅನುಭವ (5) **ಪದನಾಮ:–** ವೈದ್ಯಾಧಿಕಾರಿಗಳು **ಹುದ್ದೆ ಸಂಖ್ಯೆ:–** 19 **ಕಾರ್ಯಕ್ರಮ:–** ತಾಯಿ ಆರೋಗ್ಯ ಕಾರ್ಯಕ್ರಮ/ ಮಕ್ಕಳ ಅರೋಗ್ಯ ಕಾರ್ಯಕ್ರಮ ICU/HDU **ವಿದ್ಯಾರ್ಹತೆ:–** ಎಂಬಿಬಿಎಸ್ ಉತ್ತೀರ್ಣರಾಗಿರಬೇಕು ಮತ್ತು ಕಡ್ಡಾಯವಾಗಿ ಇಂಟರ್ ಶಿಪ್ ಪೂರೈಸಿರಬೇಕು ಹಾಗೂ KMC ನೊಂದವಣೆಯನ್ನು ಹೊಂದಿರತಕ್ಕದ್ದು. ಸಂಬಂಧಪಟ್ಟ ವಿಶ್ವವಿದ್ಯಾನಿಲಯದಿಂದ Convocation/Degree Certificate ನ್ನುಕಡ್ಡಾಯವಾಗಿ ಹೊಂದಿರಬೇಕು. ವಿಶೇಷ ಸೂಚನೆ:– ಕಡ್ಡಾಯ ಗ್ರಾಮೀಣ ಸೇವೆಯನ್ವಯ ಎಂಬಿಬಿಎಸ್ ವೈದ್ಯರು ಕರ್ತವ್ಯಕ್ಕೆ ಹಾಜರಾದಲ್ಲಿ ಕರ್ತವ್ಯದಿಂದ ಬಿಡುಗಡೆಗೊಳಿಸಲಾಗುವುದು. (6) **ಪದನಾಮ:–** ಜಿಲ್ಲಾ ಆಸ್ಪತ್ರೆಯ ಗುಣಮಟ್ಟ ವ್ಯವಸ್ಥಾಪಕರು **ಹುದ್ದೆ ಸಂಖ್ಯೆ:–** 01 **ಕಾರ್ಯಕ್ರಮ:–** ಜಿಲ್ಲಾ ಗುಣಮಟ್ಟ ಖಾತರಿ ಘಟಕ **ವಿದ್ಯಾರ್ಹತೆ:– UG qualification-MBBS/BDS/AYUSH/Nursing Life science /Social Science Graduate(Regular Full time from Recognized University) and PG Qualification –Masters in Hospital Administration /Health Management (Regular Full time from Recognized University) with 1 year experience in Public Health /Hospital Administration.** (7) **ಪದನಾಮ:–** ಆಡಿಯೋಮೆಟ್ರಿಕ್ ಅಸಿಸ್ಟೆಂಟ್ **ಹುದ್ದೆ ಸಂಖ್ಯೆ:–** 01 **ಕಾರ್ಯಕ್ರಮ:–** ರಾಷ್ಟ್ರೀಯ ಆರೋಗ್ಯ ಅಭಿಯಾನ (ಎನ್‌ಪಿಪಿಸಿಡಿ.) **ವಿದ್ಯಾರ್ಹತೆ:– Diploma in Hearing Language and speech (DHLS) From a RCI Recognised Institute** (8) **ಪದನಾಮ:–** ಇನ್‌ಸ್ಟ್ರಕ್ಟರ್ ಫಾರ್ ಹೀಯರಿಂಗ್ ಇಂಪೇರಡ್ ಚಿಲ್ಡ್ರನ್. **ಹುದ್ದೆ ಸಂಖ್ಯೆ:–** 01 **ಕಾರ್ಯಕ್ರಮ:–** ರಾಷ್ಟ್ರೀಯ ಆರೋಗ್ಯ ಅಭಿಯಾನ (ಎನ್‌ಪಿಪಿಸಿಡಿ.) **ವಿದ್ಯಾರ್ಹತೆ:–** Diploma in Training Young Deaf & Hearing Handicapped (DTYDHH) From a RCI Recognised Institute (9) **ಪದನಾಮ:–** ಪಂಚಕರ್ಮ ತಜ್ಞವೈದ್ಯರು **ಹುದ್ದೆ ಸಂಖ್ಯೆ:–**01 **ಕಾರ್ಯಕ್ರಮ:–** ಆಯುಷ್ ಕಾರ್ಯಕ್ರಮ **ವಿದ್ಯಾರ್ಹತೆ:–** ಪಂಚಕರ್ಮ ವಿಷಯದಲ್ಲಿ ಸ್ನಾತಕೋತ್ತರ ಪದವಿ ಸದರಿ ಅಭ್ಯರ್ಥಿಗಳು ಲಭ್ಯವಿಲ್ಲದ ಪಕ್ಷದಲ್ಲಿ ಕಾಯಚಿಕಿತ್ಸಾ ವಿಷಯದಲ್ಲಿ ಸ್ನಾತಕೋತ್ತರ ಪದವಿ ಹೊಂದಿರುವ ಅಭ್ಯರ್ಥಿಗಳಿಗೆ ಆಯ್ಕೆ ಮಾಡಲಾಗುವುದು. ಅಥವಾ ಕನಿಷ್ಠ 3 ವರ್ಷಗಳು ಪಂಚಕರ್ಮ ವಿಭಾಗದಲ್ಲಿ ಕೆಲಸ ನಿರ್ವಹಿಸಿರುವ ಅನುಭವವುಳ್ಳ ಆರ್ಯುವೇದ ಪದವೀಧರ ವೈದ್ಯರಾಗಿರಬೇಕು. (ಪರಿಶಿಷ್ಠ ಪಂಗಡ/ಮಹಿಳಾ ಮೀಸಾಲಾತಿ) (10) **ಪದನಾಮ:–** 24/7 ಪ್ರಾ.ಆ ಕೇಂದ್ರ/ಸಮುದಾಯ ಆರೋಗ್ಯ ಕೇಂದ್ರ /ಸಾರ್ವಜನಿಕ ಆಸ್ಪತ್ರೆ ಆಯುಷ್ ವೈದ್ಯರು **ಹುದ್ದೆ ಸಂಖ್ಯೆ:–** 01 **ಕಾರ್ಯಕ್ರಮ:–** ಆಯುಷ್ ಕಾರ್ಯಕ್ರಮ **ವಿದ್ಯಾರ್ಹತೆ:–** ಬಿ.ಎ.ಎಂ.ಎಸ್/ಬಿ.ಹೆಚ್.ಎಂ.ಎಸ್/ಬಿ.ಎನ್.ವೈ.ಎಸ್/ಬಿ.ಯು.ಎಂ.ಎಸ್/ಸಿದ್ದಪದವಿ ವೈದ್ಯ ಪದ್ದತಿಯಲ್ಲಿ ಅಂಗೀಕೃತ ವಿಶ್ವ ವಿದ್ಯಾಲಯದಿಂದ ಪದವಿ ಪಡೆದಿರಬೇಕು. ಕಡ್ಡಾಯವಾಗಿ ಹೌಸ್ಮನ್ ಶಿಪ್‌ಅನ್ನು ಮುಗಿಸಿರಬೇಕು ಅಂಗೀಕೃತ ನೊಂದಣಿ ಪ್ರಾಧಿಕಾರದಿಂದ ವೃತ್ತಿ ನೋಂದಣಿಯನ್ನು ಮಾಡಿಕೊಂಡಿರಬೇಕು. (11) **ಪದನಾಮ:–**ಡೆಂಟಲ್ ಹೈಜಿನಿಸ್ಟ್ **ಸಂಖ್ಯೆ:–**01 **ಕಾರ್ಯಕ್ರಮ:–** ಓರಲ್‌ಹೆಲ್ತ್ **ವಿದ್ಯಾರ್ಹತೆ:– 1) 10+2 Science from Recognized Board 2) Diploma in Dental Hygienist course from a recognized institution 3) Registration with state Dental Council. Exp two years of experience in a Dental College/Clinic)** (12) **ಪದನಾಮ:–** ಫಿಜಿಯೋಥೆರಾಪಿಸ್ಟ್ **ಹುದ್ದೆ ಸಂಖ್ಯೆ:–** 01 **ಕಾರ್ಯಕ್ರಮ:–** ಎನ್‌ಪಿಸಿಡಿಎಸ್ **ವಿದ್ಯಾರ್ಹತೆ:–** 1) **Bachelor Degree in Physiotherapy (B.P.T)** (13):– **ಪದನಾಮ:–** ಶುಶ್ರೂಷಕಿಯರು **ಹುದ್ದೆ ಸಂಖ್ಯೆ:–** 19 **ಕಾರ್ಯಕ್ರಮ:–** ತಾಯಿ ಆರೋಗ್ಯ ಕಾರ್ಯಕ್ರಮ/ಮಕ್ಕಳ ಆರೋಗ್ಯ /ಎನ್‌ಪಿಪಿಸಿ **ವಿದ್ಯಾರ್ಹತೆ:–** 1) ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದ ಸಂಸ್ಥೆಯಿಂದ ಡಿಪ್ಲೋಮೊ ಇನ್ ನರ್ಸಿಂಗ್ ಪದವಿ ಹೊಂದಿರಬೇಕು.ಕರ್ನಾಟಕ ಕೌನ್ಸಲಿಂಗ್‌ನಲ್ಲಿ ನೊಂದವಣೆ/ಮರು ನವೀಕರಣ ಹೊಂದಿರಬೇಕು. ಅನುಭವ:– ಸಾರ್ವಜನಿಕ ಆರೋಗ್ಯ ಕಾರ್ಯಕ್ರಮದಲ್ಲಿ (ಆದ್ಯತೆ:– ರಾಷ್ಟ್ರೀಯ ಆರೋಗ್ಯ ಅಭಿಯಾನ ಕಾರ್ಯಕ್ರಮದಡಿಯಲ್ಲಿ ಕೆಲಸದ ಅನುಭವ) (14) **ಪದನಾಮ:–** ಹಿರಿಯ ಮಹಿಳಾ ಆರೋಗ್ಯ ಸಹಾಯಕಿಯರು **ಹುದ್ದೆ ಸಂಖ್ಯೆ:–** 01 **ಕಾರ್ಯಕ್ರಮ:–** ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನ **ವಿದ್ಯಾರ್ಹತೆ:–** 1) ಹಿರಿಯ ಮಹಿಳಾ ಆರೋಗ್ಯ ಸಹಾಯಕಿ ತರಬೇತಿಯನ್ನು ಹೊಂದಿರಬೇಕು. ಈ ತರಬೇತಿಯು ಸೇವಾ ನಿರತರಿಗೆ ಮಾತ್ರ ನೀಡಲಾಗುತ್ತಿದ್ದು ಬಾಹ್ಯ ಮೂಲದಿಂದ ಅಭ್ಯರ್ಥಿಗಳು ಲಭ್ಯವಾಗುವ ಸಂಭವ ತೀರಾ ಕಡಿಮೆ ಇರುವುದರಿಂದ ಆರೋಗ್ಯವಂತ ನಿವೃತ್ತ ಕಿ.ಮ.ಆ. ಸಹಾಯಕಿಯರನ್ನು ಆಯ್ಕೆಗೆ ಪರಿಗಣಿಸಲಾಗುವುದು. (15) **ಪದನಾಮ:–** ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರು. **ಹುದ್ದೆ ಸಂಖ್ಯೆ:–** 03 **ಕಾರ್ಯಕ್ರಮ:–** ರಾಷ್ಟ್ರೀಯ ನಗರಆರೋಗ್ಯಅಭಿಯಾನ **ವಿದ್ಯಾರ್ಹತೆ:–** 1) ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದ ಸಂಸ್ಥೆಯಿಂದ ಕಿರಿಯಾ ಮಹಿಳಾ ಆರೋಗ್ಯ ಸಹಾಯಕಿ ತರಬೇತಿ ಹೊಂದಿರಬೇಕು. ಕರ್ನಾಟಕ ನರ್ಸಿಂಗ್ ಕೌನ್ಸಲಿಂಗ್‌ನಲ್ಲಿ ನೊಂದಾವಣೆಯಾಗಿರಬೇಕು. ಕಡ್ಡಾಯವಾಗಿ ಕಂಪ್ಯೂಟರ್ ಸಾಕ್ಷರತೆ ಹಾಗೂ ಪ್ರಮಾಣ ಪತ್ರ ಹೊಂದಿರಬೇಕು. (16) **ಪದನಾಮ:–** ಕಿರಿಯ ಪುರುಷ ಆರೋಗ್ಯ ಸಹಾಯಕರು **ಹುದ್ದೆ ಸಂಖ್ಯೆ:–** 01 **ಕಾರ್ಯಕ್ರಮ:–** ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನ **ವಿದ್ಯಾರ್ಹತೆ:–** 1) ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು ಮತ್ತು ಕರ್ನಾಟಕ ರಾಜ್ಯದ ಆರೋಗ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ವಿವಿದೋದ್ದೇಶ ಮೂಲ ಆರೋಗ್ಯ ಕಾರ್ಯಕರ್ತರ ತರಬೇತಿಯನ್ನು ಪಡೆದಿರಬೇಕು. 2) ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು ಮತ್ತು ಕರ್ನಾಟಕ ಅರೆ ವೈದ್ಯಕೀಯ ಮಂಡಳಿ ನಡೆಸುವ 3 ವರ್ಷಗಳ ಆರೋಗ್ಯ ನೀರಿಕ್ಷಕರ ಡಿಪ್ಲೋಮಾ ಹೊಂದಿರಬೇಕು. 3) ಪಿ.ಯು.ಸಿ (ವಿಜ್ಞಾನ) ತೇರ್ಗಡೆಯಾಗಿರಬೇಕು ಮತ್ತು ಕರ್ನಾಟಕ ಅರೆ ವೈದ್ಯಕೀಯ ಮಂಡಳಿ ನಡೆಸುವ 2 ವರ್ಷಗಳ ಆರೋಗ್ಯ ನೀರಿಕ್ಷಕರ ಡಿಪ್ಲೋಮಾ ಹೊಂದಿರಬೇಕು. ಕಡ್ಡಾಯವಾಗಿ ಕಂಪ್ಯೂಟರ್ ಸಾಕ್ಷರತೆ ಹಾಗೂ ಪ್ರಮಾಣ ಪತ್ರ ಹೊಂದಿರಬೇಕು.
ಅಸಕ್ತರು ಅರ್ಜಿಗಳನ್ನು ದಿನಾಂಕ: 26/07/2023ರಂದು ಬೆಳಗ್ಗೆ 10–30ರಿಂದ 2–00ಗಂಟೆವರೆಗೆ ಜಿಲ್ಲಾ ಆರೋಗ್ಯ ಮತ್ತು ಕು.ಕ.ಅಧಿಕಾರಿಗಳ ಕಛೇರಿ, ಶ್ರೀರಾಮನಗರ ರಸ್ತೆ, ದಾವಣಗೆರೆ ಎಸ್.ಎಸ್. ಆಸ್ಪತ್ರೆ ಹಿಂಭಾಗ, ಎನ್.ಸಿ.ಸಿ. ಕ್ಯಾಂಪ್ ಪಕ್ಕ, ದಾವಣಗೆರೆ ಇಲ್ಲಿ ಅರ್ಜಿಗಳನ್ನು ವಿತರಿಸಿ ಪಡೆಯಲಾಗುವುದು. ಅರ್ಜಿದಾರರು ಸೂಕ್ತ ಅರ್ಜಿಗಳನ್ನು ಪಡೆದು ಸರಿಯಾದ ವಿವರಗಳನ್ನು ತುಂಬಿ, ವಿದ್ಯಾರ್ಹತೆ, ಮೀಸಲಾತಿ ಮತ್ತು ಅನುಭವಕ್ಕೆ ಸಂಬಂಧಿಸಿದಂತೆ ಮೂಲದಾಖಲೆಗಳನ್ನು ಪರಿಶೀಲನೆಗೆ ಹಾಜರು ಪಡಿಸುವುದು. ಭರ್ತಿ ಮಾಡಿದ ಆರ್ಜಿಯೊಂದಿಗೆ ಇತ್ತೀಚಿನ ಭಾವಚಿತ್ರ ಹಾಗೂ ಒಂದು ಸೆಟ್ ಸ್ವಯಂಧೃಡಿಕೃತ ದಾಖಾಲಾತಿಗಳನ್ನು ಲಗತ್ತಿಸಿ ಅದೇ ದಿನ ಸಂಜೆ 5–00 ಗಂಟೆಗೆಯೊಳಗೆ ಅರ್ಜಿಗಳನ್ನು ಹಿಂದಿರುಗಿಸತಕ್ಕದು ನಂತರ ಬಂದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ. ಸ್ಥಾನಿಕರಿಗೆ ಆದ್ಯತೆ ಕಂಪ್ಯೂಟರ್ ಸಾಕ್ಷರತೆ ಕಡ್ಡಾಯ ಹಾಗೂ ಸರ್ಕಾರದ /ಇಲಾಖೆಯ ನಿಯಾಮವಳಿಗಳಂತೆ ವಯೋಮಿತಿ ಮತ್ತು ಮೀಸಲಾತಿ ನಿಗದಿಪಡಿಸಲಾಗಿದೆ. ಮೇಲೆ ನಮೂದಿಸಿದ ಹುದ್ದೆಗಳನ್ನು ಹೆಚ್ಚಿಸುವುದು/ಕಡಿಮೆಗೊಳಿಸುವುದು ಯಾವುದೇ ಕಾರಣ ನೀಡದೇ ಈ ಆಯ್ಕೆ ಪ್ರಕ್ರಿಯೆಯನ್ನು ಮುಂದೂಡುವ ಅಥವಾ ರದ್ದುಪಡಿಸುವ ತೀರ್ಮಾನ ಜಿಲ್ಲಾ ಮಟ್ಟದ ಆಯ್ಕೆ ಸಮಿತಿ ಮತ್ತು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘದಾಗಿರುತ್ತದೆ. ಪ್ರಕಟಿಸಿದ ಹುದ್ದೆಗಳ ವಿದ್ಯಾರ್ಹತೆ, ರೋಸ್ಟರ್ ಮತ್ತು ಅನುಭವ ಇತರೆ ಮಾಹಿತಿಗಳಿಗೆ ಸಂಬಂದಿಸಿದಂತೆ ಕಛೇರಿ ಸೂಚನಾ ಫಲಕದಲ್ಲಿ ನೇಮಕಾತಿ ಅಧಿಸೂಚನೆಯನ್ನು ಪ್ರಕಟಿಸಿದೆ.
ಸಹಿ/– **ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ದಾವಣಗೆರೆ ಜಿಲ್ಲೆ**
ವಾಸಾಇ/ದಾವಣಗೆರೆ/119/ಕೆಎಸ್‌ಎಂಸಿಎ/2023–24

ಕರ್ನಾಟಕ ಸರ್ಕಾರ
**ಆಯುಕ್ತರ ಕಚೇರಿ, ಶಾಲಾ ಶಿಕ್ಷಣ ಇಲಾಖೆ**
ಕೇಂದ್ರೀಕೃತ ದಾಖಲಾತಿ ಘಟಕ, ಸೆಂಟ್ರಲ್ ಜೂನಿಯರ್ ಕಾಲೇಜು ಆವರಣ, ಕೆ.ಜಿ. ರಸ್ತೆ, ಬೆಂಗಳೂರು–560009, ದೂ: 22228805, 22483140, 22483145
ಇ–ಮೇಲ್: :- kartet2021@gmail.com
ಸಂಖ್ಯೆ: ಸಿ.ಎ.ಸಿ–04(A)/KARTET–2023/01/2023–24 ದಿನಾಂಕ: 14/07/2023
**ಪ್ರಕಟಣೆ**
2023ರ ಕರ್ನಾಟಕ ಶಿಕ್ಷಕರ ಅರ್ಹತಾ ಪರೀಕ್ಷೆ **(KARTET-2023)** **ದಿನಾಂಕ: 03.09.2023 ರಂದು** ರಾಜ್ಯದಾದ್ಯಂತ ನಡೆಯಲಿದ್ದು, ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು **ದಿನಾಂಕ: 14.07.2023 ರಿಂದ 05.08.2023** ರವರೆಗೆ ಆಹ್ವಾನಿಸಿ, ಶಾಲಾ ಶಿಕ್ಷಣ ಇಲಾಖೆಯ ವೆಬ್‌ಸೈಟ್ **www.schooleducation.kar.nic.in** ನಲ್ಲಿ ಅಧಿಸೂಚನೆಯನ್ನು ಪ್ರಕಟಿಸಲಾಗಿದೆ. ಅಭ್ಯರ್ಥಿಗಳು ಅಧಿಸೂಚನೆ ಮತ್ತು ನೀಡಲಾದ ಸೂಚನೆಗಳನ್ನು ತಪ್ಪದೇ ಓದಿ ಅರ್ಥೈಸಿಕೊಂಡು ಅರ್ಜಿಯನ್ನು ಕ್ರಮಬದ್ಧವಾಗಿ ಭರ್ತಿ ಮಾಡಿ ನಿಗದಿತ ದಿನಾಂಕದೊಳಗೆ ಸಲ್ಲಿಸುವುದು.
ಸಹಿ/– ವಿಶೇಷಾಧಿಕಾರಿ
ವಾಸಾಸಂಇ/ಬೆಂ.ನ/ಶಿರಡಿ ಸಾಯಿ/548/2023–24

**ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಬಾಗಲಕೋಟ**
ಆಸ್ತಿ ಅಧಿಕಾರಿಗಳ ಕಛೇರಿ, ಸೀಮಿಕೇರಿ ಕ್ರಾಸ್ ಹತ್ತಿರ, ಹುಬ್ಬಳ್ಳಿ ಬೈಪಾಸ್ ರಸ್ತೆ, ಉದ್ಯಾನಗಿರಿ ಬಾಗಲಕೋಟ – 587104.
ಸಂ : ಆ.ಅ./ತೋವಿವಿಬಾ/ಸಖಕ/ಟೆ.ನಂ–176/2023–24 ದಿನಾಂಕ:14–07–2023
**ಟೆಂಡರ ಪ್ರಕಟಣೆ**
ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಅಡಿಯಲ್ಲಿ ಬರುವ ವಿವಿಧ ಮಹಾವಿದ್ಯಾಯಗಳಿಗೆ ಬೇಕಾಗಿರುವ Laboratory equipment ಗೆ ಸಂಬಂಧಿಸಿದಂತೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಟೆಂಡರನ್ನು ಆಹ್ವಾನಿಸಲಾಗಿದ್ದು, ಆಸಕ್ತ ಬಿಡ್‌ದಾರರು ಟೆಂಡರ ಪ್ರಕಟಣೆ, ವಿವರಣೆ ಮತ್ತು ಷರತ್ತುಗಳಿಗಾಗಿ ವೆಬ್‌ಸೈಟ್ https://kppp.karnataka.gov.in ಮೂಲಕ ಪಡೆದುಕೊಂಡು ಟೆಂಡರನ್ನು ಸಲ್ಲಿಸುವುದು.
**ಟೆಂಡರನ ಘಟಣಾವಳಿಗಳು (ವೇಳಾಪಟ್ಟಿ)**

| | | | | |
|---|---|---|---|---|
| 1 | ಟೆಂಡರ ಅಂಶಗಳ ಸ್ಪಷ್ಟಿಕರಣಕ್ಕಾಗಿ ಕೊನೆಯ ದಿನಾಂಕ | 22–07–2023 | @ | 14.00 ಘಂ |
| 2 | ಟೆಂಡರ ಸಲ್ಲಿಸುವ ಕೊನೆಯ ದಿನಾಂಕ | 31–07–2023 | @ | 16.00 ಘಂ |
| 3 | ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ | 02–08–2023 | @ | 11.00 ಘಂ |
| 4 | ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ (ಸಾಧ್ಯವಾದಲ್ಲಿ) | 04–08–2023 | @ | 12.00 ಘಂ |

ಬಿಡ್‌ದಾರರು ಇ–ಪ್ರೊಕ್ಯೂರಮೆಂಟ್‌ಗೆ ಕಾಲಕಾಲಕ್ಕೆ ಭೇಟಿ ನೀಡಿ ಯಾವುದಾದರೂ ತಿದ್ದುಪಡಿ corrigendum/ addendum ಬಗ್ಗೆ ಮಾಹಿತಿ ಪಡೆಯಬೇಕು.
ಸಹಿ/–ಆಸ್ತಿ ಅಧಿಕಾರಿಗಳು ತೋ.ವಿ.ವಿ, ಬಾಗಲಕೋಟ
DIPR/BGK/RO-NO-57/KSMCA/2023-24

MysoreSilk
**ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತ**
(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
3ನೇ ಮತ್ತು 4ನೇ ಮಹಡಿ, ಜನೋಪಯೋಗಿ ಕಟ್ಟಡ, ಎಂ.ಜಿ. ರಸ್ತೆ, ಬೆಂಗಳೂರು–560 001.
ಫೋನ್: 080–2558 6550/2558 6399 ಫ್ಯಾಕ್ಸ್: 080–2558 7020
ಇ–ಮೇಲ್: info@ksicsilk.com
ಸಂಖ್ಯೆ: ಕೆಎಸ್‌ಐಸಿ/ಪಿಡಿ/ಎಫ್‌ಡಿ–ಇಂಟ್ರೆಸ್ಟ್/02/2023–24 ದಿನಾಂಕ: 13.07.2023
**ಅಲ್ಪಾವಧಿ ಇ–ಟೆಂಡರ್‌ಗಾಗಿ ಅಧಿಸೂಚನೆ**
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)
ಕೆಎಸ್‌ಐಸಿ, ಹೆಚ್ಚುವರಿ ನಿಧಿಯ ಮೊತ್ತವನ್ನು ಸ್ಥಿರ ಠೇವಣಿಯ ಹೂಡಿಕೆಗಾಗಿ ಸ್ಪರ್ಧಾತ್ಮಕ ಬಡ್ಡಿದರವನ್ನು ಉಲ್ಲೇಖಿಸಲು ಆಸಕ್ತಿಯುಳ್ಳ **ಪ್ರತಿಷ್ಠಿತ ಸಾರ್ವಜನಿಕ ವಲಯದ ಬ್ಯಾಂಕುಗಳು, ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು ಮತ್ತು ಖಾಸಗಿ ಷೆಡ್ಯೂಲ್ಡ್ ವಾಣಿಜ್ಯ ಬ್ಯಾಂಕುಗಳಿಂದ** ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಆಹ್ವಾನಿಸಲಾಗಿದೆ.
ಟೆಂಡರ್ ಕಡತ, ವೇಳಾಪಟ್ಟಿ ನಿಯಮಗಳು ಮತ್ತು ಷರತ್ತುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://kppp.karnataka.gov.in ಇಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಪ್ರೀ ಬಿಡ್ ಸಭೆಯು ದಿನಾಂಕ: **24–07–2023 ರಂದು ಬೆಳಿಗ್ಗೆ 11:00 ಘಂಟೆಗೆ** ನಡೆಯಲಿದೆ. ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಇ.ಎಮ್.ಡಿ.ಯೊಂದಿಗೆ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **31–07–2023 ರ ಅಪರಾಹ್ನ 3:00 ಘಂಟೆಯವರೆಗೆ.** ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: **01–08–2023ರ ಅಪರಾಹ್ನ 3:00 ಘಂಟೆಗೆ.** ಹೆಚ್ಚಿನ ವಿವರಗಳಿಗಾಗಿ ಈ ಕೆಳಸಹಿದಾರರ ಕಛೇರಿಯ ಕೆಲಸದ ವೇಳೆಯಲ್ಲಿ ಖುದ್ದಾಗಿ ಅಥವಾ ಮೊಬೈಲ್ ಸಂಖ್ಯೆ: 7338462106ಕ್ಕೆ ಕರೆ ಮಾಡಿ ಅಥವಾ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ ಸಹಾಯವಾಣಿ: 080–46010000, 080–68948777 ಮೂಲಕ ಮಾಹಿತಿಯನ್ನು ಪಡೆದುಕೊಳ್ಳಬಹುದಾಗಿದೆ.
ಸಹಿ/– ಪ್ರಧಾನ ವ್ಯವಸ್ಥಾಪಕರು(ಹಣಕಾಸು&ಆಡಳಿತ)
ವಾಸಾಸಂಇ/ವಾ.ಪ್ರ/528/ಎಂಎಎ/2023–24

# ಡಿಕೆಶಿ ವಿರುದ್ಧದ ಪ್ರಕರಣ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರನ್ನು ಜಾರಿ ನಿರ್ದೇಶನಾಲಯ (ಇಡಿ) ವಿಚಾರಣೆಗೆ ಒಳಪಡಿಸಿದ್ದನ್ನು ವಿರೋಧಿಸಿ ಪ್ರತಿಭಟನೆ ನಡೆಸಿದ್ದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಿರುದ್ಧ ಶಿವಾಜಿನಗರ ಠಾಣೆ ಪೊಲೀಸರು ದಾಖಲಿಸಿದ್ದ ಖಾಸಗಿ ದೂರನ್ನು ಹೈಕೋರ್ಟ್ ರದ್ದುಪಡಿಸಿದೆ.

ಈ ಸಂಬಂಧ ಡಿ.ಕೆ. ಶಿವಕುಮಾರ್ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದೆ.

'ನ್ಯಾಷನಲ್ ಹೆರಾಲ್ಡ್ ಪತ್ರಿಕೆ ಹೆಸರಿನಲ್ಲಿ ಹಣ ಅಕ್ರಮ ವರ್ಗಾವಣೆ ಮಾಡಲಾಗಿದೆ ಎಂದು ಆರೋಪಿಸಲಾದ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯ ರಾಹುಲ್ ಗಾಂಧಿಗೆ ಅನಗತ್ಯವಾಗಿ ಕಿರುಕುಳ ನೀಡುತ್ತಿದೆ' ಎಂದು ಆರೋಪಿಸಿ ಕೆಪಿಸಿಸಿ ವತಿಯಿಂದ 2022ರ ಜೂನ್ 16ರಂದು ರಾಜಭವನ ಚಲೋ ಹಮ್ಮಿಕೊಳ್ಳಲಾಗಿತ್ತು. ಇದರಲ್ಲಿ ಶಿವಕುಮಾರ್ ಭಾಗವಹಿಸಿ ಪ್ರತಿಭಟನೆ ನಡೆಸಿದ್ದರು.

'ಸ್ವಾತಂತ್ರ್ಯ ಉದ್ಯಾನದಲ್ಲಿ ಮಾತ್ರವೇ ಪ್ರತಿಭಟನೆ ನಡೆಸಬೇಕು ಎಂದು ಕಡ್ಡಾಯಗೊಳಿಸಿ ನಗರ ಪೊಲೀಸ್ ಆಯುಕ್ತರು ಆದೇಶಿಸಿದ್ದಾರೆ. ಆದರೆ, ಈ ಆದೇಶ ಉಲ್ಲಂಘಿಸಿ ಶಿವಕುಮಾರ್ ಕ್ವೀನ್ಸ್ ರಸ್ತೆಯ ಕೆಪಿಸಿಸಿ ಕಚೇರಿಯಿಂದ ಪ್ರತಿಭಟನೆ ನಡೆಸಿದ್ದಾರೆ. ಆ ಮೂಲಕ ಸಾರ್ವಜನಿಕ ನೆಮ್ಮದಿಗೆ ಭಂಗ ತಂದಿದ್ದಾರೆ. ಪ್ರತಿಭಟನೆ ನಡೆಸಲು ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮತಿಯನ್ನೂ ಪಡೆದಿಲ್ಲ'ಎಂದು ಆರೋಪಿಸಿ ಶಿವಾಜಿನಗರ ಠಾಣೆ ಸಬ್ ಇನ್‌ಸ್ಪೆಕ್ಟರ್ ಕರ್ನಾಟಕ ಪೊಲೀಸ್ ಕಾಯ್ದೆಯಡಿ 2022ರ ಜೂನ್ 16ರಂದು ಖಾಸಗಿ ದೂರು ದಾಖಲಿಸಿದ್ದರು.

ದೂರಿಗೆ ಸಂಬಂಧಿಸಿದಂತೆ 42ನೇ ಎಸಿಎಂಎಂ ನ್ಯಾಯಾಲಯಕ್ಕೆ ಅಂತಿಮ ವರದಿ ಸಲ್ಲಿಸಲಾಗಿತ್ತು. ನ್ಯಾಯಾಲಯ, ಶಿವಕುಮಾರ್‌ಗೆ ಸಮನ್ಸ್ ಜಾರಿಗೊಳಿಸಿತ್ತು. ಪ್ರಕರಣ ರದ್ದುಪಡಿಸುವಂತೆ ಕೋರಿ ಶಿವಕುಮಾರ್ ಹೈಕೋರ್ಟ್ ಮೆಟ್ಟಿಲೇರಿದ್ದರು.

**ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)**

| ಜಲಾಶಯ | ಗರಿಷ್ಠ ಮಟ್ಟ (ಅಡಿಗಳಲ್ಲಿ) | ಇಂದಿನ ಮಟ್ಟ | ಒಳಹರಿವು (ಕ್ಯುಸೆಕ್‌ಗಳಲ್ಲಿ) | ಹೊರಹರಿವು (ಕ್ಯುಸೆಕ್‌ಗಳಲ್ಲಿ) |
|---|---|---|---|---|
| ಕೆ ಆರ್ ಎಸ್* | 124.80 | 88.82 | 1,734 | 395 |
| ಹಾರಂಗಿ | 2,859 | 2,841.84 | 1,247 | 50 |
| ಕಬಿನಿ | 2,284 | 2,269.78 | 2,251 | 800 |
| ಹೇಮಾವತಿ | 2,922 | 2,893.18 | 625 | 200 |
| ಲಿಂಗನಮಕ್ಕಿ | 1,819 | 1,754.4 | 14,894 | 1,391 |
| ಸೂಪಾ (ಮೀ) | 564 | 527.40 | 5686.23 | 3677.69 |
| ಮಾಣಿ | 595 | 573.72 | 1,947 | - |
| ತುಂಗಭದ್ರಾ | 1,633 | 1,586.40 | 8,032 | 149 |
| ಮಲಪ್ರಭಾ | 2079.50 | 2,043.01 | 00 | 194 |
| ಘಟಪ್ರಭಾ | 2175 | 2,088.03 | 2,721 | 91 |
| ಭದ್ರಾ | 186 | 141.2 | 846 | 164 |
| ಆಲಮಟ್ಟಿ (ಮೀ) | 519.60 | 508.43 | 9,993 | 561 |
| ನಾರಾಯಣಪುರ (ಮೀ) | 492.25 | 486.82 | 00 | 50 |

* ನೆಲಮಟ್ಟದಿಂದ

## ಕರಾವಳಿಯಲ್ಲಿ 5 ದಿನ ಭಾರಿ ಮಳೆ

ಬೆಂಗಳೂರು: ಕರಾವಳಿಯ ಬಹುತೇಕ ಕಡೆ ಶನಿವಾರದಿಂದ ಐದು ದಿನಗಳ ಕಾಲ ಗುಡುಗು ಸಹಿತ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ದಕ್ಷಿಣ ಒಳನಾಡಿನ ಹಲವೆಡೆ ಹಾಗೂ ಉತ್ತರ ಒಳನಾಡಿನ ಕೆಲವೆಡೆ ಮಳೆ ಮುಂದುವರಿಯಲಿದೆ. ಕರಾವಳಿಯಲ್ಲಿ ಬಿರುಗಾಳಿಯ ವೇಗವು ಗಂಟೆಗೆ 40–45 ಕಿ.ಮೀ ನಿಂದ 55 ಕಿ.ಮೀ. ವೇಗದಲ್ಲಿ ಬೀಸುವ ಸಾಧ್ಯತೆ ಇರುತ್ತದೆ. ಆದ್ದರಿಂದ ಮೀನುಗಾರರು ಸಮುದ್ರಕ್ಕೆ ಇಳಿಯಬಾರದು ಎಂದು ಇಲಾಖೆ ಹೇಳಿದೆ.

ಕರಾವಳಿಯ ಉತ್ತರ ಕನ್ನಡ, ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗೆ ಶನಿವಾರವೂ 'ಯೆಲ್ಲೋ ಅಲರ್ಟ್' ಘೋಷಿಸಲಾಗಿದೆ. ಇದೇ 18ರವರೆಗೂ ಈ ಜಿಲ್ಲೆಗಳಿಗೆ 'ಯೆಲ್ಲೋ ಅಲರ್ಟ್' ನೀಡಲಾಗಿದೆ.

## 4 ಸಂಸ್ಥೆಗಳ 'ಏಕೀಕರಣ' ಕೈಬಿಟ್ಟ ಕೇಂದ್ರ ಪರಿಸರ ಸಚಿವಾಲಯ

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ, ಭಾರತೀಯ ಅರಣ್ಯ ಸಮೀಕ್ಷೆ ಸಂಸ್ಥೆ, ಕೇಂದ್ರ ಮೃಗಾಲಯ ಪ್ರಾಧಿಕಾರ ಹಾಗೂ ವನ್ಯಜೀವಿ ಅಪರಾಧ ನಿಯಂತ್ರಣ ದಳವನ್ನು ಏಕೀಕರಣ ಮಾಡುವ ಯೋಜನೆಯನ್ನು ಕೇಂದ್ರ ಅರಣ್ಯ, ಪರಿಸರ ಹಾಗೂ ತಾಪಮಾನ ಬದಲಾವಣೆ ಸಚಿವಾಲಯ ಕೈಬಿಟ್ಟಿದೆ.

ಈ ನಾಲ್ಕು ಸಂಸ್ಥೆಗಳನ್ನು ಸಂಯೋಜಿಸಲು ಹಾಗೂ 19 ಕಡೆ ಸಮಗ್ರ ಪ್ರಾದೇಶಿಕ ಕಚೇರಿಗಳನ್ನು ಆರಂಭಿಸಲು 2020ರ ಆಗಸ್ಟ್‌ನಲ್ಲಿ ಸಚಿವಾಲಯವು ತೀರ್ಮಾನಿಸಿತ್ತು. ಇದನ್ನು ಪ್ರಶ್ನಿಸಿ ಕರ್ನಾಟಕದ ವನ್ಯಜೀವಿ ಸಂರಕ್ಷಣಾವಾದಿ ಗಿರಿಧರ್ ಕುಲಕರ್ಣಿ ಅವರು ಹೈಕೋರ್ಟ್ ಮೆಟ್ಟಿಲೇರಿದ್ದರು. 'ಆಡಳಿತಾತ್ಮಕ ದೃಷ್ಟಿಯಿಂದ ನಾಲ್ಕು ಸಂಸ್ಥೆಗಳ ಏಕೀಕರಣ ಮಾಡಲಾಗುತ್ತಿದೆ ಎಂದು ಸಚಿವಾಲಯ ಹೇಳಿದೆ. ಆದರೆ, ಈ ನಾಲ್ಕು ಸಂಸ್ಥೆಗಳ ಉದ್ದೇಶವನ್ನೇ ಈ ಅಧಿಸೂಚನೆ ಬುಡಮೇಲು ಮಾಡಲಿದೆ. ಇದಕ್ಕೆ ಅವಕಾಶ ಕೊಡಬಾರದು' ಎಂದು ಅರ್ಜಿಯಲ್ಲಿ ಒತ್ತಾಯಿಸಿದ್ದರು. '19 ಸಮಗ್ರ ಪ್ರಾದೇಶಿಕ ಕಚೇರಿಗಳ ಆರಂಭದಿಂದ ಸ್ವಾಯತ್ತ ಸಂಸ್ಥೆಗಳ ಕಾರ್ಯವೈಖರಿಗೆ ಧಕ್ಕೆ ಆಗುವುದಿಲ್ಲ. ಸಮಗ್ರ ಹಣಕಾಸು ವಿಭಾಗದ ಒಪ್ಪಿಗೆ ಪಡೆದ ಬಳಿಕವೇ ಈ ಅಧಿಸೂಚನೆ ಹೊರಡಿಸಲಾಗಿದೆ. ಆದರೆ, ಹುದ್ದೆಗಳನ್ನು ರಚನೆ ಮಾಡಿಲ್ಲ. ಸ್ವಾಯತ್ತ ಸಂಸ್ಥೆಗಳ ಮೇಲೆ ಹಿಡಿತ ಹೊಂದುವ ಉದ್ದೇಶ ಹೊಂದಿಲ್ಲ' ಎಂದು ಸಚಿವಾಲಯವು ಹೈಕೋರ್ಟ್‌ಗೆ ತಿಳಿಸಿತ್ತು. ಈ ಬಗ್ಗೆ ಪ್ರಮಾಣಪತ್ರ ಸಲ್ಲಿಸುವಂತೆ ಸಚಿವಾಲಯಕ್ಕೆ ಹೈಕೋರ್ಟ್ ಸೂಚಿಸಿತ್ತು. ಆದರೆ, ಈ ವರ್ಷದ ಜೂನ್ 26ರಂದು ಆದೇಶ ಹೊರಡಿಸಿರುವ ಸಚಿವಾಲಯವು, 'ನಾಲ್ಕು ಸಂಸ್ಥೆಗಳು ಈ ಹಿಂದಿನಂತೆಯೇ ಸ್ವಾಯತ್ತ ಸಂಸ್ಥೆಗಳಾಗಿ ಮುಂದುವರಿಯಲಿವೆ. ಏಕೀಕರಣ ಮಾಡುವುದಿಲ್ಲ' ಎಂದು ತಿಳಿಸಿದೆ.

ಪದವಿ ಕಾಲೇಜು ಬೋಧಕ ಸಿಬ್ಬಂದಿ ವರ್ಗಕ್ಕೆ ಅಧಿಸೂಚನೆ ಹೊರಡಿಸಿದ ಇಲಾಖೆ

# 15 ತಿಂಗಳಲ್ಲೇ ಮೂರು ವರ್ಗಾವಣೆ

● ಚಂದ್ರಹಾಸ ಹಿರೇಮಳಲಿ

**ಬೆಂಗಳೂರು:** ರಾಜ್ಯದ ಸರ್ಕಾರಿ ಪದವಿ ಕಾಲೇಜುಗಳ ಬೋಧಕ ಸಿಬ್ಬಂದಿಯ ವರ್ಗಾವಣೆಗೆ ಉನ್ನತ ಶಿಕ್ಷಣ ಇಲಾಖೆ ಅಧಿಸೂಚನೆ ಹೊರಡಿಸಿದ್ದು, ಇದು 15 ತಿಂಗಳ ಅವಧಿಯಲ್ಲಿ ನಡೆಯುತ್ತಿರುವ ಮೂರನೇ ವರ್ಗಾವಣೆ ಪ್ರಕ್ರಿಯೆ.

ಸರ್ಕಾರಿ ಪದವಿ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರು, ಸಹ ಪ್ರಾಧ್ಯಾಪಕರು, ಪ್ರಾಧ್ಯಾಪಕರು, ಗ್ರಂಥಪಾಲಕರು ಹಾಗೂ ಕ್ರೀಡಾ ನಿರ್ದೇಶಕರ ವರ್ಗಾವಣೆಗೆ 2021 ರವರೆಗೂ ಸೂಕ್ತ ನಿಯಮಗಳನ್ನೇ ರೂಪಿಸಿರಲಿಲ್ಲ.

2009ರ ನಂತರ ವರ್ಗಾವಣಾ ಪ್ರಕ್ರಿಯೆಗಳು ಸಂಪೂರ್ಣ ಸ್ಥಗಿತವಾಗಿದ್ದವು. 2021ರಲ್ಲಿ ಕಾಲೇಜು ಶಿಕ್ಷಣ ಇಲಾಖೆಯ ಬೋಧಕರ ವರ್ಗಾವಣೆಗೆ ನಿಯಮಗಳನ್ನು ರೂಪಿಸಿ, ಜಾರಿಗೊಳಿಸಲಾಯಿತಾದರೂ ಆ ವರ್ಷ ವರ್ಗಾವಣೆ ಪ್ರಕ್ರಿಯೆಗೆ ಚಾಲನೆ ನೀಡಿರಲಿಲ್ಲ. 2022ರ ಏಪ್ರಿಲ್‌ನಲ್ಲಿ ವರ್ಗಾವಣೆಗೆ ಅಧಿಸೂಚನೆ ಹೊರಡಿಸಲಾಯಿತು.

ನಂತರ ಅದೇ ವರ್ಷದ ಡಿಸೆಂಬರ್‌ನಲ್ಲಿ ಮತ್ತೊಂದು ಸುತ್ತಿನ ವರ್ಗವಣೆ ಮಾಡಲಾಯಿತು.

**ಅಂಕಿ-ಅಂಶಗಳು**

**430** ರಾಜ್ಯದ ಪದವಿ ಕಾಲೇಜುಗಳು

**11,190** ಬೋಧಕ ಸಿಬ್ಬಂದಿ

**746** ವರ್ಗಾವಣೆಗೆ ಅರ್ಹತೆ ಇರುವ ಬೋಧಕರು

ಪ್ರಜಾವಾಣಿ ವಿಶೇಷ

ಇದೇ ತಿಂಗಳು ಮತ್ತೆ ಬೋಧಕ ಸಿಬ್ಬಂದಿಯ ವರ್ಗಾವಣಾ ಪ್ರಕ್ರಿಯೆ ಆರಂಭಿಸಲಾಗಿದೆ. ಕಡ್ಡಾಯ ವರ್ಗಾವಣೆ ಶೇ 9, ದಂಪತಿ ಪ್ರಕರಣ ಶೇ 3 ಸೇರಿದಂತೆ ಒಟ್ಟು ಶೇ 15ರಷ್ಟು ವರ್ಗಾವಣೆಗೆ ಅವಕಾಶ ನೀಡಲಾಗಿದ್ದು, ಆದ್ಯತಾ ಪಟ್ಟಿ ಪ್ರಕಟಿಸಲಾಗಿದೆ. ಇದೇ 25ರಿಂದ 28ರವರೆಗೆ ಕೌನ್ಸೆಲಿಂಗ್ ನಡೆಯಲಿದೆ. 2022ರ ಏಪ್ರಿಲ್‌ನಲ್ಲಿ ವರ್ಗಾವಣೆ ಪ್ರಕ್ರಿಯೆ ಆರಂಭಿಸಿದಾಗ ಶೈಕ್ಷಣಿಕ ವರ್ಷದ ಮಧ್ಯಭಾಗದಲ್ಲಿ ಸರ್ಕಾರ ಇಂತಹ ನಿರ್ಧಾರ ತೆಗೆದುಕೊಂಡಿದೆ ಎಂದು ಬಹುತೇಕ ಪ್ರಾಧ್ಯಾಪಕರು ವಿರೋಧ ವ್ಯಕ್ತಪಡಿಸಿದ್ದರು. ಆದರೆ, ಇಲಾಖೆ ವರ್ಗಾವಣಾ ಪ್ರಕ್ರಿಯೆಯನ್ನು ಯಶಸ್ವಿಯಾಗಿ ನಡೆಸಿತ್ತು. ಕಳೆದ ವರ್ಷದ ವರ್ಗಾವಣೆಯಲ್ಲಿ 900 ಬೋಧಕ ಸಿಬ್ಬಂದಿ ಅವಕಾಶ ಪಡೆದಿದ್ದರು. ಬೆಂಗಳೂರು ನಗರವನ್ನು 'ಎ' ಕೇಂದ್ರವಾಗಿ, ರಾಜ್ಯದ ಮಹಾನಗರ ಪಾಲಿಕೆ ಇರುವ 9 ನಗರಗಳನ್ನು 'ಬಿ' ಉಳಿದ ಜಿಲ್ಲಾ ಕೇಂದ್ರಗಳನ್ನು 'ಸಿ' ತಾಲ್ಲೂಕು ಕೇಂದ್ರಗಳನ್ನು 'ಡಿ' ಹಾಗೂ ಹೋಬಳಿ ಮಟ್ಟದಲ್ಲಿರುವ ಪದವಿ ಕಾಲೇಜುಗಳನ್ನು 'ಇ' ವಲಯಗಳಾಗಿ ವಿಂಗಡಿಸಲಾಗಿದೆ. ಮೊದಲ ವರ್ಗಾವಣೆಯಲ್ಲಿ ಆಯಾ ವಲಯದ ಅದೇ ನಗರಗಳಲ್ಲಿ ಕಾಲೇಜುಗಳನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿತ್ತು. ಈ ಬಾರಿ ಒಂದು ನಗರ, ತಾಲ್ಲೂಕು, ಹೋಬಳಿಯ ಕಾಲೇಜುಗಳಲ್ಲಿ ಕೆಲಸ ಮಾಡಿದವರು ಅದೇ ವ್ಯಾಪ್ತಿಯ ಕಾಲೇಜುಗಳನ್ನು ಆಯ್ಕೆ ಮಾಡಿಕೊಳ್ಳುವುದಕ್ಕೆ ಅವಕಾಶ ವಿಲ್ಲ.

'ಅನಿಯಮಿತವಾಗಿ ವರ್ಗಾವಣೆ ಮಾಡಿದರೆ ಕೌಟುಂಬಿಕ ಸಮಸ್ಯೆ ಇರುವ ಬೋಧಕರಿಗೆ ಅನನುಕೂಲವಾಗುತ್ತದೆ. ಅಲ್ಲದೇ, 'ಬಿ'ಯಿಂದ 'ಇ'ವರೆಗಿನ ವಲಯಗಳಲ್ಲಿ ಇತರೆ ನಗರಗಳ ಆಯ್ಕೆಗಳಿವೆ. ಬೆಂಗಳೂರಿನಲ್ಲಿ ಕಾರ್ಯನಿರ್ವಹಿಸುತ್ತಿರುವವರಿಗೆ ಅಂತಹ ಅವಕಾಶ ಇಲ್ಲ. ಇದರಿಂದ ಬೋಧಕರು ಅನಿವಾರ್ಯವಾಗಿ ಬೆಂಗಳೂರಿನಿಂದ ಹೊರಗೆ ಹೋಗಬೇಕಾಗುತ್ತದೆ. ಪ್ರಯಾಣದಲ್ಲೇ ಸಾಕಷ್ಟು ಸಮಯ ವ್ಯರ್ಥವಾಗುವ ಆತಂಕ ಎದುರಾಗಿದೆ' ಎನ್ನುತ್ತಾರೆ ಪದವಿ ಕಾಲೇಜು ಪ್ರಾಧ್ಯಾಪಕ ರಮೇಶ್.

## ರಾಜಧಾನಿ ತೊರೆಯಬೇಕಿದೆ ಅಧ್ಯಾಪಕರು

ಕಾಲೇಜು ಶಿಕ್ಷಣ ಇಲಾಖೆ ಹೊರಡಿಸಿರುವ ಅಧಿಸೂಚನೆಯಂತೆ ಒಂದು ನಗರದಲ್ಲಿ ಇದುವರೆಗೂ ಕೆಲಸ ಮಾಡಿ ವರ್ಗಾವಣೆಗೆ ಅರ್ಹರಾಗಿರುವ ಬೋಧಕ ಸಿಬ್ಬಂದಿ ಅದೇ ನಗರದಲ್ಲಿನ ಬೇರೆ ಕಾಲೇಜುಗಳನ್ನು ಆಯ್ಕೆ ಮಾಡಿಕೊಳ್ಳುವಂತಿಲ್ಲ. 'ಎ' ವಲಯದಲ್ಲಿ ಬೆಂಗಳೂರು ಒಂದೇ ಇರುವ ಕಾರಣ ಹಲವು ವರ್ಷಗಳಿಂದ ರಾಜಧಾನಿಯಲ್ಲಿ ಕೆಲಸ ಮಾಡುತ್ತಿದ್ದವರು ಅನಿವಾರ್ಯವಾಗಿ ಬೇರೆ ವಲಯಗಳಿಗೆ ತೆರಳಬೇಕಿದೆ. ಅಲ್ಲದೇ 'ಬಿ' ವಲಯದಿಂದ ಆರಂಭಿಸಿ 'ಇ' ವಲಯ ಮುಕ್ತಾಯವಾದ ನಂತರವೇ 'ಎ' ವಲಯದಲ್ಲಿರುವ ಬೆಂಗಳೂರಿನ ಕಾಲೇಜುಗಳ ಬೋಧಕ ಸಿಬ್ಬಂದಿಯ ವರ್ಗಾವಣೆ ನಡೆಯುತ್ತದೆ. ಹಾಗಾಗಿ, ವರ್ಗಾವಣೆಯ ಆದ್ಯತಾ ಪಟ್ಟಿಯಲ್ಲಿ ಹೆಸರು ಇರುವ ಎಲ್ಲ ಹುದ್ದೆಗಳನ್ನು ಖಾಲಿ ಹುದ್ದೆಗಳೆಂದೇ ಪರಿಗಣಿಸಿ ಕೌನ್ಸೆಲಿಂಗ್ ಆರಂಭಿಸಲಾಗುತ್ತಿದೆ.

**2021ನೇ ಸಾಲಿನ ವರ್ಗಾವಣೆ ವಿಳಂಬವಾದ ಕಾರಣ ಕಳೆದ ವರ್ಷ ಎರಡು ವರ್ಗಾವಣೆ ನಡೆದಿವೆ. 2023ನೇ ಸಾಲಿನ ವರ್ಗಾವಣೆ ಈಗ ಶುರುವಾಗಿದೆ. ಇದರಿಂದ ಕಡಿಮೆ ಅವಧಿಯಲ್ಲಿ ಹೆಚ್ಚು ವರ್ಗಾವಣೆ ಎಂಬ ಭಾವನೆ ಮೂಡಿದೆ**

**ಪ್ರದೀಪ್ ಪಿ.,**
ಆಯುಕ್ತ, ಉನ್ನತ ಶಿಕ್ಷಣ ಇಲಾಖೆ

# ಗುತ್ತಿಗೆದಾರರಿಗೆ ₹25 ಸಾವಿರ ಕೋಟಿ ಬಾಕಿ: ಡಿ. ಕೆಂಪಣ್ಣ ಅಸಮಾಧಾನ

ಪ್ರಜಾವಾಣಿ ವಾರ್ತೆ

**ಶಿವಮೊಗ್ಗ:** ರಾಜ್ಯದಾದ್ಯಂತ ಲೋಕೋಪಯೋಗಿ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳ ಮೂಲಕ ನಡೆಸಿರುವ ಕಾಮಗಾರಿಗಳ ₹25 ಸಾವಿರ ಕೋಟಿ ಬಾಕಿ ಇದೆ. ಇದರಿಂದ ಗುತ್ತಿಗೆದಾರರು ಸಂಕಷ್ಟದಲ್ಲಿ ಜೀವನ ನಡೆಸುವ ಪರಿಸ್ಥಿತಿ ಎದುರಾಗಿದೆ ಎಂದು ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಡಿ. ಕೆಂಪಣ್ಣ ಅವರು ಅಸಮಾಧಾನ ವ್ಯಕ್ತಪಡಿಸಿದರು.

ನಗರದ ಪ್ರವಾಸಿ ಮಂದಿರದಲ್ಲಿ ಶುಕ್ರವಾರ ನಡೆದ ಜಿಲ್ಲಾ ಗುತ್ತಿಗೆದಾರರ ಸಭೆಯಲ್ಲಿ ಮಾತನಾಡಿದರು.

'ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರದ ಅವಧಿಯಲ್ಲಿ ನಡೆಸಿರುವ ಅಭಿವೃದ್ಧಿ ಕಾಮಗಾರಿಗಳ ಹಣ ಕಳೆದ ಮಾರ್ಚ್‌ನಿಂದ ಬಿಡುಗಡೆ ಆಗಿಲ್ಲ. ಇದೀಗ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಬಂದು ಎರಡು ತಿಂಗಳಾಗಿದೆ. ಇವರು ಸಹ ಹಣ ಬಿಡುಗಡೆಗೆ ವಿಳಂಬ ಮಾಡುತ್ತಿದ್ದಾರೆ' ಎಂದು ಅವರು ದೂರಿದರು.

'ಬಿಜೆಪಿ ಸರ್ಕಾರದ ಅವಧಿಯಲ್ಲಿ ಭ್ರಷ್ಟಾಚಾರದ ಕುರಿತು ಆರೋಪ ಮಾತ್ರ ಮಾಡಲಿಲ್ಲ. ಪೂರಕ ದಾಖಲೆಗಳನ್ನು ಪ್ರಧಾನಿ ಕಚೇರಿ, ಮುಖ್ಯಮಂತ್ರಿ ಕಚೇರಿ ಹಾಗೂ ರಾಜ್ಯಪಾಲರಿಗೆ ಸಲ್ಲಿಸಲಾಗಿತ್ತು. ಈ ಪೈಕಿ ರಾಜ್ಯಪಾಲರು ಮಾತ್ರ ಸಂಬಂಧಿಸಿದ ಇಲಾಖೆಗಳಿಗೆ ಸೂಕ್ತ ಕ್ರಮ ಜರುಗಿಸಬೇಕೆಂದು ಸೂಚನೆ ನೀಡಿದ್ದರು. ಬೇರೆ ಯಾರೂ ಈ ಬಗ್ಗೆ ಸಕಾರಾತ್ಮಕವಾಗಿ ಸ್ಪಂದಿಸಲಿಲ್ಲ' ಎಂದರು.

'ನಾವು ಯಾವುದೇ ಒಂದು ಪಕ್ಷದ ಪರ ಅಥವಾ ವಿರುದ್ಧ ಇಲ್ಲ. ಆಡಳಿತ ವ್ಯವಸ್ಥೆಯಲ್ಲಿ ನಡೆಯುತ್ತಿರುವ ಭ್ರಷ್ಟಾಚಾರ ಮಾತ್ರ ಪ್ರಶ್ನಿಸಿದ್ದೇವೆ. ಇದೀಗ ಆಡಳಿತ ನಡೆಸುತ್ತಿರುವ ಪಕ್ಷವೂ ಹಿಂದಿನ ಸರ್ಕಾರದ ರೀತಿಯೇ ನಡೆದುಕೊಂಡರೆ ಅದರ ವಿರುದ್ಧವೂ ಹೋರಾಟದ ಹಾದಿ ಹಿಡಿಯಬೇಕಾಗುತ್ತದೆ' ಎಂದು ಕೆಂಪಣ್ಣ ಅವರು ಎಚ್ಚರಿಸಿದರು.

ರಾಮನಗರದಲ್ಲಿರುವ ಕಾವೇರಿ ನೀರಾವರಿ ನಿಗಮದ ಮಂಚನಬೆಲೆ ಯೋಜನಾ ವಿಭಾಗದ ಕಾರ್ಯನಿರ್ವಾಹಕ ಎಂಜಿನಿಯರ್ ಕಚೇರಿಗೆ ಶುಕ್ರವಾರ ದಾಳಿ ನಡೆಸಿದ ಲೋಕಾಯುಕ್ತ ಪೊಲೀಸರು, ಕಂಪ್ಯೂಟರ್‌ಗಳಲ್ಲಿರುವ ದಾಖಲೆಗಳನ್ನು ಪರಿಶೀಲನೆ ನಡೆಸಿದರು

# ಮಂಚನಬೆಲೆ: ಇ.ಇ ಕಚೇರಿ ಮೇಲೆ ಲೋಕಾಯುಕ್ತ ದಾಳಿ

ಪ್ರಜಾವಾಣಿ ವಾರ್ತೆ

**ರಾಮನಗರ:** ಕಾಮಗಾರಿಯಲ್ಲಿ ಅವ್ಯವಹಾರ ಆರೋಪದ ದೂರಿನ ಮೇರೆಗೆ ನಗರದ ಅರ್ಕಾವತಿ ಬಡಾವಣೆಯಲ್ಲಿರುವ ಕಾವೇರಿ ನೀರಾವರಿ ನಿಗಮದ ಮಂಚನಬೆಲೆ ಯೋಜನಾ ವಿಭಾಗದ ಕಾರ್ಯನಿರ್ವಾಹಕ ಎಂಜಿನಿಯರ್ ಕಚೇರಿ ಮೇಲೆ ಲೋಕಾಯುಕ್ತ ಪೊಲೀಸರು ಶುಕ್ರವಾರ ದಾಳಿ ನಡೆಸಿದರು.

ಅರ್ಕಾವತಿ ಭವನದಲ್ಲಿರುವ ಕಚೇರಿ ಮೇಲೆ ಡಿವೈಎಸ್ಪಿ ಗೌತಮ್ ನೇತೃತ್ವದಲ್ಲಿ ದಾಳಿ ನಡೆಸಿದ ತಂಡ, ಕಡತಗಳ ಪರಿಶೀಲನೆ ನಡೆಸಿತು. ಕಚೇರಿ ಅಧಿಕಾರಿಗಳು ಹೊರಗೆ ಹೋಗದಂತೆ ದಿಗ್ಬಂಧನ ಹಾಕಲಾಗಿತ್ತು. ಎಲ್ಲರ ಮೊಬೈಲ್ ಫೋನ್‌ಗಳನ್ನು ತೆಗೆದುಕೊಂಡು ವಿಚಾರಣೆ ನಡೆಸಿತು.

'ನಿಗಮದ ಕಾಮಗಾರಿಗಳಲ್ಲಿ ಭಾರಿ ಅವ್ಯವಹಾರ ನಡೆದಿದೆ ಎಂದು ಆರ್‌ಟಿಐ ಕಾರ್ಯಕರ್ತ ಶಂಕರ್ ಎಂಬುವರು ದೂರು ನೀಡಿದ್ದರು. ಆ ಮೇರೆಗೆ ದಾಳಿ ನಡೆಸಿ, ಕಡತಗಳ ಪರಿಶೀಲನೆ ನಡೆಸಿ ವಶಕ್ಕೆ ಪಡೆಯಲಾಗಿದೆ' ಎಂದು ಲೋಕಾಯುಕ್ತ ಡಿವೈಎಸ್ಪಿ ಗೌತಮ್ ಎಂ.ಆರ್. 'ಪ್ರಜಾವಾಣಿ'ಗೆ ತಿಳಿಸಿದರು.

'ಇತ್ತೀಚೆಗೆ ನಿವೃತ್ತರಾದ ಕಾರ್ಯನಿರ್ವಾಹಕ ಎಂಜಿನಿಯರ್ ವೆಂಕಟೇಗೌಡ ಹಾಗೂ ಕಚೇರಿಯ ಲೆಕ್ಕ ಅಧೀಕ್ಷಕರ ಮೇಲೆಯೂ ಆರೋಪಗಳು ಬಂದಿವೆ. ಕಡತಗಳ ಪರಿಶೀಲನೆ ಆಧರಿಸಿ ತಜ್ಞರ ಅಭಿಪ್ರಾಯ ಪಡೆದು, ಸಂಬಂಧಪಟ್ಟವರಿಗೆ ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ನೀಡಲಾಗುವುದು' ಎಂದು ಹೇಳಿದರು.

## ಪಾಪು ಪ್ರಶಸ್ತಿಗೆ ರಾಮಕೃಷ್ಣ ಆಯ್ಕೆ

ಪ್ರಜಾವಾಣಿ ವಾರ್ತೆ

ಜಿ.ರಾಮಕೃಷ್ಣ

**ಧಾರವಾಡ:** ನಗರದ ಕರ್ನಾಟಕ ವಿದ್ಯಾವರ್ಧಕ ಸಂಘದಿಂದ ನೀಡುವ 'ಸಿರಿಗನ್ನಡಂ ಗೆಲ್ಗೆ ರಾ.ಹ. ದೇಶಪಾಂಡೆ' ಪ್ರಶಸ್ತಿಗೆ ಬೀದರ್ ಜಿಲ್ಲೆಯ ಭಾಲ್ಕಿ ಹಿರೇಮಠ ಸಂಸ್ಥಾನ ಹಾಗೂ 'ಕನ್ನಡ ಪ್ರಪಂಚ ಡಾ. ಪಾಟೀಲ ಪುಟ್ಟಪ್ಪ' ಪುರಸ್ಕಾರಕ್ಕೆ ಹಿರಿಯ ಚಿಂತಕ ಬೆಂಗಳೂರಿನ ಡಾ. ಜಿ. ರಾಮಕೃಷ್ಣ ಅವರನ್ನು ಆಯ್ಕೆ ಮಾಡಲಾಗಿದೆ. ಎರಡೂ ಪ್ರಶಸ್ತಿಗಳು ತಲಾ ₹ 50 ಸಾವಿರ ನಗದು, ಫಲಕ ಒಳಗೊಂಡಿವೆ.

ಕನ್ನಡ ಭಾಷೆಯ ಸಂವರ್ಧನೆಗೆ ವಿಶಿಷ್ಟ ಸೇವೆ ಸಲ್ಲಿಸಿದ ಸಾಹಿತಿಗಳು, ಚಿಂತಕರು, ಸಂಸ್ಥೆಗಳಿಗೆ ರಾ.ಹ. ದೇಶಪಾಂಡೆ' ಪ್ರಶಸ್ತಿ ನೀಡಲಾಗುತ್ತದೆ. ಸಂಘದ 134ನೇ ಸಂಸ್ಥಾಪನಾ ದಿನಾಚರಣೆಯಲ್ಲಿ ಜುಲೈ 22ರಂದು ಈ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ.

ಪತ್ರಿಕಾ ರಂಗ ಮತ್ತು ಕನ್ನಡ ಹೋರಾಟದಲ್ಲಿ ತೊಡಗಿಸಿಕೊಂಡ ವ್ಯಕ್ತಿಗಳು, ಸಂಸ್ಥೆಗಳಿಗೆ 'ಕನ್ನಡ ಪ್ರಪಂಚ ಡಾ ಪಾಟೀಲ ಪುಟ್ಟಪ್ಪ' ರಾಷ್ಟ್ರೀಯ ಪ್ರಶಸ್ತಿ ನೀಡಲಾಗುತ್ತದೆ. ಜುಲೈ 24ರಂದು ಈ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಶಂಕರ ಹಲಗತ್ತಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಶಿಕ್ಷಕ ವರ್ಗಾವಣೆ: ಅತ್ತು ಸುಸ್ತಾದ ವಿದ್ಯಾರ್ಥಿನಿಯರು ಆಸ್ಪತ್ರೆಗೆ ದಾಖಲು

ಪ್ರಜಾವಾಣಿ ವಾರ್ತೆ

**ಸೇಡಂ (ಕಲಬುರಗಿ ಜಿಲ್ಲೆ):** ತಾಲ್ಲೂಕಿನ ಕೋಡ್ಲಾ ಗ್ರಾಮದ ಸರ್ಕಾರಿ ಪ್ರೌಢ ಶಾಲೆಯ ದೈಹಿಕ ಶಿಕ್ಷಣ ಶಿಕ್ಷಕ ನಾಗಯ್ಯ ಮಠ ಅವರ ವರ್ಗಾವಣೆ ವಿಷಯ ತಿಳಿದು ಶಾಲೆಯಲ್ಲಿ ವಿದ್ಯಾರ್ಥಿನಿಯರು ಅತ್ತು ಅಸ್ವಸ್ಥರಾಗಿ ಆಸ್ಪತ್ರೆಗೆ ದಾಖಲಾದ ಪ್ರಸಂಗ ಶುಕ್ರವಾರ ನಡೆಯಿತು.

ಬೆಳಿಗ್ಗೆ ಪ್ರಾರ್ಥನೆ ಅವಧಿಗೂ ಮುನ್ನ ಕೆಲ ವಿದ್ಯಾರ್ಥಿಗಳು ದುಃಖವನ್ನು ವ್ಯಕ್ತಪಡಿಸಿದರು. ಪ್ರಾರ್ಥನೆ ನಂತರ ಇನ್ನಷ್ಟು ವಿದ್ಯಾರ್ಥಿಗಳು, 'ಸರ್ ನಮ್ಮನ್ನು ಬಿಟ್ಟು ಹೋಗಬೇಡಿ. ಇಲ್ಲಿಯೇ ಇರಿ' ಎಂದು ಗಳಗಳನೆ ಅಳಲು ಪ್ರಾರಂಭಿಸಿದರು. ಶಾಲೆಯ ಶಿಕ್ಷಕರು ಹಾಗೂ ಸಿಬ್ಬಂದಿ ಸಮಾಧಾನಪಡಿಸಲು ಯತ್ನಿಸಿದರೂ ಸುಮ್ಮನಾಗದ ವಿದ್ಯಾರ್ಥಿಗಳು ತಮ್ಮ ದುಃಖವನ್ನು ತೋಡಿಕೊಳ್ಳುತ್ತಿದ್ದರು.

ಕೆಲ ವಿದ್ಯಾರ್ಥಿನಿಯರು ಬಹಳ ಹೊತ್ತಿನವರೆಗೆ ಅತ್ತಿದ್ದರಿಂದ ಪ್ರಜ್ಞೆ ತಪ್ಪಿದರು. ತಕ್ಷಣವೇ ಶಿಕ್ಷಕರು ಕೋಡ್ಲಾದ ಪ್ರಾಥಮಿಕ ಆರೋಗ್ಯದ ಕೇಂದ್ರದ ಸಿಬ್ಬಂದಿಗೆ ಕರೆ ಮಾಡಿದರು. ವಿದ್ಯಾರ್ಥಿಗಳಿಗೆ ಶಾಲೆಯಲ್ಲೇ ಪ್ರಥಮ ಚಿಕಿತ್ಸೆ ನೀಡಲಾಯಿತು. ಪ್ರಜ್ಞೆ ತಪ್ಪಿದ್ದ 9ನೇ ತರಗತಿಯ ಮೂವರು ಹಾಗೂ 10ನೇ ತರಗತಿಯ ಇಬ್ಬರು ವಿದ್ಯಾರ್ಥಿನಿಯರನ್ನು ಆಂಬುಲೆನ್ಸ್‌ನಲ್ಲಿ ಸೇಡಂ ತಾಲ್ಲೂಕು ಆಸ್ಪತ್ರೆಗೆ ಕರೆತಂದು ಚಿಕಿತ್ಸೆ ಕೊಡಿಸಲಾಯಿತು.

ಶಾಲೆಯ ಮುಖ್ಯಶಿಕ್ಷಕಿ ಉಮಾದೇವಿ, ದೈಹಿಕ ಶಿಕ್ಷಣ ಶಿಕ್ಷಕ ನಾಗಯ್ಯ ಮಠ ವಿದ್ಯಾರ್ಥಿಗಳಿಗೆ ಚಿಕಿತ್ಸೆ ಕೊಡಿಸುವಲ್ಲಿ ನೆರವಾದರು.

### ಯೋಗ ಶಾಲೆಯಾಗಿಸಿದ್ದ ಶಿಕ್ಷಕ

ಕೋಡ್ಲಾ ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ ನಾಗಯ್ಯ ಮಠ 20 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದಾರೆ. ಯೋಗ, ಕ್ರೀಡೆಯಲ್ಲಿ ತೊಡಗಿಕೊಳ್ಳುವಂತೆ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುತ್ತಿದ್ದರು. ಯೋಗದಲ್ಲಿ ಶಾಲೆಯ ವಿದ್ಯಾರ್ಥಿಗಳು ರಾಜ್ಯಮಟ್ಟದವರೆಗೂ ಸಾಧನೆ ಮಾಡಿದ್ದಾರೆ. ತಾಲ್ಲೂಕಿನಲ್ಲಿಯೇ ಯೋಗದ ಶಾಲೆಯೆಂದೇ ಕೋಡ್ಲಾ ಪ್ರಸಿದ್ಧಿ ಪಡೆದಿದೆ. ಶಿಕ್ಷಕ ನಾಗಯ್ಯ ಮಠ ಅವರು ಜುಲೈ 14ರಂದು ಅಫಜಲಪುರ ತಾಲ್ಲೂಕಿನ ಮಣ್ಣೂರ ಸರ್ಕಾರಿ ಪ್ರೌಢಶಾಲೆಗೆ ವರ್ಗಾವಣೆಯಾಗಿದ್ದಾರೆ.

# ಚಿರತೆ ಹಿಡಿದು ಅರಣ್ಯಾಧಿಕಾರಿಗೆ ಒಪ್ಪಿಸಿದ!

ಪ್ರಜಾವಾಣಿ ವಾರ್ತೆ

**ಹಾಸನ:** ಜಿಲ್ಲೆಯ ಅರಸೀಕೆರೆ ತಾಲ್ಲೂಕಿನ ಗಂಡಸಿ ಹೋಬಳಿಯ ಬಾಗಿವಾಳು ಗ್ರಾಮದ ಯುವಕ ವೇಣುಗೋಪಾಲ್ ಅವರು ಚಿರತೆಯನ್ನು ಸೆರೆ ಹಿಡಿದು, ಬೈಕ್‌ನಲ್ಲಿ ಕಟ್ಟಿಕೊಂಡು ಹೋಗಿ ಅರಣ್ಯ ಇಲಾಖೆಗೆ ಒಪ್ಪಿಸಿದ್ದಾರೆ.

ಶುಕ್ರವಾರ ಬೆಳಿಗ್ಗೆ ಅವರು ಬೈಕ್‌ನಲ್ಲಿ ಜಮೀನಿಗೆ ಹೋಗುತ್ತಿದ್ದಾಗ ದಾಳಿ ಮಾಡಿದ್ದ ಚಿರತೆಯನ್ನು ಓಡಿಸಲು ಯತ್ನಿಸಿದ್ದರು. ಆದರೆ ಚಿರತೆ ಮತ್ತಷ್ಟು ಜೋರಾಗಿ ದಾಳಿ ನಡೆಸಿತ್ತು. ಪ್ರಯತ್ನ ಬಿಡದ ಅವರು, ಬೈಕ್‌ನಲ್ಲಿದ್ದ ಹಗ್ಗದಿಂದ ಉರುಳು ಹಾಕಿ ಸೆರೆ ಹಿಡಿದು, ಅದೇ ಹಗ್ಗದಿಂದ ಅದರ ಕಾಲುಗಳನ್ನು ಕಟ್ಟಿ ಹಾಕಿದರು. ಕೋಲುಗಳ ಸಹಾಯದಿಂದ ಬೈಕ್‌ನ ಹಿಂಭಾಗದಲ್ಲಿ ಚಿರತೆಯನ್ನು ಕಟ್ಟಿಕೊಂಡು, ಗ್ರಾಮಕ್ಕೆ ಹೋದರು. ಗ್ರಾಮಸ್ಥರು ಅವರಿಗೆ ಪ್ರಥಮ ಚಿಕಿತ್ಸೆ ನೀಡಿದ ನಂತರ, ಅರಣ್ಯ ಇಲಾಖೆ ಅಧಿಕಾರಿಗಳಿಗೆ ಮಾಹಿತಿ ನೀಡಲಾಯಿತು. ಅರಣ್ಯ ಸಿಬ್ಬಂದಿಯು ಗಂಡಸಿ ಪಶು ವೈದ್ಯಕೀಯ ಆಸ್ಪತ್ರೆಯಲ್ಲಿ ಚಿರತೆಗೆ ಚಿಕಿತ್ಸೆ ದೊರಕಿಸಿದರು.

ಕಾಲುಗಳನ್ನು ಕಟ್ಟಿ ಸೆರೆ ಹಿಡಿದ ಚಿರತೆ

**ಕೊಟ್ಟಿಗೆ ಸೇರಿರುವ ಚಿರತೆ:** ಹಾಸನ ತಾಲ್ಲೂಕು ಹೊಸಳ್ಳಿಯ ಧರ್ಮ ಅವರ ಮನೆಯ ಕೊಟ್ಟಿಗೆಗೆ ಚಿರತೆಯೊಂದು ನುಗ್ಗಿದೆ. ದನಗಳ ಜೊತೆಯಲ್ಲಿಯೇ ಅಡಗಿರುವ ಅದನ್ನು ಸೆರೆ ಹಿಡಿಯಲು ಕಾರ್ಯಾಚರಣೆ ನಡೆದಿತ್ತು.

# ಹೈಕೋರ್ಟ್ ತೀರ್ಪಿಗೆ 'ಸುಪ್ರೀಂ' ತಡೆ

ಅನುದಾನರಹಿತ ಶಾಲೆಗಳಿಗೆ ನೇಮಕ, ಶುಲ್ಕ ನಿಯಂತ್ರಣ

ಪ್ರಜಾವಾಣಿ ವಾರ್ತೆ

**ನವದೆಹಲಿ:** ಖಾಸಗಿ ಅನುದಾನರಹಿತ ಶಾಲೆಗಳಲ್ಲಿ ಶುಲ್ಕ ನಿಗದಿ ಹಾಗೂ ನೇಮಕಾತಿಗೆ ಸಂಬಂಧಿಸಿ ಕರ್ನಾಟಕ ಶಿಕ್ಷಣ ಕಾಯ್ದೆಯ ಕೆಲ ಅವಕಾಶಗಳನ್ನು ರಾಜ್ಯ ಸರ್ಕಾರಕ್ಕೆ ನೀಡಿದ್ದ ಅಧಿಕಾರವನ್ನು ರದ್ದುಗೊಳಿಸಿ ಕರ್ನಾಟಕ ಹೈಕೋರ್ಟ್ ಕಳೆದ ಡಿಸೆಂಬರ್ 1ರಂದು ನೀಡಿದ್ದ ತೀರ್ಪಿಗೆ ಸುಪ್ರೀಂಕೋರ್ಟ್ ಶುಕ್ರವಾರ ತಡೆ ನೀಡಿದೆ.

ಕರ್ನಾಟಕ ಸರ್ಕಾರ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಬಿ.ಆರ್.ಗವಾಯಿ, ಜೆ.ಬಿ.ಪಾರ್ದಿವಾಲಾ ಹಾಗೂ ಎಸ್.ವಿ.ಭಟ್ಟಿ ಅವರಿದ್ದ ನ್ಯಾಯಪೀಠ, ಪ್ರತಿವಾದಿ ಸಲ್ಲಿಸುವಂತೆ ಕರ್ನಾಟಕ ಅನುದಾನರಹಿತ ಶಾಲಾ ಆಡಳಿತ ಮಂಡಳಿಗಳ ಒಕ್ಕೂಟಕ್ಕೆ ನೋಟಿಸ್ ನೀಡಿತು.

ಕರ್ನಾಟಕ ಸರ್ಕಾರ ಪರ ಹಾಜರಿದ್ದ ಹಿರಿಯ ವಕೀಲ ದೇವದತ್ತ ಕಾಮತ್, 'ಈ ವಿಚಾರವಾಗಿ ಸುಪ್ರೀಂಕೋರ್ಟ್ ಈ ಹಿಂದೆ ಹಲವಾರು ಪ್ರಕರಣಗಳಲ್ಲಿ ನೀಡಿರುವ ತೀರ್ಪುಗಳನ್ನು ಪರಿಗಣಿಸುವಲ್ಲಿ ಹೈಕೋರ್ಟ್ ವಿಫಲವಾಗಿದೆ' ಎಂದರು.

'ಟಿಎಂಎ ಪೈ ಪ್ರತಿಷ್ಠಾನದ ಪ್ರಕರಣದಲ್ಲಿ ವ್ಯಕ್ತಪಡಿಸಿದ್ದ ಅಭಿಪ್ರಾಯಗಳ ಆಧಾರದಲ್ಲಿ ಹೈಕೋರ್ಟ್ ಈ ತೀರ್ಪು ನೀಡಿದೆ. ವಾಸ್ತವದಲ್ಲಿ ಈ ಪ್ರಕರಣದಲ್ಲಿ ತದ್ವಿರುದ್ಧ ತೀರ್ಪು ನೀಡಲಾಗಿತ್ತು' ಎಂದು ನ್ಯಾಯಪೀಠಕ್ಕೆ ತಿಳಿಸಿದರು.

# ದಂಪತಿ ಜಗಳ: ಸ್ಟೇರಿಂಗ್ ಎಳೆದ ಪತ್ನಿ, ಉರುಳಿಬಿದ್ದ ಕಾರು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಹಲಸೂರು ಗೇಟ್ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಚಲಿಸುತ್ತಿದ್ದ ಕಾರಿನಲ್ಲಿ ದಂಪತಿ ನಡುವೆ ಜಗಳ ಶುರುವಾಗಿ ಅಪಘಾತ ಸಂಭವಿಸಿದ್ದು, ಕಾರು ಉರುಳಿಬಿದ್ದು ದಂಪತಿಗೆ ಗಾಯಗಳಾಗಿವೆ.

ಗುರುವಾರ ತಡರಾತ್ರಿ 1.30ರ ಸುಮಾರಿಗೆ ಅಪಘಾತ ಸಂಭವಿಸಿದ್ದು, ಘಟನೆ ಬಗ್ಗೆ ಶುಕ್ರವಾರ ರಾತ್ರಿಯವರೆಗೂ ಯಾವುದೇ ದೂರು ದಾಖಲಾಗಿಲ್ಲ. ದೂರು ನೀಡಲು ದಂಪತಿ ನಿರಾಕರಿಸಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಜೆ.ಪಿ.ನಗರ ನಿವಾಸಿಯಾಗಿರುವ 27 ವರ್ಷದ ಯುವಕ, ರಿಯಲ್ ಎಸ್ಟೇಟ್ ವ್ಯವಹಾರ ನಡೆಸುತ್ತಿದ್ದಾರೆ. ದೇವನಹಳ್ಳಿ ನಿವಾಸಿಯಾಗಿರುವ 29 ವರ್ಷದ ಯುವತಿಯನ್ನು ವರ್ಷದ ಹಿಂದೆಯಷ್ಟೇ ಮದುವೆಯಾಗಿದ್ದರು. ಜೆ.ಪಿ.ನಗರದಲ್ಲಿ ವಾಸವಿರುವ ದಂಪತಿ ನಡುವೆ ಇತ್ತೀಚೆಗೆ ಜಗಳ ಶುರುವಾಗಿತ್ತು' ಎಂದು ಮೂಲಗಳು ಹೇಳಿವೆ.

**ತವರು ಮನೆಗೆ ಕಳುಹಿಸಲು ಹೊರಟಿದ್ದ:** 'ಗುರುವಾರ ರಾತ್ರಿ ದಂಪತಿ ನಡುವೆ ಪುನಃ ಜಗಳವಾಗಿತ್ತು. ಬೇಸತ್ತ ಪತಿ, ಪತ್ನಿಯನ್ನು ದೇವನಹಳ್ಳಿಯಲ್ಲಿರುವ ತವರುಮನೆಗೆ ಬಿಟ್ಟು ಬರಲು ಹುಂಡೈ i-20 ಕಾರಿನಲ್ಲಿ ಹೊರಟಿದ್ದರು' ಎಂದು ಮೂಲಗಳು ಹೇಳಿವೆ.

'ಕೆ.ಆರ್. ಮಾರುಕಟ್ಟೆ ಕಡೆಯಿಂದ ಕೆಂಪೇಗೌಡ ರಸ್ತೆಯತ್ತ ಕಾರು ಹೊರಟಿತ್ತು. ಪತಿ ಕಾರು ಚಲಾಯಿಸುತ್ತಿದ್ದರು. ಮಾರ್ಗಮಧ್ಯೆ ಕೂಗಾಡಿದ್ದ ಪತ್ನಿ, ಸ್ಟೇರಿಂಗ್ ಹಿಡಿದು ಎಳೆದಿದ್ದರು. ನಿಯಂತ್ರಣ ತಪ್ಪಿದ ಕಾರು, ರಸ್ತೆ ಪಕ್ಕದ ಪಾದಚಾರಿ ಮಾರ್ಗಕ್ಕೆ ಡಿಕ್ಕಿ ಹೊಡೆದು ಉರುಳಿಬಿದ್ದಿತ್ತು. ಇದರಿಂದಾಗಿ ಗಾಜುಗಳು ಒಡೆದಿದ್ದವು. ರಕ್ಷಣೆಗೆ ಹೋಗಿದ್ದ ಸ್ಥಳೀಯರು, ದಂಪತಿಯನ್ನು ಹೊರಗೆ ಕರೆತಂದಿದ್ದರು. ದಂಪತಿಗೆ ಸಣ್ಣ-ಪುಟ್ಟ ಗಾಯಗಳಾಗಿದ್ದವು. ಇಬ್ಬರೂ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಚೇತರಿಸಿಕೊಂಡಿದ್ದಾರೆ. ಅಪಘಾತದಲ್ಲಿ ಸಾರ್ವಜನಿಕರಿಗೆ ಯಾವುದೇ ತೊಂದರೆ ಆಗಿಲ್ಲ. ದೂರು ನೀಡಲು ದಂಪತಿ ಸಹ ನಿರಾಕರಿಸಿದ್ದಾರೆ' ಎಂದು ಮೂಲಗಳು ತಿಳಿಸಿವೆ.


ಕರ್ನಾಟಕ ಸರ್ಕಾರ

KEA **ಕರ್ನಾಟಕ ಪರೀಕ್ಷಾ ಪ್ರಾಧಿಕಾರ**

ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560 012. ದೂರವಾಣಿ: 080–23 460 460 (5 ಲೈನ್‌ಗಳು)
ಫ್ಯಾಕ್ಸ್: 080–23461576 ಇ–ಮೇಲ್: keauthority-ka@nic.in ವೆಬ್‌ಸೈಟ್: http://kea.kar.nic.in

ಸಂಖ್ಯೆ: ಇಡಿ/ಕೆಇಎ/ಆಡಳಿತ/ಸಿ.ಆರ್–07/2023 ದಿನಾಂಕ: 14.07.2023

**ಅಧಿಸೂಚನೆ**

**ಕರ್ನಾಟಕದಲ್ಲಿನ ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕೋರ್ಸುಗಳ ಪ್ರವೇಶಕ್ಕಾಗಿ ಹಾಗೂ ಆಯುರ್ವೇದ, ಯುನಾನಿ ಮತ್ತು ಹೋಮಿಯೋಪತಿ ಪದವಿ ಕೋರ್ಸುಗಳಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನ– 2023–24**

1. ಸರ್ಕಾರವು ತನ್ನ ಆದೇಶ ಸಂಖ್ಯೆ ಆಕುಕ 124 ಆರ್‌ಜಿಯು ಬೆಂಗಳೂರು ದಿನಾಂಕ: 28.06.2017 ರಲ್ಲಿ, ಎಲ್ಲಾ ಸರ್ಕಾರಿ, ಖಾಸಗಿ (ಅಲ್ಪ ಸಂಖ್ಯಾತವೂ ಸೇರಿದಂತೆ), ಕಾಲೇಜುಗಳಲ್ಲಿನ ಸರ್ಕಾರಿ, ಖಾಸಗಿ, ಎನ್‌ಆರ್‌ಐ, ಮತ್ತು ಇತರೆ ವೈದ್ಯಕೀಯ / ದಂತವೈದ್ಯಕೀಯ ಕೋರ್ಸುಗಳ ಪ್ರವೇಶಕ್ಕಾಗಿ ಏಕರೂಪದ ಕೌನ್ಸಿಲಿಂಗ್ ಅನ್ನು ನಡೆಸಲು ನಿರ್ದೇಶಿಸಿದೆ.
2. ಸರ್ಕಾರದ ನಿರ್ದೇಶನದಂತೆ, 2023–24ನೇ ಸಾಲಿಗೆ ವೈದ್ಯಕೀಯ / ದಂತ ವೈದ್ಯಕೀಯ ಕೋರ್ಸುಗಳ ಪ್ರವೇಶಕ್ಕೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರವು (ಕಪಪ್ರಾ) UGNEET-2023 ರಲ್ಲಿ ಅರ್ಹತೆಯನ್ನು ಪಡೆದಿರುವ ಹಾಗು ಅರ್ಹತಾ ಮಾನದಂಡಗಳನ್ನು ಪೂರೈಸುವ ಎಲ್ಲಾ ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಿದೆ. UGNEET-2023 ರಲ್ಲಿ ನಿಗದಿಪಡಿಸಿರುವ ಕನಿಷ್ಠ ಅಂಕಗಳನ್ನು ಅಥವಾ ಅದಕ್ಕಿಂತ ಹೆಚ್ಚು ಅಂಕಗಳನ್ನು ಪಡೆದಿರುವ ಅಭ್ಯರ್ಥಿಗಳು ಮಾತ್ರ ವೈದ್ಯಕೀಯ / ದಂತ ವೈದ್ಯಕೀಯ / ಆಯುರ್ವೇದ, ಯುನಾನಿ, ಹೋಮಿಯೋಪತಿ ಪದವಿ ಕೋರ್ಸುಗಳ ಪ್ರವೇಶಕ್ಕೆ ನೊಂದಣಿ ಮಾಡಿಕೊಳ್ಳಲು ಅರ್ಹರಿರುತ್ತಾರೆ.
3. ಇದಲ್ಲದೆ, ಕರ್ನಾಟಕ ಆಯುಷ್ ಇಲಾಖೆಯ ದಿನಾಂಕ: 13.07.2023ರ ಪತ್ರದ ಅನ್ವಯ, ಸರ್ಕಾರಿ ಮತ್ತು ಸರ್ಕಾರಿ ಅನುದಾನಿತ ಸಂಸ್ಥೆಗಳಲ್ಲಿ 15% ಸೀಟು ಅಖಿಲ ಭಾರತ ಕೋಟದ ಸೀಟುಗಳನ್ನು ಹೊರತುಪಡಿಸಿ 85% ಸೀಟುಗಳನ್ನು ಹಾಗು ಕರ್ನಾಟಕ ರಾಜ್ಯದ ಖಾಸಗಿ ಆಯುರ್ವೇದ, ಯುನಾನಿ, ಹೋಮಿಯೋಪತಿ ಕಾಲೇಜುಗಳಲ್ಲಿ ಎಲ್ಲಾ ಸೀಟುಗಳನ್ನು (ರಾಜ್ಯ ಸರ್ಕಾರದ, ಭಾರತ ಸರ್ಕಾರದ ಮತ್ತು ಆಡಳಿತ ಮಂಡಳಿ / ಎನ್‌ಆರ್‌ಐ ಕೋಟದ ಸೀಟುಗಳನ್ನು ಒಳಗೊಂಡಂತೆ) ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕ ಹಂಚಿಕೆ ಮಾಡಲಾಗುವುದು. UGNEET-2023 ರಲ್ಲಿ ಅರ್ಹತೆಯನ್ನು ಪಡೆದಿರುವ ಅಭ್ಯರ್ಥಿಗಳು ಆಯುಷ್ ಸೀಟುಗಳಿಗೂ ಸಹ ನೋಂದಯಿಸಿಕೊಳ್ಳಬಹುದು. ಕರ್ನಾಟಕೇತರ ಅಭ್ಯರ್ಥಿಗಳು ನಿಗದಿತ ಸೀಟುಗಳಿಗೆ ಮಾತ್ರ ಅರ್ಹತೆಯನ್ನು ಪಡೆಯುತ್ತಾರೆ.
4. ಕರ್ನಾಟಕೇತರ ಅಭ್ಯರ್ಥಿಗಳಿಗೆ ಯಾವುದೇ ಮೀಸಲಾತಿಯ ಸವಲತ್ತುಗಳು ಅನ್ವಯಿಸುವುದಿಲ್ಲ. ಆದ್ದರಿಂದ UGNEET- 2023 ರಲ್ಲಿ ಸಾಮಾನ್ಯ ವರ್ಗಕ್ಕೆ ನಿಗದಿಪಡಿಸಿರುವ ಕನಿಷ್ಠ ಅಂಕಗಳನ್ನು ಪಡೆದಿದ್ದಲ್ಲಿ ಮಾತ್ರ (50th Percentile) ಅರ್ಹತೆಯನ್ನು ಪಡೆಯಬಹುದಾಗಿದೆ ಹಾಗು ಪ್ರವೇಶಕ್ಕಾಗಿ ನೊಂದಣಿಯನ್ನು ಮಾಡಿ ಕೊಳ್ಳಬಹುದಾಗಿದೆ. SC/ST/OBC ಅರ್ಹತಾ ಮಾನದಂಡಗಳು ಕರ್ನಾಟಕ SC/ST/OBC ಅಭ್ಯರ್ಥಿಗಳಿಗೆ ಮಾತ್ರ ಅನ್ವಯಿಸುತ್ತದೆ.
5. UGNEET-2023 ಮಾಹಿತಿ ಪುಸ್ತಕದಲ್ಲಿ ನೀಡಿರುವ ಶೈಕ್ಷಣಿಕ ಅರ್ಹತೆಗಳನ್ನು ಹಾಗು ಇತರೆ ಮಾನದಂಡಗಳನ್ನು ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಾಧಿಕಾರದ ವೆಬ್‌ಸೈಟ್ http://kea.kar.nic.in ನಲ್ಲಿ ಪ್ರಚುರ ಪಡಿಸಲಾಗಿದೆ. ಅಭ್ಯರ್ಥಿಗಳು ವೈದ್ಯಕೀಯ / ದಂತವೈದ್ಯಕೀಯ / ಆಯುರ್ವೇದ, ಯುನಾನಿ, ಹೋಮಿಯೋಪತಿ ಕೋರ್ಸುಗಳ ಪ್ರವೇಶಕ್ಕಾಗಿ ನೊಂದಣಿ ಮಾಡಿಕೊಳ್ಳುವ ಮೊದಲು ಶೈಕ್ಷಣಿಕ ಅರ್ಹತೆ, ವಿವಿಧ ವರ್ಗಗಳ ಸೀಟುಗಳಿಗೆ ನಿಗದಿಪಡಿಸಿರುವ ಅರ್ಹತಾ ಮಾನದಂಡಗಳು ಮತ್ತು ಅಂತಹ ಸೀಟುಗಳಿಗೆ ನಿಗದಿಪಡಿಸಿರುವ ಅಭ್ಯರ್ಥಿಯ ಅರ್ಹತೆ ಹಾಗು ಇತ್ಯಾದಿ ಮಾನದಂಡಗಳನ್ನು ಓದಿಕೊಂಡು ನೋಂದಣಿ ಮಾಡಿಕೊಳ್ಳಲು ಸೂಚಿಸಿದೆ.
6. ಆನ್‌ಲೈನ್ ಮೂಲಕ ನೊಂದಣಿ ಹಾಗು ಅರ್ಜಿ ಸಲ್ಲಿಸಲು ಪೋರ್ಟಲ್ ಅನ್ನು **14.07.2023 ರ ಸಂಜೆ 6:00** ರಿಂದ ತೆರೆಯಲಾಗಿದ್ದು, ಆಸಕ್ತ ಅರ್ಹ ಅಭ್ಯರ್ಥಿಗಳು **ದಿನಾಂಕ: 21.07.2023 ರ ರಾತ್ರಿ 11:59 ರ ವರೆಗೆ** ಆನ್‌ಲೈನ್ ಮೂಲಕ ನೋಂದಣಿ ಮಾಡಿ ಅರ್ಜಿ ಸಲ್ಲಿಸಬಹುದಾಗಿರುತ್ತದೆ. ನೊಂದಣಿ ಮಾಡಿ ಅರ್ಜಿ ಸಲ್ಲಿಸಿದ ನಂತರ ಅಭ್ಯರ್ಥಿಗಳು **22.07.2023 ರ ಸಂಜೆ 6:00 ರ ವರೆಗೆ** ಶುಲ್ಕ ಪಾವತಿಸಬಹುದಾಗಿರುತ್ತದೆ.
7. ನೋಂದಣಿ ಶುಲ್ಕ, ದಾಖಲಾತಿ ಪರಿಶೀಲನೆಯ ವೇಳಾಪಟ್ಟಿ, ದಾಖಲಾತಿ ಪರಿಶೀಲನೆಗೆ ಸಲ್ಲಿಸಬೇಕಾದ ಮೂಲ ದಾಖಲಾತಿಗಳು, ಹಾಗೂ ಇತರೆ ವಿವರಗಳನ್ನು ಪ್ರಾಧಿಕಾರದ ವೆಬ್‌ಸೈಟಿನಲ್ಲಿ ಪ್ರಕಟಿಸಲಾಗಿದೆ. ಆಸಕ್ತ ಅರ್ಹ ಅಭ್ಯರ್ಥಿಗಳು ಪ್ರಾಧಿಕಾರದ ವೆಬ್‌ಸೈಟಿನಲ್ಲಿ ನಿಗದಿತ ಲಿಂಕ್ ಅನ್ನು ಆಯ್ಕೆ ಮಾಡಿಕೊಂಡು ನೋಂದಣಿ ಮಾಡಿ, ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿ ದಾಖಲಾತಿ ಪರಿಶೀಲನೆಗೆ ಹಾಜರಾಗಬಹುದು.

**ನೋಂದಣಿ ಮಾಡಿ ದಾಖಲಾತಿ ಪರಿಶೀಲನೆಯನ್ನು ಪೂರ್ಣಗೊಳಿಸಿರುವ ಕರ್ನಾಟಕದ ಅಭ್ಯರ್ಥಿಗಳಿಗೆ ಮಾಹಿತಿ**

ಈಗಾಗಲೇ ಯುಜಿಸಿಇಟಿ–2023ಕ್ಕೆ ನೋಂದಣಿ ಮಾಡಿ ದಾಖಲಾತಿ ಪರಿಶೀಲನೆಯನ್ನು ಪೂರ್ಣಗೊಳಿಸಿರುವವರು, ವೈದ್ಯಕೀಯ / ದಂತವೈದ್ಯಕೀಯ / ಆಯುರ್ವೇದ, ಯುನಾನಿ, ಹೋಮಿಯೋಪತಿ ಕೋರ್ಸುಗಳ ಪ್ರವೇಶಾತಿಗಾಗಿ ಕೆಇಎ ವೆಬ್‌ಪೋರ್ಟಲ್‌ನಲ್ಲಿ ಯುಜಿಸಿಇಟಿ–2023ಕ್ಕೆ ದಾಖಲಿಸಿದ್ದ USER ID ಮತ್ತು ಪಾಸ್‌ವರ್ಡ್ ದಾಖಲಿಸಿ, ಯುಜಿನೀಟ್ 2023ರ ರೋಲ್ ನಂಬರ್ ಅನ್ನು ನೋಂದಣಿಯಲ್ಲಿ ದಾಖಲಿಸಿ ಅರ್ಜಿ ಸಲ್ಲಿಸಿ ಡಿಕ್ಲರೇಶನ್ ಮಾಡಬೇಕು. ನಂತರ ಶುಲ್ಕವನ್ನು ಪಾವತಿಸಬೇಕು. ತದ ನಂತರ ಅರ್ಜಿ ನಮೂನೆಯ ಮುದ್ರಿತ ಪ್ರತಿ ಪ್ರಿಂಟ್ ತೆಗೆದುಕೊಂಡು ಅರ್ಜಿಯಲ್ಲಿ ಮುದ್ರಿತವಾಗಿರುವ ನೀಟ್ ರೋಲ್ ನಂಬರ್ ಅನ್ನು ಪರಿಶೀಲಿಸಿಕೊಳ್ಳಿ.

- ಯುಜಿಸಿಇಟಿ–2023 ರಲ್ಲಿ ರ್‍ಯಾಂಕ್ ಅನ್ನು ಪಡೆದು ಸಿಇಟಿ–2006ರ ನಿಯಮದಂತೆ ಈಗಾಗಲೇ ದಾಖಲಾತಿ ಪರಿಶೀಲನೆಯನ್ನು ಪೂರ್ಣಗೊಳಿಸಿ, ಯುಜಿನೀಟ್ ಗಾಗಿ ಯಾವುದೇ ಬದಲಾವಣೆಯನ್ನು ಅರ್ಜಿಯಲ್ಲಿ ಮಾಡದಿರುವವರು ಅಥವಾ ಹೆಚ್ಚುವರಿಯಾಗಿ ಕ್ಲೇಮ್ ಮಾಡದಿರುವವರು, ವೈದ್ಯಕೀಯ / ದಂತವೈದ್ಯಕೀಯ / ಆಯುರ್ವೇದ, ಯುನಾನಿ, ಹೋಮಿಯೋಪತಿ ಕೋರ್ಸುಗಳಿಗೆ ಮತ್ತೊಮ್ಮೆ ದಾಖಲೆಗಳ ಪರಿಶೀಲನೆಗೆ ಹಾಜರಾಗುವಂತಿಲ್ಲ, ಆದರೆ ನಿಗದಿ ಪಡಿಸುವ ದಿನಾಂಕಗಳಂದು UG NEET-2023 Verification Slip ಅನ್ನು ಪ್ರಾಧಿಕಾರದ ವೆಬ್‌ಸೈಟಿನಿಂದ ಡೌನ್‌ಲೋಡ್ ಮಾಡಿಕೊಳ್ಳಬೇಕು.
- CET-2006 ನಿಯಮಗಳ ಅನ್ವಯ ಒಂದು ವೇಳೆ ಮೀಸಲಾತಿಗೆ ಸಂಬಂಧಿಸಿದ ಬದಲಾವಣೆ ಮಾಡಿಕೊಂಡಲ್ಲಿ ಅಥವಾ Linguistic Minority ಸೀಟುಗಳನ್ನು ಅಥವಾ Religious Minority or NRI Ward ಸೀಟುಗಳನ್ನು ಅಥವಾ St. John Medical College, Bangalore, (Category-2 to Category-8 ) ನಲ್ಲಿರುವ ನಿರ್ದಿಷ್ಟ ಸೀಟುಗಳನ್ನು ಪಡೆಯಲು ಅರ್ಹರಿದ್ದಲ್ಲಿ ಕೆಇಎ ವೆಬ್‌ಪೋರ್ಟಲ್ ನಲ್ಲಿ ನಿಗದಿತ ಲಿಂಕ್ ಅನ್ನು ಆಯ್ಕೆ ಮಾಡಿ, ಕ್ಲೇಮ್ ಮಾಡಿ, ನಂತರ ಕ್ಲೇಮ್‌ಗೆ ಸಂಬಂಧಿಸಿದ ಎಲ್ಲಾ ಅಗತ್ಯ ದಾಖಲೆಗಳೊಂದಿಗೆ ನಿಗದಿತ ದಿನಾಂಕಗಳಂದು ಪರಿಶೀಲನೆಗೆ ಹಾಜರಾಗಬೇಕು.

**ಕರ್ನಾಟಕೇತರ ಅಭ್ಯರ್ಥಿಗಳಿಗೆ ಮಾಹಿತಿ**

ಕರ್ನಾಟಕೇತರ ಅಭ್ಯರ್ಥಿಗಳು, ಯುಜಿನೀಟ್ 2023 ರಲ್ಲಿ ಅರ್ಹತೆಯನ್ನು ಪಡೆದಿದ್ದರೆ, ವೈದ್ಯಕೀಯ / ದಂತ ವೈದ್ಯಕೀಯ ಆಯುರ್ವೇದ, ಯುನಾನಿ, ಹೋಮಿಯೋಪತಿ ಕೋರ್ಸುಗಳ ಪ್ರವೇಶಾತಿಗಾಗಿ, ಅಭ್ಯರ್ಥಿಗಳು ಮೊದಲು ಕೆಇಎ ವೆಬ್‌ಪೋರ್ಟಲ್ ನಲ್ಲಿ ನೋಂದಣಿ ಮಾಡಿ, ಶುಲ್ಕವನ್ನು ಪಾವತಿಸಬೇಕು. ನಂತರ 12ನೇ ತರಗತಿಯ ಅಂಕಗಳನ್ನು ಕೆಇಎ ಪೋರ್ಟಲ್ ನಲ್ಲಿ ದಾಖಲಿಸಿ ಅಂಕಪಟ್ಟಿಯನ್ನು upload ಮಾಡಬೇಕು. ದಾಖಲೆಗಳ ಪರಿಶೀಲನೆಗೆ ಹಾಜರಾಗುವ ಅವಶ್ಯಕತೆ ಇರುವುದಿಲ್ಲ. ಆದರೆ OCI / PIO / NRI / Foreign Nationals ಅಭ್ಯರ್ಥಿಗಳು, ಕರ್ನಾಟಕೇತರ ಅಭ್ಯರ್ಥಿಗಳು Religious Minority or NRI Ward seats ಸೀಟುಗಳನ್ನು ಅಥವಾ St. John Medical College, Bangalore, (Category-2 to Category-8) ನಲ್ಲಿ ನಿರ್ದಿಷ್ಟ ಸೀಟುಗಳನ್ನು ಪಡೆಯಲು ಅರ್ಹರಿದ್ದಲ್ಲಿ, ಅಂತಹ ಅಭ್ಯರ್ಥಿಗಳು ಮಾತ್ರ ನಿಗದಿತ ದಿನಾಂಕಗಳಂದು ದಾಖಲಾತಿ ಪರಿಶೀಲನೆಗೆ ಹಾಜರಾಗಬೇಕು.

8. 2023–24ನೇ ಸಾಲಿಗೆ ಕರ್ನಾಟಕ ರಾಜ್ಯದಲ್ಲಿನ ಸರ್ಕಾರಿ ವೈದ್ಯಕೀಯ / ದಂತವೈದ್ಯಕೀಯ ಕಾಲೇಜುಗಳಲ್ಲಿನ ವೈದ್ಯಕೀಯ ದಂತವೈದ್ಯಕೀಯ ಕೋರ್ಸುಗಳು, ಖಾಸಗಿ ಮತ್ತು ಅಲ್ಪ ಸಂಖ್ಯಾತ ವೈದ್ಯಕೀಯ / ದಂತ ವೈದ್ಯಕೀಯ ಕಾಲೇಜುಗಳಲ್ಲಿನ ಸರ್ಕಾರಿ ಕೋಟದ ಸೀಟುಗಳು, ಖಾಸಗಿ ವೈದ್ಯಕೀಯ / ದಂತ ವೈದ್ಯಕೀಯ (KPCF, KRLMPCA, AMPCK) ಸೀಟುಗಳಿಗೆ Karnataka Selection of Candidates for Admission to Government Seats in Professional Educational Institutions Rules, 2006 as amended from time to time ಹಾಗು as per the guidelines of MCI / DCI / Ministry of Health and Family Welfare, GOI / Government of India / Director Medical Education, Karnataka / Entrance Test Committee ಅನ್ವಯ KPCF, KRLMPCA, AMPCK ಕಾಲೇಜುಗಳಿಗೆ ಸರ್ಕಾರವು ನಿಗದಿಪಡಿಸುವ ಸೀಟುಗಳಿಗೆ ಏಕರೂಪದ ಕೌನ್ಸಿಲಿಂಗ್ ಅನ್ನು ನಡೆಸಲಾಗುವುದು.
9. UG-NEET-2023 ರಲ್ಲಿ ಅರ್ಹತೆಯನ್ನು ಪಡೆದ ಮಾತ್ರಕ್ಕೆ, ಅರ್ಹತಾ ಮಾನದಂಡಗಳನ್ನು ಪೂರೈಸದಿದ್ದಲ್ಲಿ / ನಿಗದಿತ ಪ್ರಮಾಣ ಪತ್ರಗಳನ್ನು ಸಲ್ಲಿಸದಿದ್ದಲ್ಲಿ ಅಭ್ಯರ್ಥಿಯು ಯಾವುದೇ ಹಕ್ಕನ್ನು ಹೊಂದುವುದಿಲ್ಲ.
10. ಮುಂದುವರಿದು, ನೋಂದಣಿ ಮಾಡಿಕೊಂಡು ದಾಖಲಾತಿ ಪರೀಶೀಲನೆಯನ್ನು ಯಶಸ್ವಿಯಾಗಿ ಪೂರೈಸುವ ಅಭ್ಯರ್ಥಿಗಳು ಮಾತ್ರ ಕರ್ನಾಟಕದಲ್ಲಿನ ಸರ್ಕಾರಿ / ಖಾಸಗಿ ಕಾಲೇಜುಗಳಲ್ಲಿ ವೈದ್ಯಕೀಯ / ದಂತ ವೈದ್ಯಕೀಯ / ಆಯುರ್ವೇದ, ಯುನಾನಿ, ಹೋಮಿಯೋಪತಿ ಕೋರ್ಸುಗಳಿಗೆ ಪ್ರವೇಶ ಪಡೆಯಲು ಅರ್ಹರಾಗುತ್ತಾರೆ.
11. ನೋಂದಣಿ ಮಾಡದಿರುವ ಅಥವಾ ನೋಂದಣಿ ಮಾಡಿ ದಾಖಲಾತಿಗಳನ್ನು ಪರಿಶೀಲಿಸಿಕೊಳ್ಳದೆ ಇರುವ ಅಭ್ಯರ್ಥಿಗಳು ಪ್ರಾಧಿಕಾರದಿಂದಾಗಲೀ ಅಥವಾ ಕಾಲೇಜುಗಳಿಂದಾಗಲೀ ಸೀಟುಗಳನ್ನು ತೆಗೆದುಕೊಳ್ಳಲು ಅನುಮತಿಸಲಾಗುವುದಿಲ್ಲ, mop-up ಸುತ್ತಿನ ಸೀಟು ಹಂಚಿಕೆಯ ನಂತರ ಉಳಿಯಬಹುದಾದ ಸೀಟುಗಳನ್ನು ಆಯಾ ಕಾಲೇಜುಗಳಿಗೆ ವರ್ಗಾಯಿಸಲಾಗುತ್ತದೆ. ಈ ಸೀಟುಗಳನ್ನು ಭರ್ತಿ ಮಾಡಿಕೊಳ್ಳಲು, ಪ್ರಾಧಿಕಾರವು ಕಳುಹಿಸುವ ನೋಂದಣಿ ಮಾಡಿಕೊಂಡು ದಾಖಲಾತಿ ಪರಿಶೀಲನೆಯನ್ನು ಮಾಡಿಸಿದ ಆದರೆ ಯಾವುದೇ ಸೀಟುಗಳನ್ನು ಹಂಚಿಕೆ ಪಡೆಯದೇ ಇರುವ ಅಭ್ಯರ್ಥಿಗಳ ಪಟ್ಟಿಯ ಅನುಕ್ರಮದಂತೆ ಕಾಲೇಜುಗಳಲ್ಲಿ ಸೀಟುಗಳನ್ನು ಭರ್ತಿಮಾಡಿಕೊಳ್ಳಲಾಗುತ್ತದೆ. (ಭಾರತ ಸರ್ಕಾರದ ಸೂಚನೆಗಳ ಅನ್ವಯ)
12. ಹೆಚ್ಚಿನ ವಿವರಗಳಿಗಾಗಿ ಅಭ್ಯರ್ಥಿಗಳು ಪ್ರಾಧಿಕಾರದ ವೆಬ್‌ಸೈಟ್ http://kea.kar.nic.in ಗಮನಿಸಲು ಕೋರಿದೆ.

**ಸೂಚನೆ:** UG-NEET-2023 ರಲ್ಲಿ ಅರ್ಹತೆ ಪಡೆದ ಎಲ್ಲಾ ಅಭ್ಯರ್ಥಿಗಳು ಕರ್ನಾಟಕ ರಾಜ್ಯದ ವೈದ್ಯಕೀಯ ಮತ್ತು ದಂತ ವೈದ್ಯಕೀಯ ಆಯುರ್ವೇದ, ಯುನಾನಿ, ಹೋಮಿಯೋಪತಿ ಕೋರ್ಸುಗಳಿಗೆ ಪ್ರವೇಶ ಪಡೆಯಲು ಅರ್ಹರಾಗಲು ಆನ್‌ಲೈನ್ ಮೂಲಕ ನೊಂದಾಯಿಸಿಕೊಳ್ಳಲು ಮತ್ತು ದಾಖಲೆಗಳ ಪರಿಶೀಲನಾ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಸೂಚಿಸಿದೆ.

ಸಹಿ/–
(ಎಸ್. ರಮ್ಯ ಭಾ.ಆ.ಸೇ.)
ಕಾರ್ಯನಿರ್ವಾಹಕ ನಿರ್ದೇಶಕರು.

ವಾಸಾಸಂಇ/ವಾ.ಪ್ರ/563/2023–24


ಹಾವೇರಿ ಸಾಹಿತ್ಯ ಸಮ್ಮೇಳನ: ಗುತ್ತಿಗೆದಾರರು, ಕಲಾವಿದರಿಗೆ ಸಿಗದ ಪೂರ್ಣ ಹಣ

# 6 ತಿಂಗಳಾದರೂ ಬಾರದ ₹5 ಕೋಟಿ

● ಸಿದ್ದು ಆರ್.ಜಿ.ಹಳ್ಳಿ

**ಹಾವೇರಿ:** ನಗರದಲ್ಲಿ ಜನವರಿ 6 ರಿಂದ 8ರವರೆಗೆ ನಡೆದ 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಸಂಬಂಧಿಸಿದ ₹5 ಕೋಟಿ ಹೆಚ್ಚುವರಿ ಅನುದಾನ 6 ತಿಂಗಳಾದರೂ ಸರ್ಕಾರದಿಂದ ಜಿಲ್ಲಾಡಳಿತಕ್ಕೆ ಬಿಡುಗಡೆ ಆಗಿಲ್ಲ. ಕಲಾವಿದರು, ಗುತ್ತಿಗೆದಾರರಿಗೆ ಸಿಗಬೇಕಾದ ಪೂರ್ಣ ಹಣ ಇನ್ನೂ ಸಿಕ್ಕಿಲ್ಲ.

ಅಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ 'ತವರು ಜಿಲ್ಲೆ'ಯಲ್ಲಿ ನಡೆದ ಸಮ್ಮೇಳನಕ್ಕೆ ₹20 ಕೋಟಿ ಅನುದಾನ ಬಿಡುಗಡೆ ಮಾಡಿದ್ದರು. ಇದು ಕಳೆದ 85 ಸಮ್ಮೇಳನಗಳಿಗೆ ನೀಡಿದ್ದ ಅನುದಾನದಲ್ಲೇ ಗರಿಷ್ಠ ಮೊತ್ತ. ಆದರೆ, ಈ ಮೊತ್ತ ಮೀರಿ ₹5 ಕೋಟಿ ಹೆಚ್ಚುವರಿ ಹಣ ಖರ್ಚಾಗಿತ್ತು.

86ನೇ ನುಡಿಜಾತ್ರೆಗೆ ಬರೋಬ್ಬರಿ ₹25 ಕೋಟಿ ವೆಚ್ಚವಾಗಿತ್ತು. ಇದು ಸಾಹಿತ್ಯ ಸಮ್ಮೇಳನದ ಇತಿಹಾಸದಲ್ಲೇ ದಾಖಲೆಯ ವೆಚ್ಚ. ಸರ್ಕಾರ ಈ ಹಿಂದೆ, ಮೈಸೂರಿನಲ್ಲಿ ನಡೆದ 83ನೇ ಸಾಹಿತ್ಯ ಸಮ್ಮೇಳನಕ್ಕೆ ₹8 ಕೋಟಿ,




ಧಾರವಾಡದಲ್ಲಿ ನಡೆದ 84ನೇ ಸಾಹಿತ್ಯ ಸಮ್ಮೇಳನಕ್ಕೆ ₹10 ಕೋಟಿ ಮತ್ತು ಕಲಬುರಗಿಯಲ್ಲಿ ನಡೆದ 85ನೇ ಸಾಹಿತ್ಯ ಸಮ್ಮೇಳನಕ್ಕೆ ₹ 14 ಕೋಟಿ ಅನುದಾನ ನೀಡಿತ್ತು.

**₹5 ಕೋಟಿಗೆ ಬೇಡಿಕೆ:** 'ಸಮ್ಮೇಳನಕ್ಕೆ ಹೆಚ್ಚುವರಿಯಾಗಿ ಖರ್ಚಾದ ₹5 ಕೋಟಿ ಅನುದಾನ ಬಿಡುಗಡೆ ಮಾಡಲು ಜಿಲ್ಲಾಡಳಿತವು ಸರ್ಕಾರಕ್ಕೆ 2023ರ ಫೆಬ್ರುವರಿಯಲ್ಲಿ ಪ್ರಸ್ತಾವ ಕಳುಹಿಸಿತ್ತು. ಆದರೆ, ಇನ್ನೂ ಹಣ ಸಿಕ್ಕಿಲ್ಲ' ಎಂದು ಅಧಿಕಾರಿಗಳು ಹೇಳುತ್ತಾರೆ.

**ಗುತ್ತಿಗೆದಾರರಿಗೆ, ಕಲಾವಿದರಿಗೆ ಸಿಗದ ಹಣ:** ಆಹಾರ ಸಮಿತಿಗೆ ₹5 ಕೋಟಿ ನಿಗದಿಯಾಗಿತ್ತು. ನಿರೀಕ್ಷೆಗಿಂತ ಹೆಚ್ಚು ಜನ ಸಮ್ಮೇಳನಕ್ಕೆ ಬಂದ ಕಾರಣ ₹3 ಕೋಟಿ ಹೆಚ್ಚುವರಿ ಖರ್ಚಾಗಿದೆ ಎಂದು ಆಹಾರ ಸಮಿತಿ ಜಿಲ್ಲಾಡಳಿತಕ್ಕೆ ಬಿಲ್ ಕೊಟ್ಟಿತ್ತು. ಆದರೆ, ಹೆಚ್ಚುವರಿ ಹಣವು ಆಹಾರ ತಯಾರಿಕೆ ಗುತ್ತಿಗೆದಾರರಿಗೆ ಸಂದಾಯವಾಗಿಲ್ಲ.

ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತು ₹75 ಲಕ್ಷ ಹೆಚ್ಚುವರಿ ಅನುದಾನ ಕೋರಿದೆ. ಸಾಂಸ್ಕೃತಿಕ ತಂಡಗಳ ಆಯ್ಕೆ ಸಮಿತಿಗೆ ಹೆಚ್ಚುವರಿಯಾಗಿ ₹20 ಲಕ್ಷ, ನೀರು ಪೂರೈಕೆಗೆ ಹೆಚ್ಚುವರಿಯಾಗಿ ₹16 ಲಕ್ಷ... ಹೀಗೆ ವಿವಿಧ ಸಮಿತಿಗಳು ಹೆಚ್ಚುವರಿ ಖರ್ಚಿನ ಪಟ್ಟಿಯನ್ನು ಜಿಲ್ಲಾಡಳಿತಕ್ಕೆ ಸಲ್ಲಿಸಿದ್ದವು. ಈ ಎಲ್ಲ ವೆಚ್ಚಗಳನ್ನು ಭರಿಸಲು ಅಗತ್ಯವಿರುವ ಹೆಚ್ಚುವರಿ ₹5 ಕೋಟಿ ಅನುದಾನ ಜಿಲ್ಲಾಡಳಿತಕ್ಕೆ ಬರಬೇಕಿದೆ.

**₹2.55 ಕೋಟಿ ಜಿಎಸ್‌ಟಿ!:** 'ವಿವಿಧ ಸಮಿತಿಗಳಿಗೆ ಹಂಚಿಕೆಯಾಗಿದ್ದ ಅನುದಾನದ ಮೇಲೆ ಶೇ 5 ರಿಂದ ಶೇ 18ರವರೆಗೆ ಜಿಎಸ್‌ಟಿ ಹಾಕಿದ್ದ ಪರಿಣಾಮ ಬರೋಬ್ಬರಿ ₹2.55 ಕೋಟಿ ಜಿಎಸ್‌ಟಿ ಭರಿಸಲಾಗಿತ್ತು. ಮಾಧ್ಯಮ ಮತ್ತು ಜಾಹೀರಾತು (ಎಂಸಿಎ) ಸೇವಾ ಶುಲ್ಕ (ಶೇ 5ರಂತೆ) ಒಟ್ಟು ₹92 ಲಕ್ಷ ತಗುಲಿತ್ತು. ಈ ಎಲ್ಲ ಕಾರಣಗಳಿಂದ ಸಮ್ಮೇಳನಕ್ಕೆ ಬರೋಬ್ಬರಿ ₹25 ಕೋಟಿ ವೆಚ್ಚವಾಗಿತ್ತು' ಎಂದು ಅಧಿಕಾರಿಗಳು ತಿಳಿಸಿದರು.

## ಸ್ಮರಣ ಸಂಚಿಕೆಯೇ ಪ್ರಕಟವಾಗಿಲ್ಲ!

86ನೇ ನುಡಿಜಾತ್ರೆಯಲ್ಲಿ ಬಿಡುಗಡೆಗೊಳಿಸಿದ್ದ 'ಏಲಕ್ಕಿ ಹಾರ' ಸ್ಮರಣ ಸಂಚಿಕೆಯ 500 ಪ್ರತಿಗಳು ಸಮ್ಮೇಳನ ನಡೆದು ಆರು ತಿಂಗಳಾದರೂ ಇನ್ನೂ ಮುದ್ರಣವಾಗಿಲ್ಲ.

'ಸಾವಿರ ಪ್ರತಿಗಳನ್ನು ಮುದ್ರಿಸುವ ಉದ್ದೇಶವಿತ್ತು. ಅನುದಾನದ ಕೊರತೆಯಿಂದ 500 ಪ್ರತಿಗಳಿಗೆ ಕಡಿತಗೊಳಿಸಲಾಯಿತು. ಹೆಚ್ಚುವರಿ ಅನುದಾನ ₹5 ಕೋಟಿ ಬಿಡುಗಡೆಯಾಗದ ಕಾರಣ ಸ್ಮರಣ ಸಂಚಿಕೆಗಳನ್ನು ಮುದ್ರಿಸಲು ಸಾಧ್ಯವಾಗಿಲ್ಲ' ಎನ್ನುತ್ತಾರೆ ಕನ್ನಡ ಸಾಹಿತ್ಯ ಪರಿಷತ್ತಿನ ಪದಾಧಿಕಾರಿಗಳು ತಿಳಿಸಿದರು.

**ಸಮ್ಮೇಳನ ಮುಗಿದು 6 ತಿಂಗಳಾದರೂ ₹4.72 ಕೋಟಿಯನ್ನು ಜಿಲ್ಲಾಡಳಿತ ನೀಡಿಲ್ಲ. ಹಾಕಿದ ಬಂಡವಾಳವೂ ಸಿಗದೆ, ಕಿರಾಣಿ ಅಂಗಡಿಗಳಿಗೆ ಬಾಕಿ ಕೊಡದೆ ಸಂಕಷ್ಟಕ್ಕೆ ಸಿಲುಕಿದ್ದೇವೆ**

**ರತನ್ ಪ್ರಜಾಪತ್,**
ಮಾಲೀಕ, ಭೈರು ಕ್ಯಾಟರರ್ಸ್, ಹುಬ್ಬಳ್ಳಿ

**ಐದು ಕೋಟಿ ರೂಪಾಯಿ ಹೆಚ್ಚುವರಿ ಅನುದಾನ ಬಿಡುಗಡೆಗೆ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿದ್ದೇವೆ. ಚುನಾವಣೆ ಹಿನ್ನೆಲೆಯಲ್ಲಿ ತಡವಾಗಿದ್ದು, ಶೀಘ್ರ ಬಿಡುಗಡೆಯಾಗುವ ನಿರೀಕ್ಷೆಯಿದೆ**

**ರಘುನಂದನ ಮೂರ್ತಿ,**
ಹಾವೇರಿ ಜಿಲ್ಲಾಧಿಕಾರಿ

ಶನಿವಾರ ● ಜುಲೈ 15, 2023 ಪ್ರಜಾವಾಣಿ

# ‘ರಾಜ್ಯದಿಂದಲೇ ಬಿಜೆಪಿ ಅವನತಿ ಆರಂಭ’

## ವಿಧಾನಸಭಾ ಚುನಾವಣೆ ಪ್ರಚಾರಕ್ಕೆ ಮೋದಿ ಹಲವು ಬಾರಿ ಬಂದುಹೋದರೂ ಪ್ರಯೋಜವಾಗಲಿಲ್ಲ: ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಪ್ರಧಾನಿ ನರೇಂದ್ರ ಮೋದಿ ಅವರ ಜನಪ್ರಿಯತೆ ಇಳಿಮುಖವಾಗುತ್ತಿದೆ. ಕರ್ನಾಟಕದಿಂದಲೇ ಬಿಜೆಪಿ ಅವನತಿ ಆರಂಭವಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ವಿಧಾನ ಪರಿಷತ್‌ನಲ್ಲಿ ರಾಜ್ಯಪಾಲರ ಭಾಷಣದ ಮೇಲೆ ನಡೆದ ಚರ್ಚೆಗೆ ಶುಕ್ರವಾರ ಉತ್ತರ ನೀಡಿದ ಅವರು, ಮೋದಿ ಅವರಿಗೆ ಜನಪ್ರಿಯತೆ ಇದೆ ಎನ್ನುವುದಕ್ಕೆ ಯಾವುದೇ ಆಕ್ಷೇಪ ಇಲ್ಲ. ಈಗ ಅದು ಚಲಾವಣೆ ಕಳೆದುಕೊಳ್ಳುತ್ತಿದೆ. ರಾಜ್ಯ ವಿಧಾನಸಭಾ ಚುನಾವಣೆ ಪ್ರಚಾರಕ್ಕೆ ಅವರು ಹಲವು ಬಾರಿ ಬಂದುಹೋದರೂ ಪ್ರಯೋಜವಾಗಲಿಲ್ಲ. ಅವರು ಪ್ರಚಾರ ಮಾಡಿದ ಎಲ್ಲ ಕಡೆ ಬಿಜೆಪಿ ಅಭ್ಯರ್ಥಿಗಳು ಸೋಲು ಕಂಡಿದ್ದಾರೆ. ಹಲವು ಜಿಲ್ಲೆಗಳಲ್ಲಿ ಒಬ್ಬ ಶಾಸಕರೂ ಇಲ್ಲ. ಅವರ ಜನಪ್ರಿಯತೆ ಕುಸಿಯುತ್ತಿರುವುದಕ್ಕೆ ಇದು ಸಾಕ್ಷಿ ಎಂದರು.

ಮನುಷ್ಯರನ್ನು ವಿಂಗಡಿಸುವುದು, ಜಾತಿ, ಧರ್ಮಗಳ ಮಧ್ಯೆ ಬೆಂಕಿಹಚ್ಚುವ ಕೆಲಸ ಬಿಜೆಪಿ ಮಾಡುತ್ತಿದೆ. ಇದು ಅಮಾನವೀಯ, ಪರಂಪರೆಗೆ ವಿರುದ್ಧ. ನಮ್ಮದು ಸರ್ವ ಜನಾಂಗದ ಶಾಂತಿಯ ತೋಟದ ಪರಿಕಲ್ಪನೆ. ರಾಜ್ಯದ ಜನರೂ ಎಲ್ಲ ಜಾತಿ, ಧರ್ಮಗಳ ಒಳಿತನ್ನು ಬಯಸುತ್ತಾರೆ. ಹಾಗಾಗಿಯೇ, ರಾಜ್ಯದಲ್ಲಿ ಬಿಜೆಪಿ ಒಮ್ಮೆಯೂ ಸ್ಪಷ್ಟ ಬಹುಮತ ಪಡೆದಿಲ್ಲ. 2008 ಹಾಗೂ 2019ರಲ್ಲಿ ವಾಮಮಾರ್ಗದ ಮೂಲಕ ಅಧಿಕಾರ ಪಡೆದರು. ಮುಂದೆಯೂ ಅವರು ಶಾಶ್ವತವಾಗಿ ವಿರೋಧ ಪಕ್ಷದ ಸ್ಥಾನದಲ್ಲಿ ಕೂರಲಿದ್ದಾರೆ ಎಂದು ಹೇಳಿದರು.

ಸಿದ್ದರಾಮಯ್ಯ ಅವರ ಮಾತುಗಳಿಗೆ ಪ್ರತಿ ಬಾರಿಯೂ ಬಿಜೆಪಿಯ ಕೋಟ ಶ್ರೀನಿವಾಸ ಪೂಜಾರಿ, ವೈ.ಎ.ನಾರಾಯಣಸ್ವಾಮಿ, ಭಾರತಿ ಶೆಟ್ಟಿ, ಎನ್. ರವಿಕುಮಾರ್ ಮತ್ತಿತರರು ಎದ್ದು ನಿಂತು ಆಕ್ಷೇಪ ವ್ಯಕ್ತಪಡಿಸುತ್ತಿದ್ದರು. ಸಚಿವರಾದ ಪ್ರಿಯಾಂಗ್ ಖರ್ಗೆ, ಆಡಳಿತ ಪಕ್ಷದ ಮುಖ್ಯಸಚೇತಕ ಸಲೀಂ ಅಹಮದ್, ಪ್ರಕಾಶ್ ರಾಥೋಡ್, ಯು.ಬಿ.ವೆಂಕಟೇಶ್, ಎಸ್. ರವಿ ಮೊದಲಾದವರು ಮುಖ್ಯಮಂತ್ರಿ ಬೆಂಬಲಕ್ಕೆ ನಿಲ್ಲುತ್ತಿದ್ದರು. ಗದ್ದಲದ ವಾತಾವರಣ ತಣ್ಣಗಾಗಿಸಲು ಸಭಾಪತಿ ಬಸವರಾಜ ಹೊರಟ್ಟಿ ಹರಸಾಹಸಪಟ್ಟರು.

‘ಹೀಗೆ ಪದೇಪದೇ ಅಡ್ಡಿಪಡಿಸಿ ದುರುದ್ದೇಶದಿಂದ ದಾರಿ ತಪ್ಪಿಸಬಹುದು ಎಂದುಕೊಂಡಿದ್ದರೆ ಅದು ನಿಮ್ಮ ಭ್ರಮೆ. ಯಾರಿಗೆ ಸಿದ್ಧಾಂತದ ಬಗ್ಗೆ ಸ್ಪಷ್ಟತೆ ಇರುತ್ತದೆಯೋ ಅವರನ್ನು ದಾರಿ ತಪ್ಪಿಸಲು ಸಾಧ್ಯವಿಲ್ಲ. ಏನೇ ಪ್ರಶ್ನೆ ಕೇಳಿದರೂ ಉತ್ತರ ಕೊಡುವ ಸಾಮರ್ಥ್ಯ ಸರ್ಕಾರಕ್ಕಿದೆ. ನಿಮಗೆ ದೆಹಲಿ, ಮೋದಿ ಹೊಗಳಿಕೆ ಬಿಟ್ಟರೆ ಬೇರೆ ಏನೂ ಇಲ್ಲ. ಅದಕ್ಕೆ ನನ್ನದೇನೂ ತಕರಾರು ಇಲ್ಲ’ ಎಂದು ಸಿದ್ದರಾಮಯ್ಯ ಮತ್ತೆ ಮಾತು ಮುಂದುವರಿಸಿದರು.

ಬಿಜೆಪಿ ಸೋಲಿನ ವಿಶ್ಲೇಷಣೆ ಮಾಡುತ್ತಿದ್ದಾಗಲೂ ಮಧ್ಯೆ ಪ್ರವೇಶಿಸಿದ ಬಿಜೆಪಿಯವರು, ಕಾಂಗ್ರೆಸ್ ಗ್ಯಾರಂಟಿ ನಂಬಿ ಜನರು ಮತ ಹಾಕಿದ್ದಾರೆ. ಹಾಗಾಗಿ, ಬಿಜೆಪಿಗೆ ಕಡಿಮೆ ಸ್ಥಾನ ಬಂದವು ಎಂದರು.

‘ಚುನಾವಣೆಯಲ್ಲಿ ಎಲ್ಲರೂ ಭರವಸೆ ನೀಡಿದ್ದರು. ಜೆಡಿಎಸ್ ಸಹ ಪಂಚರತ್ನ ಭರವಸೆ ನೀಡಿತ್ತು. ಆದರೆ, ಜನ ನಮ್ಮ ಮೇಲೆ ವಿಶ್ವಾಸವಿಟ್ಟರು. ನಾವು ಜನರ ಜೋಬಿಗೆ ದುಡ್ಡು ಹಾಕುತ್ತೇವೆ. ಅನ್ನಕ್ಕೂ ಜಿಎಸ್‌ಟಿ ಹಾಕುವ ಮೂಲಕ ಬಿಜೆಪಿ ಸರ್ಕಾರ ಜನರ ಜೋಬಿನಿಂದ ಹಣ ಕಿತ್ತುಕೊಳ್ಳುತ್ತಿದೆ’ ಎಂದು ಟೀಕಿಸಿದರು.

‘ಕೇಂದ್ರ ಸರ್ಕಾರ ನೀಡುವ 5 ಕೆ.ಜಿ. ಅಕ್ಕಿಯನ್ನೂ ನಿಮ್ಮ ಗ್ಯಾರಂಟಿಗೆ ಸೇರಿಸಿಕೊಂಡಿದ್ದೀರಿ. ಬರಿ ಸುಳ್ಳು ಹೇಳುವುದೇ ನಿಮ್ಮ ಕಾಯಕ. ಸುಳ್ಳು ಹೇಳುವ ಮುಖ್ಯಮಂತ್ರಿಗೆ ಧಿಕ್ಕಾರ. ಸರ್ಕಾರಕ್ಕೆ ಧಿಕ್ಕಾರ’ ಎಂದು ಕೂಗುತ್ತಾ ಬಿಜೆಪಿ ಸದಸ್ಯರು ಕಲಾಪ ಬಹಿಷ್ಕರಿಸಿ ಹೊರನಡೆದರು.

‘ರಾಜ್ಯದ ಮುಖ್ಯಮಂತ್ರಿಗೆ ಕನಿಷ್ಠ ಗೌರವ ಕೊಡುವ ಸೌಜನ್ಯವಿಲ್ಲ. ಇದು ರಾಜ್ಯದ ಬಡವರಿಗೆ ಮಾಡುವ ಅಪಮಾನ. ಗ್ಯಾರಂಟಿ ಯೋಜನೆಗಳನ್ನು ಕಾಂಗ್ರೆಸ್ ಯಶಸ್ವಿಯಾಗಿ ಅನುಷ್ಠಾನ ಮಾಡುತ್ತಿರುವುದಕ್ಕೆ ಅವರಿಗೆ ಹೊಟ್ಟೆಉರಿ. ಜನರೇ ಬುದ್ಧಿಕಲಿಸುತ್ತಾರೆ. ಶಿಸ್ತಿನ ಪಕ್ಷದಲ್ಲಿ ರಾಜಕೀಯ ದಿವಾಳಿತನ ಕಾಣುತ್ತಿದೆ’ ಎಂದು ಮುಖ್ಯಮಂತ್ರಿ ಮಾತುಮುಗಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ವಿಧಾನ ಪರಿಷತ್‌ನಲ್ಲಿ ಶುಕ್ರವಾರ ನಡೆದ ಕಲಾಪದಲ್ಲಿ ಮಾತನಾಡಿದರು. ಪರಿಷತ್ತಿನ ಸಭಾನಾಯಕ ಎನ್.ಎಸ್.ಬೋಸರಾಜು, ಎಚ್‌.ಸಿ.ಮಹದೇವಪ್ಪ, ಲಕ್ಷ್ಮಿ ಹೆಬ್ಬಾಳ್ಕರ್, ಕಾಂಗ್ರೆಸ್‌ನ ಕೆ.ಗೋವಿಂದರಾಜ್, ಸಲೀಂ ಅಹ್ಮದ್, ಜಗದೀಶ ಶೆಟ್ಟರ್ ಇದ್ದಾರೆ —ಪ್ರಜಾವಾಣಿ ಚಿತ್ರ: ಎಂ.ಎಸ್.ಮಂಜುನಾಥ್

### ಬಿಜೆಪಿ ಸದಸ್ಯರನ್ನು ಕೆರಳಿಸಿದ ಹಿಟ್ಲರ್ ಕಥೆ

‘ಜರ್ಮನ್ನರೇ ಶ್ರೇಷ್ಠ ಎಂದು ಹಿಟ್ಲರ್ ಸದಾ ಪ್ರತಿಪಾದಿಸುತ್ತಿದ್ದ. ಆತನ ದಿಸೆಯಿಂದಾಗಿ ಎರಡು ವಿಶ್ವ ಮಹಾಯುದ್ಧಗಳೇ ನಡೆದವು. ಜನಾಂಗೀಯ ಕಾರಣಕ್ಕಾಗಿ ಯಹೂದಿಗಳನ್ನು ದ್ವೇಷಿಸುತ್ತಿದ್ದ. ಆದರೆ, ಯಹೂದಿಗಳಿಗಿಂತ ಹೆಚ್ಚಾಗಿ ಜರ್ಮನ್ನರನ್ನೇ ಕೊಂದ. ಕೊನೆಗೆ ಆತ್ಮಹತ್ಯೆ ಮಾಡಿಕೊಂಡ’ ಎಂದು ಸಿದ್ದರಾಮಯ್ಯ ಹೇಳಿದರು.

ಹಿಟ್ಲರ್ ವಿಷಯ ಪ್ರಸ್ತಾಪಿಸುತ್ತಿದಂತೆ ಬಿಜೆಪಿ ಸದಸ್ಯರು ಗದ್ದಲ ಎಬ್ಬಿಸಿದರು. ಮಾತಿಗೆ ಅಡ್ಡಿಪಡಿಸಿದರು.

‘ಹಿಟ್ಲರ್ ಬಗ್ಗೆ ಮಾತನಾಡಿದರೆ ಬಿಜೆಪಿಗೇಕೆ ಕೋಪ’ ಎಂದು ಸಿದ್ದರಾಮಯ್ಯ ಪ್ರಶ್ನಿಸಿದರು. ‘ನೀವು ಹಿಟ್ಲರ್ ರೀತಿ ಮಾತನಾಡಿದರೆ ನಾವು ಹೇಗೆ ಸಹಿಸುವುದು’ ಎಂದು ಭಾರತಿ ಶೆಟ್ಟಿ ಆಕ್ರೋಶ ವ್ಯಕ್ತಪಡಿಸಿದರು.

‘ಬಿಜೆಪಿಯವರು ಒಳ್ಳೆಯವರೇ. ಕೇಶವ ಕೃಪಾವನ್ನು (ಆರೆಸ್ಸೆಸ್ ಕೇಂದ್ರ ಸ್ಥಾನ) ನೋಡಿದಾಕ್ಷಣ ಹಾಗೆ ಮಾಡ್ತಾರೆ’ ಎಂದು ಮುಖ್ಯಮಂತ್ರಿ ಟೀಕಿಸಿದರು.

### ವಿರೋಧ ಪಕ್ಷದ ನಾಯಕ ಸ್ಥಾನಕ್ಕೆ ಚೀಟಿ: ಶೆಟ್ಟರ್

ವಿರೋಧ ಪಕ್ಷದ ನಾಯಕ ಸ್ಥಾನ ಖಾಲಿ ಇದೆ. ಆ ಸ್ಥಾನಕ್ಕೆ ಸಮರ್ಥರೆಂದು ತೋರಿಸಲು ಬಹುತೇಕ ಸದಸ್ಯರು ಎದ್ದು ನಿಂತು ಗದ್ದಲ ಮಾಡುತ್ತಿದ್ದಾರೆ. ಏನೇ ಇರಲಿ ಸಂವಿಧಾನಾತ್ಮಕ ಸ್ಥಾನ ಖಾಲಿ ಬಿಡಬಾರದು. ವಿಧಾನಸಭೆಯಲ್ಲಿ ಕುಮಾರಸ್ವಾಮಿ ನಾಯಕರಾಗುತ್ತಾರೆ. ಇಲ್ಲೂ ಬೇಗ ಸ್ಥಾನ ಭರ್ತಿ ಮಾಡಲಿ ಎಂದು ಸಿದ್ದರಾಮಯ್ಯ ಹೇಳಿದರು.

ಅದಕ್ಕೆ ಧ್ವನಿಗೂಡಿಸಿದ ಕಾಂಗ್ರೆಸ್‌ನ ಜಗದೀಶ ಶೆಟ್ಟರ್, ಅವರ ಹೈಕಮಾಂಡ್ ಆಯ್ಕೆ ಮಾಡುವವರೆಗೂ ಸ್ಥಾನ ಖಾಲಿ ಬಿಡುವುದು ಬೇಡ. ಸಭಾಪತಿಗಳು ಬಿಜೆಪಿಯ ಎಲ್ಲರ ಹೆಸರು ಬರೆದು ಚೀಟಿ ಎತ್ತಲಿ. ಯಾರ ಹೆಸರು ಬರುತ್ತದೋ ಅವರನ್ನು ಅಧಿಕೃತ ಆಯ್ಕೆಯವರೆಗೂ ವಿರೋಧ ಪಕ್ಷದ ನಾಯಕರೆಂದು ಪರಿಗಣಿಸಲಿ ಎಂದರು. ಅವರ ಮಾತಿಗೆ ಕೋಟ ಶ್ರೀನಿವಾಸ ಪೂಜಾರಿ ಆಕ್ಷೇಪ ವ್ಯಕ್ತಪಡಿಸಿದರು.

### ಶೇ 50 ಮಹಿಳಾ ಮೀಸಲು ಮುಖ್ಯಮಂತ್ರಿ ಒಲವು

ಶಾಸನ ಸಭೆಗಳಲ್ಲಿ ಮಹಿಳೆಯರಿಗೆ ಶೇ 50ರಷ್ಟು ಮೀಸಲಾತಿ ನಿಗದಿ ಮಾಡಿದರೆ ಕಾಂಗ್ರೆಸ್ ಬೆಂಬಲ ನೀಡಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

‘ಶಕ್ತಿ ಯೋಜನೆಯಿಂದ ಉಚಿತವಾಗಿ ಬಸ್‌ಗಳಲ್ಲಿ ಪ್ರಯಾಣ ಮಾಡುತ್ತಿರುವ ಮಹಿಳೆಯರು ದೇವಸ್ಥಾನಕ್ಕೆ ಬಂದು ನನ್ನ ಹೆಸರಿನಲ್ಲಿ ಮಂಜುನಾಥ ಸ್ವಾಮಿಗೆ ಸೇವೆ ಮತ್ತು ಕಾಣಿಕೆ ಸಲ್ಲಿಸುತ್ತಿದ್ದಾರೆ. ನಮ್ಮ ಯೋಜನೆಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ ಧರ್ಮಸ್ಥಳದ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ಪತ್ರ ಬರೆದಿದ್ದಾರೆ’ ಎಂದರು.

ಅವರ ಮಾತಿಗೆ ಪ್ರತಿಕ್ರಿಯೆ ನೀಡಿದ ಬಿಜೆಪಿಯ ಭಾರತಿ ಶೆಟ್ಟಿ, ಮಹಿಳೆಯರಿಗಾಗಿ ಯೋಜನೆ ರೂಪಿಸಿದ್ದೀರಿ. ಆದರೆ, ಪರಿಷತ್‌ನಲ್ಲಿ ಕಾಂಗ್ರೆಸ್‌ನ ಒಬ್ಬ ಸದಸ್ಯೆಗೂ ಅವಕಾಶ ಮಾಡಿಕೊಟ್ಟಿಲ್ಲ. ನಿಮ್ಮ ಪಕ್ಷದ ಮಹಿಳಾ ಪ್ರಾತಿನಿಧ್ಯ ಶೂನ್ಯವಾಗಿದೆ ಎಂದರು.

‘ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ ರಾಜಕೀಯ ಮೀಸಲಾತಿ ಕೊಟ್ಟದ್ದೇ ಕಾಂಗ್ರೆಸ್. ಶಾಸನ ಸಭೆಗಳಲ್ಲೂ ಮಹಿಳೆಯರಿಗೆ ಮೀಸಲಾತಿ ನೀಡುವ ಮಸೂದೆ ಅಂಗೀಕಾರವಾದರೆ ಎಲ್ಲ ರಾಜಕೀಯ ಪಕ್ಷಗಳಿಂದಲೂ ಸೂಕ್ತ ಪ್ರಾತಿನಿಧ್ಯ ಸಿಗಲಿದೆ. ಮಹಿಳಾ ಮೀಸಲಾತಿ ಮಸೂದೆ ಕೇಂದ್ರ ಸರ್ಕಾರದ ಬಳಿ ಇದೆ. ಬಿಜೆಪಿ ಮನಸ್ಸು ಮಾಡಲಿ. ಶೇ 33ರ ಬದಲು, ಶೇ 50ರಷ್ಟು ಮೀಸಲಾತಿ ನೀಡಿದರೂ ಬೆಂಬಲ ನೀಡುತ್ತೇವೆ’ ಎಂದು ಸಿದ್ದರಾಮಯ್ಯ ಉತ್ತರಿಸಿದರು.

ಪುರುಷರಿಗೂ ಬಸ್‌ಗಳಲ್ಲಿ ಉಚಿತ ಪ್ರಯಾಣಕ್ಕೆ ಅವಕಾಶ ನೀಡಿದರೆ, ಅಬಕಾರಿ ಆದಾಯ ಹೆಚ್ಚಲಿದೆ ಎಂಬ ಜೆಡಿಎಸ್‌ನ ಎಸ್.ಎಲ್.ಭೋಜೇಗೌಡ ಮಾತಿಗೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ, ನಿಮ್ಮ ಸರ್ಕಾರ ಅಧಿಕಾರಕ್ಕೆ ಬಂದಾಗ ಮಾಡುವಿರಂತೆ. ಆದರೆ, ಜೆಡಿಎಸ್ ಎಂದೂ ಬರುವುದಿಲ್ಲ ಬಿಡು ಎಂದರು.

### ಸುದ್ದಿ 2 ನಿಮಿಷ

### ಜಮೀನು ತಡೆ ಸೇಡಿನ ರಾಜಕಾರಣ: ಬೊಮ್ಮಾಯಿ

**ಬೆಂಗಳೂರು:** ಜನಸೇವಾ ಟ್ರಸ್ಟ್‌ಗೆ (ಆರ್‌ಎಸ್‌ಎಸ್‌ನ ಅಂಗ ಸಂಸ್ಥೆ) ನೀಡಿರುವ ಜಮೀನು ತಡೆ ಹಿಡಿಯುವ ಕಾಂಗ್ರೆಸ್ ಸರ್ಕಾರದ ನಡೆಯ ಬಗ್ಗೆ ಪಕ್ಷದಲ್ಲಿ ಚರ್ಚೆ ನಡೆಸಿ ಹೋರಾಟ ನಡೆಸಲಾಗುವುದು ಎಂದು ಬಿಜೆಪಿ ಶಾಸಕ ಬಸವರಾಜ ಬೊಮ್ಮಾಯಿ ಹೇಳಿದರು.

‘ಜನಸೇವಾ ಟ್ರಸ್ಟ್‌ಗೆ ನೀಡಿದ ಜಮೀನು ತಡೆ ಹಿಡಿಯುವ ಪ್ರಯತ್ನ ಸೇಡಿನ ರಾಜಕಾರಣ. ಜನ ಸೇವಾ ಟ್ರಸ್ಟ್ ಸಾಮಾಜಿಕ ಸೇವೆಯಲ್ಲಿ ತೊಡಗಿಸಿಕೊಂಡಿದೆ’ ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.



‘ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ಕಾಲದಲ್ಲಿ ಯಾವುದೇ ಭ್ರಷ್ಟಾಚಾರ ನಡೆದೇ ಇಲ್ಲ ಎಂದು ಹೇಳಿದ್ದಾರೆ. ಅವರ ಅವಧಿಯಲ್ಲಿ ಯಾವುದೇ ಭ್ರಷ್ಟಾಚಾರ ನಡೆಯದೇ ಇದ್ದರೆ 2013ರಿಂದ ಈಚೆಗಿನ ಎಲ್ಲ ಪ್ರಕರಣಗಳ ಬಗ್ಗೆ ತನಿಖೆ ನಡೆಸಲಿ. ಅವರಿಗೆ ಭ್ರಷ್ಟಾಚಾರದ ಪ್ರಕರಣದಲ್ಲಿ ಸಿಲುಕಿಕೊಳ್ಳುವ ಭಯ ಇದೆ’ ಎಂದು ದೂರಿದರು.

‘ಸಿದ್ದರಾಮಯ್ಯ ಅವಧಿಯಲ್ಲಿ ಸಣ್ಣ ನೀರಾವರಿ, ಬೃಹತ್ ನೀರಾವರಿ ಎಲ್ಲದರಲ್ಲೂ ಭ್ರಷ್ಟಾಚಾರ ನಡೆದಿದೆ. ಅವರಿಗೆ ಭಯ ಇಲ್ಲದಿದ್ದರೆ ತನಿಖೆ ನಡೆಸಲು ಹಿಂದೇಟು ಏಕೆ’ ಎಂದು ಪ್ರಶ್ನಿಸಿದರು.

### ಎಸ್‌ಸಿ, ಎಸ್‌ಟಿ ಗುತ್ತಿಗೆ ಮೀಸಲು ₹1 ಕೋಟಿ: ಮಸೂದೆ ಅಂಗೀಕಾರ

**ಬೆಂಗಳೂರು:** ಎಸ್‌ಸಿ ಮತ್ತು ಎಸ್‌ಟಿ ಗುತ್ತಿಗೆದಾರರು ಕೈಗೊಳ್ಳುವ ನಿರ್ಮಾಣ ಕಾಮಗಾರಿಗಳ ಮೊತ್ತದ ಮಿತಿಯನ್ನು ₹50 ಲಕ್ಷದಿಂದ ₹1 ಕೋಟಿಗೆ ಹೆಚ್ಚಿಸುವ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ಮಸೂದೆಗೆ ವಿಧಾನಸಭೆ ಶುಕ್ರವಾರ ಅಂಗೀಕಾರ ನೀಡಿತು.

ಮುಖ್ಯಮಂತ್ರಿಗಳ ಪರವಾಗಿ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲ ಅವರು ಮಸೂದೆಗೆ ಅಂಗೀಕಾರ ಕೋರಿದರು. ₹50 ಲಕ್ಷ ಇದ್ದ ಸಂದರ್ಭದಲ್ಲಿ ಮೊದಲ ಬಾರಿ ಟೆಂಡರ್ ಕರೆದಾಗ ಶೇ 62 ರಷ್ಟು, ಎರಡನೇ ಬಾರಿ ಕರೆದಾಗ ಶೇ 82 ರಷ್ಟು ಮಂದಿ ಭಾಗಹಿಸಿದ್ದರು. ಕ್ರಮೇಣ ಇದರಲ್ಲಿ ಪಾಲ್ಗೊಳ್ಳುವವರ ಸಂಖ್ಯೆ ಹೆಚ್ಚಾಗಿದೆ ಎಂದು ಪಾಟೀಲ ಹೇಳಿದರು.

ಎಸ್‌ಸಿ, ಎಸ್‌ಟಿ ಸಮುದಾಯದ ಗುತ್ತಿಗೆದಾರರಿಗೆ ಟೆಂಡರ್ ₹1 ಕೋಟಿಗೆ ಹೆಚ್ಚಳ ಮಾಡುವ ತಿದ್ದುಪಡಿ ಸ್ವಾಗತಾರ್ಹ. ಈ ಕಾಯ್ದೆ ಜಾರಿಗೆ ಬಂದ ಮೇಲೆ ಎಸ್‌ಸಿ, ಎಸ್‌ಟಿ ಸಮುದಾಯ ಉತ್ಸಾಹದಿಂದ ಕೆಲಸ ಮಾಡಲು ಮುಂದೆ ಬರುತ್ತಿದೆ ಎಂದು ಬಿಜೆಪಿಯ ಬಸವರಾಜ ಬೊಮ್ಮಾಯಿ ಹೇಳಿದರು.

ಬಿಜೆಪಿಯ ಆರಗ ಜ್ಞಾನೇಂದ್ರ ಮಾತನಾಡಿ, ಎಸ್‌ಸಿ ಎಸ್‌ಟಿಗಳ ಹೆಸರಿನಲ್ಲಿ ಬೇರೆಯವರು ಗುತ್ತಿಗೆ ಪಡೆದು ಕೆಲಸ ಮಾಡುತ್ತಿದ್ದಾರೆ. ಇದಕ್ಕೆ ಕಡಿವಾಣ ಹಾಕಬೇಕು. ಈ ಸಮುದಾಯಗಳ ಯುವಕರಿಗೆ ಗುತ್ತಿಗೆ ಪಡೆದು ಕೆಲಸ ಮಾಡುವ ಬಗ್ಗೆ ತಜ್ಞರಿಂದ ತರಬೇತಿ ಕೊಡಿಸಬೇಕು ಮತ್ತು ರೋಡ್ ರೋಲರ್, ಕಾಂಕ್ರೀಟ್ ಮಿಕ್ಸರ್ ಉಪಕರಣಗಳನ್ನು ಕೊಡಿಸಬೇಕು ಎಂದು ಸಲಹೆ ನೀಡಿದರು.

# ಲಾಭದಾಯಕ ಹುದ್ದೆ: ಅನರ್ಹತೆ ತಡೆಗೆ ಮಸೂದೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಮುಖ್ಯಮಂತ್ರಿಯವರ ಕಾನೂನು ಸಲಹೆಗಾರ ಮತ್ತು ದೆಹಲಿಯಲ್ಲಿ ರಾಜ್ಯ ಸರ್ಕಾರದ ವಿಶೇಷ ಪ್ರತಿನಿಧಿಯಾಗಿ ನೇಮಕಗೊಳ್ಳುವ ವಿಧಾನಸಭೆ ಅಥವಾ ವಿಧಾನ ಪರಿಷತ್ ಸದಸ್ಯರನ್ನು ಲಾಭದಾಯಕ ಹುದ್ದೆ ಹೊಂದಿದ ಆರೋಪದಡಿ ಅನರ್ಹತೆಯಿಂದ ರಕ್ಷಿಸುವ ‘ಕರ್ನಾಟಕ ವಿಧಾನಮಂಡಲ (ಅನರ್ಹತಾ ನಿವಾರಣಾ) (ತಿದ್ದುಪಡಿ) ಮಸೂದೆ– 2023ಕ್ಕೆ ವಿಧಾನಸಭೆ ಶುಕ್ರವಾರ ಅಂಗೀಕಾರ ನೀಡಿತು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕಾನೂನು ಸಲಹೆಗಾರರಾಗಿ ವಿರಾಜಪೇಟೆ ಶಾಸಕ ಎ.ಎಸ್. ಪೊನ್ನಣ್ಣ ಮತ್ತು ರಾಜ್ಯ ಸರ್ಕಾರದ ದೆಹಲಿ ವಿಶೇಷ ಪ್ರತಿನಿಧಿಯಾಗಿ ಶಿರಾ ಶಾಸಕ ಟಿ.ಬಿ. ಜಯಚಂದ್ರ ನೇಮಕಗೊಂಡಿದ್ದಾರೆ. ಇಬ್ಬರಿಗೂ ಸಂಪುಟ ದರ್ಜೆ ಸಚಿವರ ಸ್ಥಾನಮಾನ ನೀಡಲಾಗಿದೆ. ಲಾಭದಾಯಕ ಹುದ್ದೆ ಹೊಂದಿದ ಆರೋಪದಡಿ ಅನರ್ಹತೆಯ ಸಂಕಷ್ಟ ಎದುರಾಗಬಹುದು ಎಂಬ ಭೀತಿಯಿಂದ ಇಬ್ಬರೂ ಅಧಿಕಾರ ಸ್ವೀಕರಿಸಿಲ್ಲ.

2023ರ ಮೇ 20ರಿಂದ ಪೂರ್ವಾನ್ವಯ ಆಗುವಂತೆ ಈ ತಿದ್ದುಪಡಿ ಜಾರಿಗೆ ಬರಲಿದೆ. ಲಾಭದಾಯಕ ಹುದ್ದೆ ವ್ಯಾಪ್ತಿಯಿಂದ ಮುಖ್ಯಮಂತ್ರಿಯವರ ಕಾನೂನು ಸಲಹೆಗಾರ ಮತ್ತು ರಾಜ್ಯ ಸರ್ಕಾರದ ದೆಹಲಿ ವಿಶೇಷ ಪ್ರತಿನಿಧಿ ಹುದ್ದೆಗಳನ್ನು ಹೊರಗಿಡುವ ತಿದ್ದುಪಡಿಯನ್ನು ಕರ್ನಾಟಕ ವಿಧಾನಮಂಡಲ (ಅನರ್ಹತಾ ನಿವಾರಣಾ) ಕಾಯ್ದೆ–1956ಕ್ಕೆ ಸೇರಿಸಲಾಗಿದೆ.

ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ, ಈ ಮಸೂದೆಯನ್ನು ಮಂಡಿಸಿದರು. ‘ಎರಡೂ ಹುದ್ದೆಗಳಿಗೆ ಈಗಾಗಲೇ ನೇಮಕಾತಿ ಆಗಿದೆ. ಮೊದಲು, ಆ ನೇಮಕಾತಿಗಳನ್ನು ಹಿಂಪಡೆಯಿರಿ. ಬಳಿಕ ತಿದ್ದುಪಡಿಗೆ ಅಂಗೀಕಾರ ನೀಡಬಹುದು. ಆ ಬಳಿಕ ಪುನಃ ನೇಮಕಾತಿ ಮಾಡಿ’ ಎಂದು ಬಿಜೆಪಿಯ ಬಸವರಾಜ ಬೊಮ್ಮಾಯಿ ಸಲಹೆ ನೀಡಿದರು.

‘ಮೇ 20ರಿಂದಲೇ ಪೂರ್ವಾನ್ವಯ ಆಗುವಂತೆ ತಿದ್ದುಪಡಿ ಮಸೂದೆಯನ್ನು ಮಂಡಿಸಲಾಗಿದೆ. ಹೀಗಾಗಿ ನೇಮಕಾತಿ ಹೊಂದಿದವರಿಗೆ ಯಾವುದೇ ತೊಡಕು ಎದುರಾಗುವುದಿಲ್ಲ’ ಎಂದು ಪಾಟೀಲ ಸ್ಪಷ್ಟನೆ ನೀಡಿದರು. ಬಳಿಕ ಮಸೂದೆಗೆ ಅಂಗೀಕಾರ ನೀಡಲಾಯಿತು.

### ಜಯಚಂದ್ರಗೆ ಏಕೆ ಚಳಿಯಲ್ಲಿ ನಡುಗುವ ಶಿಕ್ಷೆ: ಬಸವರಾಜ ಬೊಮ್ಮಾಯಿ ಪ್ರಶ್ನೆ

ವಿಧಾನಸಭೆಯ ಅತ್ಯಂತ ಹಿರಿಯ ಶಾಸಕರಲ್ಲಿ ಒಬ್ಬರಾಗಿರುವ ಟಿ.ಬಿ. ಜಯಚಂದ್ರ ಅವರನ್ನು ರಾಜ್ಯ ಸರ್ಕಾರದ ದೆಹಲಿ ವಿಶೇಷ ಪ್ರತಿನಿಧಿಯನ್ನಾಗಿ ನೇಮಿಸಿ ಚಳಿಯಲ್ಲಿ ನಡುಗುವ ಶಿಕ್ಷೆ ನೀಡಲಾಗಿದೆಯೆ? ಎಂದು ಬಿಜೆಪಿಯ ಬಸವರಾಜ ಬೊಮ್ಮಾಯಿ ಪ್ರಶ್ನಿಸಿದರು.

ಅನರ್ಹತೆ ನಿವಾರಣೆ ತಿದ್ದುಪಡಿ ಮಸೂದೆ ಕುರಿತು ಚರ್ಚಿಸುವಾಗ ಅವರು, ‘ಜಯಚಂದ್ರ 1978ರಲ್ಲಿ ಶಾಸಕರಾದವರು. ಅವರೇ ಅತ್ಯಂತ ಹಿರಿಯ ಶಾಸಕ. ಸಭಾಧ್ಯಕ್ಷ ಆಗಲೂ ಒಪ್ಪದ ಅವರನ್ನು ದೆಹಲಿ ಪ್ರತಿನಿಧಿ ಮಾಡಿದ್ದೀರಿ. ಅವರು ಸಂಪುಟದಲ್ಲಿ ಇರಬೇಕಿತ್ತು. ಅಲ್ಲಿ ಕರ್ನಾಟಕ ಭವನದಲ್ಲಿ ಕುಳಿತು ಚಳಿಯಲ್ಲಿ ನಡುಗುವುದನ್ನು ಬಿಟ್ಟು ಏನು ಕೆಲಸ ಇದೆ? ಹಿರಿಯರಿಗೆ ಏಕೆ ಈ ಶಿಕ್ಷೆ’ ಎಂದು ಕೇಳಿದರು.

‘ಜಯಚಂದ್ರ ಅವರ ಜತೆ ಎಂ.ವೈ. ಪಾಟೀಲ ಕೂಡ 1978ರಲ್ಲಿ ಮೊದಲ ಬಾರಿ ಶಾಸಕರಾದವರು. ಇವರಿಬ್ಬರೂ ಸದನಕ್ಕೆ ಹಿರಿಯರು’ ಎಂದು ಕಾಂಗ್ರೆಸ್‌ನ ಮಹಾಂತೇಶ್ ಕೌಜಲಗಿ ದನಿಗೂಡಿಸಿದರು.

‘ನಾನು ಕೂಡ ದೆಹಲಿ ಪ್ರತಿನಿಧಿ ಆಗಿದ್ದೆ. ಮಂತ್ರಿಗಳು ಪದೇ ಪದೇ ದೆಹಲಿಗೆ ಹೋಗುವುದನ್ನು ತಪ್ಪಿಸಲು ದೆಹಲಿ ಪ್ರತಿನಿಧಿ ನೇಮಿಸಲಾಗುತ್ತದೆ. ಕರ್ನಾಟಕ ಭವನದಲ್ಲಿ ಕೊಠಡಿ ಬೆಚ್ಚಗೆ ಮಾಡುವುದೂ ಹೌದು’ ಎಂದು ಕಾಂಗ್ರೆಸ್‌ನ ಸಿ.ಎಸ್. ನಾಡಗೌಡ ಹೇಳಿದರು.

‘ಜಯಚಂದ್ರ ಅವರೇನು ಸಚಿವರ ಆಪ್ತ ಸಹಾಯಕರೇ? ಅವರೇಕೆ ಸಚಿವರ ಕಡತ ಹಿಡಿದು ಓಡಾಡಬೇಕು’ ಎಂದು ಬೊಮ್ಮಾಯಿ ಕೇಳಿದರು.

‘ಇವೆಲ್ಲವೂ ರಾಜಕೀಯ ಪುನರ್ವಸತಿ ಕಲ್ಪಿಸುವುದಕ್ಕೆ ಇರುವ ಹುದ್ದೆಗಳು. ಬೊಕ್ಕಸಕ್ಕೆ ನಷ್ಟದ ಹೊರತಾಗಿ ಈ ಹುದ್ದೆಗಳಿಂದ ಏನೂ ಆಗುವುದಿಲ್ಲ’ ಎಂದು ಬಿಜೆಪಿಯ ಆರಗ ಜ್ಞಾನೇಂದ್ರ ಹೇಳಿದರು.

# ಅನಧಿಕೃತ ಸ್ವತ್ತುಗಳಿಗೆ ‘ಬಿ’ ಖಾತಾ: ಪ್ರಸ್ತಾವನೆ

## ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯ ಸ್ವತ್ತುಗಳಿಗೆ ಅನ್ವಯ: ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯ ಅನಧಿಕೃತ ಸ್ವತ್ತುಗಳಿಗೆ ಒಂದು ಬಾರಿ ತೆರಿಗೆ ಕಟ್ಟಿಸಿಕೊಂಡು ‘ಬಿ’ ಖಾತಾ ನೀಡುವ ಬಗ್ಗೆ ಮುಖ್ಯಮಂತ್ರಿಯವರಿಗೆ ಪ್ರಸ್ತಾವನೆಯೊಂದನ್ನು ಸಲ್ಲಿಸಲಾಗಿದೆ ಎಂದು ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಹೇಳಿದರು.

ವಿಧಾನಸಭೆಯಲ್ಲಿ ಶುಕ್ರವಾರ ಪ್ರಶ್ನೋತ್ತರ ಅವಧಿಯಲ್ಲಿ ಜೆಡಿಎಸ್‌ನ ಜಿ.ಡಿ. ಹರೀಶ್‌ಗೌಡ ಅವರ ಪ್ರಶ್ನೆಯ ವೇಳೆ ಮಧ್ಯ ಪ್ರವೇಶಿಸಿದ ಸುರೇಶ್ ಹೀಗೆ ಹೇಳಿದರು.

ಬೆಂಗಳೂರಿನಲ್ಲಿ ಭೂಪರಿವರ್ತನೆಯಾದ ಸ್ವತ್ತುಗಳಿಗೆ ‘ಎ’ ಖಾತಾ, ಭೂಪರಿವರ್ತನೆಯಾಗದ ಸ್ವತ್ತುಗಳಿಗೆ ‘ಬಿ’ ಖಾತಾ ನೀಡಲಾಗಿದೆ. ಇದೇ ರೀತಿಯಲ್ಲಿ ನಗರಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲೂ ‘ಬಿ’ ಖಾತಾ ನೀಡಿದರೆ ಸರ್ಕಾರಕ್ಕೆ ಸುಮಾರು ₹2,000 ಕೋಟಿ ಆದಾಯ ಬರುತ್ತದೆ ಎಂದು ವಿವರಿಸಿದರು.

ಖಾತೆ ಸಮಸ್ಯೆ ಬಗೆಹರಿಯದಿರುವ ಕಾರಣ ಕುಡಿಯುವ ನೀರು ಪೂರೈಕೆ ಸೇರಿದಂತೆ ಯಾವುದೇ ಮೂಲಸೌಕರ್ಯ ನೀಡಿದರೂ ಸರ್ಕಾರಕ್ಕೆ ಆದಾಯ ಬರುತ್ತಿಲ್ಲ. ನಗರದ ಪ್ರದೇಶಗಳಲ್ಲಿ ಅಕ್ರಮ ಕಟ್ಟಡಗಳನ್ನು ಸಕ್ರಮಗೊಳಿಸಲು ಹಿಂದೆ ಕಾನೂನು ರೂಪಿಸಲಾಗಿತ್ತು (94 ಸಿ). ಪ್ರಕರಣ ಸುಪ್ರೀಂ ಕೋರ್ಟ್‌ನಲ್ಲಿದೆ ಎಂದು ಹೇಳಿದರು.

ಕಾಂಗ್ರೆಸ್‌ನ ತನ್ವೀರ್ ಸೇಠ್, ಬಿಜೆಪಿಯ ಸುನಿಲ್ ಕುಮಾರ್ ಮಾತನಾಡಿ, ಅಕ್ರಮ ಬಡಾವಣೆಗಳ ಸಮಸ್ಯೆ ಇಡೀ ರಾಜ್ಯದಾದ್ಯಂತ ಇದೆ. ಈ ಬಗ್ಗೆ ವಿಸ್ತೃತವಾಗಿ ಚರ್ಚಿಸಲು ಅವಕಾಶ ನೀಡಬೇಕು ಎಂದು ಸಭಾಧ್ಯಕ್ಷ ಯು.ಟಿ. ಖಾದರ್ ಅವರನ್ನು ಒತ್ತಾಯಿಸಿದರು. ಅವಕಾಶ ನೀಡುವುದಾಗಿ ಖಾದರ್ ಭರವಸೆ ನೀಡಿದರು.

ಹರೀಶ್‌ಗೌಡ ಮಾತನಾಡಿ, ಹುಣಸೂರು ನಗರಸಭಾ ವ್ಯಾಪ್ತಿಯಲ್ಲಿ 81 ಅನಧಿಕೃತ ಬಡಾವಣೆಗಳಿವೆ. ಅವುಗಳಲ್ಲಿ ಕೆಲವು 70ರ ದಶಕಗಳಲ್ಲೇ ನಿರ್ಮಾಣಗೊಂಡಿದ್ದವು. ಈ ಬಡಾವಣೆಗಳ ಜನರಿಂದ ದುಪ್ಪಟ್ಟು ತೆರಿಗೆ ಪಾವತಿಸಿಕೊಂಡು ಕುಡಿಯುವ ನೀರು, ರಸ್ತೆ, ಬೀದಿ ದೀಪ ಮತ್ತು ಇತರ ಮೂಲಸೌಕರ್ಯ ನೀಡಿಲ್ಲ ಎಂದು ದೂರಿದರು.

### ‘ಅಂತರ್ಜಲ ಮಾಹಿತಿ ಸಂಗ್ರಹಕ್ಕೆ ಸಮಿತಿ’

ರಾಜ್ಯದಲ್ಲಿನ ಅಂತರ್ಜಲ ಸಂಪನ್ಮೂಲದ ಸಮಗ್ರ ಮಾಹಿತಿ ಸಿದ್ಧಪಡಿಸಲು ಸಮಿತಿ ರಚಿಸಲಾಗುವುದು ಎಂದು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ವಿಧಾನ ಪರಿಷತ್‌ನಲ್ಲಿ ಜೆಡಿಎಸ್‌ನ ಸಿ.ಎನ್.ಮಂಜೇಗೌಡ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ರಾಜ್ಯದಲ್ಲಿ ಲಭ್ಯವಿರುವ ನೀರಿನ ಪ್ರಮಾಣ, ಭೂಮಿಯ ವಿವಿಧ ಸ್ತರಗಳಲ್ಲಿರುವ ನೀರಿನ ಸಾಂದ್ರತೆ, ಶುದ್ಧತೆ ಸೇರಿದಂತೆ ಎಲ್ಲ ಮಾಹಿತಿ ಒಳಗೊಂಡ ವರದಿಯನ್ನು ಸಮಿತಿ ನೀಡಲಿದೆ. ನಂತರ ಅಗತ್ಯವಿರುವ ಭಾಗಗಳಲ್ಲಿ ಇನ್ನಷ್ಟು ಶುದ್ಧನೀರಿನ ಘಟಕ ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುವುದು ಎಂದರು.

ಗ್ರಾಮ ಪಂಚಾಯತಿಗಳ ಮೂಲಕ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಕಲ್ಯಾಣ ಕಾರ್ಯಕ್ರಮಗಳಿಗಾಗಿ 2022–23ನೇ ಸಾಲಿನಲ್ಲಿ ನಿಗದಿಪಡಿಸಿದ ₹ 716 ಕೋಟಿಯಲ್ಲಿ ₹ 500 ಕೋಟಿ ವೆಚ್ಚ ಮಾಡಲಾಗಿದೆ ಎಂದು ಕಾಂಗ್ರೆಸ್‌ನ ಡಿ.ತಿಮ್ಮಯ್ಯ ಅವರ ಪ್ರಶ್ನೆಗೆ ಉತ್ತರಿಸಿದರು.

ಗದಗದಲ್ಲಿರುವ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯಕ್ಕೆ 172 ಹುದ್ದೆಗಳು ಮಂಜೂರಾಗಿದ್ದರೂ, ಕುಲಪತಿ ಹಾಗೂ ಕುಲಸಚಿವರಷ್ಟೇ ನೇಮಕವಾಗಿದ್ದಾರೆ. ಖಾಲಿ ಹುದ್ದೆಗಳ ಭರ್ತಿಗೆ ಶೀಘ್ರ ಕ್ರಮ ಕೈಗೊಳ್ಳಲಾಗುವುದು ಎಂದು ಬಿಜೆಪಿಯ ಎಸ್.ವಿ. ಸಂಕನೂರ ಪ್ರಶ್ನೆಗೆ ಉತ್ತರಿಸಿದರು.

### ‘ಕೈಗಾರಿಕಾ ಪ್ರದೇಶಗಳು ಮೇಲ್ದರ್ಜೆಗೆ’

ರಾಜ್ಯದ ಎಲ್ಲ ಕೈಗಾರಿಕಾ ಪ್ರದೇಶಗಳಲ್ಲಿ ಈಗಿನ ಸಂದರ್ಭಕ್ಕೆ ತಕ್ಕಂತೆ ಮೂಲಸೌಕರ್ಯಗಳನ್ನು ಒಂದು ಬಾರಿಗೆ ಮೇಲ್ದರ್ಜೆಗೇರಿಸಲಾಗುವುದು ಎಂದು ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ತಿಳಿಸಿದರು.

ಬಹುತೇಕ ಕೈಗಾರಿಕಾ ಪ್ರದೇಶಗಳಲ್ಲಿ ಮೂಲ ಸೌಕರ್ಯ ಇಲ್ಲದಿರುವುದು ಗಮನಕ್ಕೆ ಬಂದಿದೆ. ಮೂಲಸೌಕರ್ಯವನ್ನು ಅಭಿವೃದ್ಧಿ ಪಡಿಸಿ ಹಸ್ತಾಂತರಿಸಲಾಗುವುದು ಎಂದು ಅವರು ಬಿಜೆಪಿಯ ಧೀರಜ್ ಮುನಿರಾಜು ಅವರ ಪ್ರಶ್ನೆಗೆ ಪ್ರತಿಕ್ರಿಯಿಸಿದರು.

ದೊಡ್ಡಬಳ್ಳಾಪುರಕ್ಕೆ ಫಾಕ್ಸ್‌ಕಾನ್ ಕಂಪನಿ ಬರಲಿದೆ. ಐಫೋನ್ ತಯಾರಿಸುವ ಈ ಕಂಪನಿಯಿಂದ ಸುಮಾರು 50 ಸಾವಿರ ಉದ್ಯೋಗ ಸೃಷ್ಟಿಯಾಗಲಿದೆ. ಈ ಕಂಪನಿಗೆ 300 ಎಕರೆ ಜಮೀನು ಹಸ್ತಾಂತರಿಸುವುದಕ್ಕೆ ಸಂಬಂಧಿಸಿದಂತೆ ಇರುವ ಕಾನೂನು ತೊಡಕುಗಳನ್ನು ಬಗೆಹರಿಸಲಾಗಿದೆ ಎಂದು ಪಾಟೀಲ ಹೇಳಿದರು.

ಧೀರಜ್ ಮಾತನಾಡಿ, ದೊಡ್ಡಬಳ್ಳಾಪುರ ವ್ಯಾಪ್ತಿಯಲ್ಲಿ 60 ಸಾವಿರ ಕಾರ್ಮಿಕರು ಇದ್ದಾರೆ. ಆದರೆ, ಅವರಿಗೆ ಅಗತ್ಯ ಸೌಲಭ್ಯಗಳನ್ನು ನೀಡಿಲ್ಲ. ಕೈಗಾರಿಕಾ ಪ್ರದೇಶಗಳಲ್ಲೂ ಮೂಲಸೌಕರ್ಯಗಳಿಲ್ಲ. ರಸ್ತೆಗಳೂ ಸಮರ್ಪಕವಾಗಿಲ್ಲ ಎಂದರು.

### ಬುಧವಾರ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆ

**ಬೆಂಗಳೂರು:** ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯು ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಇದೇ ಬುಧವಾರ ನಡೆಯಲಿದೆ.

ನಗರದ ರ‍್ಯಾಡಿಸನ್ ಬ್ಲೂ ಹೋಟೆಲ್‌ನಲ್ಲಿ ಬುಧವಾರ ಸಂಜೆ 6.30ರಿಂದ ನಡೆಯುವ ಸಭೆಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ವಿಧಾನ ಪರಿಷತ್‌ನ ಸಭಾ ನಾಯಕ ಎನ್.ಎಸ್. ಬೋಸರಾಜು ಮತ್ತು ಕೆಪಿಸಿಸಿಯ ಎಲ್ಲ ಕಾರ್ಯಾಧ್ಯಕ್ಷರು ಭಾಗವಹಿಸುತ್ತಾರೆ ಎಂದು ಕಾಂಗ್ರೆಸ್ ಶಾಸಕಾಂಗ ಪಕ್ಷದ ಕಾರ್ಯದರ್ಶಿ ಈ. ತುಕಾರಾಂ ತಿಳಿಸಿದ್ದಾರೆ.

ವಿಧಾನ ಮಂಡಲದ ಬಜೆಟ್ ಅಧಿವೇಶನ ಶುಕ್ರವಾರ ಕೊನೆಗೊಳ್ಳಲಿದೆ. ಎರಡು ದಿನ ಮುಂಚಿತವಾಗಿ ಶಾಸಕಾಂಗ ಪಕ್ಷದ ಸಭೆ ಕರೆಯಲಾಗಿದೆ.

**ಗಾಂಧೀಜಿ ಜೊತೆ ಫೋಟೊ** ವಿಧಾನಸೌಧದಲ್ಲಿ ಶುಕ್ರವಾರ ನಡೆದ ವಿಧಾನ ಪರಿಷತ್ ಕಲಾಪವನ್ನು ವೀಕ್ಷಿಸಲು ಬಂದ ಶಾಲಾ–ಕಾಲೇಜಿನ ವಿದ್ಯಾರ್ಥಿಗಳು ಗಾಂಧೀಜಿ ಪ್ರತಿಮೆ ಮುಂದೆ ಫೋಟೋ ತೆಗೆದುಕೊಂಡರು –ಪ್ರಜಾವಾಣಿ ಚಿತ್ರ: ಎಂ.ಎಸ್.ಮಂಜುನಾಥ್

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ಮಸೂದೆ ಅಂಗೀಕಾರ

# ತೆರಿಗೆ ವಂಚನೆಗೆ ಕಡಿವಾಣ: ಬೊಮ್ಮಾಯಿ ಆಗ್ರಹ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಅಡಿಕೆ, ಸ್ಕ್ರ್ಯಾಪ್, ಸಿಮೆಂಟ್, ಎಲೆಕ್ಟ್ರಾನಿಕ್ ಉಪಕರಣಗಳು, ಕ್ರಷರ್‌ಗಳಿಂದ ವ್ಯಾಪಕ ತೆರಿಗೆ ವಂಚನೆ ನಡೆಯುತ್ತಿದ್ದು, ಇದಕ್ಕೆ ಕಡಿವಾಣ ಹಾಕಿ ತೆರಿಗೆ ಸಂಗ್ರಹ ಹೆಚ್ಚಿಸಬೇಕು ಎಂದು ವಿಧಾನಸಭೆಯಲ್ಲಿ ಪಕ್ಷಾತೀತವಾಗಿ ಸದಸ್ಯರು ಸರ್ಕಾರವನ್ನು ಒತ್ತಾಯಿಸಿದರು.

ವಿಧಾನಸಭೆಯಲ್ಲಿ ಶುಕ್ರವಾರ ‘ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ಮಸೂದೆ’ಯ ಪರ್ಯಾಲೋಚನೆ ಮೇಲಿನ ಚರ್ಚೆಯಲ್ಲಿ ಮಾತನಾಡಿದ ಕಾಂಗ್ರೆಸ್, ಬಿಜೆಪಿ ಮತ್ತು ಜೆಡಿಎಸ್ ಸದಸ್ಯರು, ಜಿಎಸ್‌ಟಿ ಜಾರಿ ಆಗಿದ್ದರೂ ರಂಗೋಲಿ ಕೆಳಗೆ ತೂರುವ ಸಾಕಷ್ಟು ವ್ಯಾಪಾರಿಗಳಿದ್ದಾರೆ. ತೆರಿಗೆ ವಂಚಿಸುವುದನ್ನು ತಡೆಯಬೇಕು ಎಂದು ಆಗ್ರಹಿಸಿದರು. ಸುದೀರ್ಘ ಚರ್ಚೆಯ ಬಳಿಕ ಮಸೂದೆ ಅಂಗೀಕಾರ ಪಡೆಯಿತು.

ಬಿಜೆಪಿಯ ಬಸವರಾಜ ಬೊಮ್ಮಾಯಿ ಮಾತನಾಡಿ, ‘ತೆರಿಗೆ ವಂಚನೆ ಪ್ರಕರಣಗಳು ರಾಜ್ಯದಲ್ಲಿ ಸಾಕಷ್ಟಿವೆ. ಅಡಿಕೆ, ಸ್ಕ್ರ್ಯಾಪ್, ಎಲೆಕ್ಟ್ರಾನಿಕ್ ಉಪಕರಣಗಳ ವ್ಯಾಪಾರಿಗಳು ತೆರಿಗೆ ಜಾಲದ ವ್ಯಾಪ್ತಿಯಿಂದ ಹೊರಗೆ ವ್ಯವಹಾರ ಮಾಡುತ್ತಿದ್ದಾರೆ. ಅಡಿಕೆ ದೊಡ್ಡ ಪ್ರಮಾಣದಲ್ಲಿ ‘ನಂ 2’ ರೂಪದಲ್ಲಿ ಉತ್ತರ ಭಾರತಕ್ಕೆ ಹೋಗುತ್ತದೆ. ಸ್ಕ್ರ್ಯಾಪ್ ವ್ಯವಹಾರ ದೊಡ್ಡ ಮಟ್ಟದ್ದು, ಇದನ್ನು ಯಾರೂ ಗಮನಿಸುವುದಿಲ್ಲ. ಕೋಟಿಗಟ್ಟಲೆ ವ್ಯವಹಾರ ಇರುವ ಈ ವಲಯದಿಂದ ತೆರಿಗೆ ವಂಚನೆ ಆಗುತ್ತಿದೆ. ಸಣ್ಣ ವ್ಯಾಪಾರಿಗಳನ್ನು ಜಿಎಸ್‌ಟಿ ವ್ಯಾಪ್ತಿಯಿಂದ ಹೊರಗಿಡಲಾಗಿದೆ. ಆದರೆ ನೋಂದಣಿ ಮಾಡುವುದರಿಂದ ಹೊರಗಿಡುವುದು ಸರಿಯಲ್ಲ. ಎಲ್ಲ ರೀತಿಯ ವ್ಯಾಪಾರಿಗಳು ನೋಂದಣಿ ಮಾಡಿಸಿಕೊಳ್ಳುವಂತಾಗಬೇಕು. ಇದಕ್ಕಾಗಿ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು. ತೆರಿಗೆ ರಿಟರ್ನ್ಸ್ ಸಲ್ಲಿಕೆಗೆ ಮೂರು ವರ್ಷ ಅವಧಿ ನೀಡಿರುವುದು ದುರುಪಯೋಗಕ್ಕೆ ಕಾರಣವಾಗಲಿದೆ’ ಎಂದರು.

‘ಕರ್ನಾಟಕ ಉತ್ಪಾದನಾ ರಾಜ್ಯ. ಇಲ್ಲಿ ತೆರಿಗೆ ಸಂಗ್ರಹ ಹೆಚ್ಚಳವಾದಷ್ಟು ರಾಜ್ಯಕ್ಕೆ ಹೆಚ್ಚು ಅನುಕೂಲವಾಗುತ್ತದೆ. ಯಾರಿಗೆ ಜಿಎಸ್‌ಟಿ ಬಗ್ಗೆ ಮಾಹಿತಿ ಇದೆಯೋ ಅವರು ಜಿಎಸ್‌ಟಿ ನೋಂದಣಿ ಮಾಡಿರುತ್ತಾರೆ. ಬಹುತೇಕ ವ್ಯಾಪಾರಗಳು ನಗದು ಚಲಾವಣೆ ಮೂಲಕವೇ ಆಗುತ್ತವೆ. ಬಹಳಷ್ಟು ವ್ಯವಹಾರ ಅಧಿಕೃತವಾಗಿರುವುದಿಲ್ಲ’ ಎಂದು ಬೊಮ್ಮಾಯಿ ಹೇಳಿದರು.

ಕಾಂಗ್ರೆಸ್‌ನ ಕೆ.ಎಂ.ಶಿವಲಿಂಗೇಗೌಡ ಮಾತನಾಡಿ, ಬೆಂಗಳೂರಿನ ಚಿಕ್ಕಪೇಟೆಯಲ್ಲಿ ನಡೆಯುವ ಎಲೆಕ್ಟ್ರಾನಿಕ್ ಉತ್ಪನ್ನಗಳ ಮಾರಾಟದಲ್ಲಿ ದೊಡ್ಡ ಮಟ್ಟದಲ್ಲಿ ತೆರಿಗೆ ವಂಚನೆ ನಡೆಯುತ್ತಿದೆ. ಜಿಎಸ್‌ಟಿ ಪಾವತಿಸುತ್ತಿಲ್ಲ. ಅಲ್ಲಿ ತೆರಿಗೆಯನ್ನು ಕಟ್ಟುನಿಟ್ಟಾಗಿ ಸಂಗ್ರಹಿಸಿದರೆ ಎಲ್ಲ ಶಾಸಕರಿಗೂ ತಲಾ ₹10 ಕೋಟಿ ಅನುದಾನ ನೀಡಬಹುದು ಎಂದರು.

ಜೆಡಿಎಸ್‌ನ ಎಚ್.ಡಿ.ರೇವಣ್ಣ ಮಾತನಾಡಿ, ಕ್ರಷರ್‌ಗಳು ಜಿಎಸ್‌ಟಿ ನೀಡದೇ ವಂಚಿಸುತ್ತಿವೆ. ಇವುಗಳನ್ನು ಬಿಗಿಗೊಳಿಸಬೇಕು ಎಂದರು.

ಬಿಜೆಪಿಯ ಸಿ.ಕೆ.ರಾಮಮೂರ್ತಿ ಮಾತನಾಡಿ, ಚಿಕ್ಕಪೇಟೆಯಲ್ಲಿ ಕೋಟ್ಯಂತರ ಮೌಲ್ಯದ ಎಲೆಕ್ಟ್ರಾನಿಕ್ ಉಪಕರಣಗಳು ಮಾರಾಟವಾಗುತ್ತವೆ. ಆದರೆ, ಜಿಎಸ್‌ಟಿ ಪಾವತಿ ಆಗುತ್ತಿರುವುದು ಕಡಿಮೆ. ಇದಕ್ಕೆ ಅಧಿಕಾರಿಗಳೇ ಕಾರಣ. ಇವರಿಂದಲೇ ನಷ್ಟವಾಗುತ್ತಿದೆ. ಅಧಿಕಾರಿಗಳನ್ನು ಬದಲಾಯಿಸಬೇಕು ಎಂದು ಒತ್ತಾಯಿಸಿದರು.

### ನೋಂದಣಿ ರದ್ದು ಪ್ರಕ್ರಿಯೆ ಸರಳೀಕರಣ: ಎಚ್‌.ಕೆ.ಪಾಟೀಲ

ವರ್ತಕ ಸ್ನೇಹಿ ಉಪಕ್ರಮಗಳಲ್ಲಿ ಮುಖ್ಯವಾಗಿ ರಾಜಿ ತೆರಿಗೆ ಪದ್ಧತಿಯಲ್ಲಿರುವ ವರ್ತಕರು ಇ-ಕಾಮರ್ಸ್ ಆಪರೇಟರ್ಸ್ ಮೂಲಕ ಸರಕು ಪೂರೈಸಲು ಅವಕಾಶ ನೀಡಲಾಗಿದೆ ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲ ಹೇಳಿದರು.

ಮಸೂದೆಯ ಉದ್ದೇಶವನ್ನು ವಿವರಿಸಿದ ಅವರು, ನೋಂದಣಿ ರದ್ದತಿ ಹಿಂಪಡೆಯುವ ಪ್ರಕ್ರಿಯೆಯಲ್ಲಿ ಸರಳೀಕರಣ, ವರ್ತಕರು ಮರುಪಾವತಿ ಕ್ಲೇಮು ಮಾಡಲು ನಿಖರತೆ ಮತ್ತು ತರ್ಕ ಬದ್ಧತೆ, ವಿಳಂಬ ಮರುಪಾವತಿಗಳಿಗೆ ಬಡ್ಡಿ ಲೆಕ್ಕಾಚಾರ ನಿರ್ಧರಿಸುವ ವಿಧಾನ, ಕರ ನಿರ್ಧರಣೆ ಹಿಂಪಡೆದು ರಿಟರ್ನ್ ಸಲ್ಲಿಸಲು ಕಾಲಮಿತಿ ವಿಸ್ತರಣೆ ಮುಂತಾದ ಉಪಕ್ರಮಗಳನ್ನು ಜಾರಿಗೆ ತರಲು ಮಸೂದೆಯಲ್ಲಿ ಅವಕಾಶ ನೀಡಲಾಗಿದೆ ಎಂದರು.

ಜಿಎಸ್‌ಟಿ ವ್ಯವಸ್ಥೆ ಜಾರಿಗೆ ಬಂದ ಮೇಲೆ ಕರ್ನಾಟಕದಲ್ಲಿನ ತೆರಿಗೆ ಸಂಗ್ರಹ ದ್ವಿಗುಣಗೊಂಡಿದೆ. 2017–18ರಲ್ಲಿ ₹44,000 ಕೋಟಿ ಜಿಎಸ್‌ಟಿ ಸಂಗ್ರಹವಾಗಿತ್ತು. 2022–23ರಲ್ಲಿ ₹81,848 ಕೋಟಿಗೆ ಹೆಚ್ಚಳಗೊಂಡಿದೆ. ಜಾರಿ ಪ್ರಕರಣಗಳನ್ನು ಪರಿಗಣಿಸುವುದಾದರೆ 2022–23ರ ಸಾಲಿನಲ್ಲಿ 11,733 ಪ್ರಕರಣಗಳನ್ನು ತಪಾಸಣೆ ಮಾಡಿ ₹1,320 ಕೋಟಿ ಕರ ಮತ್ತು ದಂಡ ವಸೂಲು ಮಾಡಲಾಗಿದೆ ಎಂದು ಪಾಟೀಲ ಅವರು ಹೇಳಿದರು.

# ಗೃಹ ಲಕ್ಷ್ಮಿ ನೋಂದಣಿ 500 ಮಂದಿಗೆ ಪ್ರಜಾಪ್ರತಿನಿಧಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಗೃಹ ಲಕ್ಷ್ಮಿ’ ಯೋಜನೆಯ ಫಲಾನುಭವಿಗಳು ಮೊಬೈಲ್ ಮೂಲಕ ಅರ್ಜಿ ಸಲ್ಲಿಸಲು ನೆರವು ನೀಡುವುದಕ್ಕಾಗಿ ಪ್ರತಿ 500 ಮಹಿಳೆಯರಿಗೆ ಒಬ್ಬ ‘ಪ್ರಜಾಪ್ರತಿನಿಧಿ’ಯನ್ನು ನೇಮಿಸಲು ಅವಕಾಶ ಕಲ್ಪಿಸಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮಂಗಳವಾರ ಮಾರ್ಗಸೂಚಿ ಹೊರಡಿಸಿದೆ.

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅಧ್ಯಕ್ಷತೆಯಲ್ಲಿ ಜೂನ್ 16ರಂದು ನಡೆದ ಸಭೆಯಲ್ಲಿ ಕೈಗೊಂಡ ತೀರ್ಮಾನದಂತೆ ಪ್ರಜಾಪ್ರತಿನಿಧಿಗಳನ್ನು ನೇಮಿಸಲು ಒಪ್ಪಿಗೆ ನೀಡಲಾಗಿದೆ. ಸ್ವಯಂ ಸೇವಕರ ರೂಪದಲ್ಲಿ ಕಾರ್ಯನಿರ್ವಹಿಸಲು ಒಂದು ತಿಂಗಳ ಅವಧಿಗೆ ಸೀಮಿತವಾಗಿ ನೇಮಕಾತಿ ಮಾಡಿಕೊಳ್ಳಲಾಗುತ್ತಿದೆ.

ಒಂದು ಸಾವಿರ ಅಥವಾ ಕಡಿಮೆ ಜನಸಂಖ್ಯೆ ಹೊಂದಿರುವ ಗ್ರಾಮಗಳಿಗೆ ಇಬ್ಬರು ಪ್ರಜಾಪ್ರತಿನಿಧಿಗಳನ್ನು ನೇಮಿಸಿಕೊಳ್ಳಬೇಕು. ಅವರಲ್ಲಿ ಒಬ್ಬರು ಕಡ್ಡಾಯವಾಗಿ ಮಹಿಳೆಯರಾಗಿರಬೇಕು. ನಂತರದ ಪ್ರತಿ 500 ಜನಸಂಖ್ಯೆಗೆ ಹೆಚ್ಚುವರಿಯಾಗಿ ಒಬ್ಬರನ್ನು ನೇಮಿಸಲು ಅವಕಾಶವಿದೆ. ಪ್ರಜಾಪ್ರತಿನಿಧಿಗಳ ಆಯ್ಕೆಗೆ ಅರ್ಜಿ ಸಲ್ಲಿಸುವವರು ಎಸ್‌ಎಸ್‌ಎಲ್‌ಸಿ ಉತ್ತೀರ್ಣರಾಗಿರಬೇಕು ಎಂದು ಮಾರ್ಗಸೂಚಿಯಲ್ಲಿ ತಿಳಿಸಲಾಗಿದೆ.

ಪ್ರಜಾವಾಣಿ ಶನಿವಾರ, 15 ಜುಲೈ 2023

# ಭೂಮಿಕಾ

ಮಹಿಳೆಯ ಆಪ್ತ ಸಂಗಾತಿ

### ಮನೆಮದ್ದು

ಮಳೆಗಾಲದಲ್ಲಿ ಬ್ಯಾಕ್ಟೀರಿಯಾಗಳಿಂದಾಗಿ ಚರ್ಮದ ಮೇಲೆ ತುರಿಕೆ ಕಾಣಿಸಿಕೊಳ್ಳಬಹುದು. ಹಾಗಾಗಿ ಬೇವಿನ ಎಲೆಗಳನ್ನು ಉಗುರು ಬೆಚ್ಚಗಿನ ನೀರಿಗೆ ಸೇರಿಸಿ, ಸ್ನಾನ ಮಾಡುವುದುರಿಂದ ತುರಿಕೆ ಶಮನಗೊಳ್ಳುತ್ತದೆ.

# ಅಸಹಜ ವರ್ತನೆ ಸಹ್ಯವಲ್ಲ!

ಮಕ್ಕಳನ್ನು ಪೋಷಿಸುವ ಸಾಮಾಜಿಕ ಜವಾಬ್ದಾರಿ ಎಲ್ಲರ ಮೇಲೂ ಇದೆ. ಅದು ಕೇವಲ ತಾಯಿಯ ಜವಾಬ್ದಾರಿ ಅಷ್ಟೆ ಅಲ್ಲ. ನಮ್ಮ ಪ್ರತಿ ನಡೆಯನ್ನು ಮಗುವು ಗಮನಿಸಿರುತ್ತದೆ. ಹಾಗಾಗಿ ಕುಟುಂಬದ ಪ್ರತಿ ಸದಸ್ಯರು ಈ ಬಗ್ಗೆ ಎಚ್ಚೆತ್ತುಕೊಂಡಿರಬೇಕು.

**ಡಾ. ಶುಭಾ ಮಧುಸೂದನ್**

ಪುಟ್ಟ ಹುಡುಗನಿಗೆ ಅವನಿಗಿಂತ ಸ್ವಲ್ಪ ದೊಡ್ಡವನಾದ ಮತ್ತೊಬ್ಬ ಹುಡುಗ ಹೊಡೆದು, ಬಡಿದು ರಂಪ ಮಾಡಿದ ವರ್ತನೆಯ ವಿಡಿಯೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ಇತ್ತೀಚೆಗೆ ವೈರಲ್ ಆಗಿತ್ತು. ಆ ದೃಶ್ಯದಲ್ಲಿ ಹೊಡೆದ ಮಗುವಿನ ವರ್ತನೆ ನೋಡಿದವರನ್ನೆಲ್ಲ ದಂಗುಬಡಿಸಿತ್ತು. ಇದರ ಬೆನ್ನಲ್ಲೆ ಸಹಜವಾಗಿ ಟೀಕೆಗಳು ತೂರಿಬಂದವು.

ಮತ್ತೊಂದು ಘಟನೆ; ಐದೂವರೆ ವರ್ಷದ ಮಗು ಅಪಾರ್ಟ್‌ಮೆಂಟಿನ ಈಜುಕೊಳದ ಬಳಿ ನಿಂತಿದ್ದ ಇನ್ನೊಂದು ಮಗುವನ್ನು ಹಿಂದಿನಿಂದ ಬಂದು ನೀರಿಗೆ ತಳ್ಳಿತು. ಕೊಳದಲ್ಲಿದ್ದ ಬೇರೆಯವರು ಬಿದ್ದ ಮಗುವನ್ನು ರಕ್ಷಿಸಿದರು. ಆದರೆ ಆ ತಳ್ಳಿದ ಮಗುವಿನ ವರ್ತನೆಯ ಬಗ್ಗೆ ಹೆಚ್ಚು ಆಕ್ಷೇಪಗಳು ಕೇಳಿಬಂದವು.

ಈ ಎರಡು ಘಟನೆಗಳು ಮಕ್ಕಳ ವರ್ತನೆ ಕುರಿತು ಅನೇಕ ಪ್ರಶ್ನೆಗಳನ್ನು ಹುಟ್ಟುಹಾಕಬಹುದು. ಆದರೆ, ಬೇರೆಯವರಿಗೆ ಹಿಂಸೆ ಕೊಟ್ಟು ತೃಪ್ತಿಪಡುವ ಆಲೋಚನೆ ಈ ಮಕ್ಕಳಲ್ಲಿ ಬಂದಿದ್ದು ಹೇಗೆ ಎಂಬುದನ್ನು ಮೊದಲು ಅರ್ಥ ಮಾಡಿಕೊಳ್ಳಬೇಕು. ‘ಹಿಂಸೆ ಹಿಂಸಕನನ್ನು ಹೆಚ್ಚು ಬಾಧಿಸುತ್ತದೆ’ ಎಂಬ ಮಾತಿದೆ. ಹಾಗೆ ಹಲವು ರೀತಿಯಲ್ಲಿ ಬಾಧಿತನಾದ ಹಿಂಸಕನೇ ಹಿಂಸೆ ನೀಡುತ್ತಾನೆ ಎನ್ನುವುದನ್ನೂ ಅರ್ಥ ಮಾಡಿಕೊಳ್ಳಬೇಕಿದೆ.

ಮಕ್ಕಳ ನಡುವೆ ಇಂಥ ಕೃತ್ಯಗಳು ನಡೆಯುತ್ತಿರುತ್ತವೆ. ಇಂಥ ಘಟನೆಗಳು ನಡೆದಾಗಲೆಲ್ಲ, ‘ಮಕ್ಕಳು ಯಾಕೆ ಹೀಗೆ ವರ್ತಿಸುತ್ತಾರೆ’ ಎಂದು ಎಲ್ಲರನ್ನೂ ಕಾಡುತ್ತಿರುತ್ತದೆ. ಜೊತೆಗೆ, ‘ಮಕ್ಕಳನ್ನು ಹೇಗೆ ಬೆಳೆಸಿದ್ದಾರೆ’ ಎಂದು ಪೋಷಕರತ್ತ ಬೊಟ್ಟು ಮಾಡುವಂತಹ ಘಟನೆಗಳು ನಡೆಯುತ್ತಿರುತ್ತವೆ. ಇದು ಸ್ವಲ್ಪ ಮಟ್ಟಿಗೆ ನಿಜವೇ ಆದರೂ, ಇದರೊಂದಿಗೆ ಪರಿಸರ, ಕೌಟುಂಬಿಕ ವ್ಯವಸ್ಥೆ, ಜೈವಿಕ ಕಾರಣಗಳು ಪಾತ್ರ ವಹಿಸುತ್ತವೆ ಎಂಬುದನ್ನು ಮರೆಯುವಂತಿಲ್ಲ.

## ಅಸಹಜ ವರ್ತನೆಗಳು ಯಾವುವು?

‘ಮಕ್ಕಳಲ್ಲಿ ವರ್ತನಾ ಸಮಸ್ಯೆ’ಗಳನ್ನು (Behavior Problems) ಗುರುತಿಸುವುದಾದರೆ ದೊಡ್ಡ ಪಟ್ಟಿಯೇ ಸಿಗುತ್ತದೆ. ‘ನಿನ್ನ ಹೆಸರೇನು’ ಎಂದು ಮಾತನಾಡಿಸಿದರೆ, ಬಾಯಿ ತುಂಬಾ ಉಗುಳುಮಾಡಿಕೊಂಡು ‘ಥುಪಕ್’ ಎಂದು ಉಗಿಯುವ ಮಕ್ಕಳಿದ್ದಾರೆ. ಕೆಟ್ಟ ಪದಗಳ ಪ್ರಯೋಗ/ಬೈಗುಳ, ದೈಹಿಕವಾಗಿ ಹಿಂಸೆಮಾಡುವಂತಹ (ಗಿಲ್ಲುವುದು, ಹೊಡೆಯುವುದು, ಕಚ್ಚುವುದು, ಒದೆಯುವುದು, ಕೂದಲು ಎಳೆಯುವುದು ಇತ್ಯಾದಿ) ಮಕ್ಕಳಿರುತ್ತವೆ. ವಿನಾಶಕಾರಿ ವರ್ತನೆಗಳು (ಪೀಠೋಪಕರಣಗಳು ಹಾಳುಮಾಡುವುದು), ತನಗೆ ತಾನೇ ಹಿಂಸೆ ಮಾಡಿಕೊಳ್ಳುವುದು (ತಲೆಯನ್ನು ಜಜ್ಜಿಕೊಳ್ಳುವುದು, ಪರಚಿ ಕೊಳ್ಳುವುದು, ತುಟಿಯನ್ನು ಕಚ್ಚಿಕೊಳ್ಳುವುದು ಇತರೆ), ನಿಯಮಗಳನ್ನು ಬೇಕಂತಲೇ ಉಲ್ಲಂಘಿಸುವುದು, ದೈನಂದಿನ ಕೆಲಸಗಳಿಗೆ ದೊಡ್ಡವರು ಬೇಡಿಕೊಳ್ಳುವಂತೆ ವರ್ತಿಸುವ (ಹೋಮ್‌ವರ್ಕ್ ಮಾಡಲು, ಹಾಲು ಕುಡಿಯಲು, ಸ್ನಾನ ಮಾಡಲು) ಮಕ್ಕಳಿದ್ದಾರೆ. ಇವೆಲ್ಲವೂ ಅಸಹಜ ವರ್ತನೆಗಳೇ.

ಆದರೆ, ಬೇರೆ ಮಗುವನ್ನು ಅಚಾನಕ್ ಆಗಿ ನೀರಿಗೆ ತಳ್ಳುವುದು ‘ಸಾರ್ವತ್ರಿಕ’ ನಡವಳಿಕೆಯಲ್ಲ. ಅಂದರೆ ಎಲ್ಲಾ ಮಕ್ಕಳು ಇನ್ನೊಂದು ಮಗುವನ್ನು ನೀರಿಗೆ ತಳ್ಳುವುದಿಲ್ಲ. ಅದು ಈ ಮಗುವಿನ ‘ಏಕ ಮಾತ್ರ’ ವ್ಯಕ್ತಿತ್ವ. ಹಾಗೆಯೇ ಮಗು ಅಪರೂಪಕ್ಕೆ ತಳ್ಳಿದೆಯೇ ಎಂಬುದನ್ನು ಸಹ ಗಮನಿಸಿಕೊಳ್ಳಬೇಕು. ‘ನೀರಿಗೆ ತಳ್ಳಿರುವುದು ಮೊದಲನೇ ಸಲವಾದರೂ, ಹಿಂದೊಮ್ಮೆ ಲೋಟದಲ್ಲಿದ್ದ ನೀರನ್ನು ಸೀರೆಯ ಮೇಲೆ ಚೆಲ್ಲಿತ್ತು’ ಎಂದು ಹೇಳಿದರೆ, ಮಗುವಿಗೆ ಅಸಹಜವಾಗಿ ವರ್ತಿಸುವ ಅಭ್ಯಾಸವಿದೆ ಎಂದಾಯಿತು. ಹೀಗೆ, ಇನ್ನೊಬ್ಬರಿಗೆ ಹಿಂಸೆ ಕೊಟ್ಟು ತೃಪ್ತಿಪಡುವ ಪ್ರವೃತ್ತಿಯನ್ನು ಎಳವೆಯಲ್ಲಿ ಚಿವುಟಿ ಹಾಕಬೇಕು.

## ಜೈವಿಕ ಕಾರಣಗಳೂ ಉಂಟು!

ಹುಟ್ಟಿ ಮೂರು ವರ್ಷಗಳ ಒಳಗೆ ಮಗುವಿನ ಮಿದುಳಿನ ಮುಖ್ಯವಾದ ಬೆಳವಣಿಗೆಯಾಗುತ್ತದೆ. ಅದರಲ್ಲಿಯೂ ಗಮನಿಸಬೇಕಾದ್ದು ಆರ್ಬಿಟೋಫ್ರಂಟಲ್ ಕಾರ್ಟೆಕ್ಸ್‌ನ ಬೆಳವಣಿಗೆ. ಇದರ ಮುಖ್ಯ ಕೆಲಸವೇ ಉದ್ವೇಗ ನಿಯಂತ್ರಣ, ಭಾವನಾತ್ಮಕ ಮೌಲ್ಯಮಾಪನ, ಸಾಮಾಜಿಕ ಪರಿಸರದ ಅರಿವು ಮತ್ತು ಸಾಮಾಜಿಕ ನಡವಳಿಕೆ. ಮನಸ್ಸಿನಲ್ಲಿ ಕ್ರೌರ್ಯದ ಭಾವ ಉತ್ಪತ್ತಿಯಾದರೂ ಆಘಾತಕಾರಿ ವರ್ತನೆಯನ್ನು ಮಿದುಳಿನ ಈ ಆರ್ಬಿಟೋಫ್ರಂಟಲ್ ಕಾರ್ಟೆಕ್ಸ್ ಯಶಸ್ವಿಯಾಗಿ ನಿಯಂತ್ರಿಸುತ್ತದೆ ಅಥವಾ ಪ್ರತಿಬಂಧಿಸುತ್ತದೆ. ಆರ್ಬಿಟೋಫ್ರಂಟಲ್ ಕಾರ್ಟೆಕ್ಸ್-ನ ಬೆಳವಣಿಗೆ ಕುಂಠಿತವಾದರೆ ಮಕ್ಕಳಲ್ಲಿ ಈ ರೀತಿಯ ವರ್ತನೆಯನ್ನು ಕಾಣಬಹುದು. ಇದರ ಜೊತೆಗೆ, ಸ್ವನಿಯಂತ್ರಿತ ನರಮಂಡಲದ ವ್ಯವಸ್ಥೆ, ನರಪ್ರೇಕ್ಷಕಗಳು ಮತ್ತು ಹಾರ್ಮೋನುಗಳು ಕ್ರೌರ್ಯ ತೋರುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ.

## ಸಾಮಾಜಿಕ ಕಾರಣಗಳೇನಿರಬಹುದು?

ಮಗುವು ತೊದಲು ನಡೆಯಲು ಶುರುವಿಟ್ಟುಕೊಂಡು ಸಹಜವಾಗಿ ಬೀಳುತ್ತದೆ. ಆಗ ಮನೆಯವರು ಬಿದ್ದ ಮಗುವನ್ನು ಸಾಂತ್ವನಪಡಿಸುವ ನೆಪದಲ್ಲಿ ನೆಲಕ್ಕೆ ಸುಳ್ಳೇ ಸುಳ್ಳೇ ಪೆಟ್ಟು ಕೊಡುವ ನಾಟಕ ಮಾಡುತ್ತಾರೆ. ಈ ನಡೆಯು ಹೊರಗಡೆ ಏನೋ ಸರಿಯಾಗಿಲ್ಲ. ನನ್ನೊಳಗೆ ಎಲ್ಲವೂ ಸರಿ ಇದೆ ಎಂಬ ಅರ್ಥವನ್ನು ಧ್ವನಿಸುತ್ತದೆ. ಇದನ್ನೇ ಮಗುವು ನೆಚ್ಚಿಕೊಳ್ಳುತ್ತದೆ. ಇದರಿಂದ ಮಗುವಿಗೆ ತಾನೂ ತಪ್ಪು ಮಾಡಬಹುದು ಎಂಬ ಪ್ರಜ್ಞೆ ಬೆಳೆಯುವುದೇ ಇಲ್ಲ.

ಇನ್ನು ಮಿದುಳಿನ ಬೆಳವಣಿಗೆಗೆ ಮಾರಕವಾಗುವ ಮತ್ತೊಂದು ಅಂಶವೆಂದರೆ ಈ ವಿಡಿಯೊ ಗೇಮ್‌ಗಳು ಮತ್ತು ಕಾರ್ಟೂನ್‌ಗಳು. ಈ ಬಹುತೇಕ ಗೇಮ್, ಕಾರ್ಟೂನ್‌ಗಳಲ್ಲಿ ಬಲಾಢ್ಯನೊಬ್ಬ ನಿಸ್ಸಹಾಯಕನ ಮೇಲೆ ದಾಳಿ ಮಾಡುವ ಚಿತ್ರಣಗಳೇ ಇರುತ್ತವೆ. ಒಂದಕ್ಕೊಂದು ಡಿಕ್ಕಿ ಹೊಡೆಯುವ, ಹೊಡೆದು ಬೀಳಿಸುವ, ಆಕ್ರಮಣ ಮಾಡುವ ಇಂಥ ಪ್ರಚೋದನಕಾರಿ ಅಂಶಗಳು ಮಗುವಿನ ಮನಸ್ಸಿನ ಮೇಲೆ ಪರಿಣಾಮ ಬೀರುತ್ತವೆ. ಮಗುವಿನ ಆಲೋಚನಾ ಕ್ರಮವನ್ನೇ ಹಾಳು ಮಾಡುವ ಸಾಧ್ಯತೆ ಇರುತ್ತದೆ. ವರ್ತನೆಯಲ್ಲಿ ಸಮಸ್ಯೆ ಕಾಣಿಸಿಕೊಳ್ಳುವುದಕ್ಕೆ ಪ್ರೀತಿಯ ಅಭಾವ, ಭಾವನಾತ್ಮಕ ಸಂಬಂಧದ ಕೊರತೆ, ಕುಂಠಿತ ಮಿದುಳು ಮತ್ತು ತಪ್ಪು ಆಲೋಚನೆಗಳು ಕಾರಣವಾಗುತ್ತವೆ.

ಮಕ್ಕಳಿಗೆ ಆಡಲು ಆಟದ ಮೈದಾನವಿಲ್ಲ. ಕುಂಟೆ - ಬಿಲ್ಲೆ ಇಂಥ ದೇಸಿಗಳ ಆಟಗಳ ಬಗ್ಗೆ ಕಲ್ಪನೆಯೂ ಇಲ್ಲ. ಮಕ್ಕಳಿಗಾಗಿ ಸಿನಿಮಾಗಳಿಲ್ಲ. ವೈಜ್ಞಾನಿಕ ಕೇಂದ್ರಗಳೂ ಇಲ್ಲ... ರಿಯಾಲಿಟಿ ಷೋಗಳು ಮಕ್ಕಳ ಕಾರ್ಯಕ್ರಮವಲ್ಲ. ಮಕ್ಕಳು ಭಾರವೆನ್ನುವ ತಾಯಂದಿರು; ಮಕ್ಕಳೇನಿದ್ದರು ಹೆಂಡತಿಯ ಪ್ರಾಜೆಕ್ಟ್ ಅನ್ನುವ ಗಂಡಂದಿರು. ದೂರದೂರಿನಲ್ಲಿ ಒಂಟಿಯಾಗಿರುವ ಅಜ್ಜ ಅಜ್ಜಿಯಂದಿರು; ಇವರ ನಡುವೆ ಮೊಬೈಲ್ ಹಾಗೂ ಇಂಟರ್‌ನೆಟ್‌ಗಳ ನಡುವೆ ಬೆಳೆಯುವ ಮಗುವಿನ ವಿಕಾಸ ನೈಜವಾಗಿರಲು ಹೇಗೆ ಸಾಧ್ಯ?

(ಲೇಖಕರು ಮನೋಚಿಕಿತ್ಸಕರು)

### ಅಸಹಜ ವರ್ತನೆಗಿರುವ ಪ್ರಚೋದನೆಗಳು

**ತರಗತಿಯಲ್ಲಿ**

- ಕಲಿಕಾ ಸಮಸ್ಯೆ ಇದ್ದರೆ ಮಗು ಬೇಗ ಉದ್ವೇಗಗೊಳ್ಳುತ್ತದೆ.
- ಬೇಗ ಅವಮಾನಗೊಳ್ಳುವ ಪ್ರವೃತ್ತಿ ಇರುತ್ತದೆ. ಟೀಚರ್ ‘ಸುಮ್ಮನೆ ಕುಳಿತುಕೋ’ ಎಂದು ಬೈದಿದ್ದು ಪ್ರಚೋದನೆಯಾಗಬಹುದು. ನಿಯಾಮಾವಳಿ ಈ ಮಕ್ಕಳಿಗೆ ಇಷ್ಟವಾಗುವುದಿಲ್ಲ. ಟೀಚರ್ ಮೇಲಿನ ಕೋಪ ಇನ್ನೊಂದು ಮಕ್ಕಳ ಮೇಲೆ ತೀರಿಸಿಕೊಳ್ಳಬಹುದು.
- ಆಟಕ್ಕೆ ಕರೆದಾಗ ಬೇರೆ ಮಕ್ಕಳು ಬಾರದೆ ಇರುವುದು (ಭಾವ ತಿರಸ್ಕಾರ)
- ಮಕ್ಕಳನ್ನು ನಿಯಂತ್ರಣ ಮಾಡುವ ಟೀಚರ್ ಹೊರಗೆ ಹೋದಾಗ ಈ ಮಕ್ಕಳಿಗೆ ಉತ್ತೇಜನವಾಗುತ್ತದೆ.

**ಮನೆಯಲ್ಲಿ**

- ಅಪ್ಪ ಅಮ್ಮನ ನಿರಂತರ ಜಗಳ
- ಇಬ್ಬರೂ ಕೆಲಸಕ್ಕೆ ಹೋಗುವುದು -ಜೊತೆಗೆ ಅಜ್ಜಿ-ತಾತ ಇಲ್ಲದಿರುವುದು - ಇದರಿಂದ ಮಗುವಿಗೆ ಬೇಕಾದ ಸ್ಪರ್ಶ ಸಿಗುವುದಿಲ್ಲ. ಸ್ಪರ್ಶದಿಂದ ಮಗುವಿಗೆ ಬಂಧುತ್ವ-ಭ್ರಾತೃತ್ವ ಬರುತ್ತದೆ. ಮನೆಯಲ್ಲಿ ಹಿರಿಯರು ಇದ್ದರೂ ಮಗುವಿಗೆ ಅತಿ ಮುದ್ದು ಮಾಡಿ, ಹೊಣೆಗಾರಿಕೆ/ ಜವಾಬ್ದಾರಿ ಕಲಿಸುವುದಿಲ್ಲ.
- ಮನೆಯಲ್ಲಿಯೇ ದೊಡ್ಡವರು ಕೆಟ್ಟ ಪದಗಳನ್ನು ಬಳಸುವುದು.
- ಮಗುವಿನ ಖಾಸಗಿ ಅಂಗಗಳನ್ನು ಮುಟ್ಟಿ ನಗುವುದು.
- ಮಕ್ಕಳ ಮುಂದೆ ಅಪ್ಪ-ಅಮ್ಮ ತಬ್ಬಿ ಕುಳಿತುಕೊಳ್ಳುವುದು.
- ತಮ್ಮ ಅಥವಾ ತಂಗಿ ಹುಟ್ಟಿದಾಗ ಬರುವ ಹೊಟ್ಟೆಕಿಚ್ಚೂ ಪ್ರಚೋದನೆಯಾಗುತ್ತದೆ.
- ತಂದೆಯ ಸಾಮಾಜಿಕ ವಿರೋಧಿ ಚಟುವಟಿಕೆ ಅಥವಾ ತಾಯಿಯ ಮೇಲೆ ದೌರ್ಜನ್ಯ.

### ಸುಧಾರಣಾ ಕ್ರಮಗಳೇನು?

ಮಕ್ಕಳನ್ನು ಪೋಷಿಸುವ ಸಾಮಾಜಿಕ ಜವಾಬ್ದಾರಿ ಎಲ್ಲರ ಮೇಲೂ ಇದೆ. ಅದು ಕೇವಲ ತಾಯಿಯ ಜವಾಬ್ದಾರಿ ಅಷ್ಟೆ ಅಲ್ಲ. ನಮ್ಮ ಪ್ರತಿ ನಡೆಯನ್ನು ಮಗುವು ಗಮನಿಸಿರುತ್ತದೆ. ಹಾಗಾಗಿ ಕುಟುಂಬದ ಪ್ರತಿ ಸದಸ್ಯರು ಈ ಬಗ್ಗೆ ಎಚ್ಚೆತ್ತು ಕೊಂಡಿರುವುದು ಮುಖ್ಯ. ಏನೆಲ್ಲ ಸುಧಾರಣಾ ಕ್ರಮಗಳನ್ನು ಅನುಸರಿಸಿದರೆ ಮಗುವಿನ ಅಸಹಜ ವರ್ತನೆಯಲ್ಲಿ ಬದಲಾವಣೆ ತರಬಹುದು ಎಂಬುದನ್ನು ಗಮನಿಸೋಣ.

- ಮನೆಯ, ನೆರೆಹೊರೆಯ, ಶಾಲೆಯ, ಡೇ-ಕೇರ್ ಸೆಂಟರ್ ವಾತಾವರಣದಲ್ಲಿ ಸಿಗುವ ಬಾಂಧವ್ಯ, ಬೆಸುಗೆ, ಕರುಣೆ, ಮಮತೆ, ಮಧುರತೆ, ಔದಾರ್ಯ, ಕ್ಷಮೆಗುಣ ಅನುಭವ ಆರ್ಬಿಟೋಫ್ರಂಟಲ್ ಕಾರ್ಟೆಕ್ಸ್ ಬೆಳವಣಿಗೆಗೆ ಪೂರಕವಾಗುತ್ತದೆ. ಜತೆಗೆ ತಾಯಿಯ ಉಪಸ್ಥಿತಿ ಮತ್ತು ತಂದೆಯ ಸುರಕ್ಷತಾ ಭಾವ, ಜೊತೆಗೆ ಅಜ್ಜ ಅಜ್ಜಿಯ ಪ್ರೀತಿಯ ಸ್ಪರ್ಶದಿಂದ ಎಂಥ ಅಸಹಜ ವರ್ತನೆಯೂ ಸರಿ ಹೋಗುತ್ತದೆ.
- ಶಾಲೆ, ಡೇ-ಕೇರ್, ಮನೆಯಲ್ಲಿ ಇಂಥ ಅಸಹಜ ವರ್ತನೆ ತೋರುವ ಮಕ್ಕಳ ಬಗ್ಗೆ ನಿಗಾ ವಹಿಸಿ.
- ದೊಡ್ಡವರಲ್ಲಿ ಭಾವನಾತ್ಮಕ ನಿಯಂತ್ರಣ ಇರಬೇಕು. ಸಣ್ಣ ಪುಟ್ಟದ್ದಕ್ಕೆಲ್ಲಾ ಕಿರುಚಾಡಿ ಮನೆಯ ಸಾಮಗ್ರಿಗಳನ್ನು ಬಿಸಾಕುವ ಪ್ರವೃತ್ತಿಯನ್ನು ಬಿಟ್ಟು ಬಿಡಿ.
- ಆರ್ಬಿಟೋಫ್ರಂಟಲ್ ಕಾರ್ಟೆಕ್ಸ್ ಕ್ಷಮತೆಯನ್ನು ಹೆಚ್ಚಿಸಲು ಮಕ್ಕಳಿಗೆ ಆಟೋಟಗಳು ಮುಖ್ಯ. ವೈಯೊಲಿನ್/ ಗಿಟಾರ್ ವಾದನದಂತಹ ಸಂಗೀತ ವಾದ್ಯಗಳ ನುಡಿಸುವುದನ್ನು ಕಲಿಸಿ. ಹೊಸ ಭಾಷೆಯನ್ನೂ ಕಲಿಯಬಹುದು, ನೀತಿ ಕಥೆಗಳ ಪುಸ್ತಕಗಳನ್ನು ಓದಿ ಹೇಳಿ. ತೆನಾಲಿ ರಾಮನ ಹಾಸ್ಯ ಪ್ರಸಂಗಗಳೂ ಸಹಾಯಕ್ಕೆ ಬರುತ್ತವೆ.


## ಆರ್ಟಿಸ್ಟ್ರಿ ಬ್ರಾಂಡೆಡ್ ಜ್ಯುವೆಲ್ಲರಿ ಶೋ

### ಮಲಬಾರ್ ಗೋಲ್ಡ್ & ಡೈಮಂಡ್ಸ್‌ರವರ ಜಯನಗರ ಶೋರೂಂನಲ್ಲಿ

ಮಲಬಾರ್ ಗೋಲ್ಡ್ & ಡೈಮಂಡ್ಸ್‌ರವರ ಆರ್ಟಿಸ್ಟ್ರಿ ಬ್ರಾಂಡೆಡ್ ಜ್ಯುವೆಲ್ಲರಿ ಶೋ ಚಿನ್ನ, ವಜ್ರ ಮತ್ತು ಅಮೂಲ್ಯ ರತ್ನಾಭರಣಗಳ ಒಂದು ವಿಶಿಷ್ಟ ಪ್ರದರ್ಶನವು, ಜಯನಗರ, 2ನೇ ಬ್ಲಾಕ್, 9ನೇ ಮುಖ್ಯರಸ್ತೆಯ ಶೋರೂಂನಲ್ಲಿ ಮಾತ್ರ. ಸೂಕ್ಷ್ಮಾತೀತ ಕುಸುರಿ ಕೆಲಸಗಳಿಂದ ನಿರ್ಮಿತ ಆಭರಣಗಳು ಕುಶಲಕರ್ಮಿಗಳ ಕೌಶಲ್ಯವನ್ನು ಪ್ರತಿಪಾದಿಸುತ್ತದೆ ಪ್ರತಿ ಆಭರಣವು ಅವರ ನೈಪುಣ್ಯತೆ ಮತ್ತು ಕುಶಲತೆಗೆ ಮೆರುಗು ನೀಡಿ ಈ ಪ್ರದರ್ಶನದ ವಿಷಯವಾದ "ಪ್ರತಿ ಆಭರಣದಲ್ಲೂ ಕಲೆಯಿದೆ" ಎಂಬುದಕ್ಕೆ ಸಾಕ್ಷಿಯಾಗಿದೆ.

ಮಲಬಾರ್ ಗೋಲ್ಡ್ & ಡೈಮಂಡ್ಸ್ ಐಜಿಐ ಮತ್ತು ಜಿಐಎ ಪ್ರಮಾಣೀಕೃತ ವಜ್ರಾಭರಣಗಳನ್ನು ಮತ್ತು 100% HUID ಅನುಸರಣೆಯ ಚಿನ್ನ ಇರುವ ಚಿನ್ನಾಭರಣವನ್ನು ಮಾರಾಟ ಮಾಡುತ್ತದೆ. ಪಿಜಿಐ ಪ್ರಮಾಣೀಕೃತ ಪ್ಲಾಟಿನಂ ಆಭರಣಗಳು ಮತ್ತು ಹಾಲ್‌ಮಾರ್ಕ್ ಹೊಂದಿದ ಬೆಳ್ಳಿಯ ಆಭರಣಗಳು ಇಲ್ಲಿವೆ. ಇವೆಲ್ಲದರ ಆಯ್ದ ಸಂಗ್ರಹಗಳಿವೆ. ಮನಮೋಹಕವಾದ ಆಭರಣಗಳಿಗೆ ವಿಶೇಷ ಕೊಡುಗೆಯಾಗಿ ಪ್ರತೀ ಖರೀದಿಯೊಂದಿಗೆ ಉಚಿತ ಬೆಳ್ಳಿಯ ನಾಣ್ಯವನ್ನು ಪಡೆಯಿರಿ. ಆರ್ಟಿಸ್ಟ್ರಿ ಶೋ ಜುಲೈ 15 ರಿಂದ 23 ರವರೆಗೆ ಕಲಾಪೋಷಕರಿಗೆ ಸವಿಯನ್ನು ನೀಡಲಿದೆ.

ಮಲಬಾರ್ ಗೋಲ್ಡ್ & ಡೈಮಂಡ್ಸ್

artistry SHOW
ART IN EVERY JEWEL
15 – 23 ಜುಲೈ
ಜಯನಗರದಲ್ಲಿ ಮಾತ್ರ

### ಮಲಬಾರ್‌ನ ಭರವಸೆಗಳು

ಒಂದು ಏಕರೂಪದ ಅತ್ಯುತ್ತಮ ಚಿನ್ನದ ದರ, ಮಲಬಾರ್ ನ್ಯಾಯಯುತ ಬೆಲೆ ಭರವಸೆ, ಹೊಸದಾಗಿ ಪರಿಚಯಿಸಲಾಗಿರುವ ವಿನ್ಯಾಸಗಳು ಹಾಗೂ ಸಂಪೂರ್ಣ ಪ್ರಯೋಜನಗಳನ್ನು ಹೊಂದಿರುವ ಮಲಬಾರ್ ಗೋಲ್ಡ್ & ಡೈಮಂಡ್ಸ್ ಈ ಋತುವಿನಲ್ಲಿ ಆಭರಣ ಶಾಪಿಂಗ್‌ಗೆ ಒಂದು ಅತ್ಯುತ್ತಮ ತಾಣವಾಗಿದೆ. ಇಲ್ಲಿ ಪ್ರತಿಯೊಂದು ಚಿನ್ನಾಭರಣಕ್ಕೆ ನಿಗದಿತ ದರ ಪಟ್ಟಿ ಇರುತ್ತದೆ. ಇದಲ್ಲದೇ, ಮೇಕಿಂಗ್ ಚಾರ್ಜ್, ಚಿನ್ನದ ತೂಕ, ಸ್ಟೋನ್ ದರಗಳನ್ನು ಸ್ಪಷ್ಟವಾಗಿ ನಮೂದಿಸಲಾಗಿರುತ್ತದೆ.

ಮಲಬಾರ್ ಗೋಲ್ಡ್ & ಡೈಮಂಡ್ಸ್ ಖಚಿತ ಜೀವನಪರ್ಯಂತ ಉಚಿತ ಮೇಯಿಂಟೆನೆನ್ಸ್, ಚಿನ್ನ ವಿನಿಮಯದಲ್ಲಿ ಶೂನ್ಯ ಕಡಿತ. ಮತ್ತು ಬೈಬ್ಯಾಕ್ ಗ್ಯಾರಂಟಿ ಸೇರಿದಂತೆ ಇನ್ನಿತರೆ ಮೌಲ್ಯವರ್ಧಿತ ಸೇವೆಗಳನ್ನು ಗ್ರಾಹಕರಿಗೆ ನೀಡುತ್ತಿದೆ. ನಮ್ಮ ಎಲ್ಲಾ ಶೋರೂಂಗಳಲ್ಲಿಯೂ ಕ್ಯಾರಾಮೀಟರ್ ಲಭ್ಯವಿರುತ್ತದೆ. ಇದರ ಮೂಲಕ ಗ್ರಾಹಕರು ತಾವು ಖರೀದಿಸುವ ಚಿನ್ನಾಭರಣಗಳ ಶುದ್ಧತೆಯನ್ನು ಪರಿಶೀಲಿಸಬಹುದು. ಇದು ಚಿನ್ನದ ಶುದ್ಧತೆಯ ನಿಖರವಾದ ಅಳತೆಯನ್ನು ನೀಡುತ್ತದೆ.

ಮಲಬಾರ್ ಗೋಲ್ಡ್ & ಡೈಮಂಡ್ಸ್ ಭಾರತ, ಸಿಂಗಾಪುರ, ಮಲೇಷ್ಯಾ ಮತ್ತು ಜಿಸಿಸಿ ರಾಷ್ಟ್ರಗಳಾದ ಯುಎಇ, ಒಮಾನ್, ಕತಾರ್, ಬಹರೇನ್, ಕುವೈತ್ ಮತ್ತು ಸೌದಿ ಅರೇಬಿಯಾ ಸೇರಿದಂತೆ 11ಕ್ಕೂ ಹೆಚ್ಚು ದೇಶಗಳಲ್ಲಿ 320 ಕ್ಕೂ ಹೆಚ್ಚು ಶೋರೂಂಗಳನ್ನು ಹೊಂದುವ ಮೂಲಕ ಆಭರಣಗಳ ರೀಟೇಲ್ ವ್ಯವಹಾರದಲ್ಲಿ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಕಂಪನಿಯಾಗಿದೆ. ಕಂಪನಿಯು ಆಭರಣಗಳ ತಯಾರಿಕೆಯಲ್ಲಿ ಮತ್ತು ವಿನ್ಯಾಸಗೊಳಿಸುವಲ್ಲಿ ಆಧುನಿಕ ಮತ್ತು ಸಾಂಪ್ರದಾಯಿಕ ಸ್ಟೈಲ್‌ಗಳನ್ನು ಅನುಸರಿಸುತ್ತಿದೆ. ಬರುವ ಲಾಭದಲ್ಲಿನ ಶೇ.5 ರಷ್ಟು ಹಣವನ್ನು ಸಮಾಜಿಕ ಕಾರ್ಯಗಳಿಗೆ ಬಳಸುತ್ತಿದೆ. ಇದರಲ್ಲಿ ಪ್ರಮುಖವಾಗಿ ಶಿಕ್ಷಣ, ಆರೋಗ್ಯ, ಮಹಿಳಾ ಸಬಲೀಕರಣ, ಬಡವರಿಗೆ ಮನೆಗಳ ನಿರ್ಮಾಣ ,ರಕ್ಷಣೆ ವಾತಾವರಣವನ್ನು ಸೃಷ್ಟಿಸುವ ಮತ್ತು ಹಂಗರ್ ಫ್ರೀ ವರ್ಲ್ಡ್ ಕಾರ್ಯಗಳಿಗೆ ಈ ಹಣವನ್ನು ವಿನಿಯೋಗಿಸುತ್ತಿದೆ.

ನಮ್ಮ ಶೋರೂಂಗೆ ಭೇಟಿ ನೀಡಿ

**ಮಲಬಾರ್ ಗೋಲ್ಡ್ & ಡೈಮಂಡ್ಸ್ ಜಯನಗರ, 7994435447**

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್


## ಗರ್ಭಿಣಿಯರಲ್ಲಿ ಮಧುಮೇಹ: ಪಾರಾಗೋದು ಹೇಗೆ?

ಸ್ಪಂದನ

**ಡಾ. ವೀಣಾ ಎಸ್. ಭಟ್**

- **ನನಗೆ 28 ವರ್ಷ, ಮದುವೆ ಆಗಿ ಒಂದು ವರ್ಷ ಆಗಿದೆ. ಗರ್ಭಿಣಿಯಾದ ಮೇಲೆ ಸಕ್ಕರೆ ಕಾಯಿಲೆ ಇದೆ ಎಂದು ತಿಳಿಸಿದರು. ಮಗು ಹುಟ್ಟಿ 3 ದಿನಕ್ಕೆ ತೀರಿ ಹೋಯಿತು. ಮುಂದೆ ಈ ರೀತಿ ಆಗದೇ ಇರುವುದಕ್ಕೆ ಪರಿಹಾರ ತಿಳಿಸಿ**

ಹೆಸರು, ಊರು ತಿಳಿಸಿಲ್ಲ.

**ಉತ್ತರ:** ಗರ್ಭಿಣಿಯಾದ ಮೇಲೆ ಸಕ್ಕರೆಕಾಯಿಲೆ ಬಂದಿತೆಂದರೆ ಅದು ಗರ್ಭಧಾರಣೆಯ ಮಧುಮೇಹ (ಜಿ.ಡಿ.ಎಂ-ಗೆಸ್ಟೇಷನಲ್ ಡಯಾಬಿಟಿಸ್ ಮೆಲ್ಲಿಟಸ್). ಇದು ಗರ್ಭಿಣಿಯರಲ್ಲಿ ಅತಿಯಾಗಿ (ಶೇ 4ರಿಂದ 41ರವರೆಗೂ) ಹೆಚ್ಚುತ್ತಿರುವ ಸಮಸ್ಯೆ. ನೀವು, ಮಧುಮೇಹ ನಿಯಂತ್ರಣವಿಲ್ಲದೆ ಮಗು ದೊಡ್ಡದಾಗಿ ಬೆಳೆದಿತ್ತೇ (ಮ್ಯಾಕ್ರೋಸೋಮಿಯಾ)? ಅಥವಾ ಮಗುವಿಗೇನಾದರೂ ಜನ್ಮಜಾತ ಹೃದ್ರೋಗದ ತೊಂದರೆ ಇತ್ತೇ? ಎಂದು ನೀವು ತಿಳಿಸಿಲ್ಲ. ನವಜಾತ ಶಿಶುವಿಗೆ ಗ್ಲೂಕೋಸ್ ಮಟ್ಟ ಕಡಿಮೆಯಾಗಿ ತೀರಿಹೋಯಿತೋ ಎಂದೂ ಗೊತ್ತಿಲ್ಲ. ಇರಲಿ ನಿಮಗೆ ಆ ಶೋಕವನ್ನು ಸಹಿಸುವ ಸಾಮರ್ಥ್ಯ ಬರಲಿ. ಆದರೆ ಇನ್ನೊಮ್ಮೆ ಹೀಗಾಗದಂತೆ ನೋಡಿಕೊಳ್ಳಿ.

ಗರ್ಭಧಾರಣೆಗೆ ಮೊದಲೇ ಕೆಲವರಲ್ಲಿ ಮಧುಮೇಹ ಇರಬಹುದು. ಇನ್ನು ಕೆಲವರಲ್ಲಿ ಗರ್ಭಿಣಿಯಾದ ಮೇಲೆ ಮಧುಮೇಹ ಬಂದಿರಬಹುದು. ಎರಡರಿಂದಲೂ ತಾಯಿ ಹಾಗೂ ಮಗುವಿಗೆ ಅಪಾಯ ಇದ್ದೇ ಇದೆ. ಗರ್ಭ ಧರಿಸಿದ ಮೇಲೆ ಹಲವಾರು ಶಾರೀರಿಕ ಬದಲಾವಣೆಗಳಾಗುತ್ತವೆ. ಪ್ಲಾಸೆಂಟಾದಿಂದ ಉತ್ಪಾದನೆಯಾಗುವ ಹಾರ್ಮೋನುಗಳು ಇನ್ಸುಲಿನ್ ಪ್ರತಿರೋಧಕತೆಯನ್ನು ಉಂಟುಮಾಡಿ ಗ್ಲೂಕೋಸ್ ಮಟ್ಟ ಹೆಚ್ಚಿಸುತ್ತದೆ. ಕೊಬ್ಬಿನ ವಿಭಜನೆಯಿಂದ ಗ್ಲೂಕೋಸ್ ಪರಿವರ್ತನೆಯಾಗುವಿಕೆಯು ಹೆಚ್ಚಾಗುತ್ತದೆ.

ಕುಟುಂಬದಲ್ಲಿ ಯಾರಿಗಾದರೂ ಮಧುಮೇಹವಿದ್ದರೆ ಮತ್ತು ಅಧಿಕ ತೂಕ ಹೊಂದಿರುವವರಲ್ಲಿ ಮಧುಮೇಹ ಬರುವ ಸಾಧ್ಯತೆ ಇರುತ್ತದೆ. ಈ ಮುಂಚೆ 4 ಕೆ.ಜಿಗೂ ಅಧಿಕ ತೂಕದ ಮಗುವನ್ನು ಹಡೆದಿದ್ದಲ್ಲಿ, ಗರ್ಭಿಣಿಯಾಗಿ ಆರು ತಿಂಗಳೊಳಗೆ ಅಧಿಕತೂಕ ಗಳಿಸಿದವರಲ್ಲಿ, ಅವಳಿ ಮಕ್ಕಳು ಗರ್ಭದಲ್ಲಿದ್ದಾಗ, ಪದೇ ಪದೇ ಮೂತ್ರಸೋಂಕು, ಯೋನಿಸೋಂಕು ಆಗುತ್ತಿರುವವರಲ್ಲಿ, ಅತಿಯಾಗಿ ತಿನ್ನುವುದು, ಕಡಿಮೆ ದೈಹಿಕ ಶ್ರಮ ಅನುಸರಿಸುವವರಲ್ಲಿ ಮಧುಮೇಹ ಬರುವ ಸಾಧ್ಯತೆ ಇರುತ್ತದೆ.

ಜಿ.ಡಿ.ಎಂ ನಿಯಂತ್ರಣದಲ್ಲಿ ಇಲ್ಲದಿದ್ದರೆ ತಾಯಿ ಹಾಗೂ ಮಗು ಇಬ್ಬರಿಗೂ ಅಪಾಯವಿದೆ. ತಾಯಂದಿರಲ್ಲಿ ಮೂತ್ರಾಂಗವ್ಯೂಹದ ಸೋಂಕಾಗುವ ಸಂಭವ ಹೆಚ್ಚುತ್ತದೆ. ಯೋನಿಯಲ್ಲಿ ಕ್ಯಾಂಡಿಡಾ ಸೋಂಕು ಕೂಡ ಹೆಚ್ಚಾಗುತ್ತದೆ. ಅಷ್ಟೇ ಅಲ್ಲ ಗರ್ಭಿಣಿಯರ ಏರು ರಕ್ತದೊತ್ತಡ, ಪ್ರಿಎಕ್ಲಾಂಪ್ಸಿಯಾದ ಸಂಭವನೀಯತೆ ಹೆಚ್ಚು. ಅಕಾಲಿಕ ಹೆರಿಗೆ ಉಂಟಾಗಬಹುದು. ಇದ್ದಕ್ಕಿದ್ದಂತೆ ಮಗು ಹೊಟ್ಟೆಯೊಳಗೆ ಸತ್ತುಹೋಗಬಹುದು. ಜಿ.ಡಿ.ಎಂ ನಿಯಂತ್ರಣದಲ್ಲಿಲ್ಲದಿದ್ದರೆ ಮಗುವಿನಲ್ಲಿ ಹೆಚ್ಚು ಕೊಬ್ಬುಶೇಖರಣೆಯಾಗಿ ಮಗುವು 4 ಕೆ.ಜಿಗೂ ಹೆಚ್ಚು ದಪ್ಪನಾಗಿ ಬೆಳೆದು ಸಿಸೇರಿಯನ್ ಹೆರಿಗೆಯಾಗುವ ಸಂಭವವಿರುತ್ತದೆ. ಗರ್ಭಧಾರಣೆ ವೇಳೆ ಮಧುಮೇಹ ಇದ್ದವರಿಗೆ ಮುಂದೆ ಟೈಪ್-2 ಮಧುಮೇಹ ಬರುವ ಸಾಧ್ಯತೆ ಶೇ60ರಷ್ಟಿರುತ್ತದೆ. ಮುಕ್ಕಾಲುಪಾಲು ಮಹಿಳೆಯರಲ್ಲಿ ಹೃದಯದ ರಕ್ತನಾಳಗಳ ತೊಂದರೆಯೂ ಕಾಣಿಸಿಕೊಳ್ಳಬಹುದು.

ಇವೆಲ್ಲಾ ತೊಂದರೆಯಾಗದಂತೆ ಮುಂಜಾಗ್ರತೆಯಾಗಿ ಗರ್ಭಧರಿಸುವ 6 ವಾರಗಳ ಮೊದಲೇ ಫೋಲಿಕ್ ಆಸಿಡ್ ಮಾತ್ರೆಗಳನ್ನು ಸೇವಿಸಿ. ಗರ್ಭಧರಿಸಿದಾಗ ತಕ್ಷಣವೇ ವೈದ್ಯರನ್ನು ಸಂಪರ್ಕಿಸಿ. 75 ಗ್ರಾಂ ಗ್ಲೂಕೋಸ್ ಕೊಟ್ಟು ಓರಲ್ ಗ್ಲೂಕೋಸ್ ಟಾಲರೆನ್ಸ್ ಟೆಸ್ಟ್ ಮಾಡಿಸುತ್ತಾರೆ. ಇದರಿಂದ ಮತ್ತೆ ಜಿ.ಡಿ.ಎಂ ಬರುವ ಸಾಧ್ಯತೆ ಇದೆಯೋ ಇಲ್ಲವೋ ಗೊತ್ತಾಗುತ್ತದೆ.

ಗರ್ಭಿಣಿಯರಲ್ಲಿ ಮೊದಲ ಮೂರು ತಿಂಗಳಲ್ಲಿ ಭ್ರೂಣದ ಅಂಗಾಂಗಗಳು ರೂಪುಗೊಳ್ಳುವಾಗ ರಕ್ತದಲ್ಲಿ ಸಕ್ಕರೆಯ ಪ್ರಮಾಣ ನಿಯಂತ್ರಣದಲ್ಲಿರಬೇಕು. ಇಲ್ಲದಿದ್ದರೆ ಮಗುವಿನಲ್ಲಿ ಜನ್ಮಜಾತ ಹೃದಯ ನ್ಯೂನತೆಗಳು, ನ್ಯೂರಲ್‌ಟ್ಯೂಬ್ ದೋಷಗಳು ಉಂಟಾಗಬಹುದು. ನಿಯಮಿತ ವೈದ್ಯರ ಮೇಲ್ವಿಚಾರಣೆಯಲ್ಲಿ ಸೂಕ್ತ ಆಹಾರ ಪಥ್ಯ ಮಾಡಬೇಕು. ನವಮಾಸಗಳಲ್ಲಿ ರಕ್ತದಲ್ಲಿ ಗ್ಲೂಕೋಸ್ ಮಟ್ಟ ಸರಿಯಾಗಿರುವಂತೆ ಕಾಯ್ದುಕೊಳ್ಳಬೇಕು. ಹಸಿರುಸೊಪ್ಪು ತರಕಾರಿಗಳು ಸೇರಿದಂತೆ ಹೆಚ್ಚು ಪ್ರೊಟೀನ್‌ಯುಕ್ತ ಆಹಾರ ಸೇವಿಸಬೇಕು. ನಿತ್ಯ ಕನಿಷ್ಠ 35 ರಿಂದ 40 ನಿಮಿಷ ವಾಕಿಂಗ್ ಮಾಡುವುದು, ಕೆಲವು ಕೈ-ಕಾಲುಗಳನ್ನು ಅಲುಗಾಡಿಸುವಂತಹ ಸೂಕ್ಷ್ಮ ವ್ಯಾಯಾಮಗಳು, ತಜ್ಞರ ಸಲಹೆಯಮೇರೆಗೆ ನಿಯಮಿತ ಯೋಗಾಭ್ಯಾಸ, ಪ್ರಾಣಾಯಾಮಗಳನ್ನು ಮಾಡಬಹುದು. ದೇಹದಲ್ಲಿ ಸಕ್ಕರೆಯ ಮಟ್ಟ ನಿಯಂತ್ರಣದಲ್ಲಿಲ್ಲದಿದ್ದರೆ ವೈದ್ಯರು ಇನ್ಸುಲಿನ್ ತೆಗೆದುಕೊಳ್ಳಲು ಸೂಚಿಸಬಹುದು. ಹೀಗೆ ಎಲ್ಲ ರೀತಿಯ ಕಾಳಜಿ ವಹಿಸಿದ್ದಲ್ಲಿ ಆರೋಗ್ಯವಂತ ಮಗುವನ್ನು ಪಡೆಯಬಹುದು. ಭರವಸೆಯಿಂದಿರಿ.

### ಸ್ಪಂದನ

ಮುಟ್ಟು, ಗರ್ಭಧಾರಣೆ, ಋತುಬಂಧ, ಹಾರ್ಮೋನ್ ಮುಂತಾದ ಸಮಸ್ಯೆಗಳ ಬಗ್ಗೆ ಪ್ರಶ್ನೆಗಳನ್ನು ನಮಗೆ ಕಳುಹಿಸಬಹುದು. ನಿಮ್ಮ ಪ್ರಶ್ನೆಗಳಿಗೆ ಪ್ರಸೂತಿ ಮತ್ತು ಸ್ತ್ರೀರೋಗತಜ್ಞೆ ಡಾ.ವೀಣಾ ಎಸ್. ಭಟ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.inಗೆ ಕಳುಹಿಸಬಹುದು

## ಆಹಾ... ಬಗೆ ಬಗೆ ಚಹಾ!

ನಳಪಾಕ

ಹೊರಗಡೆ ಜಿಟಿಪಿಟಿ ಮಳೆ ಸುರಿಯುತ್ತಿದ್ದರೆ ಬಿಸಿ ಬಿಸಿ ಚಹಾ ಕುಡಿಯುವ ಆನಂದವೇ ಬೇರೆ. ಚಹಾವನ್ನು ಮಳೆಗಾಲದ ಥಂಡಿ ನಿವಾರಿಸುವ ಪೇಯವಾಗಿ ಬಳಸಬಹುದು. ಹೀಗೆ ಮನಸಿಗೆ ಹಿತವೆನಿಸುವ ಬಗೆ ಬಗೆಯ ಚಹಾ ರೆಸಿಪಿಗಳನ್ನು **ವೇದಾವತಿ ಎಚ್.ಎಸ್.** ಇಲ್ಲಿ ಪರಿಚಯಿಸಿದ್ದಾರೆ.

### ಚಾಕೊಲೆಟ್ ಟೀ

**ಬೇಕಾಗುವ ಸಾಮಗ್ರಿಗಳು:** ಹಾಲು ಮುಕ್ಕಾಲು ಕಪ್, ನೀರು ಕಾಲು ಕಪ್, ಸಕ್ಕರೆ ಎರಡು ಚಮಚ. ಸಿಹಿ ಬೇಕಾಗಿರುವಷ್ಟು. ಟೀ ಪುಡಿ ಒಂದು ಚಮಚ, ಕೋಕೊ ಪುಡಿ ಅರ್ಧ ಚಮಚ.

**ತಯಾರಿಸುವ ವಿಧಾನ:** ಪಾತ್ರೆಯಲ್ಲಿ ಹಾಲು ಮತ್ತು ನೀರನ್ನು ಹಾಕಿ ಜೊತೆಗೆ ಟೀ ಪುಡಿ ಹಾಕಿ ಎರಡು ನಿಮಿಷ ಕುದಿಸಿ. ಸಕ್ಕರೆ ಹಾಕಿ. ನಂತರ ಕೋಕೊ ಪೌಡರ್ ಹಾಕಿ ಸಣ್ಣ ಉರಿಯಲ್ಲಿ ಎರಡು ನಿಮಿಷ ಕುದಿಸಿ. ಕುದಿ ಬಂದ ಟೀಯನ್ನು ಲೋಟಗಳಿಗೆ ಹಾಕಿ ಸರ್ವ್ ಮಾಡಿ. ಬಿಸಿ, ಬಿಸಿ ಹೊಗೆಯಾಡುವ ಚಾಕೊಲೆಟ್ ಟೀ ಸಿದ್ಧ.

### ಬೂಸ್ಟರ್ ಟೀ

**ಬೇಕಾಗುವ ಸಾಮಗ್ರಿಗಳು:** ನೀರು ಅರ್ಧ ಲೀಟರ್, ಸಕ್ಕರೆ ಎರಡು ಟೇಬಲ್ ಚಮಚ, ಶುಂಠಿ ಕಾಲು ಇಂಚು, ನಿಂಬೆರಸ ಒಂದು ಚಮಚ, ಟೀ ಪುಡಿ ಒಂದು ಚಮಚ. ಐದರಿಂದ ಆರು ಕಾಳು ಮೆಣಸು, ಲವಂಗ ಮೂರು.

**ತಯಾರಿಸುವ ವಿಧಾನ:** ಪಾತ್ರೆಯಲ್ಲಿ ನೀರನ್ನು ಬಿಸಿ ಮಾಡಿ ಅದರಲ್ಲಿ ಟೀ ಪುಡಿ ಹಾಕಿ ಕುದಿಸಿ. ನಂತರ ಅದಕ್ಕೆ ಸಕ್ಕರೆಯನ್ನು ಸೇರಿಸಿ. ಶುಂಠಿ, ಕಾಳಮೆಣಸು, ಲವಂಗವನ್ನು ತರಿ ತರಿಯಾಗಿ ಕುಟ್ಟಿ ಕುದಿಯುತ್ತಿರುವ ಟೀಗೆ ಸೇರಿಸಿ ಮೂರು ನಿಮಿಷಗಳ ಕಾಲ ಕುದಿಸಿ. ಚೆನ್ನಾಗಿ ಕುದಿಸಿದ ನಂತರ ಸೋಸಿಕೊಂಡು ಅದಕ್ಕೆ ನಿಂಬೆರಸ ಸೇರಿಸಿ. ಬಿಸಿ ಬಿಸಿ ಇರುವಾಗಲೇ ಕುಡಿಯಿರಿ. ಈ ಬೂಸ್ಟರ್ ಟೀ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ

### ಹರ್ಬಲ್ ಗ್ರೀನ್ ಟೀ

**ಬೇಕಾಗುವ ಸಾಮಗ್ರಿಗಳು:** ನೀರು ಒಂದು ಕಪ್, ಕಾಳು ಮೆಣಸಿನ ಪುಡಿ ಒಂದು ಚಿಟಿಕೆ, ಏಲಕ್ಕಿ ಪುಡಿ ಒಂದು ಚಿಟಿಕೆ, ಪುದೀನಾ ಎಲೆ 15 ರಿಂದ 20, ತುಳಸಿ ಎಲೆ 15 ರಿಂದ 20, ನಿಂಬೆರಸ ಒಂದು ಚಮಚ, ಜೇನುತುಪ್ಪ ಅಥವಾ ಸಕ್ಕರೆ ಒಂದು ಚಮಚ.

**ತಯಾರಿಸು ವಿಧಾನ:** ಟೀ ತಯಾರಿಸುವ ಪಾತ್ರೆಯಲ್ಲಿ ಒಂದು ಕಪ್ ನೀರು ಹಾಕಿ. ಕುದಿ ಬಂದ ನಂತರ ಚಿಟಿಕೆ ಕಾಳು ಮೆಣಸಿನ ಪುಡಿ ಮತ್ತು ಏಲಕ್ಕಿ ಪುಡಿಯನ್ನು ಹಾಕಿ ಚೆನ್ನಾಗಿ ಕುದಿಸಿ. ಬಳಿಕ ಪುದೀನಾ ಎಲೆ ಹಾಗೂ ತುಳಸಿ ಎಲೆಗಳನ್ನು ಹಾಕಿ. ಪ್ಲೇಟ್ ಮುಚ್ಚಿ. ಸಣ್ಣ ಉರಿಯಲ್ಲಿ ಎರಡು ನಿಮಿಷಗಳ ಕಾಲ ಕಾಯಿಸಿ. ನಂತರ ಒಲೆ ಮೇಲಿಂದ ಇಳಿಸಿ ನಿಂಬೆರಸ ಬೆರೆಸಿ. ರುಚಿಗೆ ತಕ್ಕಷ್ಟು ಸಕ್ಕರೆ ಅಥವಾ ಜೇನುತುಪ್ಪ ಹಾಕಿ. ಬಳಿಕ ಕುದಿಸಿ, ಸೋಸಿದ ರಸವನ್ನು ಜೇನುತುಪ್ಪ ಹಾಕಿದ ಲೋಟಕ್ಕೆ ಹಾಕಿ ಮಿಶ್ರಣ ಮಾಡಿ. ಸರ್ವ್ ಮಾಡುವಾಗ ಗ್ರೀನ್ ಟೀ ಮೇಲೆ ಕಾಳು ಮೆಣಸು ಪುಡಿ ಉದುರಿಸಿ.

## ಸುಭಾಷಿತ

ನೀವು ಯಾರನ್ನಾದರೂ ಪ್ರೀತಿಸುವಿರಾದರೆ ಅವರನ್ನು ಹೋಗಲು ಬಿಡಿ. ಮರಳಿ ಬಂದರೆ ಅವರು ಎಂದೆಂದಿಗೂ ನಿಮ್ಮವರು. ಇಲ್ಲವಾದರೆ, ಅವರು ಹಿಂದೆಯೂ ನಿಮ್ಮವರಾಗಿ ಇರಲಿಲ್ಲ ಎಂದರ್ಥ.

-ಖಲೀಲ್ ಗಿಬ್ರಾನ್

# ನಿರ್ದಿಷ್ಟ ಸೇವೆಗಳಿಗೆ ಮಾತ್ರ ನಿರ್ಬಂಧ ಆಶಯದ ಸಾಕಾರಕ್ಕೆ ಬೇಕು ಬದ್ಧತೆ

**ಕಾನೂನು** ಮತ್ತು ಸುವ್ಯವಸ್ಥೆಗೆ ಧಕ್ಕೆ ಎದುರಾದ ಸಂದರ್ಭಗಳಲ್ಲಿ, ಗಲಭೆಪೀಡಿತ ಪ್ರದೇಶಗಳಲ್ಲಿ ಇಂಟರ್ನೆಟ್ ಸೇವೆಯ ಸ್ಥಗಿತಕ್ಕೆ ಸರ್ಕಾರಗಳು ಆದೇಶಿಸುವುದು ಈಗ ಸಹಜವೆಂಬಂತೆ ಆಗಿದೆ. ಆದರೆ, ಇಂಟರ್ನೆಟ್ ಆಧಾರಿತ ಅರ್ಥ ವ್ಯವಸ್ಥೆ ಬೆಳೆದಿರುವಾಗ ಹಾಗೂ ಇಂಟರ್ನೆಟ್ ನೆಚ್ಚಿಕೊಂಡು ಉದ್ಯೋಗ ನಡೆಸುವವರ ಸಂಖ್ಯೆಯು ದೊಡ್ಡದಾಗಿರುವಾಗ ಗಲಭೆಗಳನ್ನು ನಿಯಂತ್ರಿಸಲು ಬದಲಿ ಮಾರ್ಗವನ್ನು ಕಂಡುಕೊಳ್ಳುವುದು ಸೂಕ್ತ ಎಂಬ ವಾದದಲ್ಲಿ ಹುರುಳಿದೆ. ದೇಶದ ಕೆಲವೆಡೆ ಸತತ ಐನೂರಕ್ಕೂ ಹೆಚ್ಚು ದಿನಗಳವರೆಗೆ ಇಂಟರ್ನೆಟ್ ಸೇವೆಯನ್ನು ನಿಷೇಧಿಸಿದ ನಿದರ್ಶನ ಇದೆ. ಇಂಟರ್ನೆಟ್ ಸೇವೆಯನ್ನು ಅನಿರ್ದಿಷ್ಟ ಅವಧಿಗೆ ನಿಷೇಧಿಸುವುದು ಸರಿಯಲ್ಲ ಎಂದು ಸುಪ್ರೀಂ ಕೋರ್ಟ್ ಈಗಾಗಲೇ ಸ್ಪಷ್ಟಪಡಿಸಿದೆ. ಈ ಹಿನ್ನೆಲೆಯಲ್ಲಿ, ಪ್ರಕ್ಷುಬ್ಧ ಪರಿಸ್ಥಿತಿ ಸೃಷ್ಟಿಯಾಗಿರುವ ಪ್ರದೇಶಗಳಲ್ಲಿ ದುಷ್ಕೃತ್ಯಗಳಿಗೆ ಬಳಕೆಯಾಗುವ ನಿರ್ದಿಷ್ಟ ವೆಬ್‌ಸೈಟ್‌ಗಳನ್ನು ಹಾಗೂ ನಿರ್ದಿಷ್ಟ ಒಟಿಟಿ ಆ್ಯಪ್‌ಗಳನ್ನು ಮಾತ್ರವೇ ನಿರ್ಬಂಧಿಸುವುದು ಸೂಕ್ತವಾದ ಕ್ರಮವಲ್ಲವೇ ಎಂಬ ನೆಲೆಯಲ್ಲಿ ಭಾರತೀಯ ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರವು (ಟ್ರಾಯ್) ಈಚೆಗೆ ಸಮಾಲೋಚನಾ ಪತ್ರವೊಂದನ್ನು ಪ್ರಕಟಿಸಿದೆ.

ಗಲಭೆಪೀಡಿತ ಪ್ರದೇಶಗಳಲ್ಲಿ ಸರ್ಕಾರಗಳು ಇಂಟರ್ನೆಟ್ ಸೇವೆಯನ್ನು ಸ್ಥಗಿತಗೊಳಿಸುವುದಕ್ಕೆ ಬದಲಾಗಿ, ಗಲಭೆಗಳನ್ನು ನಿಯಂತ್ರಿಸಲು ಬದಲಿ ಮಾರ್ಗವನ್ನು ಕಂಡುಕೊಳ್ಳುವುದು ಸೂಕ್ತ

ಗಲಭೆಗೆ ತುತ್ತಾದ ಪ್ರದೇಶಗಳಲ್ಲಿ ಇಂಟರ್ನೆಟ್ ಸೇವೆಯನ್ನು ನಿಷೇಧಿಸುವುದು ದೇಶದ ಅರ್ಥ ವ್ಯವಸ್ಥೆಯ ಮೇಲೆ ಗಣನೀಯವಾದ ಪರಿಣಾಮವನ್ನು ಉಂಟುಮಾಡುತ್ತದೆ ಎಂದು ಟ್ರಾಯ್ ಈ ಪತ್ರದಲ್ಲಿ ವಿವರಿಸಿದೆ. ಗಲಭೆಕೋರರು ಹಿಂಸಾಚಾರಕ್ಕೆ ಪ್ರಚೋದನೆ ನೀಡುವ ವಸ್ತು-ವಿಷಯಗಳನ್ನು ಪ್ರಸಾರ ಮಾಡುವುದನ್ನು ತಡೆಯುವ ಉದ್ದೇಶದಿಂದ ಇಂಟರ್ನೆಟ್ ಸೇವೆಗೆ ನಿಷೇಧ ಹೇರಿದಾಗ, ಶಿಕ್ಷಣ, ಆರೋಗ್ಯ ಸೇವೆಗಳು, ಬ್ಯಾಂಕಿಂಗ್‌ನಂತಹ ಅತಿ ಮಹತ್ವದ ಸೇವಾ ವಲಯಗಳೂ ಸಮರ್ಪಕವಾಗಿ ಕೆಲಸ ಮಾಡಲು ಆಗದ ಸ್ಥಿತಿ ನಿರ್ಮಾಣವಾಗಿಬಿಡುತ್ತದೆ. 'ಪರಿಣಾಮವಾಗಿ, ಇಂತಹ ನಿಷೇಧ ಕ್ರಮಗಳು ದೇಶದ ಜನರ ಜೀವನ ಹಾಗೂ ಜೀವನೋಪಾಯಕ್ಕೆ ಪೆಟ್ಟು ಕೊಡುತ್ತವೆ' ಎಂದು ಟ್ರಾಯ್ ಅಭಿಪ್ರಾಯ ಪಟ್ಟಿರುವುದು ಸರಿಯಾಗಿಯೇ ಇದೆ. ಇಂಟರ್ನೆಟ್ ಸೇವೆ ನಿಷೇಧದ ವಿಚಾರವಾಗಿ 2022ರ ಜನವರಿಯಲ್ಲಿ ಸಿದ್ಧಪಡಿಸಿದ ವರದಿಯೊಂದರಲ್ಲಿ ವಿಶ್ವಸಂಸ್ಥೆಯ ಮಾನವ ಹಕ್ಕುಗಳ ವಿಭಾಗವು ನಿರ್ಬಂಧಗಳಿಂದಾಗಿ ಸಿಗಬೇಕಾದ ಎಂಬ ಉದ್ದೇಶ ಅಥವಾ ಪ್ರಯೋಜನಗಳಿಗಿಂತಲೂ 'ಉದ್ಯೋಗ, ಶಿಕ್ಷಣ, ಆರೋಗ್ಯಸೇವೆ ಮತ್ತು ರಾಜಕೀಯ ಪ್ರತಿನಿಧಿತ್ವದ ಮೇಲೆ ಆಗುವ ಪರಿಣಾಮವು ಬಹಳ ಹೆಚ್ಚು' ಎಂದು ಅಭಿಪ್ರಾಯಪಟ್ಟಿದೆ. ಈ ಕಾರಣಗಳಿಂದಾಗಿ, ಪ್ರಕ್ಷುಬ್ಧ ಪರಿಸ್ಥಿತಿಯ ಸಂದರ್ಭದಲ್ಲಿ ದುಷ್ಕರ್ಮಿಗಳು ದುರ್ಬಳಕೆ ಮಾಡಿಕೊಳ್ಳಬಹುದು ಎಂದು ಗುರುತಿಸಲಾದ ವೆಬ್‌ಸೈಟ್‌ಗಳನ್ನು ಹಾಗೂ ಒಟಿಟಿ ವೇದಿಕೆಗಳನ್ನು ಮಾತ್ರ ನಿರ್ಬಂಧಿಸುವುದು ಹೆಚ್ಚು ಸೂಕ್ತವಾಗುತ್ತದೆ. ಅದರಲ್ಲೂ, ನಿರ್ದಿಷ್ಟ ಪ್ರದೇಶಗಳಿಗೆ ಮಾತ್ರ ಈ ನಿರ್ಬಂಧವು ಅನ್ವಯವಾಗುವಂತಿದ್ದರೆ ಸೂಕ್ತ ಎಂದು ಟ್ರಾಯ್ ಹೇಳಿರುವುದರಲ್ಲಿ ಅರ್ಥವಿದೆ.

2020ರಲ್ಲಿ ನೀಡಿರುವ ತೀರ್ಪೊಂದರಲ್ಲಿ ಸುಪ್ರೀಂ ಕೋರ್ಟ್, 'ಇಂಟರ್ನೆಟ್ ಮಾಧ್ಯಮದ ಮೂಲಕ ಅಭಿವ್ಯಕ್ತಿಯ ಸ್ವಾತಂತ್ರ್ಯ ಹಾಗೂ ಯಾವುದೇ ವೃತ್ತಿಯನ್ನು ನಡೆಸುವ ಸ್ವಾತಂತ್ರ್ಯಕ್ಕೆ ಸಾಂವಿಧಾನಿಕ ರಕ್ಷಣೆ ಇದೆ. ಈ ಸ್ವಾತಂತ್ರ್ಯಕ್ಕೆ ಹೇರುವ ಮಿತಿಗಳು ಸಂವಿಧಾನದ ಚೌಕಟ್ಟಿನಲ್ಲಿಯೇ ಇರಬೇಕು' ಎಂದು ಸ್ಪಷ್ಟಪಡಿಸಿದೆ. ಇಂಟರ್ನೆಟ್ ಸೇವೆಗಳನ್ನು ಅನಿರ್ದಿಷ್ಟಾವಧಿಗೆ ಅಮಾನತಿನಲ್ಲಿ ಇರಿಸುವುದಕ್ಕೆ ಅವಕಾಶ ಇಲ್ಲ, ಇಂಟರ್ನೆಟ್ ಸೇವೆಗಳನ್ನು ತಾತ್ಕಾಲಿಕ ಅವಧಿಗೆ ಮಾತ್ರ ಅಮಾನತಿನಲ್ಲಿ ಇರಿಸಬಹುದು ಎಂದು ಕೂಡ ಕೋರ್ಟ್ ಹೇಳಿದೆ. ಸಂವಹನ ಮತ್ತು ಮಾಹಿತಿ ತಂತ್ರಜ್ಞಾನಕ್ಕೆ ಸಂಬಂಧಿಸಿದ ಸಂಸತ್ತಿನ ಸ್ಥಾಯಿ ಸಮಿತಿಯು 2021ರ ಡಿಸೆಂಬರ್‌ನಲ್ಲಿ ವರದಿಯೊಂದನ್ನು ಸಲ್ಲಿಸಿದೆ. ಆ ವರದಿಯಲ್ಲಿ ಸಮಿತಿಯು ಇಂಟರ್ನೆಟ್ ಸೇವೆ ಮೇಲೆ ಸಂಪೂರ್ಣವಾಗಿ ನಿಷೇಧ ಹೇರುವ ಬದಲು, ನಿರ್ದಿಷ್ಟ ವೆಬ್‌ಸೈಟ್ ಅಥವಾ ಒಟಿಟಿ ಆ್ಯಪ್‌ಗಳನ್ನು ಮಾತ್ರ ನಿರ್ಬಂಧಿಸುವುದರ ಪರವಾಗಿ ಮಾತನಾಡಿದೆ. 'ಇಂಟರ್ನೆಟ್ ನಿರ್ಬಂಧಿಸುವುದರ ಬದಲು ಫೇಸ್‌ಬುಕ್, ವಾಟ್ಸ್‌ಆ್ಯಪ್, ಟೆಲಿಗ್ರಾಂನಂತಹ ಸೇವೆಗಳನ್ನು ಮಾತ್ರ ನಿರ್ಬಂಧಿಸುವುದು ಸಾಧ್ಯವೇ ಎಂಬ ಬಗ್ಗೆ ದೂರಸಂಪರ್ಕ ಇಲಾಖೆಯು ಪರಿಶೀಲಿಸಬೇಕು' ಎಂದು ಸಮಿತಿ ಹೇಳಿದೆ. ಈ ರೀತಿ ನಿರ್ದಿಷ್ಟ ಆ್ಯಪ್‌ಗಳನ್ನು ಮಾತ್ರ ನಿರ್ಬಂಧಿಸಿದರೆ ಹಣಕಾಸು ಸೇವೆಗಳು, ಆರೋಗ್ಯಸೇವೆಗಳು, ಶಿಕ್ಷಣ ಹಾಗೂ ಇತರ ಹಲವು ಸೇವೆಗಳು ಅಡೆತಡೆ ಇಲ್ಲದೆ ಮುಂದುವರಿಯುತ್ತವೆ, ಜನಸಾಮಾನ್ಯರಿಗೆ ಆಗುವ ತೊಂದರೆಯು ಕನಿಷ್ಠ ಮಟ್ಟದಲ್ಲಿ ಇರುತ್ತದೆ ಎಂದು ಸ್ಥಾಯಿ ಸಮಿತಿಯು ಅಭಿಪ್ರಾಯಪಟ್ಟಿದೆ. ನಿರ್ಬಂಧಗಳು ಕಡಿಮೆ ಮಟ್ಟದಲ್ಲಿರುವ ಮಾದರಿಯನ್ನು ಅನುಕರಿಸುವುದು ಒಳಿತು ಎಂದು ಅದು ಹೇಳಿದೆ. ಟ್ರಾಯ್ ಸಿದ್ಧಪಡಿಸಿರುವ ಸಮಾಲೋಚನಾ ಪತ್ರದಲ್ಲಿನ ಮಾತುಗಳು, ಸುಪ್ರೀಂ ಕೋರ್ಟ್‌ನ ತೀರ್ಪು ಹಾಗೂ ಸ್ಥಾಯಿ ಸಮಿತಿಯ ಆಶಯವನ್ನು ಕಾರ್ಯರೂಪಕ್ಕೆ ತರುವ ಕೆಲಸವು ಸರ್ಕಾರದ ಕಡೆಯಿಂದ ಈಗ ಆಗಬೇಕು.

## ದಿನದ ಟ್ವೀಟ್

### ಭ್ರಷ್ಟಾಚಾರಕ್ಕೆ ಇಲ್ಲ ಎಲ್ಲೆ...

ಭ್ರಷ್ಟಾಚಾರವೆಂಬುದು ಸರ್ಕಾರಿ ಕಚೇರಿಗಳಿಗೆ ಸೀಮಿತವಾಗದೆ ಖಾಸಗಿ ಕ್ಷೇತ್ರದಲ್ಲಿಯೂ ತಾಂಡವವಾಡುತ್ತಿದೆ. ಇತ್ತೀಚೆಗೆ ನೇಮಕಾತಿ ಹಗರಣವೊಂದು ಬೆಳಕಿಗೆ ಬಂದು, ಟಿಸಿಎಸ್ ತನ್ನ ಎಚ್‌.ಆರ್. ಅಧಿಕಾರಿಯನ್ನು ವಜಾ ಮಾಡಿತು. ಪರ್ಚೇಸ್, ಎಚ್‌.ಆರ್., ಅಡ್ಮಿನ್‌ಗೆ ಸಂಬಂಧಿಸಿದವರು ಕಾಂಟ್ರ್ಯಾಕ್ಟ್ ಕೊಡಲು ಬೆನಿಫಿಟ್ಸ್ ಕೇಳುವುದು ಸಾಮಾನ್ಯವಂತೆ. ಲೋಕಾಯುಕ್ತದ ವ್ಯಾಪ್ತಿ ಮೀರಿದ ಸಮಸ್ಯೆ.

**ರೋಹಿತ್ ಸಿಂಹ,** ಎಂಜಿನಿಯರ್

## ಕಿಡಿನುಡಿ

ಭಾರತೀಯ ಆಹಾರ ನಿಗಮವು ಮುಕ್ತ ಮಾರುಕಟ್ಟೆ ಯೋಜನೆಯಡಿ ಇ- ಹರಾಜಿನಲ್ಲಿ ಎರಡು ಬಾರಿ ಮಾರಾಟಕ್ಕೆ ಇಟ್ಟಿದ್ದ 3.75 ಲಕ್ಷ ಟನ್ ಅಕ್ಕಿಯಲ್ಲಿ 460 ಟನ್ ಅಕ್ಕಿ ಮಾರಾಟ ಮಾತ್ರವೇ ಸಾಧ್ಯವಾಗಿದೆ. ಅಗತ್ಯವಿರುವ ರಾಜ್ಯಗಳಿಗೆ ಧಾನ್ಯ ನೀಡಿಕೆ ನಿರಾಕರಿಸುವ ನೀತಿಯನ್ನು ಹೇಗೆ ರೂಪಿಸಲಾಗಿದೆ ಮತ್ತು ಅದನ್ನು ಪುನರ್‌ಪರಿಶೀಲಿಸಬೇಕಾದ ಅಗತ್ಯ ಏಕಿದೆ ಎನ್ನುವುದನ್ನು ಇದು ನಮಗೆ ತಿಳಿಸುತ್ತದೆ.

**ದೇವಿಂದರ್ ಶರ್ಮಾ,** ಲೇಖಕ

## 25 ವರ್ಷಗಳ ಹಿಂದೆ

ಬುಧವಾರ, 15-7-1998

- **ಮಹಿಳಾ ಮಸೂದೆ ಮಂಡನೆ ಮತ್ತೆ ಅನಿರ್ದಿಷ್ಟ ಮುಂದಕ್ಕೆ**

ನವದೆಹಲಿ, ಜುಲೈ 14- ಮಹಿಳಾ ಮೀಸಲಾತಿ ಮಸೂದೆಯ ಬಗೆಗೆ ಲೋಕಸಭೆಯಲ್ಲಿ ಇಂದು ಸಹ ವ್ಯಕ್ತವಾದ ಪರ ಮತ್ತು ತೀವ್ರ ವಿರೋಧದಿಂದಾಗಿ ಮಸೂದೆಯ ಪುನರ್ ವಿಮರ್ಶೆಯನ್ನು ಮತ್ತೆ ಅನಿರ್ದಿಷ್ಟ ಕಾಲದವರೆಗೆ ಮುಂದೂಡಲಾಯಿತು.

ಈ ಮಸೂದೆಯ ಬಗೆಗೆ ಎಲ್ಲ ಪಕ್ಷಗಳ ನಾಯಕರು ಮತ್ತೆ ಚರ್ಚಿಸಿ ಒಮ್ಮತಕ್ಕೆ ಬರಬೇಕೆಂದು ಮನವಿ ಮಾಡಿದ ಸಭಾಧ್ಯಕ್ಷ ಜಿ.ಎಂ.ಸಿ. ಬಾಲಯೋಗಿ ಪುನರ್ ವಿಮರ್ಶಿತ ಮಸೂದೆಯನ್ನು ಆದಷ್ಟು ಕೂಡಲೇ ಮಂಡಿಸುವಂತೆ ಸರ್ಕಾರಕ್ಕೆ ಸೂಚಿಸಿದರು.

ಈ ಮಸೂದೆಯ ಮಂಡನೆಯನ್ನು ಅನಿರ್ದಿಷ್ಟ ಕಾಲದವರೆಗೆ ಮುಂದೂಡಿದ್ದನ್ನು ಪ್ರತಿಭಟಿಸಿ ಆಳುವ ಪಕ್ಷಗಳ ಸಾಲಿನ ಮಹಿಳೆಯರು ನಿರಂತರವಾಗಿ ನಡೆಸಿದ ತೀವ್ರ ಪ್ರತಿಭಟನೆಯಿಂದ ಲೋಕಸಭೆಯ ಕಲಾಪವನ್ನು ಮೂರು ಬಾರಿ ಮುಂದೂಡಿದ ಪ್ರಕರಣ ನಡೆಯಿತು.

- **ಮಣಿಪುರ: ಉಗ್ರರ ದಾಳಿ- 8 ಸಿಆರ್‌ಪಿಎಫ್ ಯೋಧರ ಬಲಿ**

ಇಂಫಾಲ್, ಜುಲೈ 14 (ಪಿಟಿಐ)- ಎರಡು ತಿಂಗಳಲ್ಲಿ ಎರಡನೇ ಸಲ ಉಗ್ರಗಾಮಿಗಳು ಅರಣ್ಯದ ಒಳಗಿಂದ ಕೇಂದ್ರ ಮೀಸಲು ಪೊಲೀಸ್ ಪಡೆಯ ಮೇಲೆ ಹಾರಿಸಿದ ಗುಂಡಿನ ದಾಳಿಗೆ ಎಂಟು ಮಂದಿ ಯೋಧರು ಬಲಿಯಾಗಿ, ಐವರು ಗಾಯಗೊಂಡಿದ್ದಾರೆ.

ಕೇಂದ್ರ ಮೀಸಲು ಪೊಲೀಸ್ ಪಡೆ ಬೆಳಿಗ್ಗೆ 8.10ರಲ್ಲಿ ಇಂಫಾಲ್- ಸಿಲ್ಚಾರ್ ರಸ್ತೆಯಲ್ಲಿ ಗಸ್ತು ತಿರುಗುತ್ತಿದ್ದಾಗ ದಟ್ಟ ಅರಣ್ಯದ ಬಳಿ ಉಗ್ರರು ಅತ್ಯಾಧುನಿಕ ಶಸ್ತ್ರಾಸ್ತ್ರದಿಂದ ದಾಳಿ ಮಾಡಿದ್ದಾರೆ.

## 50 ವರ್ಷಗಳ ಹಿಂದೆ

ಭಾನುವಾರ, 15-7-1973

- **ವಿಶ್ವ ಕೋರ್ಟಿನಲ್ಲಿ ಪಾಕಿಸ್ತಾನದ ಮನವಿ ತಿರಸ್ಕೃತ**

ನವದೆಹಲಿ, ಜುಲೈ 14- ಯುದ್ಧ ಅಪರಾಧಗಳ ವಿಚಾರಣೆಗಾಗಿ ಭಾರತ 195 ಮಂದಿ ಯುದ್ಧ ಬಂದಿಗಳನ್ನು ಬಾಂಗ್ಲಾದೇಶದ ವಶಕ್ಕೆ ಒಪ್ಪಿಸದಂತೆ ಹಂಗಾಮಿ ತಡೆಯಾಜ್ಞೆ ನೀಡಬೇಕೆಂಬ ಪಾಕಿಸ್ತಾನದ ಮನವಿಯನ್ನು ವಿಶ್ವ ನ್ಯಾಯಾಲಯ ತಿರಸ್ಕರಿಸಿದೆ.

ಈ ವಿವಾದ ತನ್ನ ಅಧಿಕಾರ ವ್ಯಾಪ್ತಿಗೆ ಒಳಪಡುವುದೇ ಎಂಬುದು ಮೊದಲು ಕೋರ್ಟ್‌ಗೆ ತೃಪ್ತಿಕರವಾಗಿ ಮನವರಿಕೆ ಆಗಬೇಕಾಗಿದೆ ಎಂದು ವಿಶ್ವ ನ್ಯಾಯಾಲಯ ಶುಕ್ರವಾರ ರಾತ್ರಿ ಹೇಗ್‌ನಲ್ಲಿ ಪ್ರಕಟಿಸಿದ ತೀರ್ಪಿನಲ್ಲಿ ತಿಳಿಸಿದೆ.

ಪಾಕಿಸ್ತಾನದ ದೂರು ವಿಶ್ವ ನ್ಯಾಯಾಲಯದ ವಿಚಾರಣಾ ವ್ಯಾಪ್ತಿಗೆ ಒಳಪಡುವುದಿಲ್ಲವೆಂದು ವಾದಿಸಿದ್ದ ಭಾರತ, ಪಾಕಿಸ್ತಾನದ ದೂರನ್ನು ವಿಚಾರಣೆಗೆ ಎತ್ತಿಕೊಳ್ಳುವ ನ್ಯಾಯಾಲಯದ ಅಧಿಕಾರವನ್ನು ಪ್ರಶ್ನಿಸಿತ್ತು.

- **ಮಧ್ಯಪ್ರದೇಶದ ಐವರು ಸಚಿವರ ರಾಜೀನಾಮೆ: ಸಂಪುಟ ಪತನ ಸನ್ನಿಹಿತ**

ಭೋಪಾಲ್, ಜುಲೈ 14- ಮಧ್ಯಪ್ರದೇಶದ ಸಂಪುಟದ ಐವರು ಭಿನ್ನಮತೀಯ ಸಚಿವರು ಇಂದು ರಾಜೀನಾಮೆ ಸಲ್ಲಿಸಿದ್ದರಿಂದ ಪಿ.ಸಿ. ಸೇಠಿ ಅವರ ನೇತೃತ್ವದ ಸರ್ಕಾರ ಉರುಳಿ ಬೀಳುವ ಗಳಿಗೆ ಸನ್ನಿಹಿತವಾದಂತಾಗಿದೆ.

ಪಠ್ಯ ವಿಷಯಗಳಿಗೆ ಸಮಾನ ಮಹತ್ವ ನೀಡಬೇಕಾದ ಅಗತ್ಯವನ್ನು ಅರಿಯಬೇಕು

# ಕಲಿಕಾ ವಿಷಯ: ಯಾವುದು ಮುಖ್ಯ?

ವಿಶ್ಲೇಷಣೆ

ಅರವಿಂದ ಚೊಕ್ಕಾಡಿ

**ಶೈಕ್ಷಣಿಕವಾಗಿ** ಗಣಿತ, ವಿಜ್ಞಾನ ಬಹಳ ಮುಖ್ಯ ಎಂಬ ಚಿಂತನೆಯೊಂದು ಬಹುಕಾಲದಿಂದಲೂ ಇದೆ. ಕೆಲವು ಅನುದಾನರಹಿತ ಕಾಲೇಜುಗಳಲ್ಲಿ ಸರ್ಕಾರದ ನೀತಿಯ ಕಾರಣಕ್ಕಾಗಿಯಷ್ಟೆ ಭಾಷಾ ಪಠ್ಯಗಳಿದ್ದು, ಶೈಕ್ಷಣಿಕ ವರ್ಷದ ಮೂರು ತಿಂಗಳಲ್ಲಿ ಭಾಷಾ ಪಠ್ಯಗಳನ್ನು ಮುಗಿಸಿ ಉಳಿದ ಅವಧಿಯನ್ನು ಗಣಿತ, ವಿಜ್ಞಾನಕ್ಕೆ ಹಂಚಿಕೆ ಮಾಡುವ ಪದ್ಧತಿ ಇದೆ.

ಇತ್ತೀಚಿನ ದಿನಗಳಲ್ಲಿ ಇತಿಹಾಸದ ಬಗ್ಗೆ ವ್ಯಾಪಕವಾಗಿ ಚರ್ಚೆಗಳು ನಡೆಯುತ್ತಿದ್ದರೂ, ಚರ್ಚೆಯ ಉದ್ದೇಶ ಇತಿಹಾಸ ಪಠ್ಯವಾಗಿರದೆ ವರ್ತಮಾನದ ರಾಜಕೀಯವೇ ಆಗಿದೆ ಎನ್ನುವುದು ಸ್ಪಷ್ಟ. ಏಕೆಂದರೆ ಇತಿಹಾಸದ ಬಗ್ಗೆ ಚರ್ಚೆ ಮಾಡುತ್ತಿರುವ ಬಹುತೇಕರು ಐ.ಟಿ., ಬಿ.ಟಿ., ವೈದ್ಯಕೀಯದಂತಹ ಕ್ಷೇತ್ರದವರು. ಅಂದರೆ ಇತಿಹಾಸವನ್ನೇ ತಮ್ಮ ಆದ್ಯತೆಯಾಗಿ ಕಲಿಯಲು ಮನಸ್ಸಿಲ್ಲದವರು ಇತಿಹಾಸ ಕುರಿತು ಚರ್ಚಿಸುವುದು! ಈಗಲೂ ಕಾಲೇಜುಗಳಲ್ಲಿನ ಇತಿಹಾಸ ವಿಭಾಗ ತುಂಬಿ ತುಳುಕುತ್ತಾ ಇರುವ, ಪ್ರವೇಶವೇ ಸಿಗದೆ ವಿದ್ಯಾರ್ಥಿಗಳು ಕಷ್ಟಪಡುತ್ತಿರುವ ವಿಭಾಗವಲ್ಲ. ಅಂದರೆ ಇತಿಹಾಸದ ಕುರಿತ ಚರ್ಚೆಗಳು ಕೃತಕ ಪ್ರಚೋದನೆಯಿಂದ ಆಗುತ್ತಿವೆ. ಮಿಕ್ಕುಳಿದ ಕಲಿಕಾ ವಿಷಯಗಳಿಗೆ ಮಹತ್ವ ಇಲ್ಲ. ಅದರಲ್ಲೂ ದೈಹಿಕ ಶಿಕ್ಷಣ ತರಗತಿಗಳೇ ಅಪ್ರಸ್ತುತ ಎನ್ನುವ ಸ್ಥಿತಿಯಿದೆ.

ಕಲಿಕಾ ವಿಷಯಗಳಲ್ಲಿ ಯಾವುದು ಮುಖ್ಯ ಎಂಬ ಧೋರಣೆ ಹೊಸದೇನೂ ಅಲ್ಲ. ಈ ರೀತಿಯ ವಿಷಯವಾರು ಮಹತ್ವವು ಆಯಾ ವಿಷಯಗಳ ಆಧಾರದಲ್ಲಿ ಸೃಷ್ಟಿಯಾಗುವ ಔದ್ಯೋಗಿಕ ಮಾರುಕಟ್ಟೆಯನ್ನು ಅವಲಂಬಿಸಿರುತ್ತದೆ. ಏನನ್ನು ಕಲಿತರೆ ಜಾಸ್ತಿ ವೇತನದ, ಉನ್ನತ ಸ್ಥಾನದ ಉದ್ಯೋಗ ಸಿಗುತ್ತದೆ ಎನ್ನುವುದುಕಲಿಕಾವಿಷಯದಮಹತ್ವದಪರಿಕಲ್ಪನೆಯನ್ನು ರೂಪಿಸುತ್ತದೆ. ವಿಜ್ಞಾನ, ಗಣಿತಕ್ಕೆ ಈ ಕಾರಣದಿಂದ ಮಹತ್ವ ಬಂದಿದೆ. ಆದರೆ ಅಲ್ಲಿಯೂ ಮೂಲ ವಿಜ್ಞಾನ ಅಥವಾ ಗಣಿತ ಶಾಸ್ತ್ರದ ಅಧ್ಯಯನಕ್ಕೆ ಮಹತ್ವವಿಲ್ಲ. ಬದಲು ಅವುಗಳನ್ನು ಆಧರಿಸಿದ ಮಾರುಕಟ್ಟೆಯ ಆಯಾಮಗಳಿಗೆ ಮಾತ್ರ ಮಹತ್ವ ಇರುತ್ತದೆ.

ನೂರಿನ್ನೂರು ವರ್ಷಗಳ ಹಿಂದೆ ಅಧ್ಯಯನ ಮಾಡಿದ ಮೂಲ ವಿಜ್ಞಾನದಲ್ಲಿ ನಡೆದ ಸಂಶೋಧನೆಗಳ ಫಲವಾಗಿ ಇಂದು ವಿಶಾಲ ವ್ಯಾಪ್ತಿಯ ಮಾರುಕಟ್ಟೆಯನ್ನು ಹೊಂದಿರುವ ತಂತ್ರಜ್ಞಾನಗಳ ಅಭಿವೃದ್ಧಿಯಾಗಿದೆ. ಮೂಲ ವಿಜ್ಞಾನದ ಅಧ್ಯಯನವಿಲ್ಲದೆ ವಿಜ್ಞಾನ ವಿಷಯದ ಮಾರುಕಟ್ಟೆ ಆಯಾಮಗಳನ್ನು ಮಾತ್ರ ಅಧ್ಯಯನ ಮಾಡುತ್ತಾ ಹೋದರೆ, ನೂರಿನ್ನೂರು ವರ್ಷಗಳ ನಂತರ ಮಾರುಕಟ್ಟೆಗೆ ಅಗತ್ಯವಾದದ್ದನ್ನು ಅಭಿವೃದ್ಧಿ ಪಡಿಸಲು ಬೇಕಾದ ಜ್ಞಾನವೇ ಲಭ್ಯವಿರಲಾರದು. ಕಾಲೇಜು ಹಂತದಲ್ಲಿ ವಿಶೇಷ ಪರಿಣತಿಯ ಅಧ್ಯಯನಕ್ಕೆ ತೊಡಗಿದಾಗ ವಿದ್ಯಾರ್ಥಿಯ ದೃಷ್ಟಿಯಲ್ಲಿ ಮಹತ್ವದ್ದೆನಿಸಿದ ವಿಷಯವನ್ನು ಅಭ್ಯಾಸ ಮಾಡುತ್ತಾನೆ. ಆದರೆ ಅಲ್ಲಿಯ ತನಕದ ಅಧ್ಯಯನದಲ್ಲಿ ಎಲ್ಲ ವಿಷಯಗಳೂ ಮಹತ್ವದವೇ ಆಗಿವೆ. ಅಧ್ಯಯನದ ಸಂದರ್ಭದಲ್ಲಿ ಸಮಾನ ಮಹತ್ವ ನೀಡದೇ ಇರುವುದು ಕೂಡ ಇಂದು ನಾವು ಇತಿಹಾಸ ಓದುವಾಗ ಮೊಘಲರ ವಿನಾ ಬೇರೆ ಯಾರ ಇತಿಹಾಸವೂ ಇರಲಿಲ್ಲ ಎಂದು ಸಾರ್ವಜನಿಕವಾಗಿ ಹೇಳುವ ಮತ್ತು ಹೇಳಿದ್ದನ್ನು ನಂಬುವ ಧೈರ್ಯ ಬರಲು ಕಾರಣವಾಗಿದೆ!

ಕಲಿಕಾ ವಿಷಯಗಳ ಮಹತ್ವದ ಬಗ್ಗೆ ದೈಹಿಕ ಶಿಕ್ಷಣದಿಂದಲೇ ಅರಿತುಕೊಳ್ಳಬೇಕು. ಕಲಿಕೆಯು ದೇಹ ಮತ್ತು ಮನಸ್ಸುಗಳ ನಡುವೆ ಸಂಬಂಧವನ್ನು ಹೊಂದಿದೆ. ದೇಹದ ಸುಸ್ಥಿರತೆ ಕಲಿಕೆಗೆ ಪೂರಕವಾಗಿರುತ್ತದೆ. ಕ್ರೀಡೆಯು ಕ್ರೀಡಾ ಸ್ಫೂರ್ತಿಯನ್ನು ಬೆಳೆಸಬೇಕು. ಬಹಳಷ್ಟು ಸಂದರ್ಭಗಳಲ್ಲಿ ದೈಹಿಕ ಶಿಕ್ಷಣ ಶಿಕ್ಷಕರೇ ಮಕ್ಕಳಲ್ಲಿ ಕ್ರೀಡಾ ಮನೋಭಾವವನ್ನು ಬೆಳೆಸುವ ಬದಲಿಗೆ ಜಿದ್ದಿನ ಮನಃಸ್ಥಿತಿಯನ್ನು ಬೆಳೆಸುವುದೂ ಇದೆ. ಇದು ಸರಿಯಾದದ್ದನ್ನು ತಪ್ಪಾದ ವಿಧಾನದಲ್ಲಿ ಕಲಿಸಿ ತಪ್ಪು ಫಲಿತಾಂಶವನ್ನು ಪಡೆಯುವ ವಿಧಾನವಾಗಿದೆ. ಆದರೂ ಇತ್ತೀಚಿನ ತಲೆಮಾರಿನ ಕೆಲವು ಶಾಲೆಗಳಲ್ಲಿ ಆಟದ ಮೈದಾನವೇ ಇಲ್ಲದಿರುವುದೂ ಇದೆ. ಅಂಥದ್ದರಲ್ಲಿ ಜಿದ್ದಿನ ರೂಪದಲ್ಲಾದರೂ ಆಟೋಟಗಳನ್ನು ನಡೆಸುವುದು ಅಪೇಕ್ಷಣೀಯವಾಗುತ್ತದೆ.

ಉಳಿದ ಪಠ್ಯ ವಿಷಯಗಳ ಬೋಧನೆಯೂ ಬರೀ ವಿವರಗಳನ್ನು ನೆನಪಿರಿಸಿಕೊಳ್ಳುವ ಉದ್ದೇಶವನ್ನು ಹೊಂದಿರುವುದಿಲ್ಲ. ಪರೀಕ್ಷೆಗಳು ಮುಗಿದ ನಂತರ ಕಲಿತ ವಿಷಯಗಳನ್ನು ನೆನಪಿರಿಸಿಕೊಳ್ಳುವುದು ಅನಿವಾರ್ಯವಾಗಿರುವುದಿಲ್ಲ. ಬದಲಿಗೆ ಕಲಿಕಾ ವಿವರಗಳ ಮುಖಾಂತರ ಗಳಿಸಿಕೊಂಡ ಸಾಮರ್ಥ್ಯ ವಿದ್ಯಾರ್ಥಿಗಳಿಗೆ ಬಹಳ ಮುಖ್ಯವಾಗುತ್ತದೆ. ಇದೊಂದು ರೀತಿ ಸಂಗೀತಗಾರ 'ಸರಿಗಮಪ'ವನ್ನು ಬಳಸಿದ ಹಾಗೆ. 'ಸರಿಗಮಪ'ದ ಮೂಲಕ ಆತ ಹೊರಡಿಸುವ ರಾಗ ಮುಖ್ಯವೇ ವಿನಾ 'ಸರಿಗಮಪ' ಎಂಬ ಪದಗಳಲ್ಲ. ಪಠ್ಯದ ಕಲಿಕೆಯೂ ಇದೇ ಮಾದರಿಯದ್ದು. ಗಣಿತದಲ್ಲಿ ಪೈಥಾಗೊರಸ್ ಪ್ರಮೇಯವನ್ನು ನೆನಪಿರಿಸಿಕೊಳ್ಳುವುದೇ ಮುಖ್ಯವಾಗುವುದಿಲ್ಲ. ಆ ಪ್ರಮೇಯದ ಮೂಲಕ ರೇಖಾ ವಿನ್ಯಾಸವನ್ನು ಅರ್ಥ ಮಾಡಿಕೊಂಡು ವಿವಿಧ ಸಂದರ್ಭಗಳಲ್ಲಿ ಅದನ್ನು ಅನ್ವಯಿಸಿಕೊಳ್ಳಬಲ್ಲ ಸಾಮರ್ಥ್ಯ ಮುಖ್ಯವಾಗುತ್ತದೆ. ಗಣಿತದ ಮೂಲಕ ವಿದ್ಯಾರ್ಥಿಗಳ ತಾರ್ಕಿಕ ಸಾಮರ್ಥ್ಯ ಹೆಚ್ಚಾಗಬೇಕು. ಅರ್ಥೈಸುವ ಸೂಕ್ಷ್ಮತೆ ಹೆಚ್ಚಾಗಬೇಕು. ಬದುಕಿನ ಯಾವುದೇ ಸಂಗತಿಯನ್ನು ತೀಕ್ಷ್ಣವಾಗಿ ಗ್ರಹಿಸುವ ಶಕ್ತಿ ಬೆಳೆಯಬೇಕು. ಗಣಿತದಲ್ಲಿ ಬೀಜಗಣಿತ ಎಂಬ ಭಾಗವಿದೆ. ಅಲ್ಲಿ ಬಳಕೆಯಾಗುವ ಕೆಲವು ಸಂಕೇತಗಳು ಮೂರ್ತ ರೂಪದಲ್ಲಿ ಕಾಣುವುದಿಲ್ಲ. ಇವುಗಳನ್ನು ಅಭ್ಯಾಸ ಮಾಡುವ ಮೂಲಕ ಅಮೂರ್ತವಾದದ್ದನ್ನೂ ಗ್ರಹಿಸುವ ಶಕ್ತಿ ಮಕ್ಕಳಲ್ಲಿ ಬೆಳೆಯಬೇಕು.

ವಿಜ್ಞಾನದಲ್ಲಿ ಕಲಿಯುವ ವಿವರಗಳ ಮೂಲಕ ಮಕ್ಕಳಲ್ಲಿ ಶೋಧಕ ಪ್ರವೃತ್ತಿ ಹೆಚ್ಚಾಗಬೇಕು. ಪ್ರಕೃತಿಯ ನಿಗೂಢತೆಯ ಬಗ್ಗೆ ಆಸಕ್ತಿ, ಕುತೂಹಲ, ಪ್ರಶ್ನಿಸುವ ಮನೋಭಾವ, ತೊಡಗಿಕೊಳ್ಳುವ ಕ್ರಿಯಾತ್ಮಕತೆ, ವೈಜ್ಞಾನಿಕ ದೃಷ್ಟಿಕೋನ- ಈ ಎಲ್ಲ ಸಾಮರ್ಥ್ಯಗಳನ್ನು ವಿಜ್ಞಾನ ಕಲಿಕೆಯು ಬೆಳೆಸಬೇಕು. ಸಮಾಜ ವಿಜ್ಞಾನ ಪಠ್ಯವು ಬರೀ ಇತಿಹಾಸಕ್ಕೆ ಸೀಮಿತವಲ್ಲ. ಇತಿಹಾಸದ ಅಧ್ಯಯನವು ಸಂಕುಚಿತ ಮನೋಭಾವದ ನಿವಾರಣೆ, ಮನುಷ್ಯರನ್ನು ಅರ್ಥ ಮಾಡಿಕೊಳ್ಳುವ ಕ್ರಮ, ಕಲೆ, ವಾಸ್ತುಶಿಲ್ಪಗಳ ಆಸಕ್ತಿ, ಸೌಂದರ್ಯ ಪ್ರಜ್ಞೆಯಂತಹ ಸಾಮರ್ಥ್ಯಗಳನ್ನು ಬೆಳೆಸಬೇಕು. ಇತ್ತೀಚೆಗೆ ಇತಿಹಾಸವನ್ನು ರಾಷ್ಟ್ರೀಯತೆಯ ಸಾಧನೆಗಾಗಿ ಬಳಸುವ ಪರಿಪಾಟ ಹುಟ್ಟಿಕೊಂಡಿದೆ. ಇದು ತಪ್ಪು.

ಇತಿಹಾಸದ ಆಧಾರದಲ್ಲಿ ರಾಷ್ಟ್ರೀಯತೆಯನ್ನು ಕಂಡುಕೊಳ್ಳಲು ಹೊರಟರೆ, ಬೇರೆ ಬೇರೆ ರಾಜರ ಅಧೀನದಲ್ಲಿದ್ದ ಪ್ರಾಂತ್ಯಗಳಿಗೆ ಸೇರಿದ ಇಂದಿನ ಜನರು ಪರಸ್ಪರ ಅಸಹನೆಯನ್ನು ತಳೆಯಲು ಬೇಕಾದಷ್ಟು ಕಾರಣಗಳಿವೆ. ಏಕೆಂದರೆ, ದೇಶದ ಒಳಗೆ ಅದೆಷ್ಟೋ ರಾಜರ ಪ್ರಾಂತ್ಯಗಳಿದ್ದು ಪರಸ್ಪರ ಆಕ್ರಮಣಗಳು ನಿರಂತರವಾಗಿ ನಡೆಯುತ್ತಿದ್ದವು. ಆದ್ದರಿಂದ ರಾಷ್ಟ್ರೀಯತೆಯನ್ನು ರಾಜ್ಯಶಾಸ್ತ್ರದ ಮೂಲಕ ಕಂಡುಕೊಂಡು ಆ ನೆಲೆಯಲ್ಲಿ ಭಾರತೀಯ ಸಮಗ್ರತೆಯನ್ನು ಹೊಳೆಯಿಸಬೇಕು. ಆಗ ಅದು 1950ರ ನಂತರ ಸಂವಿಧಾನವು ರೂಪಿಸಿದ ಭಾರತೀಯ ಒಕ್ಕೂಟದ ರಾಷ್ಟ್ರೀಯತೆಯ ಪರಿಕಲ್ಪನೆಯಾಗಿ ಭಾರತೀಯರಲ್ಲಿ ಸದ್ಭಾವನೆಯನ್ನು ತರುತ್ತದೆ. ಅರ್ಥಶಾಸ್ತ್ರದ ಅಭ್ಯಾಸವು ವಿದ್ಯಾರ್ಥಿಗಳಲ್ಲಿ ಅಂತರರಾಷ್ಟ್ರೀಯ ಆರ್ಥಿಕತೆಯನ್ನು ಅರ್ಥ ಮಾಡಿಕೊಳ್ಳುವ ಸಾಮರ್ಥ್ಯವನ್ನೂ, ವೈಯಕ್ತಿಕ ಆರ್ಥಿಕತೆಯನ್ನು ನಿಭಾಯಿಸುವ ಶಕ್ತಿಯನ್ನೂ ಬೆಳೆಸಬೇಕು. ಭೂಗೋಳದ ಅಧ್ಯಯನವು ಎಲ್ಲ ಜ್ಞಾನಶಾಖೆಗಳ ಮೇಲೆಯೂ ಇರುವ ಭೌಗೋಳಿಕ ಸನ್ನಿವೇಶದ ತಿಳಿವಳಿಕೆಯನ್ನು ಬೆಳೆಸಬೇಕು.

ಭಾಷಾ ಪಠ್ಯಗಳು ಎಲ್ಲ ಜ್ಞಾನಶಿಸ್ತುಗಳನ್ನೂ ಅಂತರ್ಗತ ಮಾಡಿಕೊಂಡಿರುವಂತಹವು ಆಗಿವೆ. ಪ್ರತಿಯೊಂದು ಭಾಷೆಗೂ ಅದರದೇ ಜಾಯಮಾನ ಇರುತ್ತದೆ. ಉದಾಹರಣೆಗೆ, ಇಂಗ್ಲಿಷ್, ಸಂಸ್ಕೃತದ ಪದಗಳು ಭಾವಕೋಶದಲ್ಲಿ ಸ್ಥಿರವಾಗಿ ಉಳಿಯುತ್ತವೆ. ಕನ್ನಡ ಅಥವಾ ದ್ರಾವಿಡ ಭಾಷೆಗಳು ಹಾಗಲ್ಲ. ಪದಗಳು ಭಾವಕೋಶದಲ್ಲಿ ಜಾಸ್ತಿ ಚಲಿಸುತ್ತವೆ. ಆದ್ದರಿಂದ ಬಹಳ ಬೇಗ ದ್ವಂದ್ವಾರ್ಥಗಳು ಸೃಷ್ಟಿಯಾಗುತ್ತವೆ. ಹಿಂದಿ ಬಹಳಷ್ಟು ಸಂಗೀತಾತ್ಮಕ ಲಯವನ್ನು ಹೊಂದಿರುವ ಭಾಷೆಯಾಗಿದೆ. ಭಾಷೆಯ ಬಳಕೆಯ ವಿಧಾನವು ಆಯಾ ಕಾಲದ ಸಾಂಸ್ಕೃತಿಕ ಇತಿಹಾಸವನ್ನೂ ಹೇಳುತ್ತದೆ. ಭಾಷಾ ಪಠ್ಯಗಳ ಅಧ್ಯಯನದ ಮೂಲಕ ಇದೆಲ್ಲವನ್ನೂ ಗ್ರಹಿಸಲು ಸಾಧ್ಯವಾಗಬೇಕು.

ಪ್ರತಿ ವಿಷಯಕ್ಕೂ ಕಲಿಕಾ ಉದ್ದೇಶವಿರುವ ಹಾಗೆಯೇ, ಆಯಾ ವಿಷಯದ ಉಪ ವಿಭಾಗಗಳಿಗೂ ನಿರ್ದಿಷ್ಟ ಪಾಠಕ್ಕೂ ಬೋಧನೋದ್ದೇಶ ಇರುತ್ತದೆ. ಪಾಠದ ವಿವರವೇ ಪ್ರಧಾನ ಅಲ್ಲ. ಬೋಧನೋದ್ದೇಶದ ಈಡೇರಿಕೆಯಾದರೆ ಸಾಮರ್ಥ್ಯವರ್ಧನೆ ಆಗುತ್ತದೆ. ಇದಾಗಬೇಕಾದರೆ ಎಲ್ಲ ಪಠ್ಯ ವಿಷಯಗಳಿಗೂ ಸಮಾನ ಮಹತ್ವವಿದೆ ಎಂಬ ಅರಿವು ಸಮಾಜದಲ್ಲಿ ಬೆಳೆಯಬೇಕು.

## ಚುರುಮುರಿ

# ಕಂತಿನ ಸೀರೆ!

• ಬಿ.ಎನ್.ಮಲ್ಲೇಶ್

'ರೀ... ಈ ಸೀರೆ ನೋಡಿ, ಚೆನ್ನಾಗಿದ್ಯಾ? ಲೇಟೆಸ್ಟ್ ಡಿಸೈನು. ಈರುಳ್ಳಿ ಸಿಪ್ಪೆ ಕಲರು, ಮೆಣ್ಸಿನ್‌ಕಾಯಿ ಬಾರ್ಡರು...' ಮುಖದ ಮುಂದೆ ಪಮ್ಮಿ ಸೀರೆ ಹಿಡಿದಾಗ ತೆಪರೇಸಿ ಸಿಡಿಮಿಡಿಗೊಂಡ. 'ಹಿಂದೆಲ್ಲ ಅದ್ಯಾವುದೋ ಮಾವಿನಕಾಯಿ ಬಾರ್ಡರು ಅಂತ ಬರ್ತಿತ್ತು, ಈಗ ಇದ್ಯಾವುದು ಮೆಣ್ಸಿನ್‌ಕಾಯಿದು?'

'ನೋಡಿದೋರ ಹೊಟ್ಟೆ ಉರೀಲಿ ಅಂತ ಮೆಣ್ಸಿನ್‌ಕಾಯಿ ಬಾರ್ಡರ್‌ದು ತಗಂಡಿದೀನಿ ಕಣ್ರೀ, ಚೆನ್ನಾಗಿಲ್ವಾ?' ಪಮ್ಮಿ ನುಲಿದಾಗ ತೆಪರೇಸಿಗೆ ಸಿಟ್ಟು ಬಂತು. 'ದುಡಿದಿದ್ನೆಲ್ಲ ಬರೀ ಇದಕ್ಕೇ ಖರ್ಚು ಮಾಡು, ನಾನಿಲ್ಲಿ ಜೇಬು ಹರ್ಕಂಡು ಓಡಾಡ್ತೀನಿ'.

'ಹಲೋ... ಇದು ನಿಮ್ ರೊಕ್ಕದಿಂದ ತಗಂಡಿದ್ದಲ್ಲ, ಗೃಹಲಕ್ಷ್ಮಿ ರೊಕ್ಕದ್ದು'.

'ಅದಿನ್ನೂ ಜಾರಿಗೇ ಬಂದಿಲ್ವಲ್ಲೇ?'

'ಮುಂದಿನ ತಿಂಗಳು ಬರುತ್ತಲ್ಲ, ಕೊಟ್ರಾತು ಅಂತ ಈಗ ಉದ್ರಿ ತಂದಿದೀನಿ. ಸಾವಿರದ ಇನ್ನೂರು ರೂಪಾಯಿ'.

'ಹೌದಾ? ನಿನ್ನ ಈ ಉದ್ರಿ ಸೀರೆಗೆ ನಾನು ಆಗ್ಲೇ ದಿನಾ ಕಂತು ಕಟ್ತಿದೀನಿ, ಅದು ಗೊತ್ತಾ?'

'ಏನು? ಕಂತು ಕಟ್ತಿದೀರಾ? ಈ ರೀಲು ನನ್ನತ್ರ ಬ್ಯಾಡ...' ಪಮ್ಮಿ ನಕ್ಕಳು.

'ನಿಜವಾಗ್ಲು ಕಣೆ, ನನ್ನ ಅಬ್ಕಾರಿ ಖರ್ಚು ದಿನಕ್ಕೆ ಇನ್ನೂರು ರೂಪಾಯಿ. ಈಗ ಇಪ್ಪತ್ತು ಪರ್ಸೆಂಟ್ ರೇಟು ಜಾಸ್ತಿ ಮಾಡಿ ನಲವತ್ತು ರೂಪಾಯಿ ಜಾಸ್ತಿ ಕಿತ್ಕಂತಿದಾರೆ. ದಿನಕ್ಕೆ ನಲವತ್ತು ಅಂದ್ರೆ ತಿಂಗಳಿಗೆ ಎಷ್ಟಾತು? ಸಾವಿರದ ಇನ್ನೂರು ರೂಪಾಯಿ! ಅಂದ್ರೆ, ಈ ಸೀರೆಗೆ ನಾನು ಕಂತು ಕಟ್ಟಿದಂಗೆ ತಾನೆ? ನನ್ನತ್ರ ಕಿತ್ಕಂಡು ನಿಂಗೆ ಕೊಟ್ಟಂಗಾತು ತಾನೆ?'

ತೆಪರೇಸಿ ತರ್ಕಕ್ಕೆ ತಲೆದೂಗಿದ ಪಮ್ಮಿ, 'ರೀ... ಕುಡಿಯೋದು ಬಿಟ್‌ಬಿಡ್ರೀ ಪ್ಲೀಸ್' ಎಂದಳು.

'ನಿನ್ತೆಲಿ, ನಾನು, ನನ್ನಂತೋರು ಕುಡಿಯೋದು ಬಿಟ್ರೆ ನಿಮ್ ಗ್ಯಾರಂಟಿಗಳಿಗೆ ರೊಕ್ಕ ಯಾವನು ಕೊಡ್ತಾನೆ?'

ಪಮ್ಮಿ ಪಿಟಿಕ್ಕನ್ನಲಿಲ್ಲ.

## ಸಂಗತ

# ಬೇಡ ಬೆರಳಿಗೆ ಎಂಜಲಿನ ಲೇಪ

ಪುಸ್ತಕ, ಪತ್ರಿಕೆ ಮತ್ತು ದಾಖಲೆ ಪತ್ರಗಳ ಪುಟ ಹೊರಳಿಸಲು, ನೋಟುಗಳನ್ನು ಎಣಿಸಲು ಬೆರಳಿಗೆ ಎಂಜಲು ಹಚ್ಚಿಕೊಳ್ಳುವ ಅನಾರೋಗ್ಯಕರ ನಡೆ ಎಲ್ಲೆಡೆಯೂ ಕಾಣಿಸುತ್ತದೆ

• ಮಲ್ಲಿಕಾರ್ಜುನ ಹೆಗ್ಗಳಗಿ

**ರಾಜ್ಯವೊಂದರ** ಮುಖ್ಯಮಂತ್ರಿ ಉತ್ಸಾಹದಿಂದ ಬಜೆಟ್ ಮಂಡಿಸುತ್ತಿದ್ದರು. ನಾನು ಟಿ.ವಿ. ಮುಂದೆ ಕುಳಿತು ಬಜೆಟ್ ಮಂಡನೆಯನ್ನು ಪೂರ್ಣ ವೀಕ್ಷಿಸಿದೆ. ಆ ಗಣ್ಯರು ಬಜೆಟ್ ಓದುವಾಗ ಪುಸ್ತಕದ ಪುಟ ತಿರುವಲು ತಮ್ಮ ಬೆರಳನ್ನು ನಾಲಿಗೆಗೆ ತಾಗಿಸಿ ಹಸಿ ಮಾಡಿಕೊಳ್ಳುತ್ತಿದ್ದರು. ಅವರಿಗೆ ಸ್ವಲ್ಪ ಕೆಮ್ಮು ಇರುವುದು ಕಾಣಿಸಿತು. ಅವರು ಅದೇ ಕೈಯಿಂದ ಲೋಟ ಎತ್ತಿ ನೀರು ಕುಡಿದರು. ನಂತರ ಮತ್ತೆ ಬೆರಳಿಗೆ ಎಂಜಲು ಹಚ್ಚಿಕೊಂಡು ಬಜೆಟ್ ಪುಸ್ತಕದ ಪುಟಗಳನ್ನು ತಿರುಗಿಸಿದ್ದು ನೋಡಿ ಬೇಸರವಾಯಿತು.

ಗಣ್ಯರು, ಅಧಿಕಾರಿಗಳು, ಕಚೇರಿಯ ಸಿಬ್ಬಂದಿ, ಅಧ್ಯಾಪಕರು, ವಿದ್ಯಾರ್ಥಿಗಳು ಸಹಜವಾಗಿ ಬೆರಳಿಗೆ ಎಂಜಲು ಲೇಪಿಸಿ ಪುಟ ತಿರುವುತ್ತಾರೆ. ಪುಸ್ತಕ, ಪತ್ರಿಕೆ ಮತ್ತು ದಾಖಲೆ ಪತ್ರಗಳ ಪುಟ ಹೊರಳಿಸಲು ಬೆರಳಿಗೆ ಎಂಜಲು ಹಚ್ಚಿಕೊಳ್ಳುವ ಅನಾರೋಗ್ಯಕರ ನಡೆ ಎಲ್ಲ ಕಡೆಗೂ ಕಾಣಿಸುತ್ತದೆ. ಸಾರ್ವಜನಿಕ ವಾಚನಾಲಯಗಳಲ್ಲಿ ಓದುಗರು ತಮ್ಮ ಬೆರಳಿಗೆ ಎಂಜಲು ಹಚ್ಚಿಕೊಂಡು ಪುಟ ತಿರುಗಿಸುವ ಚಿತ್ರ ಸಾಮಾನ್ಯವಾಗಿ ಕಂಡುಬರುತ್ತದೆ. ಇಂಥ ಪುಸ್ತಕ, ಪತ್ರಿಕೆಗಳನ್ನು ಕೈಗೆತ್ತಿಕೊಂಡು ಓದುವುದಕ್ಕೆ ಬಹಳ ಮುಜುಗರವಾಗುತ್ತದೆ.

ಕೆಲವು ತಿಂಗಳುಗಳ ಹಿಂದೆ ಕಬ್ಬಿನ ಬೆಳೆಗೆ ಸಂಬಂಧಿಸಿದ ವಿಚಾರ ಸಂಕಿರಣವೊಂದರಲ್ಲಿ ಭಾಗವಹಿಸಲು ಅಹಮದ್‌ನಗರಕ್ಕೆ ಹೋಗಿದ್ದೆ. ಕಾರ್ಯಕ್ರಮದಲ್ಲಿ 12 ಮಂದಿ ವಿದೇಶಿ ಕೃಷಿ ವಿಜ್ಞಾನಿಗಳು ಭಾಗವಹಿಸಿದ್ದರು. ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದ ಸಚಿವರು, ಸಿದ್ಧಪಡಿಸಿದ ತಮ್ಮ ಭಾಷಣದ ಪ್ರತಿ ಓದುವಾಗ ಬೆರಳಿಗೆ ಎಂಜಲು ಲೇಪಿಸಿ ಪುಟ ತಿರುವುತ್ತಿದ್ದರು. ಅವರ ವರ್ತನೆ ಅಸಹ್ಯಕರವಾಗಿ ಕಾಣುತ್ತಿತ್ತು. ಕಾರ್ಯಕ್ರಮದ ಕೊನೆಯಲ್ಲಿ ಸಚಿವರು ವಿದೇಶಿ ವಿಜ್ಞಾನಿಗಳ ಕೈಕುಲುಕಲು ಮುಂದಾದಾಗ ಅವರು ಸಂಕೋಚದಿಂದ ಹಿಂದೆ ಸರಿದು ಕೈಜೋಡಿಸಿ ನಮಸ್ಕರಿಸಿದರು. ವಿಚಾರಿಸಿದಾಗ, ಸಚಿವರು ಭಾಷಣ ಮಾಡುವಾಗ ಅನುಸರಿಸಿದ ಅಸಂಸ್ಕೃತ ನಡೆ ಅದಕ್ಕೆ ಕಾರಣ ಎಂಬ ಮಾಹಿತಿ ಬಹಿರಂಗಗೊಂಡಿತು.

ಗಾಂಧೀಜಿ ಸ್ವಚ್ಛತೆಗೆ ಆದ್ಯತೆ ಕೊಡುತ್ತಿದ್ದರು. ಅವರ ಪುತ್ರ ಹರಿಲಾಲ್ ಅನಾರೋಗ್ಯದಿಂದ ಬಳಲುತ್ತಿದ್ದರು. ಸಣ್ಣ ವಯಸ್ಸಿನಲ್ಲಿಯೇ ವೃದ್ಧನಂತೆ ಕಾಣುತ್ತಿದ್ದರು. ಹಲ್ಲುಗಳ ತೊಂದರೆಯಿಂದ ಅವರು ಸದಾ ಬಾಯಲ್ಲಿ ಬೆರಳು ಇಟ್ಟುಕೊಳ್ಳುತ್ತಿದ್ದರು. ಇದನ್ನು ಗಮನಿಸಿದ ಗಾಂಧೀಜಿ ಮಗನಿಗೆ 'ಪದೇ ಪದೇ ಬಾಯಲ್ಲಿ ಬೆರಳು ಹಾಕಿಕೊಳ್ಳುವುದು ಸರಿಯಲ್ಲ. ಊಟಕ್ಕೆ ಮೊದಲು ಚೆನ್ನಾಗಿ ಕೈ ತೊಳೆದುಕೊಳ್ಳಬೇಕು. ಈ ಸರಳ ವಿಧಾನ ಅನುಸರಿಸುವುದರಿಂದ ಆರೋಗ್ಯಕ್ಕೆ ಸಂಬಂಧಿಸಿದ ಬಹಳಷ್ಟು ತೊಂದರೆಗಳು ದೂರವಾಗುತ್ತವೆ' ಎಂದು ಮಾರ್ಗದರ್ಶನ ಮಾಡಿದ್ದರು.

ಮುಂಬೈ ನಗರದ ಒಂದು ಸ್ವಯಂಸೇವಾ ಸಂಸ್ಥೆಯು ಕೊಳೆಗೇರಿ ಪ್ರದೇಶದಲ್ಲಿ ವಾಸವಾಗಿರುವ 2,000 ಕುಟುಂಬಗಳಿಗೆ ಸ್ವಚ್ಛವಾಗಿ ಕೈ ತೊಳೆದುಕೊಳ್ಳುವ ಅಭಿಯಾನದ ಅಡಿಯಲ್ಲಿ ಉಚಿತವಾಗಿ ಸಾಬೂನು ಹಂಚುವ ಕಾರ್ಯಕ್ರಮ ಹಮ್ಮಿಕೊಂಡಿತ್ತು. ಆರು ತಿಂಗಳ ನಂತರ ನಡೆಸಿದ ಸಮೀಕ್ಷೆಯಲ್ಲಿ, ಆ ಕುಟುಂಬಗಳ ಸದಸ್ಯರ ಆರೋಗ್ಯದಲ್ಲಿ ಭಾರಿ ಸುಧಾರಣೆಯಾಗಿದ್ದು ಕಂಡುಬಂದಿತ್ತು. ಸಾಬೂನು ಬಳಸಿ ಸ್ವಚ್ಛವಾಗಿ ಕೈ ತೊಳೆದುಕೊಂಡು ಊಟ ಮಾಡುವುದರಿಂದ ಆಗುವ ಆರೋಗ್ಯಕರ ಪ್ರಯೋಜನಗಳ ಬಗ್ಗೆ ಕೊಳೆಗೇರಿ ವಾಸಿಗಳಲ್ಲಿ ಬಹಳಷ್ಟು ಅರಿವು ಮೂಡಿತ್ತು. ಸ್ವಯಂ ಸೇವಾ ಸಂಸ್ಥೆ ಉಚಿತವಾಗಿ ಸಾಬೂನು ಕೊಡುವುದನ್ನು ನಿಲ್ಲಿಸಿದೆ. ಆದರೆ, ಕೊಳೆಗೇರಿವಾಸಿಗಳು ತಾವೇ ಸಾಬೂನು ಖರೀದಿಸಿ ಬಳಸುವ ಮನೋಭಾವವನ್ನು ಬೆಳೆಸಿಕೊಂಡಿದ್ದಾರೆ.

ನೋಟುಗಳನ್ನು ಎಣಿಸಲು ಬೆರಳಿಗೆ ಎಂಜಲು ಹಚ್ಚಿಕೊಳ್ಳುವ ಪದ್ಧತಿ ಬಹಳ ಕಡೆ ಕಂಡುಬರುತ್ತದೆ. ನೋಟುಗಳ ಸಂಚಲನ ತುಂಬಾ ಅಧಿಕವಾಗಿರುವುದರಿಂದ ಅನಾರೋಗ್ಯ ಹರಡುವುದು ಹೆಚ್ಚಾಗುತ್ತದೆ. ನೋಟುಗಳು ಕೊಳೆಯಾಗುವುದಕ್ಕೆ ಇದು ಮುಖ್ಯ ಕಾರಣವಾಗಿದೆ.



ಬೆರಳಿಗೆ ಎಂಜಲು ಹಚ್ಚಿಕೊಳ್ಳುವುದು ಸುಸಂಸ್ಕೃತ ನಡೆ ಎನಿಸುವುದಿಲ್ಲ. ಕೋವಿಡ್ ಸಾಂಕ್ರಾಮಿಕದ ಕಾಲಘಟ್ಟದಲ್ಲಿ ಜನ ಆರೋಗ್ಯಕರ ನಿಯಮಗಳನ್ನು ಪಾಲಿಸುವುದಕ್ಕೆ ಹೆಚ್ಚಿನ ಗಮನ ಕೊಡುತ್ತಿದ್ದರು. ಈಗ ಆ ಭಯ ಕಡಿಮೆಯಾಗಿದೆ. ಹೀಗಾಗಿ ಜನ ಬೆರಳಿಗೆ ಎಂಜಲು ಹಚ್ಚಿಕೊಳ್ಳುವ ಕೆಟ್ಟ ವಿಧಾನವನ್ನು ಪುನರಾರಂಭಿಸಿದ್ದಾರೆ.

ಉತ್ತರಪ್ರದೇಶ ಸರ್ಕಾರ ಒಂದು ಸುತ್ತೋಲೆ ಹೊರಡಿಸಿ, ಕೈ ಬೆರಳಿಗೆ ಎಂಜಲು ಹಚ್ಚಿ ದಾಖಲೆ ಪತ್ರಗಳು, ಪುಸ್ತಕಗಳು, ಕಡತಗಳು ಹಾಗೂ ದಫ್ತರುಗಳ ಪುಟ ತಿರುಗಿಸುವುದು ಅನಾರೋಗ್ಯಕರ, ಅಸಾಂಸ್ಕೃತಿಕ ವಿಧಾನ, ಇದನ್ನು ತಕ್ಷಣ ನಿಲ್ಲಿಸಬೇಕು ಎಂದು ಸೂಚನೆ ನೀಡಿದೆ. ಎಂಜಲು ಹಚ್ಚುವುದರಿಂದ ಉಂಟಾಗಬಹುದಾದ ಆರೋಗ್ಯ ಸಮಸ್ಯೆಗಳ ವಿವರವನ್ನು ಸುತ್ತೋಲೆಯಲ್ಲಿ ನೀಡಲಾಗಿದೆ. ಜಾಗೃತಿ ಫಲಕಗಳನ್ನು ಜನಸಂಚಾರ ಹೆಚ್ಚಾಗಿರುವ ಪ್ರದೇಶಗಳಲ್ಲಿ ಅಳವಡಿಸಲಾಗಿದೆ. ಇದನ್ನೊಂದು ಆರೋಗ್ಯ ಜಾಗೃತಿ ಅಭಿಯಾನವಾಗಿ ಅಲ್ಲಿನ ಸರ್ಕಾರ ನಡೆಸುತ್ತಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಈ ಮಾದರಿಯನ್ನು ಅನುಸರಿಸುವುದು ತೀರ ಅವಶ್ಯವಾಗಿದೆ. ಅವಶ್ಯವಿರುವ ಕಡೆ ನೀರಿನ ಸ್ಪಂಜ್ ಪ್ಯಾಡ್ ಬಳಸುವ ವಿಧಾನವನ್ನು ಜಾರಿಗೆ ತರಬೇಕು. ಪುಟ ತಿರುಗಿಸುವುದಕ್ಕೆ ಬೆರಳು ಹಸಿ ಮಾಡಿಕೊಳ್ಳುವುದು ಅನಿವಾರ್ಯವಲ್ಲ. ಆಸಕ್ತಿಯಿಂದ ಸರಳವಾಗಿ ಪುಟ ತಿರುಗಿಸಬಹುದು. ಇದನ್ನು ರೂಢಿಸಿಕೊಳ್ಳಬೇಕು.

## ವಾಚಕರ ವಾಣಿ

### ಗಡಿಯಲ್ಲಿ ಭಾಷಾ ಸಾಮರಸ್ಯ: ಬೇಕು ಇಚ್ಛಾಶಕ್ತಿ

ಮಹಾರಾಷ್ಟ್ರದೊಂದಿಗೆ ಗಡಿ ಹಂಚಿಕೊಂಡಿರುವ ಬೆಳಗಾವಿ ಜಿಲ್ಲೆಯ ಸರ್ಕಾರಿ ಮರಾಠಿ ಮತ್ತು ಉರ್ದು ಮಾಧ್ಯಮ ಶಾಲೆಗಳ ಮಕ್ಕಳು ಈಗ ಕನ್ನಡ ಮಾಧ್ಯಮಕ್ಕೆ ಬದಲಾಗುತ್ತಿರುವ ಸುದ್ದಿ (ಪ್ರ.ವಾ., ಜುಲೈ 14) ಓದಿ ಸಂತಸವಾಯಿತು. ಕಾಸರಗೋಡಿನ ಕನ್ನಡಿಗರಿಗೆ ಮಲಯಾಳಂ ಭಾಷೆ ಬರುವುದಿಲ್ಲವೆಂದೇನೂ ಇಲ್ಲ. ಆದರೆ, ಅವರು ಅಲ್ಲಿನ ಆಡಳಿತ ಭಾಷೆಯನ್ನು ಕಲಿಯಲೇಬೇಕಾದ ಅನಿವಾರ್ಯದ ನಡುವೆಯೂ ಕನ್ನಡವನ್ನು ಉಳಿಸಿಕೊಂಡಿರುವುದು ಹೆಗ್ಗಳಿಕೆಯ ವಿಷಯ. ಹಾಗೆಯೇ ಮಹಾರಾಷ್ಟ್ರದ ಗಡಿ ಪ್ರದೇಶಗಳಲ್ಲೂ ಅಲ್ಲಿನ ಮರಾಠಿಗರು ಅವರ ಭಾಷೆಯನ್ನು ಉಳಿಸಿಕೊಳ್ಳಲು ಯಾವ ಅಭ್ಯಂತರವೂ ಇರಬಾರದು. ಅದು ಅವರ ಇಷ್ಟ ಮತ್ತು ಅಸ್ಮಿತೆಯ ದೃಷ್ಟಿಯಿಂದ ಭಾವನಾತ್ಮಕ ಆಯ್ಕೆಯೂ ಹೌದು. ಆದರೆ, ಕರ್ನಾಟಕದ ಆಡಳಿತ ಭಾಷೆಯಾದ ಕನ್ನಡವನ್ನು ಅಧಿಕೃತವಾಗಿ ಕಲಿಯಲೇಬೇಕು. ಅದನ್ನು ಬಿಟ್ಟು ಕನ್ನಡದ ನೆಲದಲ್ಲಿ ಮರಾಠಿ ಭಾಷೆಯ ನಾಮಫಲಕಗಳನ್ನು ಹಾಕುವುದು ಮತ್ತು ಕನ್ನಡವನ್ನು ಕಲಿಯಲೇಬಾರದು ಎಂಬ ಹಟಮಾರಿ ಧೋರಣೆಯಿಂದ ಭಾಷಾಂಧರಾಗುವುದು ಸರ್ವಥಾ ತಪ್ಪು.

ಗಡಿ ಪ್ರದೇಶಗಳಲ್ಲಿ ಭಾಷಾ ಸಾಮರಸ್ಯದ ಮನೋಭಾವವನ್ನು ಬೆಳೆಸಿಕೊಳ್ಳುವುದು ಅತಿ ಮುಖ್ಯ. ಕನ್ನಡದ ನೆಲದಲ್ಲಿ ಕನ್ನಡವನ್ನು ಕಡ್ಡಾಯವಾಗಿ ಆಡಳಿತ ಭಾಷೆಯನ್ನಾಗಿ ಮಾಡಿ, ಕನ್ನಡವನ್ನು ಕಲಿಯಲೇಬೇಕಾದ ಅನಿವಾರ್ಯವನ್ನು ಸೃಷ್ಟಿಸಿದರೆ ಯಾವ ಗೊಂದಲಗಳೂ ಇರುವುದಿಲ್ಲ. ಇದನ್ನು ಸಾಧಿಸುವ ರಾಜಕೀಯ ಇಚ್ಛಾಶಕ್ತಿ ಇರಬೇಕಷ್ಟೆ.

**ಡಾ. ಕೆ.ಎಸ್.ಗಂಗಾಧರ,** ಶಿವಮೊಗ್ಗ

### ಸಾಲದ ಬಾಕಿ: ಖಾತೆ ತೆರೆಯಲು ಇರಲಿ ನಿರ್ಬಂಧ

ಬ್ಯಾಂಕುಗಳಿಂದ ವೈಯಕ್ತಿಕ ಕಾರಣಗಳಿಗೆ, ಸಣ್ಣ ಉದ್ದಿಮೆ ನಡೆಸುವಂತಹ ಉದ್ದೇಶಗಳಿಗೆ ಜನಸಾಮಾನ್ಯರು ಸಾಲ ಪಡೆಯುತ್ತಿರುತ್ತಾರೆ. ತಮಗೆ ಅನುಕೂಲವಾಗಲೆಂದು ಬ್ಯಾಂಕುಗಳು ಅಂತಹ ಸಾಲಗಾರರ ಉಳಿತಾಯ ಖಾತೆಗಳಿಂದಲೇ ಪ್ರತಿ ತಿಂಗಳ ಕಂತನ್ನು ಪಡೆದುಕೊಳ್ಳುವ ವ್ಯವಸ್ಥೆಯನ್ನು ರೂಪಿಸಿವೆ. ಸಾಲಗಾರರು ಉಳಿತಾಯ ಖಾತೆಯಲ್ಲಿ ಅಗತ್ಯವಿರುವ ಶಿಲ್ಕನ್ನು ಹೊಂದಿರದಿದ್ದರೆ ಸಾಲದ ಬಾಕಿ ಹಾಗೆಯೇ ಉಳಿದು ಹೆಚ್ಚಿನ ಬಡ್ಡಿ ಮೊತ್ತವೂ ಸೇರುತ್ತದೆ. ಸಾಲ ಕಟ್ಟುವ ಉದ್ದೇಶವಿರದ ಕೆಲವು ಸಾಲಗಾರರು ಸಾಲ ಪಡೆದ ಬ್ಯಾಂಕನ್ನು ಬಿಟ್ಟು, ತಮಗೆ ಬರುವ ಆದಾಯವನ್ನು ಜಮಾ ಮಾಡಲೆಂದೇ ಬೇರೆ ಬ್ಯಾಂಕುಗಳಲ್ಲಿ ಉಳಿತಾಯ ಖಾತೆಯನ್ನು ತೆರೆಯುತ್ತಾರೆ. ಬ್ಯಾಂಕುಗಳು ಕೊಟ್ಟ ಸಾಲವು ಬಡ್ಡಿ ಸಮೇತ ವಾಪಸ್ ಬಂದರಷ್ಟೇ ಬೇರೆಯವರಿಗೆ ಹೆಚ್ಚಿನ ಸಾಲಸೌಲಭ್ಯ ದೊರಕುವುದು. ಅಷ್ಟೇ ಅಲ್ಲ, ಬ್ಯಾಂಕುಗಳು ಲಾಭ ಗಳಿಸಿದರೆ ಸರ್ಕಾರಕ್ಕೂ ಹೆಚ್ಚಿನ ಡಿವಿಡೆಂಡ್ ಹಾಗೂ ತೆರಿಗೆ ಸಂಗ್ರಹವಾಗಿ ಜನರ ಕಲ್ಯಾಣಕ್ಕಾಗಿ ಹಲವು ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬಹುದಾಗಿದೆ.

ಈ ಪ್ರಕ್ರಿಯೆ ಮುಂದುವರಿಯಬೇಕಾದರೆ, ಬ್ಯಾಂಕ್ ಸಾಲವನ್ನು ಬಾಕಿ ಇಟ್ಟು ಬೇರೆಡೆ ಉಳಿತಾಯ ಖಾತೆ ತೆರೆಯುವುದನ್ನುತಪ್ಪಿಸುವುದುಅಗತ್ಯ.ವ್ಯಕ್ತಿಯುಎಲ್ಲಿಯಾದರೂಸಾಲಪಡೆದುಕಂತುಬಾಕಿಉಳಿಸಿಕೊಂಡಿದ್ದಾನೆಯೇ ಎಂಬುದನ್ನು ಸಿಬಿಲ್ ವರದಿಯ ಮೂಲಕ ಪರಿಶೀಲಿಸಿ, ಆಮೇಲಷ್ಟೇ ಹೊಸ ಖಾತೆ ತೆರೆಯುವಂತೆ ಭಾರತೀಯ ರಿಸರ್ವ್ ಬ್ಯಾಂಕು ಎಲ್ಲ ಬ್ಯಾಂಕುಗಳಿಗೆ ಆದೇಶ ನೀಡುವುದು ದೇಶದ ಆರ್ಥಿಕ ಅಭಿವೃದ್ಧಿಯ ದೃಷ್ಟಿಯಿಂದ ಅತ್ಯಗತ್ಯ.

**ಬಿ.ಎನ್.ಭರತ್,** ಬೆಂಗಳೂರು

### 'ಮೌನ'ದ ಅರ್ಥ ತಿಳಿಯದ ಶಾಸಕರು!

ರಾಜ್ಯ ವಿಧಾನಸಭೆ ಅಧಿವೇಶನದಲ್ಲಿ ಜನಪ್ರತಿನಿಧಿಗಳು ಮಾತನಾಡುವುದರಲ್ಲಿ ಬಹುಭಾಗ ಜೊಳ್ಳು. ಇದರಿಂದ ವೀಕ್ಷಕರಿಗೆ ಜುಗುಪ್ಸೆ ಆಗುತ್ತಿದೆ. ಇದಕ್ಕೆ ಮುಖ್ಯ ಕಾರಣ, ಎಲ್ಲರಿಗೂ ತಮ್ಮ ಪ್ರಸ್ತುತತೆಯನ್ನು ಕಾಪಾಡಿಕೊಳ್ಳುವ ಹಂಬಲ. ಬಹುಪಾಲು ಶಾಸಕರಿಗೆ 'ಮೌನ'ಕ್ಕೂ ಅರ್ಥವಿದೆ ಎಂಬುದು ಗೊತ್ತೇ ಇಲ್ಲ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ಅಧೀನದ ಇಲಾಖೆಯಲ್ಲಿ ಭ್ರಷ್ಟಾಚಾರ ನಡೆದಿಲ್ಲ ಎಂದಿದ್ದಾರೆ. ಇರಬಹುದು. ಆದರೆ, ಬೇರೆ ಇಲಾಖೆಯಲ್ಲಿ ಭ್ರಷ್ಟಾಚಾರ ನಡೆದಿದೆ ಅಥವಾ ನಡೆಯುತ್ತಿದೆ ಎಂದಾದರೆ ಮುಖ್ಯಮಂತ್ರಿ ಕ್ರಮ ತೆಗೆದುಕೊಳ್ಳುವುದಿಲ್ಲವೇ? ಭ್ರಷ್ಟಾಚಾರ ಎಲ್ಲೇ ನಡೆದರೂ ಮುಖ್ಯಮಂತ್ರಿಯೇ ಹೊಣೆ ಆಗಬೇಕಾಗುತ್ತದೆ. ಲೋಕಾಯುಕ್ತಕ್ಕೆ ನೀಡಬೇಕಾದ ಸ್ವಾತಂತ್ರ್ಯವನ್ನು ಪೂರ್ಣವಾಗಿ ನೀಡಿಲ್ಲ, ಏಕೆ? ಭ್ರಷ್ಟಾಚಾರ ನಿಯಂತ್ರಣಕ್ಕೆ ಬಾರದೆ ರಾಜ್ಯದ ಕಲ್ಯಾಣ ಆಗುವುದಿಲ್ಲ.

**ಎಂ.ಕೆ.ವಾಸುದೇವರಾಜು,** ಮೈಸೂರು

### ಸಮ್ಮೇಳನದ ಗುಣಮಟ್ಟ: ಚರ್ಚೆ ನಡೆಯಲಿ

ಈ ಬಾರಿಯ ಬಜೆಟ್‌ನಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಸರ್ಕಾರವು ಅನುದಾನದ ಭರವಸೆ ನೀಡಿಲ್ಲದಿರುವುದು ವರದಿಯಾಗಿದೆ (ಪ್ರ.ವಾ., ಜುಲೈ 14). ಮೊದಲಿಗೆ ರಾಜ್ಯ ಮಟ್ಟದಲ್ಲಿ ಸಾಹಿತ್ಯ ಸಮ್ಮೇಳನದ ಜಾತ್ರೆ ಅಗತ್ಯ ಇದೆಯೇ ಎಂಬ ಬಗ್ಗೆ ಚರ್ಚೆಯಾಗಬೇಕು. ಮೈಸೂರಿನಲ್ಲಿ ನಡೆದ 83ನೇ ಸಾಹಿತ್ಯ ಸಮ್ಮೇಳನಕ್ಕೆ ₹ 8 ಕೋಟಿ ಬಿಡುಗಡೆಯಾಗಿದ್ದರೆ, ಹಾವೇರಿಯಲ್ಲಿ ನಡೆದ 86ನೇ ಸಮ್ಮೇಳನದ ಕಾಲಕ್ಕೆ ಈ ಪ್ರಮಾಣ ₹ 20 ಕೋಟಿ ತಲುಪಿದೆ. ಈಗ ಮಂಡ್ಯದಲ್ಲಿ ನಡೆಯಲಿರುವ 87ನೇ ಸಾಹಿತ್ಯ ಸಮ್ಮೇಳನಕ್ಕೆ ₹ 25 ಕೋಟಿಗೆ ಬೇಡಿಕೆ ಇಡಲಾಗಿದೆ. ಕನ್ನಡ ಸಾಹಿತ್ಯ ಪರಿಷತ್ತು ನಡೆಸುತ್ತಿರುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ವರ್ಷದಿಂದ ವರ್ಷಕ್ಕೆ ಹಣದ ಬೇಡಿಕೆ ಏರಿಕೆಯಾದಂತೆ, ಸಾಹಿತ್ಯ ಸಮ್ಮೇಳನದ ಗುಣಮಟ್ಟವೂ ಬೆಳೆದಿದೆಯೇ? ಸಮ್ಮೇಳನದಲ್ಲಿ ಆಯೋಜಿಸುವ ಗೋಷ್ಠಿಗಳ ವಿಷಯ ಇಲ್ಲವೇ, ಭಾಗವಹಿಸುವ ವ್ಯಕ್ತಿಗಳ ಆಯ್ಕೆಗೆ ಮುನ್ನ ಯಾವ ಹಂತದಲ್ಲಾದರೂ ಪಾರದರ್ಶಕವಾಗಿ ಚರ್ಚೆ ನಡೆಯುತ್ತಿದೆಯೇ? ಸಾಹಿತ್ಯ ಪರಿಷತ್ತು ಎಲ್ಲರನ್ನೂ ಒಳಗೊಳ್ಳುವ ವಿಶ್ವಾಸಾರ್ಹತೆಯನ್ನು ಉಳಿಸಿಕೊಂಡು ಹೆಜ್ಜೆ ಇಡುತ್ತಿದೆಯೇ?

ಒಬ್ಬೊಬ್ಬರ ಕಾಲದಲ್ಲಿ ಒಂದೊಂದು ಗುಂಪು ಪರಿಷತ್ತಿನೊಳಗೆ ತನ್ನ ಬೆನ್ನನ್ನು ತಾನೇ ತಟ್ಟಿಕೊಂಡು ಆಡಳಿತ ನಡೆಸುತ್ತದೆ. ಇದನ್ನೆಲ್ಲಾ ಗಮನಿಸಿದಾಗ, ಪರಿಷತ್ತಿನ ಹೆಸರು ಹೇಳಿಕೊಂಡು ರಾಜ್ಯ ಮಟ್ಟದಲ್ಲಿ ಸಾಹಿತಿಗಳ ಗುಂಪುಗಾರಿಕೆ ಬೆಳೆಯಲು ಸರ್ಕಾರ ಹಣ ಕೊಟ್ಟು ಪ್ರೋತ್ಸಾಹ ಮಾಡುವುದಕ್ಕಿಂತ, ಹೋಬಳಿ, ತಾಲ್ಲೂಕು, ಜಿಲ್ಲೆಯ ಹಂತದಲ್ಲಿ ಕಥೆ, ಕಾವ್ಯ, ವಿಮರ್ಶೆಯ ಕಮ್ಮಟಗಳನ್ನು, ಸುಗಮಸಂಗೀತ ಕಾರ್ಯಕ್ರಮಗಳನ್ನು ಏರ್ಪಡಿಸುವ ಮೂಲಕ ಪರಿಷತ್ತು ಸ್ಥಳೀಯ ಪ್ರತಿಭೆಗಳಿಗೆ ಪ್ರೋತ್ಸಾಹ ಕೊಡುವುದು ಒಳ್ಳೆಯದು.

**ತಾ.ಸಿ.ತಿಮ್ಮಯ್ಯ,** ಬೆಂಗಳೂರು

Printed and published by B A Ravi on behalf of The Printers (Mysore ) Private Ltd., at The Printers (Mysore ) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

## ರಾಷ್ಟ್ರೀಯ ಶಿಕ್ಷಣ ನೀತಿಗೆ ರಾಜ್ಯ ರೂಪಿಸುವ ನೀತಿಯು ಪರ್ಯಾಯ ಆಗಬಹುದೇ?

# ಕೇಂದ್ರದ ಹೇರಿಕೆ ಒಪ್ಪಲಾಗದು

● ಡಾ.ಎಂ.ಸಿ ಸುಧಾಕರ್

ಶಿಕ್ಷಣಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವು ವಿಶಾಲ ತಳಹದಿಯ ಮೇಲೆ ಒಂದು ವಿಸ್ತೃತ ಚೌಕಟ್ಟು ಅಥವಾ ಮಾರ್ಗಸೂಚಿಯನ್ನು ನೀಡಬಹುದೇ ಹೊರತು ಯಾವುದನ್ನೂ ಬಲವಂತವಾಗಿ ಹೇರಲು ಬರುವುದಿಲ್ಲ. ಸಂವಿಧಾನದ ವಿಧಿಯ ಅನುಸಾರವೇ ನೋಡುವುದಾದರೆ, ಕೇಂದ್ರ ಸರ್ಕಾರದ ಎನ್‌ಇಪಿ ಒಂದು ಮಾರ್ಗಸೂಚಿಯೇ ಹೊರತು ರಾಷ್ಟ್ರೀಯ ಶಿಕ್ಷಣ ನೀತಿ ಆಗುವುದಿಲ್ಲ.ಹೀಗಾಗಿ ಶಿಕ್ಷಣ ನೀತಿ ರೂಪಿಸುವುದು ರಾಜ್ಯ ಸರ್ಕಾರಗಳ ಅಧಿಕಾರ ಪರಿಮಿತಿಯೊಳಗೆ ಬರುವ ವಿಷಯ

The Future depends on what we do in the present — ಮಹಾತ್ಮ ಗಾಂಧಿ

**ಶಿಕ್ಷಣದ** ವಿಚಾರದಲ್ಲಿ ರಾಷ್ಟ್ರ ಪಿತ ಮಹಾತ್ಮ ಗಾಂಧಿಯವರ ಮೇಲಿನ ಮಾತುಗಳು ಬಹುಮುಖ್ಯ. ಏಕೆಂದರೆ, ಯಾವುದೇ ಕಲಿಕೆಯ ಆರಂಭ ತಳಪಾಯದಿಂದಲೇ ಹೊರತು ಮೇಲ್ಮಟ್ಟದಲ್ಲಿ ಆಗುವುದು ಸರಿಯಲ್ಲ. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣದ ಅಡಿಪಾಯ ಭದ್ರವಾದಷ್ಟು ಉನ್ನತ ಶಿಕ್ಷಣ ವ್ಯವಸ್ಥೆ ಗಟ್ಟಿಯಾಗಿರಲು ಸಾಧ್ಯ. ಒಂದು ಸರ್ಕಾರದ ಉನ್ನತ ಶಿಕ್ಷಣ ಸಚಿವ ಎಂಬುದರ ಜೊತೆಗೆ ಸಮಾಜದ ಒಬ್ಬ ಜವಾಬ್ದಾರಿಯುತ ಪ್ರಜೆಯಾಗಿಯೂ ಶಿಕ್ಷಣದ ಪ್ರಗತಿ ಮತ್ತು ಆಗುಹೋಗುಗಳನ್ನು ಪರಿಭಾವಿಸುವುದು ನನ್ನ ಕರ್ತವ್ಯ ಎಂದು ಭಾವಿಸಿದ್ದೇನೆ.

ಶಿಕ್ಷಣ ನೀತಿಯ ವಿಷಯದಲ್ಲಿ ಸರ್ಕಾರಗಳ ಜವಾಬ್ದಾರಿ ಅತ್ಯಂತ ಮುಖ್ಯವಾದದ್ದು. ಬೌದ್ಧಿಕ ಮತ್ತು ಮಾನಸಿಕ ವಿಕಸನದ ಮಾರ್ಗವಾಗಿರುವುದರಿಂದ ಶಿಕ್ಷಣಕ್ಕೆ ಸಂಬಂಧಿಸಿದಂತೆ ಸರ್ಕಾರದ ನಿರ್ಧಾರಗಳು ಅತ್ಯಂತ ಎಚ್ಚರಿಕೆಯಿಂದ ಕೂಡಿರಬೇಕು ಮತ್ತು ಶಿಕ್ಷಣ ವ್ಯವಸ್ಥೆಯನ್ನು ಭದ್ರ ಬುನಾದಿಯ ಮೇಲೆ ನಿರ್ಮಾಣ ಮಾಡುವಂತಹ ಮನಃಸ್ಥಿತಿಯದ್ದಾಗಿರಬೇಕು. ಹಾಗೆಯೇ ಶಿಕ್ಷಣ ಎಂಬುದು ನಿಂತ ನೀರಾಗದೇ ಚಲನಶಕ್ತಿಯುಳ್ಳ ಅಸ್ತ್ರವಾಗಿ ನಾಡು-ನುಡಿ, ದೇಶದ ಅಭಿವೃದ್ಧಿಯ ಪರಿಕಲ್ಪನೆಯಲ್ಲಿ ಸಂವಿಧಾನಬದ್ಧವಾಗಿ ರೂಪುಗೊಳ್ಳಬೇಕು. ನಮ್ಮ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ನೆಲೆಗಟ್ಟಿನಲ್ಲಿ ಶಿಕ್ಷಣ ವ್ಯವಸ್ಥೆಯನ್ನು ಕಟ್ಟಬೇಕು ಎಂಬುದು ನನ್ನ ಹಾಗೂ ನಮ್ಮ ಸರ್ಕಾರದ ಸ್ಪಷ್ಟ ನಿಲುವು.

ಭಾರತದ ಒಕ್ಕೂಟ ವ್ಯವಸ್ಥೆಯಲ್ಲಿ ರಾಷ್ಟ್ರ ನಿರ್ಮಾಣದ ಜೊತೆಗೆ ರಾಜ್ಯಗಳನ್ನು ಬಲಿಷ್ಠಗೊಳಿಸುವುದೂ ಒಂದು ಮಹತ್ವದ ವಿಚಾರ. ನಮ್ಮದು ಬಹು ಸಂಸ್ಕೃತಿಯ ನಾಡು, ವಿಭಿನ್ನ ಪ್ರಾದೇಶಿಕತೆಗಳನ್ನು ಹೊಂದಿರುವ, ಸಾಮಾಜಿಕವಾಗಿ, ಆರ್ಥಿಕವಾಗಿ, ಸಾಂಸ್ಕೃತಿಕವಾಗಿ ವೈವಿಧ್ಯ-ವೈಶಿಷ್ಟ್ಯಗಳನ್ನು ಹೊಂದಿರುವ ರಾಜ್ಯಗಳು ನಮ್ಮಲ್ಲಿವೆ. ಪ್ರತಿ ರಾಜ್ಯವು ಸಂವಿಧಾನಬದ್ಧವಾದ ಮೌಲ್ಯಗಳೊಂದಿಗೆ ಬಹುತ್ವ-ಸಮಗ್ರತೆ- ಐಕ್ಯತೆ ಹಾಗೂ ಸಾಮಾಜಿಕ ನ್ಯಾಯವನ್ನು ಎತ್ತಿ ಹಿಡಿಯುವ ದಿಸೆಯಲ್ಲಿ ನಮ್ಮ ಶಿಕ್ಷಣ ನೀತಿಗಳು ರೂಪುಗೊಳ್ಳಬೇಕಾಗಿದೆ.

ಶಿಕ್ಷಣ ಹಕ್ಕು ಕಾನೂನು ರೂಪಿಸಿದಾಗ 21ಎ ವಿಧಿಯನ್ನು ಅನುಷ್ಠಾನಗೊಳಿಸಲು ಪ್ರಕರಣ 7 ಅಡಿಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಜವಾಬ್ದಾರಿಯನ್ನು ಸ್ಪಷ್ಟವಾಗಿ ಹಂಚಿಕೆ ಮಾಡಲಾಗಿದೆ. ಆ ಪ್ರಕಾರ ಶಿಕ್ಷಣಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವು ವಿಶಾಲ ತಳಹದಿಯ ಮೇಲೆ ಒಂದು ವಿಸ್ತೃತ ಚೌಕಟ್ಟು ಅಥವಾ ಮಾರ್ಗಸೂಚಿಯನ್ನು ನೀಡಬಹುದೇ ಹೊರತು ಯಾವುದನ್ನೂ ಬಲವಂತವಾಗಿ ಹೇರಲು ಬರುವುದಿಲ್ಲ. ಸಂವಿಧಾನದ ವಿಧಿಯ ಅನುಸಾರವೇ ನೋಡುವುದಾದರೆ, ಕೇಂದ್ರ ಸರ್ಕಾರದ ಎನ್‌ಇಪಿ ಒಂದು ಮಾರ್ಗಸೂಚಿಯೇ ಹೊರತು ರಾಷ್ಟ್ರೀಯ ಶಿಕ್ಷಣ ನೀತಿ ಆಗುವುದಿಲ್ಲ. ಹೀಗಾಗಿ ಶಿಕ್ಷಣ ನೀತಿ ರೂಪಿಸುವುದು ರಾಜ್ಯ ಸರ್ಕಾರಗಳ ಅಧಿಕಾರ ಪರಿಮಿತಿಯೊಳಗೆ ಬರುವ ವಿಷಯ.

ಎನ್‌ಇಪಿಯನ್ನು ಜಾರಿಗೆ ತಂದ ಕ್ರಮವೇ ಸರಿಯಿಲ್ಲ. ಒಂದು ರಾಷ್ಟ್ರವನ್ನು ಕಟ್ಟುವುದೇ ಶಿಕ್ಷಣದ ಬುನಾದಿಯ ಮೇಲೆ. ಹೀಗಿರುವಾಗ ಒಂದು ಶಿಕ್ಷಣ ನೀತಿಯನ್ನು ತರಾತುರಿಯಲ್ಲಿ ಜಾರಿಗೆ ತಂದರೆ ಏನೆಂದು ಅರ್ಥೈಸಿಕೊಳ್ಳಬೇಕು? ಕೇಂದ್ರದ ಬಿಜೆಪಿ ಸರ್ಕಾರ ತನ್ನದೇ ಆಡಳಿತವಿರುವ ಇತರ ರಾಜ್ಯಗಳಲ್ಲಿ ಇನ್ನೂ ಜಾರಿಗೆ ತರದ ಶಿಕ್ಷಣ ನೀತಿಯನ್ನು ಕರ್ನಾಟಕದಲ್ಲಿ ಜಾರಿ ಮಾಡುವ ತುರ್ತು ಏನಿತ್ತು? ಅದೂ ಅಲ್ಲದೇ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣದಿಂದ ಆರಂಭಗೊಳ್ಳಬೇಕಾದ ಶೈಕ್ಷಣಿಕ ಬದಲಾವಣೆ ಕಾರ್ಯವನ್ನು ರಾಜ್ಯದಲ್ಲಿ ಉನ್ನತ ಶಿಕ್ಷಣದಲ್ಲಿ ಜಾರಿಗೆ ತಂದಿದ್ದರ ಔಚಿತ್ಯ ಏನು? ಪ್ರಾಥಮಿಕ ಶಿಕ್ಷಣದಲ್ಲಿ ಪಠ್ಯಗಳನ್ನು ಬದಲಾವಣೆ ಮಾಡುವ ಮೂಲಕ ಮಕ್ಕಳಲ್ಲೇ ಕೋಮುವಾದಿ ಮನಃಸ್ಥಿತಿ ಬೆಳವಣಿಗೆಗೆ ನಾಂದಿ ಹಾಡಿದ್ದಾರೆ ಎಂದ ಮೇಲೆ ಇವರ ಎನ್‌ಇಪಿಯ ಉದ್ದೇಶವೇನು ಎಂಬುದನ್ನು ಬಿಡಿಸಿ ಹೇಳಬೇಕಿಲ್ಲ.

ಇಷ್ಟು ದೊಡ್ಡದಾದ ಪ್ರಜಾಪ್ರಭುತ್ವದ ರಾಷ್ಟ್ರದಲ್ಲಿ ಒಂದು ಶಿಕ್ಷಣ ನೀತಿ ತರುವಾಗ ಆಗಬೇಕಾದ ಚರ್ಚೆಗಳು, ಬದಲಾವಣೆಯ ಸಾಧಕ ಬಾಧಕಗಳು, ಶಿಕ್ಷಣ ವ್ಯವಸ್ಥೆಯ ಮಿತಿಗಳು, ಬೋಧಕ ಸಿಬ್ಬಂದಿಯ ತಯಾರಿ ಬಹುಮುಖ್ಯವಾಗುತ್ತವೆ. ಯಾವುದೇ ಸಿದ್ಧತೆಗಳಿಲ್ಲದೆ ಜಾರಿಗೆ ತಂದಾಗ ವಿಕಸನದ ಹಾದಿಯಲ್ಲಿರುವ ವಿದ್ಯಾರ್ಥಿಗಳ ಮೇಲೆ ಶಿಕ್ಷಣದ ಬಲಪ್ರಯೋಗ ಮಾಡಿದಂತಾಗುತ್ತದೆ ಎಂಬ ಅರಿವು ಕೇಂದ್ರ ಸರ್ಕಾರ ಹಾಗೂ ರಾಜ್ಯದಲ್ಲಿದ್ದ ಬಿಜೆಪಿ ಸರ್ಕಾರಕ್ಕೆ ಇರಬೇಕಿತ್ತು. ರಾಜಕೀಯ ಓಲೈಕೆ ಮತ್ತು ಲಾಭಕ್ಕಾಗಿ ಶಿಕ್ಷಣ ವ್ಯವಸ್ಥೆಯನ್ನು ಬಳಸಿಕೊಳ್ಳುವುದೇ ಎನ್‌ಇಪಿ ಜಾರಿಯ ಮೂಲ ಉದ್ದೇಶ. ಹೀಗೆ ಒಂದು ಪೂರ್ವಭಾವಿ ಸಿದ್ಧತೆಯೇ ಇಲ್ಲದೇ ತಯಾರುಗೊಂಡ ನೀತಿಯನ್ನು ನಮ್ಮ ಒಕ್ಕೂಟ ವ್ಯವಸ್ಥೆಯಲ್ಲಿ ಹೇರುವಿಕೆಯ ಮೂಲಕ ಒಪ್ಪಿಸಲು ಸಾಧ್ಯವಿಲ್ಲ. ಹೀಗಾಗಿ ನಮ್ಮ ಸರ್ಕಾರ ಕೇಂದ್ರದ ಈ ಎನ್‌ಇಪಿಯನ್ನು ಬಲವಾಗಿ ವಿರೋಧಿಸುತ್ತದೆ.

ಎನ್‌ಇಪಿಯನ್ನು ರಾಜ್ಯದ ಉನ್ನತ ಶಿಕ್ಷಣದಲ್ಲಿ ದಿಢೀರ್ ಅನುಷ್ಠಾನಕ್ಕೆ ತರುವ ಮೂಲಕ ಈ ಹಿಂದಿನ ಸರ್ಕಾರ ವಿದ್ಯಾರ್ಥಿಗಳ ಮೇಲೆ ಒತ್ತಡ ಹೇರಿರುವ ಜತೆಗೆ, ಕಲಿಕೆಯಲ್ಲಿ ಗೊಂದಲ ಸೃಷ್ಟಿಸಿದೆ. ಸರ್ಕಾರಿ ಪದವಿ ಕಾಲೇಜುಗಳಲ್ಲಿ ಮೂಲಭೂತ ಸೌಕರ್ಯ ಹಾಗೂ ಸಿಬ್ಬಂದಿ ಕೊರತೆ ಇರುವಾಗ ಅವುಗಳ ಪರಿಹಾರಕ್ಕೆ ಆದ್ಯತೆ ನೀಡಬೇಕಿತ್ತು. ಆ ಪ್ರಯತ್ನವೇ ನಡೆದಿಲ್ಲ.

3 ವರ್ಷದ ಪದವಿಯನ್ನು 4 ವರ್ಷಗಳಿಗೆ ವಿಸ್ತರಣೆ, ಬಹು ಆಗಮನ ಮತ್ತು ನಿರ್ಗಮನ ಪದ್ಧತಿ ಜಾರಿಯಿಂದ ಕಾಲೇಜಿನಿಂದ ನಿರ್ಗಮಿಸಿದ ವಿದ್ಯಾರ್ಥಿಗಳಿಗೆ ಒಂದು ಪ್ರಮಾಣ ಪತ್ರ ಸಿಗುವುದು ಬಿಟ್ಟರೆ, ಉದ್ಯೋಗಕ್ಕೆ ದಾರಿಯೇನು ಎಂಬುದೇ ಸ್ಪಷ್ಟವಿಲ್ಲ. ಪದವಿಯಲ್ಲಿ 3 ಐಚ್ಛಿಕ ವಿಷಯಗಳನ್ನು ಓದುತ್ತಿದ್ದ ವಿದ್ಯಾರ್ಥಿಗೆ ಈಗ 2 ವಿಷಯಗಳನ್ನು ಮಾತ್ರ ಓದುವ ಅವಕಾಶ, ಉಳಿದಂತೆ ಇತರೆ ವಿಷಯಗಳ ಮುಕ್ತ ಆಯ್ಕೆ ವಿದ್ಯಾರ್ಥಿಗಳದ್ದಾಗಿರುತ್ತದೆ. ಆದರೆ, ಆಯ್ಕೆ ಮಾಡಿಕೊಂಡ ವಿಷಯವನ್ನು ಪಾಠ ಮಾಡಲು ಉಪನ್ಯಾಸಕರೇ ಇಲ್ಲ. ಆನ್‌ಲೈನ್ ಶಿಕ್ಷಣಕ್ಕೆ ಹೆಚ್ಚಿನ ಪ್ರಾಧಾನ್ಯ ನಮ್ಮಲ್ಲಿ ಕಷ್ಟಸಾಧ್ಯ. ಎನ್‌ಇಪಿ-2020ರಲ್ಲಿ ಉತ್ತಮ ಅಂಶಗಳಿದ್ದಲ್ಲಿ ಅದನ್ನು ಸ್ವೀಕರಿಸುವ ಮುಕ್ತ ಮನೋಭಾವ ನಮ್ಮ ಸರ್ಕಾರಕ್ಕಿದೆ. ವಿಪರ್ಯಾಸ ಎಂದರೆ ಎನ್‌ಇಪಿ ರೂಪಿಸಿದ ಟಿ.ಆರ್. ಎಸ್ ಸುಬ್ರಮಣಿಯನ್ ಹಾಗೂ ಡಾ.ಕೆ ಕಸ್ತೂರಿರಂಗನ್ ಸಮಿತಿಗಳಲ್ಲಿ ಶಿಕ್ಷಣ ತಜ್ಞರೇ ಇರಲಿಲ್ಲ.

ಯಾವುದೇ ಶಿಕ್ಷಣ ನೀತಿಯನ್ನು ಜಾರಿಗೆ ತರುವಾಗ ಕಾಲೇಜುಗಳ ಉಪನ್ಯಾಸಕರಿಗೆ ತರಬೇತಿ ಮತ್ತು ಅವರ ಅಭಿಪ್ರಾಯ ಸಂಗ್ರಹ ಅಮೂಲ್ಯವಾದದ್ದು. ಆದರೆ ಆ ಪ್ರಯತ್ನಗಳೇ ನಡೆಯದೆ ಎನ್‌ಇಪಿ ತಂದ ಪರಿಣಾಮ ಪದವಿ ವಿದ್ಯಾರ್ಥಿಗಳಂತೆ ಕಾಲೇಜು ಉಪನ್ಯಾಸಕರಲ್ಲೂ ಗೊಂದಲ ಉಂಟಾಗಿದೆ. ಈಗಾಗಲೇ 3ನೇ ವರ್ಷಕ್ಕೆ ಕಾಲಿಟ್ಟು ಎನ್‌ಇಪಿ ಅಡಿಯಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ಧಕ್ಕೆ ಆಗದಂತೆ ಸೂಕ್ತ ಮಾರ್ಪಾಡು ಮಾಡುತ್ತಿದ್ದೇವೆ.

ನಮ್ಮ ಸರ್ಕಾರ ಯಾವುದೇ ಪೂರ್ವಗ್ರಹ ವಿಲ್ಲದೆ, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಎಲ್ಲೂ ಅನನುಕೂಲವಾಗದಂತೆ ಜವಾಬ್ದಾರಿ ಹಾಗೂ ಬದ್ಧತೆಯಿಂದ ಶಿಕ್ಷಣ ನೀತಿ ರೂಪಿಸಲು ಸಜ್ಜಾಗತೊಡಗಿದೆ. ಶಿಕ್ಷಣ ನೀತಿಯ ಸಾಧಕ ಬಾಧಕಗಳನ್ನು ಅಧ್ಯಯನ, ಶಿಕ್ಷಣ ತಜ್ಞರೊಂದಿಗೆ ಮುಕ್ತ ಸಮಾಲೋಚನೆ, ಚರ್ಚೆ ಮೂಲಕ ನೀತಿ ರೂಪಿಸಲು ಮುಂದಾಗಿದ್ದೇವೆ. ನಮ್ಮ ಹೊಸ ಶಿಕ್ಷಣ ನೀತಿ ಭಾರತ ಸಂವಿಧಾನಕ್ಕೆ ಬದ್ಧವಾಗಿ ನಮ್ಮ ವಿದ್ಯಾರ್ಥಿಗಳ ಭವಿಷ್ಯದ ದೃಷ್ಟಿಯಿಂದ ಉದ್ಯೋಗ ಆಧಾರಿತವಾಗಿ ಇರುತ್ತದೆ. ಈಗ ನಾವು ಉದ್ಯೋಗ ನೀಡಬೇಕು, ಇಲ್ಲವೇ ಸ್ವಉದ್ಯೋಗ ಆರಂಭಿಸುವಂತಹ ಜ್ಞಾನವನ್ನು ತುಂಬಬಲ್ಲಂತಹ ಶಿಕ್ಷಣ ವ್ಯವಸ್ಥೆಗೆ ಹೆಜ್ಜೆ ಇಟ್ಟಿದ್ದೇವೆ.

ವಿದ್ಯಾವಂತ ವಿದ್ಯಾರ್ಥಿಗಳೇ ಈ ನಾಡಿನ ಆಸ್ತಿ ಎಂಬುದು ನಮ್ಮ ಸರ್ಕಾರದ ನಂಬುಗೆ. ರಾಜ್ಯ ಶಿಕ್ಷಣ ನೀತಿ ನಮ್ಮ ಶಿಕ್ಷಣವನ್ನು ಹೆಚ್ಚು ಬಲಿಷ್ಠವನ್ನಾಗಿ ಮಾಡುತ್ತದೆ ಎಂಬುದಕ್ಕೆ ಸ್ವಾತಂತ್ರ್ಯ ಬಂದಾಗಿನಿಂದ ನಾವು ಅಳವಡಿಸಿಕೊಂಡು ಬಂದಿರುವ ನೀತಿಯೇ ಸಾಕ್ಷಿ. ಕಾಲಕಾಲಕ್ಕೆ ಪಠ್ಯಕ್ರಮಗಳನ್ನು ಬದಲು ಮಾಡುತ್ತಲೇ ಶಿಕ್ಷಣದ ಜ್ಞಾನವೂ ಹರಿದಿದೆ. ಅದನ್ನು ವ್ಯವಸ್ಥಿತವಾಗಿ, ಅರ್ಥಪೂರ್ಣವಾಗಿ, ಸಂವಿಧಾನಬದ್ಧವಾಗಿ ಮುನ್ನಡೆಸಿಕೊಂಡು ಹೋಗುವುದು ನಮ್ಮ ಸರ್ಕಾರದ ಜವಾಬ್ದಾರಿ.

ಲೇಖಕ: ಉನ್ನತ ಶಿಕ್ಷಣ ಸಚಿವ, ಕರ್ನಾಟಕ ಸರ್ಕಾರ

ಪ್ರಜಾವಾಣಿ ಚರ್ಚೆ




# ಕಾಂಗ್ರೆಸ್ ಹಿತದ ವಿಕೃತಿ

● ಡಾ. ಸಿ.ಎನ್. ಅಶ್ವತ್ಥನಾರಾಯಣ



ಎನ್‌ಇಪಿಯಲ್ಲಿರುವ ಅಂಶಗಳನ್ನು ಈಗಾಗಲೇ ಖಾಸಗಿ/ಡೀಮ್ಡ್/ಅಟಾನಮಸ್ ಶಿಕ್ಷಣ ಸಂಸ್ಥೆಗಳು ಶೇಕಡ 80ರಷ್ಟು ಮೊದಲಿನಿಂದಲೂ ಅಳವಡಿಸಿಕೊಂಡಿವೆ. ಹೀಗಾಗಿಯೇ ಅಲ್ಲಿ ಓದುವ ಮಕ್ಕಳು ಉಜ್ವಲ ಅವಕಾಶಗಳನ್ನು ಬಾಚಿಕೊಳ್ಳುತ್ತಾರೆ; ವಿದೇಶಗಳಿಗೆ ಹೋಗುತ್ತಾರೆ; ಉದ್ಯಮಗಳನ್ನು ಕಟ್ಟುತ್ತಾರೆ; ಒಂದು ತಲೆಮಾರನ್ನೇ ಪ್ರಭಾವಿಸುತ್ತಾರೆ

ಎನ್‌ಇಪಿ ನಮ್ಮ ಯುವಜನರನ್ನು 'ಫ್ಯೂಚರ್-ರೆಡಿ'ಯನ್ನಾಗಿ ರೂಪಿಸುತ್ತದೆ. ಇದರಲ್ಲಿ ಪಠ್ಯದ ಹೊರೆಯನ್ನು ಇಳಿಸಲಾಗಿದ್ದು, ಮೂಲಭೂತ ಕಲಿಕೆಗೆ ಒತ್ತು ಕೊಡಲಾಗಿದೆ. ನಮ್ಮಲ್ಲಿ ಇದುವರೆಗೂ ಇದ್ದ ಅಂಕ ಆಧಾರಿತ ಕಲಿಕೆಯನ್ನು ಕೊನೆಗೊಳಿಸಿ, ನಿಜವಾದ ಜ್ಞಾನಾರ್ಜನೆಗೆ ಗಮನ ಹರಿಸಲು ಎನ್‌ಇಪಿಯಿಂದ ಸಾಧ್ಯವಾಗಲಿದೆ

**ನರೇಂದ್ರ ಮೋದಿ**, ಪ್ರಧಾನಮಂತ್ರಿ

**ರಾಜ್ಯದಲ್ಲಿ** ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದು ಎರಡು ತಿಂಗಳಾದವು. ಆದರೆ ಇಷ್ಟರಲ್ಲೇ ಅದರ 'ಗ್ಯಾರಂಟಿ' ಹಿಕ್ಮತ್ತುಗಳು ಮತ್ತು ಓಲೈಕೆ ರಾಜಕಾರಣದ ಅವಿವೇಕ ಎರಡೂ ಢಾಳಾಗಿ ಅನುಭವಕ್ಕೆ ಬಂದಿವೆ. ಇದು ಹೀಗೆಯೇ ಮುಂದುವರಿದರೆ ಕರ್ನಾಟಕವು ಮುಂದಿನ ಐದು ವರ್ಷಗಳಲ್ಲಿ ಒಂದು ಶತಮಾನದಷ್ಟು ಹಿಂದಕ್ಕೆ ಹೋಗುವುದರಲ್ಲಿ ಅನುಮಾನವಿಲ್ಲ. ಯುವಜನರ ಭವಿಷ್ಯಕ್ಕೆ ಒಂದು ಖಚಿತ ಭರವಸೆಯನ್ನು ಮೂಡಿಸುವಂತಿರುವ ನೂತನ ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಜಾಗದಲ್ಲಿ ಈಗಿನ ಕಾಂಗ್ರೆಸ್ ಸರ್ಕಾರವು ರಾಜ್ಯ ಶಿಕ್ಷಣ ನೀತಿಯನ್ನು (ಎಸ್‌ಇಪಿ) ತರಲು ಹೊರಟಿರುವುದಕ್ಕಿಂತ ಇನ್ನೊಂದು ನಿದರ್ಶನ ಇದಕ್ಕೆ ಬೇಕಾಗಿಲ್ಲ.

ಭಾರತವು 1947ರಲ್ಲಿ ಬ್ರಿಟಿಷರಿಂದ ಸ್ವತಂತ್ರಗೊಂಡಿತಷ್ಟೆ. ಅದಕ್ಕೂ ಮೊದಲು ನಮ್ಮ ದೇಶವು ಒಂದು ಸಾವಿರ ವರ್ಷಗಳಷ್ಟು ದೀರ್ಘಕಾಲ ವಸಾಹತುಶಾಹಿ ಆಡಳಿತದ ಬೇರೆಬೇರೆ ರೂಪಗಳಲ್ಲಿ ಪರಕೀಯರ ಆಳ್ವಿಕೆಯಡಿ ನಲುಗಿತ್ತು. ದೇಶವು ಈ ರೀತಿಯ ಪರಾಧೀನತೆಯಿಂದ ಬಿಡುಗಡೆ ಹೊಂದಿದ ಮೇಲೆ ಕೂಡಲೇ ಸಮಗ್ರ ಶಿಕ್ಷಣ ನೀತಿಯನ್ನು ರೂಪಿಸಬೇಕಿತ್ತು. ಆದರೆ, ಜವಾಹರಲಾಲ್ ನೆಹರೂ ಮಂತ್ರಿಮಂಡಲದ ಶಿಕ್ಷಣ ಸಚಿವರನ್ನು ಆಯ್ಕೆ ಮಾಡಿಕೊಳ್ಳುವಲ್ಲೇ ತಮ್ಮ 'ತುಷ್ಟೀಕರಣದ ಹಿಡನ್ ಅಜೆಂಡಾ'ವನ್ನು ಹೇರಿದರು. ವಾಸ್ತವವಾಗಿ, ಮಹಾತ್ಮ ಗಾಂಧಿಯವರ ಒತ್ತಾಸೆಯ ಮೇರೆಗೆ ನೆಹರೂ ಸಂಪುಟದ ಭಾಗವಾಗಿದ್ದ ಹೆಸರಾಂತ ಶಿಕ್ಷಣವೇತ್ತ ಡಾ.ಶಾಮಪ್ರಸಾದ್ ಮುಖರ್ಜಿಯವರಿಗೆ ಶಿಕ್ಷಣ ಖಾತೆಯನ್ನು ಕೊಡಬೇಕಾಗಿತ್ತು. ಏಕೆಂದರೆ, ಅವರು ತಮ್ಮ 33ನೇ ವಯಸ್ಸಿಗೇ ಪ್ರತಿಷ್ಠಿತ ಕಲ್ಕತ್ತಾ ವಿಶ್ವವಿದ್ಯಾಲಯದ ಕುಲಪತಿಯಾಗಿ, ಶೈಕ್ಷಣಿಕ ಕ್ರಾಂತಿಯನ್ನೇ ಉಂಟುಮಾಡಿದ್ದರು. ಆದರೆ, 'ಜಾಣ ನೆಹರೂ' ಮೌಲಾನಾ ಅಬುಲ್ ಕಲಾಂ ಅವರನ್ನು ಆ ಜಾಗದಲ್ಲಿ ಕೂರಿಸಿದರು.

ಇದಾದ ಮೇಲೆ, ಕಾಂಗ್ರೆಸ್ 60 ವರ್ಷ ಆಳ್ವಿಕೆ ನಡೆಸಿತು. ಈ ಅವಧಿಯ ಬಹುಪಾಲು ಅದು ಇಡೀ ಶಿಕ್ಷಣ ಕ್ಷೇತ್ರವನ್ನೇ ತನ್ನ 'ತುಷ್ಟೀಕರಣದ ರಾಜಕಾರಣ'ಕ್ಕೆ ಆಪೋಶನ ತೆಗೆದುಕೊಂಡಿತು. ಜೊತೆಗೆ ಇಂದಿರಾ ಗಾಂಧಿ ತಮ್ಮ ರಾಜಕೀಯ ಹಿತಾಸಕ್ತಿಗಳು ಮುಕ್ಕಾಗದಂತೆ ನೋಡಿಕೊಳ್ಳುವ ಕುತಂತ್ರದ ಭಾಗವಾಗಿ ಶಿಕ್ಷಣ ರಂಗದ ಆಯಕಟ್ಟಿನ ಜಾಗಗಳಲ್ಲೆಲ್ಲ ಎಡಪಂಥೀಯರನ್ನು ತುಂಬಿದರು. ಈ ಕುಯುಕ್ತಿಯಲ್ಲಿ ದೇಶದ ಶಿಕ್ಷಣ ರಂಗವು ಬೋರಲು ಬಿದ್ದಿತು. ಇಷ್ಟೆಲ್ಲ ಆದಮೇಲೆ ಬಂದ ರಾಜೀವ್ ಗಾಂಧಿಯವರೇನೋ ಒಂದು ಹೊಸ ಶಿಕ್ಷಣ ನೀತಿಯನ್ನು ತಂದರು. ಆದರೆ ಅವರು ತಂದಿದ್ದು ಕೂಡ ಅಂಕಗಳಿಕೆಗೆ ಒತ್ತು ಕೊಡುತ್ತಿದ್ದ ಯಾಂತ್ರಿಕವಾದ ಶಿಕ್ಷಣ ನೀತಿಯನ್ನೇ!

ನಾವಿಂದು ಸ್ಪರ್ಧಾತ್ಮಕ ಜಗತ್ತಿನಲ್ಲಿದ್ದೇವೆ. ಹಳ್ಳಿಯಲ್ಲಿ ಓದುತ್ತಿರುವ ಒಬ್ಬ ಹುಡುಗ ಕೂಡ ಇಂದು ಇಡೀ ಜಗತ್ತಿನ ಜತೆ ಸ್ಪರ್ಧಿಸುತ್ತಲೇ ಇರುತ್ತಾನೆ. ಈಗ ನಮ್ಮ ಪಕ್ಕದ ಚೀನಾ ನಮಗಿಂತ ಎಂಟು ಪಟ್ಟು ವೇಗದಲ್ಲಿ ಬೆಳವಣಿಗೆ ಸಾಧಿಸುತ್ತಿದೆ. ಜಪಾನ್, ದಕ್ಷಿಣ ಕೊರಿಯಾ, ಜರ್ಮನಿ, ಅಮೆರಿಕ, ಬ್ರಿಟನ್ ಜಗತ್ತಿನ ಮೇಲೆ ಹಿಡಿತ ಸಾಧಿಸಿವೆ. ಇವೆಲ್ಲದರ ಮಧ್ಯೆ ನಿರ್ದಿಷ್ಟವಾಗಿ ಕರ್ನಾಟಕವಾಗಲಿ, ಒಟ್ಟಾರೆಯಾಗಿ ಭಾರತವಾಗಲಿ ಹಿಂದುಳಿದಿದ್ದೇಕೆ? ರಚನಾತ್ಮಕವಾದ, ಸಮಕಾಲೀನ ಅಗತ್ಯಗಳನ್ನು ಮನಗಾಣದ, ಜಾಗತಿಕ ಸ್ಪರ್ಧೆಯನ್ನು ಕಡೆಗಣಿಸಿದ ಮತ್ತು ಭಾರತದ ಯುವಜನಾಂಗದ ಭವಿಷ್ಯದ ಬಗ್ಗೆ ಯಾವ ಮಹತ್ವಾಕಾಂಕ್ಷೆಯೂ ಇಲ್ಲದಿದ್ದಂತಹ ನಕಾರಾತ್ಮಕ ವಾತಾವರಣವೇ ಇದಕ್ಕೆ ಕಾರಣ.

ನಮ್ಮ ಶಿಕ್ಷಣ ವ್ಯವಸ್ಥೆಯು ಹಿಂದೆಲ್ಲ ಸಮಗ್ರವೂ ಪರಿಪೂರ್ಣವೂ ಆಗಿತ್ತೆನ್ನುವುದು ಗೊತ್ತಾಗುತ್ತದೆ. ಹೆಸರಾಂತ ಗಾಂಧೀವಾದಿ ಚಿಂತಕ ಧರ್ಮಪಾಲ್ ಅವರ 'ದಿ ಬ್ಯೂಟಿಫುಲ್ ಟ್ರೀ' ಮತ್ತು ಸಹನಾ ಸಿಂಗ್ ಅವರು ಇತ್ತೀಚೆಗೆ ಬರೆದಿರುವ 'ರೀವಿಸಿಟಿಂಗ್ ದಿ ಇಂಡಿಯನ್ ಎಜುಕೇಷನ್ ಸಿಸ್ಟಂ' ಮುಂತಾದ ಕೃತಿಗಳನ್ನು ನೋಡಿದರೆ ಇದು ಗೊತ್ತಾಗುತ್ತದೆ. ಅಂದಂತೆ, ನಮ್ಮ ಆ ಕಾಲದ ಶಿಕ್ಷಣ ಪದ್ಧತಿಯನ್ನು 'ಬ್ಯೂಟಿಫುಲ್ ಟ್ರೀ' ಎಂದು ಬಣ್ಣಿಸಿದ್ದು ಬೇರಾರೂ ಅಲ್ಲ, ಸ್ವತಃ ಮಹಾತ್ಮ ಗಾಂಧಿ! ಆದರೆ, ಥಾಮಸ್ ಬ್ಯಾಬಿಂಗ್ಟನ್ ಮೆಕಾಲೆ ಕೇವಲ ಕಾರಕೂನರನ್ನು ತಯಾರಿಸುವ ಉದ್ದೇಶದಿಂದ ನಮ್ಮ ದೇಶದಲ್ಲಿ ಇಂಗ್ಲಿಷ್ ಮಾಧ್ಯಮದ ಶಿಕ್ಷಣ ಪದ್ಧತಿಯನ್ನು ಹೇರಿದ ಮೇಲೆ, ಭಾರತೀಯ ಶೈಕ್ಷಣಿಕ ವ್ಯವಸ್ಥೆ ನೇಪಥ್ಯಕ್ಕೆ ಸರಿಯಿತು. ದುರಂತವೆಂದರೆ, 21ನೇ ಶತಮಾನದಲ್ಲೂ ಇದೇ ಪದ್ಧತಿ ಮುಂದುವರಿದುಕೊಂಡು ಬಂದಿದ್ದು. ಇದರಿಂದಾಗಿ ಕರ್ನಾಟಕ/ಭಾರತಗಳಿಗಾದ ಲುಕ್ಸಾನು ಲೆಕ್ಕಕ್ಕೆ ಸಿಗುವಂಥದ್ದಲ್ಲ. ಇಂತಹ ಕುಟಿಲ ಶಿಕ್ಷಣ ನೀತಿಯಿಂದ ಸ್ವತಂತ್ರ ಭಾರತದ ಇದುವರೆಗಿನ ತಲೆಮಾರುಗಳ ಪ್ರತಿಭೆಯೆಲ್ಲವೂ ಮುರುಟಿ ಹೋಯಿತಷ್ಟೆ.

ಇವೆಲ್ಲವನ್ನೂ ಮನಗಂಡ ಜನಪ್ರಿಯ ಪ್ರಧಾನಿ ನರೇಂದ್ರ ಮೋದಿಯವರು 34 ವರ್ಷಗಳ ನಂತರ ಮೂರನೆಯ ರಾಷ್ಟ್ರೀಯ ಶಿಕ್ಷಣ ನೀತಿಯನ್ನು 2020ರಲ್ಲಿ ಘೋಷಿಸಿದರು. ಇದು ನಿಜಕ್ಕೂ ಚಾರಿತ್ರಿಕ ಸಾಧನೆ. ಸಮಾಜದ ಹಿತಕ್ಕೆ ಒದಗಿ ಬರುವಂತೆ ವಿದ್ಯಾರ್ಥಿಗಳ ಸರ್ವತೋಮುಖ ವ್ಯಕ್ತಿತ್ವದ ವಿಕಾಸ ಮತ್ತು ಅದೇ ಕಾಲದಲ್ಲಿ ಜಾಗತಿಕ ಮಟ್ಟದ ಅವಕಾಶಗಳನ್ನು ತಮ್ಮದಾಗಿಸಿಕೊಳ್ಳುವಂತಹ ಕಲಿಕೆ ಎನ್‌ಇಪಿಯ ಆತ್ಮವಾಗಿವೆ. ಇದಕ್ಕಾಗಿ ಶಿಕ್ಷಣ ವ್ಯವಸ್ಥೆಯಲ್ಲಿ ಪಠ್ಯಕ್ರಮವನ್ನು ಸಮಕಾಲೀನ ಅಗತ್ಯಗಳಿಗೆ ತಕ್ಕಂತೆ ಪರಿಷ್ಕರಿಸಿ, ಇದರೊಂದಿಗೆ ಉದ್ಯಮರಂಗವನ್ನೂ ಬೆಸೆಯಲಾಗಿತ್ತು. ಇದರಿಂದಾಗಿ ನಮ್ಮಲ್ಲಿ ಉದ್ಯೋಗಕ್ಕೆ ಅರ್ಹವಾದ ಮಾನವ ಸಂಪನ್ಮೂಲದ ಸೃಷ್ಟಿಯಾಗುತ್ತದೆ.

ಶ್ರೀಮಂತರ ಮಕ್ಕಳು ತಮಗೆ ಬೇಕೆನಿಸಿದ ವಿದೇಶಿ ವಿಶ್ವವಿದ್ಯಾಲಯಗಳಿಗೆ ಹೋಗಬಲ್ಲರು. ನಮ್ಮಲ್ಲೂ ಉಳ್ಳವರು ಖಾಸಗಿ/ಸ್ವಾಯತ್ತ ವಿ.ವಿ.ಗಳ ಕಡೆಗೆ ಹೋಗುತ್ತಾರೆ. ಏಕೆಂದರೆ, ಅಲ್ಲಿಯ ದುಬಾರಿ ಖರ್ಚುವೆಚ್ಚಗಳನ್ನು ಭರಿಸುವಂತಹ ಆರ್ಥಿಕ ಶಕ್ತಿ ಅವರಲ್ಲಿದೆ. ಆದರೆ, ನಮ್ಮ ಸರಕಾರಿ ಕಾಲೇಜು/ವಿಶ್ವವಿದ್ಯಾಲಯಗಳಿಗೆ ಬರುವವರೆಲ್ಲ ಮಧ್ಯಮ, ಕೆಳಮಧ್ಯಮ ಮತ್ತು ಬಡವರ ಮಕ್ಕಳಲ್ಲವೇ? ಇಂತಹ ಮಕ್ಕಳಿಗೂ ಕೈಗೆಟಕುವ ದರದಲ್ಲಿ ವಿದೇಶಿ ಗುಣಮಟ್ಟದ ಶಿಕ್ಷಣವು ಆರಂಭದಿಂದಲೇ ಸಿಗಬೇಕೆನ್ನುವುದು ನೂತನ ರಾಷ್ಟ್ರೀಯ ಶಿಕ್ಷಣ ನೀತಿಯ ಹಿಂದಿರುವ ಸಂಕಲ್ಪವಾಗಿದೆ. ನೂತನ ರಾಷ್ಟ್ರೀಯ ಶಿಕ್ಷಣ ನೀತಿಯಂತಹ ಉಪಕ್ರಮದ ಗೈರುಹಾಜರಿಯಿಂದಾಗಿಯೇ ಕರ್ನಾಟಕದ ವಿದ್ಯಾರ್ಥಿಗಳು ಹಿಂದೆಲ್ಲ ಜೆಇಇ, ನೀಟ್ ತರಹದ ರಾಷ್ಟ್ರೀಯ ಮಟ್ಟದ ಪರೀಕ್ಷೆಗಳಲ್ಲಿ ಹೆಚ್ಚಾಗಿ ಉತ್ತೀರ್ಣರಾಗುತ್ತಿರಲಿಲ್ಲ ಎನ್ನುವುದನ್ನು ನಾವು ಮರೆಯಬಾರದು.

ನಿಜ ಹೇಳಬೇಕೆಂದರೆ, ಎನ್‌ಇಪಿ ಐದು ವರ್ಷಗಳ ಚಿಂತನೆ, ವಿಚಾರ ವಿನಿಮಯ, ಸಲಹೆ ಸ್ವೀಕಾರ, ಚರ್ಚೆ ಇತ್ಯಾದಿಗಳ ಫಲ. ಇದಕ್ಕಾಗಿ ಕೇಂದ್ರದ ಬಿಜೆಪಿ ಸರಕಾರವು 20 ಲಕ್ಷ ಸಲಹೆಗಳನ್ನು ಮುಕ್ತವಾಗಿ ಸ್ವೀಕರಿಸಿತ್ತು; ವಿದೇಶಗಳಲ್ಲಿರುವ ಶಿಕ್ಷಣ ಪದ್ಧತಿಗಳನ್ನು ಆಳವಾಗಿ ಅಭ್ಯಸಿಸಿತ್ತು; ನಮ್ಮಲ್ಲಿದ್ದ ಶಿಕ್ಷಣ ಪದ್ಧತಿಯ ದೋಷಗಳನ್ನು ನಿವಾರಿಸಬೇಕೆನ್ನುವುದಕ್ಕೆ ಒತ್ತು ಕೊಟ್ಟಿತ್ತು. ಅಂದಂತೆ, ಎನ್‌ಇಪಿಯಲ್ಲಿರುವ ಅಂಶಗಳನ್ನು ಈಗಾಗಲೇ ಖಾಸಗಿ/ಡೀಮ್ಡ್/ಅಟಾನಮಸ್ ಶಿಕ್ಷಣ ಸಂಸ್ಥೆಗಳು ಶೇಕಡ 80ರಷ್ಟು ಮೊದಲಿನಿಂದಲೂ ಅಳವಡಿಸಿಕೊಂಡಿವೆ. ಹೀಗಾಗಿಯೇ ಅಲ್ಲಿ ಓದುವ ಮಕ್ಕಳು ಉಜ್ವಲ ಅವಕಾಶಗಳನ್ನು ಬಾಚಿಕೊಳ್ಳುತ್ತಾರೆ; ವಿದೇಶಗಳಿಗೆ ಹೋಗುತ್ತಾರೆ; ಉದ್ಯಮಗಳನ್ನು ಕಟ್ಟುತ್ತಾರೆ; ಒಂದು ತಲೆಮಾರನ್ನೇ ಪ್ರಭಾವಿಸುತ್ತಾರೆ.

ಈಗ ಕಾಂಗ್ರೆಸ್ ಕೃಪಾಪೋಷಿತ 'ರಾಜ್ಯ ಶಿಕ್ಷಣ ನೀತಿ'ಯು ಮಧ್ಯಮ ಮತ್ತು ಬಡವರ ಮಕ್ಕಳ ಭವಿಷ್ಯವನ್ನು ಅಂಧಕಾರಕ್ಕೆ ತಳ್ಳಲು ಹೊರಟಿದೆ. ಒಟ್ಟಿನಲ್ಲಿ ಕಾಂಗ್ರೆಸ್ಸಿಗೆ ನಮ್ಮ ಜನರು ಇದ್ದಲ್ಲೇ ಇರಬೇಕು. ಹೀಗಿದ್ದರಷ್ಟೇ ಅದಕ್ಕೆ ರಾಜಕೀಯ ಲಾಭ! ಅದು ತರಲು ಹೊರಟಿರುವ ಎಸ್‌ಇಪಿ ಹಿಂದೆಯೂ ಇದೇ ದುಷ್ಟ ಆಲೋಚನೆ ಇದೆ.

ಲೇಖಕ: ಉನ್ನತ ಶಿಕ್ಷಣ ಇಲಾಖೆ ಮಾಜಿ ಸಚಿವ

## ನಾವು ನೋಡಿದ ಸಿನಿಮಾ

### ಪೇಲವ ತ್ರಿಕೋನ ಪ್ರೇಮಕಥೆ

**ಹತ್ತು** ವರ್ಷ ಹಿಂದಿನ ಕೆಟ್ಟ ಹಾಸ್ಯದ ಸನ್ನಿವೇಶಗಳು, ವಾಟ್ಸ್‌ಆ್ಯಪ್‌ನಲ್ಲಿ ಹಳತಾದ ಜೋಕುಗಳನ್ನೆಲ್ಲ ಸೇರಿಸಿ, ಅದಕ್ಕೊಂದು ತ್ರಿಕೋನ ಪ್ರೇಮ ಕಥೆ ಜೋಡಿಸಿ ಸಿದ್ಧಗೊಂಡ ಚಿತ್ರವೇ 'ಓ ಮನಸೇ'! ನಾಯಕ ವಿಜಯ್ ರಾಘವೇಂದ್ರ ಇನ್‌ಸ್ಪೆಕ್ಟರ್ ಕಾರ್ತಿಕ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ದಕ್ಷ ಅಧಿಕಾರಿಯಾದ ಅವರು ಭ್ರಷ್ಟತೆ ವಿರುದ್ಧ ಧ್ವನಿಯೆತ್ತಿದಾಗಲೆಲ್ಲ ವರ್ಗಾವಣೆಯಾಗುತ್ತಾರೆ. ಹೀಗೆ ವರ್ಗಾವಣೆಯಾಗಿ ಮಡಿಕೇರಿಗೆ ಬರುವಲ್ಲಿಂದ ಕಥೆ ಪ್ರಾರಂಭವಾಗುತ್ತದೆ.

ಮಡಿಕೇರಿ ಠಾಣೆಯಲ್ಲಿನ ಮುಖ್ಯಪೇದೆ ಸಾಧುಕೋಕಿಲ. ಹಾಸ್ಯಕ್ಕಾಗಿಯೇ ಹೆಣೆದ ಇಲ್ಲಿನ ಸನ್ನಿವೇಶಗಳು ಬಳಸಿ ಹಳತಾದವು. ಹೀಗಾಗಿ ಈ ಸನ್ನಿವೇಶಗಳು ಪ್ರೇಕ್ಷಕರಿಗೆ ನಗು ತರಿಸುವುದಕ್ಕಿಂತ ಹೆಚ್ಚಾಗಿ ಕಿರಿಕಿರಿ ಉಂಟು ಮಾಡುತ್ತವೆ. ಇಂತಹ ಠಾಣೆಗೆ ಬಂದ ಕಾರ್ತಿಕ್‌ಗೆ ಠಾಣೆಯ ಎದುರಲ್ಲೇ ನಾಯಕಿ ಸ್ನೇಹ ಪರಿಚಯವಾಗುತ್ತಾಳೆ. ಅಲ್ಲಿಂದ ಸಿನಿಮಾ ಪ್ರೇಮಕಥೆಯಾಗಿ ಬದಲಾಗುತ್ತದೆ. ಸ್ನೇಹ ಆಗಿ ಸಂಚಿತಾ ಪಡುಕೋಣೆ ನಟಿಸಿದ್ದಾರೆ. ಸಾಕಷ್ಟು ಕಡೆ ಇವರ ನಟನೆಯನ್ನು ಉತ್ತಮವಾಗಿಸುವ ಅವಕಾಶ ನಿರ್ದೇಶಕರಿಗಿತ್ತು.

ಇಬ್ಬರ ಪರಿಚಯವಾಗುತ್ತಿದ್ದಂತೆ ಹಾಡು ಶುರುವಾಗುತ್ತದೆ. ವಿಜಯ್ ರಾಘವೇಂದ್ರ ಬಹಳ ಕಷ್ಟಪಟ್ಟು ಹಾಡಿಗೆ ಹೆಜ್ಜೆ ಹಾಕಿದಂತೆ ಕಾಣಿಸುತ್ತದೆ. ಇಬ್ಬರೂ ಪ್ರೇಮಿಗಳಾದರು ಎನ್ನುವ ಹೊತ್ತಿಗೆ ದುರ್ಘಟನೆಯೊಂದು ನಡೆಯುತ್ತದೆ. ನಾಯಕಿಯ ಮಾವ ಹಾಗೂ ಮಹಿಳೆಯರಿಗೆ ಮಾತ್ರ ಬಡ್ಡಿಗೆ ಸಾಲ ನೀಡುವ ಪಾತ್ರದಲ್ಲಿ ಶೋಭರಾಜ್ ನಟಿಸಿದ್ದಾರೆ. ಸಾಧು ಕೋಕಿಲ ಮತ್ತು ಶೋಭರಾಜ್ ಅವರಂತಹ ಒಳ್ಳೆಯ ನಟರನ್ನಿಟ್ಟುಕೊಂಡು ಹೆಣೆದ ಕೆಟ್ಟ ಹಾಸ್ಯದ ದೃಶ್ಯಗಳನ್ನು ಜೀರ್ಣಿಸಿಕೊಳ್ಳುವ ಹೊತ್ತಿಗೆ ಚಿತ್ರದ ಮೊದಲಾರ್ಧ ಮುಗಿದು, ದ್ವಿತೀಯಾರ್ಧವೂ ಗೊತ್ತಾಗಿ ಹೋಗಿರುತ್ತದೆ.

**ಓ ಮನಸೇ**
- **ನಿರ್ಮಾಣ:** ಶ್ರೀ ಫ್ರೆಂಡ್ಸ್ ಮೂವಿ ಮೇಕರ್ಸ್
- **ನಿರ್ದೇಶನ:** ಡಿ.ಜಿ.ಉಮೇಶ್ ಗೌಡ
- **ತಾರಾಗಣ:** ವಿಜಯ್ ರಾಘವೇಂದ್ರ, ಧರ್ಮ ಕೀರ್ತಿರಾಜ್, ಸಂಚಿತಾ ಪಡುಕೋಣೆ, ಮತ್ತಿತರರು

ಮೊದಲಾರ್ಧದ ಕೊನೆಯಲ್ಲಿ ಸಕಾರಾತ್ಮಕ ಪಾತ್ರದಲ್ಲಿ ಬರುವ ಧರ್ಮ ಕೀರ್ತಿರಾಜ್, ದ್ವಿತೀಯಾರ್ಧದಲ್ಲಿ ಖಳನಾಯಕನಾಗುತ್ತಾರೆ. ಕಥೆ ತ್ರಿಕೋನ ಪ್ರೇಮದ ಸ್ವರೂಪ ಪಡೆಯುತ್ತದೆ. ಮಡಿಕೇರಿಯ ದೃಶ್ಯಗಳನ್ನು ಛಾಯಾಚಿತ್ರಗ್ರಾಹಕ ಎಂ.ಆರ್. ಸೀನು ಬಹಳ ಸೊಗಸಾಗಿ ಸೆರೆ ಹಿಡಿದಿದ್ದಾರೆ. ಪೊಲೀಸ್ ಠಾಣೆ, ಕೊಲೆ, ಅಪರಾಧಿ ಹುಡುಕಾಟದ ದೃಶ್ಯಗಳನ್ನು ಕುತೂಹಲ ಮೂಡಿಸುವಷ್ಟು ಚೆನ್ನಾಗಿ ಮಾಡಬಹುದಿತ್ತು. 'ಸೀತಾರಾಮ್ ಬಿನೋಯ್' ತರಹದ ಗಟ್ಟಿ ಇನ್‌ಸ್ಪೆಕ್ಟರ್ ಪಾತ್ರ ಮಾಡಿದ್ದ ವಿಜಯ್ ರಾಘವೇಂದ್ರ, ಇಲ್ಲಿ ದುರ್ಬಲ ಪೋಷಣೆಯ ಪಾತ್ರದಲ್ಲಿ ಅಭಿನಯಿಸಿದ್ದಾರೆ. ಜೆಸ್ಸಿ ಗಿಫ್ಟ್ ಸಂಗೀತದಲ್ಲಿ ಒಂದೆರಡು ಹಾಡುಗಳು ಮಧುರವಾಗಿದ್ದರೂ ನೆನಪಿನಲ್ಲಿ ಉಳಿಯುವುದಿಲ್ಲ. ಕಲಾ ನಿರ್ದೇಶನ, ಸಾಹಸ ದೃಶ್ಯಗಳಿಗೆ ಬೇಕಂತಲೇ ವಸ್ತುಗಳನ್ನಿಟ್ಟಂತೆ ಕಾಣುವಷ್ಟು ಪೇಲವವಾಗಿದೆ.

-ವಿನಾಯಕ ಕೆ.ಎಸ್.

### ಕುತಂತ್ರಿ ನರಿಗಳ ಕಥೆ!

**'ಒಂದಾನೊಂದು** ಕಾಲದಲ್ಲಿ ಎರಡು ಕುತಂತ್ರಿ ನರಿಗಳಿದ್ದವು. ಒಂದರ ಹೆಸರು ಕರಟಕ. ಇನ್ನೊಂದರ ಹೆಸರು ದಮನಕ. ಈ ಎರಡೂ ನರಿಗಳು ಕಾಡು ಮತ್ತು ನಾಡಿನ ತಲೆಕೆಡಿಸಿ ಇತಿಹಾಸವಾದವು. ಆ ಕುತಂತ್ರಿ ನರಿಗಳು ಇಂದು ಇಲ್ಲಿ ಮಾನವ ರೂಪ ತಾಳಿವೆ...' ಹೀಗೊಂದು ಎಚ್ಚರಿಕೆಯನ್ನು ನೀಡಿದ್ದಾರೆ ನಿರ್ದೇಶಕ ಯೋಗರಾಜ ಭಟ್.

ಸದ್ಯ 'ಗರಡಿ' ಸಿನಿಮಾದ ಚಿತ್ರೀಕರಣ ಪೂರ್ಣಗೊಳಿಸಿ, ಹೊಸ ಪ್ರೊಜೆಕ್ಟ್ ಕೈಗೆತ್ತಿಕೊಂಡಿರುವ ಯೋಗರಾಜ್ ಭಟ್ ಅವರು ಸೆಂಚುರಿ ಸ್ಟಾರ್ ಶಿವರಾಜ್‌ಕುಮಾರ್ ಅವರಿಗೆ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ. ಚಿತ್ರಕ್ಕೆ 'K ಕರಟಕ D ದಮನಕ' ಎಂಬ ವಿಭಿನ್ನ ಶೀರ್ಷಿಕೆಯನ್ನೂ ಇಡಲಾಗಿತ್ತು. ಇದೀಗ ಚಿತ್ರದಲ್ಲಿ ನಟರಾದ ಶಿವರಾಜ್‌ಕುಮಾರ್ ಹಾಗೂ ಪ್ರಭುದೇವ ಅವರ ಲುಕ್ ಹೇಗಿರುತ್ತದೆ ಎನ್ನುವುದನ್ನು ಯೋಗರಾಜ್ ಭಟ್ ಅವರು ರಿವೀಲ್ ಮಾಡಿದ್ದಾರೆ.

ಸಿನಿ ಸಂಕ್ಷಿಪ್ತ

ರಾಕ್‌ಲೈನ್ ಎಂಟರ್‌ಟೈನ್‌ಮೆಂಟ್ ಲಾಂಛನದಲ್ಲಿ ರಾಕ್‌ಲೈನ್ ವೆಂಕಟೇಶ್ ನಿರ್ಮಾಣ ಮಾಡುತ್ತಿರುವ ಈ ಚಿತ್ರಕ್ಕೆ ವಿ. ಹರಿಕೃಷ್ಣ ಸಂಗೀತ, ಸಂತೋಷ್ ರೈ ಪಾತಾಜೆ ಛಾಯಾಗ್ರಹಣವಿದೆ. ಈಗಾಗಲೇ ಚಿತ್ರದ ಚಿತ್ರೀಕರಣ ಕೊನೆಯ ಹಂತದಲ್ಲಿದೆ. ❖

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

## ಪದಬಂಧ 5380

– ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**
1.ಜೀವವನ್ನು ಕೊಡುವುದು (4)
3.ಅಪ್ಪನ ಈ ರೂಪ ಬಲು ವಿರಳ! (4)
5.ನಡುವಿನಲ್ಲೇ ಶುರುವಾದ ಕಂಪನ (3)
8.ಮಿಥ್ಯವಲ್ಲ,ಇದು ಜೋಡಿಯೇ (3)
9.ಪ್ರಮಾಣ ಪತ್ರವನ್ನು ಹೀಗೂ ಹೇಳುವರು (5)
10.ತಲೆಯಲ್ಲಿರುವ ಅನ್ನದ ಪಾತ್ರೆ (3)
11.ಹರನಿಗೆ ಸಲ್ಲಿಸಿದ ಮುಡಿಪು (3)
15.ಯತಿಗೆಂದೇ ನೀಡಿದ ರಿಬೇಟ್! (4)
16.ಮಧುವಿನೊಡನೆ ಬಂದಿರುವ ತಿಂಗಳು (4)

**ಮೇಲಿಂದ ಕೆಳಕ್ಕೆ**
1.ಚೀನದಲ್ಲಿ ಕಂಡದ್ದೆಲ್ಲಾ ಹಳೆಯದು! (3)
2.ಬಟ್ಟೆಯನ್ನು ಧರಿಸದವನು (2)
3.ಅತ್ಯಂತ ಸೂಕ್ಷ್ಮವಾದ ವಸ್ತು (2)
4.ಬೇರೆಯವರ ಹಣ (4)
6.ಕಲೆಯಿಂದ ಕೂಡಿರುವ ಆಹ್ವಾನ (4)
7. ತಾಪದ ಹೊತ್ತಿನಲ್ಲಿ ತೋರಿದ ಶೌರ್ಯ (3)
8.ಗೆಳೆಯನಿಗೆ ಮಾಡಿದ ವಂಚನೆ (4)
10.ತರತರದ ಕಾಯಿಪಲ್ಲೆ (4)
12.ಕೆಲವರು ಮಾಡುವ ಕಾರ್ಯ (3)
13.ಸವತಿ ಹತ್ತಿರವಿರುವ ಹೆಂಡತಿ (2)
14.ಪಾಂಡವರಲ್ಲಿ ಎರಡನೆಯವನು (2)

| | | | | | | | | |
|---|---|---|---|---|---|---|---|---|
| 1 | | | 2 | ■ | 3 | | | 4 |
| | ■ | ■ | | ■ | | ■ | ■ | |
| 5 | | 6 | ■ | ■ | ■ | ■ | ■ | |
| ■ | ■ | | ■ | 7 | ■ | 8 | | |
| ■ | ■ | 9 | | | | | ■ | ■ |
| 10 | | | ■ | | ■ | | ■ | ■ |
| | ■ | ■ | ■ | ■ | ■ | 11 | | 12 |
| | ■ | ■ | 13 | ■ | 14 | ■ | ■ | |
| 15 | | | | ■ | 16 | | | |

**5379ನೇ ಪದಬಂಧದ ಉತ್ತರ**

**ಎಡದಿಂದ ಬಲಕ್ಕೆ:**
1.ಅನುವಾದ 3.ರಾಯಭಾರಿ 5.ರಮಣಿ 6.ಸಮಯ 8.ನಗಾರಿ 9.ವಿವರ 10.ಕಡಿಮೆ 12.ಜಟಿಲ 14.ಸಮಾಧಾನ 15.ಹೊಸಬಾಳು

**ಮೇಲಿಂದ ಕೆಳಕ್ಕೆ:**
1.ಅರಸ 2.ದರ 3.ರಾಣಿ 4.ರಿಪೇರಿ 7.ಯಮಕಿಂಕರ 8.ನಯವಂಚಕ 9.ವಿರಸ 11.ಮೆದುಳು 12.ಜನ 13.ಲಹೊ

## ಸುಡೊಕು 5766

| | | | | | | | | |
|---|---|---|---|---|---|---|---|---|
| | 2 | | | 6 | 7 | 4 | | |
| 3 | | | | | | | | 2 |
| | 7 | | | 4 | 8 | | 6 | |
| | 4 | | | | | | 8 | 5 |
| 8 | | 9 | | 7 | | | | |
| | 5 | | 8 | | 4 | | 9 | |
| 2 | | | | 9 | | | 3 | |
| 4 | | 3 | | 5 | 2 | | | 8 |
| | 1 | | 4 | | | 5 | | |

**5765 ಸುಡೊಕು**

| | | | | | | | | |
|---|---|---|---|---|---|---|---|---|
| 9 | 6 | 5 | 8 | 7 | 3 | 4 | 1 | 2 |
| 2 | 8 | 3 | 1 | 4 | 6 | 9 | 7 | 5 |
| 7 | 1 | 4 | 9 | 5 | 2 | 8 | 3 | 6 |
| 3 | 4 | 6 | 7 | 1 | 8 | 5 | 2 | 9 |
| 5 | 7 | 9 | 3 | 2 | 4 | 6 | 8 | 1 |
| 8 | 2 | 1 | 5 | 6 | 9 | 3 | 4 | 7 |
| 4 | 5 | 7 | 6 | 8 | 1 | 2 | 9 | 3 |
| 1 | 3 | 2 | 4 | 9 | 5 | 7 | 6 | 8 |
| 6 | 9 | 8 | 2 | 3 | 7 | 1 | 5 | 4 |

**ಆಡುವುದು ಹೇಗೆ?**
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

## ಗುಂಡಣ್ಣ

## ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ಜುಲೈ 15, 2023

**ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ಗ್ರೀಷ್ಮ ಋತು ತಿಥಿ:** ಆಷಾಢ ಕೃಷ್ಣ ತ್ರಯೋದಶಿ ಗಂ. 20-33 ನಕ್ಷತ್ರ: ಮೃಗಶಿರಾ ಗಂ. 24-23 ಯೋಗ: ವೃದ್ಧಿ ಗಂ. 08-21 ಕರಣ: ಗರ ಗಂ. 07-53, ಮಿಥುನ ಮಾಸದ 30 ನೇ ದಿನ, ಮಳೆನಕ್ಷತ್ರ: ಪುನರ್ವಸು 3.
ರಾಹುಕಾಲ : ಬೆಳಿಗ್ಗೆ 09-00 - 10-30, ಸೂರ್ಯೋದಯ : 06-15 ಸೂರ್ಯಾಸ್ತ : 06-58
ಮುಸ್ಲಿಂ ದಿನಾಂಕ : 26 ಜುಲ್‌ಹಿಜಾ
ಅದೃಷ್ಟ ಸಂಖ್ಯೆ : 2, 1

**ಮೇಷ:** ಬಂಧುಗಳ ಮನೆಯಲ್ಲಿನ ಕೆಲವು ವಿಚಿತ್ರ ಆಚರಣೆಗಳು ಗೊಂದಲ ಹೊಂದಿದವರಂತೆ ಮಾಡಬಹುದು. ವಿಭಿನ್ನ ಕ್ಷೇತ್ರದಲ್ಲಿ ಪರಿಣಿತರಾದ ವ್ಯಕ್ತಿಗಳನ್ನು ಭೇಟಿಯಾಗುವಿರಿ. ಹೂವಿನ ಮಾರಾಟ ಲಾಭ.

**ವೃಷಭ:** ದುಡುಕಿನ ಕೆಲವು ನಿರ್ಧಾರಗಳಿಂದ ಆತ್ಮೀಯರಲ್ಲಿ ಮನಸ್ತಾಪವಾಗಲಿದೆ. ಆಫೀಸಿನ ಸಿಬ್ಬಂದಿ ಮಾತು ಕಡಿಮೆ ಮಾಡುವುದು ಉತ್ತಮ. ಇನ್ನೊಬ್ಬರ ಅಭಿಪ್ರಾಯ ಪಡೆದು ಚಿಕಿತ್ಸೆ ತೆಗೆದುಕೊಳ್ಳಿ.

**ಮಿಥುನ:** ಹೆಚ್ಚಿನ ಉತ್ಸಾಹ ಕಾಣಿಸುತ್ತಿದ್ದು, ಹೊಸದೊಂದು ಹಾದಿಯಲ್ಲಿ ನಡೆಯಲಿದ್ದೀರಿ. ನೃತ್ಯಾಭ್ಯಾಸ ಮುಂದುವರಿಸುವಂತೆ ಅಧ್ಯಾಪಕರಿಂದ ಒತ್ತಾಯ ಹೆಚ್ಚುವುದು. ವಿದ್ಯಾರ್ಜನೆಗೆ ಸುಸಮಯ.

**ಕರ್ಕಾಟಕ:** ಮಗನ ಸಹಾಯದಿಂದ ಸಂಬಂಧಿಕರೊಬ್ಬರ ಕೆಲಸ ಕೈಗೂಡುವುದರಿಂದ ಸಂತಸ. ಅವಿವಾಹಿತರಿಗೆ ನಿರೀಕ್ಷೆಗೆ ತಕ್ಕವರು ಸಿಗಲಿದ್ದಾರೆ. ರಾಜಕೀಯ ಸೇರುವ ಯೋಚನೆ ಬರುವುದು.

**ಸಿಂಹ:** ದೈವಾನುಕೂಲದಿಂದ ನಡೆಯಬೇಕಾದ ಶುಭಕಾರ್ಯಗಳನ್ನು ಹಿರಿಯರೊಂದಿಗೆ ಕುಳಿತು ನಿಶ್ಚಯ ಮಾಡಬಹುದು. ಆಹಾರದಿಂದ ಆರೋಗ್ಯ ಹದಗೆಡುವ ಲಕ್ಷಣಗಳಿವೆ. ಆಹಾರದಲ್ಲಿ ಗಮನವಿರಲಿ.

**ಕನ್ಯಾ:** ಕಾರ್ಖಾನೆಯಲ್ಲಿ ಹೊಸ ವಿದ್ಯುತ್ ಉಪಕರಣಗಳನ್ನು ಅಳವಡಿಸುವಲ್ಲಿ ಅಧಿಕ ಬಂಡವಾಳವನ್ನು ಹೂಡುವಿರಿ. ಸ್ನೇಹಿತರು ಪ್ರಾಮಾಣಿಕತೆ ದುರುಪಯೋಗಪಡಿಸಿಕೊಂಡು ಲಾಭ ಮಾಡಿಕೊಳ್ಳಬಹುದು.

**ತುಲಾ:** ಅಧಿಕಾರ, ಅನುಭವದಿಂದ ಆತ್ಮಾಭಿಮಾನ ವೃದ್ಧಿಯಾಗಲಿದೆ. ಕೆಲಸ ಕಾರ್ಯ ಸಾಗುವುದು. ಆಫೀಸಿನ ಕೆಲಸಗಳೂ ಬೇಗನೇ ಮುಗಿಯುವುದು. ಪತ್ನಿಯ ಆರೋಗ್ಯ ಸುಧಾರಿಸಲಿದೆ.

**ವೃಶ್ಚಿಕ:** ವೈಯಕ್ತಿಕ ವಿಚಾರಗಳನ್ನು ಆಪ್ತರೊಬ್ಬರಲ್ಲಿ ಹೇಳಿಕೊಳ್ಳಲೇಬೇಕಾದ ಸಂದರ್ಭ ಬರಲಿದೆ. ಹಿರಿಯ ಅಧಿಕಾರಿಗಳೊಬ್ಬರ ಭೇಟಿಯಿಂದ ಕಾರ್ಯಗಳು ಸರಾಗವಾಗಿ ನಡೆಯುವುದು.

**ಧನು:** ಲೇವಾದೇವಿ ವ್ಯವಹಾರಸ್ಥರಿಗೆ ಜವಾಬ್ದಾರಿಯ ಹೊರೆ, ಮಾನಸಿಕ ಒತ್ತಡ ಹೆಚ್ಚಲಿದೆ. ಜವಾಬ್ದಾರಿಗಳಿಂದ ಈ ದಿನ ಮುಕ್ತಿಯನ್ನು ಹೊಂದಬಹುದು. ಷೇರು ವ್ಯವಹಾರದಲ್ಲಿ ನಷ್ಟವಾಗಬಹುದು.

**ಮಕರ:** ಉದ್ಯೋಗದಲ್ಲಿನ ಬದಲಾವಣೆ ಉತ್ಸಾಹವನ್ನು ಹೆಚ್ಚಿಸುವುದು. ನೂತನ ಮನೆ ನಿರ್ಮಾಣ ಅಥವಾ ನಿವೇಶನಗಳ ಖರೀದಿಯ ಆಲೋಚನೆಗಳಿಗೆ ಪೂರಕ ವಾತಾವರಣ ಸ್ನೇಹಿತರಿಂದ ಸಿಗಲಿದೆ.

**ಕುಂಭ:** ಆಧ್ಯಾತ್ಮಿಕ ಮಾತುಕತೆಗಳಲ್ಲಿ ತೊಡಗುವಿರಿ. ಮನೆಯಲ್ಲಿ ದೇವತಾ ಕಾರ್ಯ ನಡೆಸುವ ಬಗ್ಗೆ ತಂದೆಯವರಲ್ಲಿ ಮಾತನಾಡಿ. ಶ್ರೀಕ್ಷೇತ್ರಕ್ಕೆ ಹೋಗುವ ಯೋಜನೆ ಕಾರ್ಯರೂಪಕ್ಕೆ ತನ್ನಿರಿ.

**ಮೀನ:** ಕಾರ್ಯಶೈಲಿ ಆಫೀಸಿನಲ್ಲಿ ಮೆಚ್ಚುವ ಮಾತಾಗುವುದು. ಹೊಸ ಅನುಭವ ಎದುರು ನೋಡುವಂತಾಗುವುದು. ಉತ್ಸಾಹ ಮೂಡಲಿದೆ. ಬ್ಯಾಂಕ್ ನೌಕರರಿಗೆ ಅಧಿಕಮಟ್ಟದ ಕಾರ್ಯದೊತ್ತಡ ಇರಲಿದೆ.

### ಮುಂಬೈ ಧಾರಣೆ

**ಶೇಂಗಾ**

14-7-2023

| | |
|---|---|
| ಜಾವಾ 70/80(ಹೊಸ) | 12500-12600 |
| ಜಾವಾ 80/90(ಹೊಸ) | 12000-12100 |
| ದಪ್ಪ ಮಧ್ಯಪ್ರದೇಶ(ಹೊಸ) | 12000-12100 |
| ದಪ್ಪ ಗುಜರಾತ್(ಹೊಸ) | 12800-12900 |

**ಶೇಂಗಾ ಎಣ್ಣೆ (10 ಕೆಜಿಗೆ)**

| | |
|---|---|
| ಕಚ್ಚಾ (ತೆರಿಗೆ ಬಿಟ್ಟು) | 1750 (1750) |
| ಒಂದು ವಾರದ ಡೆಲಿವರಿ | 1745 (1745) |
| ಸೋಯಾ ಕಚ್ಚಾ | 880 (880) |
| ಪಾಮ್ ವಾರದ ಡೆಲಿವರಿ | 858 (855) |
| ಸೂರ್ಯಕಾಂತಿ ಎಣ್ಣೆ ಕಚ್ಚಾ | 860 (860) |

**ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)**

ಅಪರಂಜಿ ಚಿನ್ನ 10ಗ್ರಾಂ
59,000 (59,250)
ಬೆಳ್ಳಿ ಕೆ.ಜಿ
75,000 (73,700)

ಆವರಣದಲ್ಲಿ ಹಿಂದಿನ ದಿನದ ಧಾರಣೆ

### ಷೇರುಪೇಟೆ ವಹಿವಾಟು




### ಎನ್‌ಎಸ್‌ಇ ನಿಫ್ಟಿ

| | |
|---|---|
| ಹಿಂದಿನ ಅಂತ್ಯ | 19,413 |
| ಇಂದಿನ ಅಂತ್ಯ | 19,564 |
| ▲ | 151 |
| ದಿನದ ಗರಿಷ್ಠ | 19,595 |

### ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100 ಮೊಟ್ಟೆಗೆ ₹495
12 ಮೊಟ್ಟೆಗೆ ₹70
ಮೈಸೂರು
100 ಮೊಟ್ಟೆಗೆ ₹500

### ಖಾದ್ಯ ತೈಲ ಮುಂಬೈ

(10 ಕೆಜಿಗೆ)

| | |
|---|---|
| ಶೇಂಗಾ (ರಿಫೈನ್ಡ್) | ₹1740 (1740) |
| ಸೋಯಾ (ರಿಫೈನ್ಡ್) | ₹950 (945) |
| ಸೂರ್ಯಕಾಂತಿ (ರಿಫೈನ್ಡ್) | ₹945 (945) |
| ಪಾಮೋಲಿನ್ | ₹860 (857) |

### ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ) ₹232-439
ದ್ವಿತಳಿ (ಬಿ.ವಿ) ₹285-592

### ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

| | |
|---|---|
| ದಪ್ಪ | ₹1200-1400 |
| ಮಧ್ಯಮ | ₹1000-1200 |
| ಸಣ್ಣ | ₹800-1000 |

### ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

| | |
|---|---|
| ಆರ್‌ಎಸ್‌ಎಸ್-4 | ₹149.50 |
| ಆರ್‌ಎಸ್‌ಎಸ್-5 | ₹145.50 |
| ಗುಡ್ ಲಾಟ್ | ₹127 |

## ಜಾಗತಿಕ ವಿದ್ಯಮಾನಗಳ ಪ್ರತಿಕೂಲ ಪರಿಣಾಮ

# ರಫ್ತು: ಮೂರು ವರ್ಷಗಳ ಕನಿಷ್ಠ

ನವದೆಹಲಿ (ಪಿಟಿಐ): ಭಾರತದ ರಫ್ತು ವಹಿವಾಟು ಜೂನ್ ತಿಂಗಳಿನಲ್ಲಿ ಶೇಕಡ 22ರಷ್ಟು ಇಳಿಕೆ ಕಂಡಿದ್ದು ₹2.70 ಲಕ್ಷ ಕೋಟಿಗೆ ತಲುಪಿದೆ. ಮೂರು ವರ್ಷಗಳಲ್ಲಿ ಇದೇ ಮೊದಲ ಬಾರಿಗೆ ಈ ಪ್ರಮಾಣದ ಕುಸಿತ ಆಗಿದೆ.

ಈ ಹಿಂದೆ 2022ರ ಮೇ ತಿಂಗಳಿನಲ್ಲಿ ರಫ್ತು ವಹಿವಾಟು ಶೇ 36.47ರಷ್ಟು ಕುಸಿದಿತ್ತು. ಕೋವಿಡ್ ಸಾಂಕ್ರಾಮಿಕದ ಪರಿಣಾಮದಿಂದಾಗಿ ಅಷ್ಟು ಕುಸಿತ ಕಂಡುಬಂದಿತ್ತು.

ಕೇಂದ್ರ ವಾಣಿಜ್ಯ ಸಚಿವಾಲಯ ಬಿಡುಗಡೆ ಮಾಡಿರುವ ಮಾಹಿತಿಯ ಪ್ರಕಾರ, ರಫ್ತು ಮಾತ್ರವೇ ಅಲ್ಲದೆ ಆಮದು ವಹಿವಾಟು ಕೂಡ ಇಳಿಕೆ ಆಗಿದ್ದು, ವ್ಯಾಪಾರ ಕೊರತೆಯು ಜೂನ್‌ನಲ್ಲಿ ₹1.66 ಲಕ್ಷ ಕೋಟಿ

ಆಗಿದೆ. ಕಳೆದ ವರ್ಷದ ಜೂನ್‌ನಲ್ಲಿ ಇದು ₹1.80 ಲಕ್ಷ ಕೋಟಿಯಷ್ಟು ಇತ್ತು.

ಆಮದು ವಹಿವಾಟು ಜೂನ್‌ನಲ್ಲಿ ಶೇ 17.48ರಷ್ಟು ಇಳಿಕೆ ಕಂಡು ₹4.35 ಲಕ್ಷ ಕೋಟಿ ಆಗಿದೆ.

ವ್ಯಾಪಾರ ವಲಯದ ಬೆಳವಣಿಗೆಯು ಜಾಗತಿಕ ವಿದ್ಯಮಾನಗಳ ಮೇಲೆ ಅವಲಂಬಿತವಾಗಿದೆ ಎಂದು ವಾಣಿಜ್ಯ ಕಾರ್ಯದರ್ಶಿ ಸುನಿಲ್ ಬಿ. ಹೇಳಿದ್ದಾರೆ.

ಜಾಗತಿಕ ವ್ಯಾಪಾರವು ಮಂದಗತಿಯಲ್ಲಿ ಇರಲಿದೆ ಎಂದು ವಿಶ್ವ ವ್ಯಾಪಾರ ಸಂಘಟನೆ (ಡಬ್ಲ್ಯುಟಿಒ) ಅಂದಾಜು ಮಾಡಿದೆ. ಆ ಆತಂಕವು ಇದೀಗ ಸತ್ಯವಾಗಿದೆ ಎಂದು ಅವರು ಹೇಳಿದ್ದಾರೆ.

ಅಮೆರಿಕ, ಯುರೋಪ್ ಒಳಗೊಂಡಂತೆ ಪ್ರಮುಖ ಆರ್ಥಿಕತೆಗಳು ಮಂದಗತಿಯಲ್ಲಿ ಸಾಗುತ್ತಿವೆ. ಹಣದುಬ್ಬರದ ಒತ್ತಡದಲ್ಲಿವೆ ಎಂದು ಅವರು ರಫ್ತು ವಹಿವಾಟು ಇಳಿಕೆಗೆ ಕಾರಣ ನೀಡಿದ್ದಾರೆ. ಜುಲೈನಿಂದ ರಫ್ತು ಚೇತರಿಸಿಕೊಳ್ಳಲಿದೆ ಎಂದೂ ತಿಳಿಸಿದ್ದಾರೆ.

ಏಪ್ರಿಲ್–ಜೂನ್ ಅವಧಿಯಲ್ಲಿ ರಫ್ತು ಶೇ 15.13ರಷ್ಟು, ಆಮದು ಶೇ 12.67ರಷ್ಟು ಇಳಿಕೆ ಕಂಡಿದೆ.

# ತಗ್ಗಿದ ಸಗಟು ಹಣದುಬ್ಬರ ದರ

## ಆಹಾರ ವಸ್ತುಗಳು, ಇಂಧನ ದರ ಇಳಿಕೆ; 8 ವರ್ಷದ ಕನಿಷ್ಠ ಮಟ್ಟಕ್ಕೆ ಡಬ್ಲ್ಯುಪಿಐ

ನವದೆಹಲಿ (ಪಿಟಿಐ/ರಾಯಿಟರ್ಸ್): ಸತತ ಮೂರನೇ ತಿಂಗಳಿನಲ್ಲಿಯೂ ಸಗಟು ಹಣದುಬ್ಬರ ಪ್ರಮಾಣ ಇಳಿಕೆ ಕಂಡಿದೆ. ಜೂನ್‌ನಲ್ಲಿ ಸಗಟು ಹಣದುಬ್ಬರವು ಶೇ (–) 4.12ಕ್ಕೆ ಇಳಿದಿದೆ. ಎಂಟು ವರ್ಷಗಳಲ್ಲಿ ದಾಖಲಾಗಿರುವ ಕನಿಷ್ಠ ಮಟ್ಟ ಇದಾಗಿದೆ.

ಸಗಟು ದರ ಸೂಚ್ಯಂಕ (ಡಬ್ಲ್ಯುಪಿಐ) ಆಧರಿಸಿದ ಹಣದುಬ್ಬರವು ಈ ಹಿಂದೆ 2015ರ ಅಕ್ಟೋಬರ್‌ನಲ್ಲಿ ಶೇ (–) 4.76ರಷ್ಟು ಇತ್ತು. ಈ ವರ್ಷದ ಜೂನ್‌ನಲ್ಲಿ ದಾಖಲಾಗಿರುವುದು 2015ರ ಅಕ್ಟೋಬರ್ ನಂತರದ ಅತಿ ಕಡಿಮೆ ಪ್ರಮಾಣ. 2022ರ ಜೂನ್‌ನಲ್ಲಿ

**ಮುಖ್ಯಾಂಶಗಳು**
- ತಯಾರಾದ ವಸ್ತುಗಳ ದರ ಇಳಿಕೆ
- ತಂಬಾಕು ಉತ್ಪನ್ನಗಳು, ಕಂಪ್ಯೂಟರ್, ಎಲೆಕ್ಟ್ರಾನಿಕ್ಸ್ ಉಪಕರಣಗಳ ಬೆಲೆ ಏರಿಕೆ

ಸಗಟು ಹಣದುಬ್ಬರ ಪ್ರಮಾಣ ಶೇ 16.23ರಷ್ಟು ಆಗಿತ್ತು.

ಆಹಾರ ವಸ್ತುಗಳು, ಇಂಧನ, ಲೋಹಗಳು, ಕಚ್ಚಾ ಪೆಟ್ರೋಲಿಯಂ, ನೈಸರ್ಗಿಕ ಅನಿಲ ಮತ್ತು ಜವಳಿ ವಸ್ತುಗಳ ಬೆಲೆ ಇಳಿಕೆ ಆಗಿರುವುದೇ ಸಗಟು ಹಣದುಬ್ಬರ ಇಳಿಕೆಗೆ ಕಾರಣ ಎಂದು



ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ ಹೇಳಿದೆ.

ಇಂಧನ ಮತ್ತು ವಿದ್ಯುತ್ ದರ ಶೇ 12.63ರಷ್ಟು ಇಳಿಕೆ ಕಂಡಿದೆ.

ತಯಾರಾದ ವಸ್ತುಗಳ ದರವು ಶೇ 2.71ರಷ್ಟು ಕಡಿಮೆ ಆಗಿದೆ. ತಂಬಾಕು ಉತ್ಪನ್ನಗಳು, ಕಂಪ್ಯೂಟರ್, ಎಲೆಕ್ಟ್ರಾನಿಕ್ಸ್, ಚರ್ಮದ ಉತ್ಪನ್ನಗಳು, ಮೋಟಾರು ವಾಹನ ದರ ಹೆಚ್ಚಾಗಿವೆ.

ಪ್ರತಿಕೂಲ ಹವಾಮಾನದ ಜೊತೆಗೆ ಮಳೆಯು ದೇಶದೆಲ್ಲೆಡೆ ಸಮನಾಗಿ ಬೀಳದೇ ಇರುವುದರಿಂದ ಆಹಾರ ವಸ್ತುಗಳ ಬೆಲೆಯು ಹೆಚ್ಚಾಗುತ್ತಿದೆ. ಹೀಗಾಗಿ ಹಣದುಬ್ಬರ ಇಳಿಕೆಯು ಇದೇ ರೀತಿ ಮುಂದುವರಿಯುವ ಸಾಧ್ಯತೆ ಕಡಿಮೆ ಇರುವ ನಿರೀಕ್ಷೆ ಮಾಡಲಾಗಿದೆ ಎಂದು ಎಲ್‌ಆ್ಯಂಡ್‌ಟಿ ಫೈನಾನ್ಸ್ ಹೋಲ್ಡಿಂಗ್ಸ್‌ನ ಆರ್ಥಿಕ ತಜ್ಞೆ ರೂಪಾ ರೇಗ್ ಎನ್. ಹೇಳಿದ್ದಾರೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

14ನೇ ವರ್ಷದ ಚಿರಸ್ಮರಣೆ

ಶ್ರೀಮತಿ|| ಯಶೋಧರ ಚಿಂದಯ್ಯ
ನೀವು ನಮ್ಮನ್ನೆಲ್ಲಾ ಅಗಲಿ ಇಂದಿಗೆ
ಹದಿನಾಲ್ಕು ವರ್ಷವಾಯಿತು
ನೀವು ನಮ್ಮ ಹೃದಯಗಳಲ್ಲಿ ಚಿರಸ್ಥಾಯಿಯಾಗಿರುವಿರಿ
ನಿಮ್ಮ ಆತ್ಮಕ್ಕೆ ಶಾಂತಿನೀಡಲೆಂದು
ದೇವರಲ್ಲಿ ಪ್ರಾರ್ಥಿಸುತ್ತೇವೆ.
ಮಕ್ಕಳು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು

# ಟಾಟಾದಿಂದ ವಿಸ್ಟ್ರಾನ್ ಖರೀದಿ?

ನವದೆಹಲಿ (ಪಿಟಿಐ): ವಿಸ್ಟ್ರಾನ್ ಕಂಪನಿಯು ಕರ್ನಾಟಕದಲ್ಲಿ ಹೊಂದಿರುವ ತಯಾರಿಕಾ ಘಟಕವನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಲು ಟಾಟಾ ಸಮೂಹವು ಮುಂದಾಗಿದೆ, ಮಾತುಕತೆ ನಡೆಯುತ್ತಿದೆ ಎಂದು ಮೂಲಗಳು ಹೇಳಿವೆ.

ಈ ಸ್ವಾಧೀನ ಸಾಧ್ಯವಾದರೆ ಐಫೋನ್ ತಯಾರಿಸುವ ಮೊದಲ ಭಾರತೀಯ ಕಂಪನಿ 'ಟಾಟಾ' ಆಗಲಿದೆ.

ಟಾಟಾ ಸನ್ಸ್ ಕಂಪನಿಯು ತನ್ನ ಅಂಗಸಂಸ್ಥೆಯಾದ ಟಾಟಾ ಎಲೆಕ್ಟ್ರಾನಿಕ್ಸ್ ಮೂಲಕ ಈ ಸ್ವಾಧೀನ ಪೂರ್ಣಗೊಳಿಸಲಿದೆ. ಆದರೆ ಈ ಕುರಿತು ಟಾಟಾ ಸಮೂಹದಿಂದ ಪ್ರತಿಕ್ರಿಯೆ ಲಭ್ಯವಾಗಿಲ್ಲ. ವಿಸ್ಟ್ರಾನ್ ಕಂಪನಿಯನ್ನು ಸಂಪರ್ಕಿಸಲು ಸಾಧ್ಯವಾಗಿಲ್ಲ.

ಟಾಟಾ ಸಮೂಹವು ಈ ಘಟಕವನ್ನು ಸ್ವಾಧೀನಕ್ಕೆ ತೆಗೆದುಕೊಂಡ ನಂತರದಲ್ಲಿ ಐಫೋನ್ ಮಾತ್ರವೇ ಅಲ್ಲದೆ, ಆ್ಯಪಲ್ ಕಂಪನಿಯ ಇತರ ಹೊಸ ಉತ್ಪನ್ನಗಳನ್ನು ಕೂಡ ಈ ಘಟಕದಲ್ಲೇ ಸಿದ್ಧಪಡಿಸುವ ಸಾಧ್ಯತೆ ಇದೆ.

### ದೇಶದಾದ್ಯಂತ ಮಾರುಕಟ್ಟೆ ಧಾರಣೆ

| | |
|---|---|
| **ಏಲಕ್ಕಿ ಧಾರಣೆ** | |
| **ಸಕಲೇಶಪುರ** | |
| ಕೂಳೆ | 300-350 |
| ನಡುಗೋಲು | 450-500 |
| ರಾಶಿ | 500-550 |
| ರಾಶಿ ಉತ್ತಮ | 750-800 |
| ಜರಡಿ | 1000 - 1050 |
| ಹೆರಕಿದ್ದು | 1200-1300 |
| ಹಸಿರು ಸಾಧಾರಣ | 800-900 |
| ಹಸಿರು ಉತ್ತಮ | 1000-1100 |
| ಹಸಿರು ಅತಿ ಉತ್ತಮ | 1600-1650 |
| ಕಾಳು ಮೆಣಸು | 500 |
| **ಅಡಿಕೆ** | |
| **ಬಂಟ್ವಾಳ** | |
| ಕೋಕ | 12500-25000 |
| ಹೊಸತು | 27500-42500 |
| ಹಳತು | 46000-49000 |
| **ಕುಮಟಾ** | |
| ಚಿಪ್ಪು | 29999-33690 |
| ಕೋಕ | 26995-34099 |
| ಫ್ಯಾಕ್ಟರಿ | 14052-22879 |
| ಹಳೆಚಾಲಿ | 39299-41169 |
| ಹೊಸಚಾಲಿ | 37179-41169 |
| **ಸಿದ್ದಾಪುರ** | |
| ಬಿಳಿಗೋಟು | 31809-34609 |
| ಚಾಲಿ | 37809-40599 |
| ಕೋಕ | 31089-34899 |
| ಕೆಂಪುಗೋಟು | 29099-38399 |
| ರಾಶಿ | 49599-52109 |
| ತಟ್ಟಿಬೆಟ್ಟೆ | 40219-46249 |
| **ಕಾರ್ಕಳ** | |
| ಹೊಸತು | 30000-42500 |
| **ಪುತ್ತೂರು** | |
| ಹೊಸತು | 34000-42500 |
| **ಶಿರಸಿ** | |
| ಬೆಟ್ಟೆ | 41899-47799 |
| ಬಿಳಿಗೋಟು | 27899-35299 |
| ಚಾಲಿ | 36518-41101 |
| ಕೆಂಪುಗೋಟು | 32199-36929 |
| ರಾಶಿ | 46999-52399 |
| **ಯಲ್ಲಾಪುರ** | |
| ಬಿಳಿಗೋಟು | 26899-36321 |
| ಚಾಲಿ | 36312-40899 |
| ಕೋಕ | 18670-34399 |
| ಕೆಂಪುಗೋಟು | 30210-38100 |
| ರಾಶಿ | 46499-54509 |
| ತಟ್ಟಿಬೆಟ್ಟೆ | 41175-48218 |

**ಕಾಫಿ** (50 ಕೆ.ಜಿಗೆ ₹ ಗಳಲ್ಲಿ)

| | ಮೂಡಿಗೆರೆ | ಹಾಸನ | | |
|---|---|---|---|---|
| | ಮುದ್ರಮನೆ | ಪ್ಲಾಂಟರ್ಸ್ | ಅಲ್ಲಾನಾ | ನ್ಯೂಯಾರ್ಕ್ |
| ಎಪಿ | 13900 | 14100 | 14000 | 157.60 ಸೆಂಟ್ಸ್ |
| ಎಸಿ | 7140 | 7000 | 7100 | |
| ಆರ್‌ಪಿ | 10100 | 10200 | 10300 | ಲಂಡನ್ |
| ಆರ್‌ಸಿ | 5960 | 230 | 5900 | 2525 ಡಾಲರ್ಸ್ |

**ಕೊಬ್ಬರಿ ಧಾರಣೆ**

(ಕ್ವಿಂಟಲ್‌ಗೆ)

| | |
|---|---|
| ಅರಸೀಕೆರೆ | ₹7800-8908 |
| ತಿಪಟೂರು | ₹7100-9009 |
| ತುರುವೇಕೆರೆ | ₹8900-9000 |

# ₹ 7.27 ಲಕ್ಷದವರೆಗೆ ಆದಾಯ ತೆರಿಗೆ ಪಾವತಿ ಅಗತ್ಯವಿಲ್ಲ: ನಿರ್ಮಲಾ

ಪ್ರಜಾವಾಣಿ ವಾರ್ತೆ

ಉಡುಪಿ: ಹೊಸ ಆದಾಯ ತೆರಿಗೆ ಪದ್ಧತಿಯ ಅಡಿಯಲ್ಲಿ ಸ್ಟ್ಯಾಂಡರ್ಡ್ ಡಿಡಕ್ಷನ್‌ಗೆ ಅವಕಾಶ ಕಲ್ಪಿಸಲಾಗಿದೆ, ₹7.27 ಲಕ್ಷದವರೆಗೂ ಆದಾಯ ತೆರಿಗೆ ಪಾವತಿಸುವ ಅಗತ್ಯವಿಲ್ಲ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದರು.

ಮಣಿಪಾಲದಲ್ಲಿ ಶುಕ್ರವಾರ ನಡೆದ ಬಿಜೆಪಿ ಪ್ರಬುದ್ಧರ ಸಮಾವೇಶದಲ್ಲಿ ಮಾತನಾಡಿದ ಅವರು, 'ಹೊಸ ತೆರಿಗೆ ಪದ್ಧತಿಯನ್ನು ಆಯ್ಕೆ ಮಾಡಿಕೊಂಡವರಿಗೆ ಸ್ಟ್ಯಾಂಡರ್ಡ್ ಡಿಡಕ್ಷನ್ ಸೌಲಭ್ಯ ಇಲ್ಲ ಎಂಬ ಆಕ್ಷೇಪ

ನಿರ್ಮಲಾ

ಇತ್ತು. ಆದರೆ ಈಗ ಆ ಸೌಲಭ್ಯವನ್ನು ಒದಗಿಸಲಾಗಿದೆ' ಎಂದರು.

'2013-14ರಲ್ಲಿ ಯುಪಿಎ ಸರ್ಕಾರ ಸಣ್ಣ, ಅತಿಸಣ್ಣ ಹಾಗೂ ಮಧ್ಯಮ ಪ್ರಮಾಣದ ಕೈಗಾರಿಕಾ ವಲಯಕ್ಕೆ (ಎಂಎಸ್‌ಎಂಇ) ಬಜೆಟ್‌ನಲ್ಲಿ ನೀಡಿದ್ದು ಕೇವಲ ₹3,285 ಕೋಟಿ. ಆದರೆ, ಬಿಜೆಪಿ ಸರ್ಕಾರ 2023–24ನೇ ಸಾಲಿನಲ್ಲಿ ₹22,138 ಕೋಟಿ ಮೀಸಲಿಟ್ಟಿದೆ' ಎಂದು ನಿರ್ಮಲಾ ಹೇಳಿದರು.

2023ರ ಕೇಂದ್ರ ಬಜೆಟ್‌ನಲ್ಲಿ ಎಂಎಸ್‌ಎಂಇಗೆ ಕ್ರೆಡಿಟ್ ಗ್ಯಾರಂಟಿ ಯೋಜನೆಯಡಿ ₹9,000 ಕೋಟಿ ಒದಗಿಸಲಾಗಿದೆ. ಪರಿಣಾಮ ಸಣ್ಣ, ಅತಿಸಣ್ಣ ಹಾಗೂ ಮಧ್ಯಮ ಕೈಗಾರಿಕೆಗಳ ಮೇಲಿನ ಸಾಲದ ಹೊರೆ ಕಡಿಮೆಯಾಗಿದೆ. ಎಂಎಸ್‌ಎಂಇ ವಲಯ ದೇಶದ ಆರ್ಥಿಕತೆಯ ಬೆನ್ನೆಲುಬಾಗಿದ್ದು, ಕೋವಿಡ್ ಕಾಲಘಟ್ಟದಲ್ಲಿ ಬಸವಳಿದಿದ್ದ ಕ್ಷೇತ್ರಕ್ಕೆ ಪುನಶ್ಚೇತನ ನೀಡಲಾಗುತ್ತಿದೆ ಎಂದರು.

ಉದ್ಯಮ್ ಯೋಜನೆ, ಪ್ರಧಾನಮಂತ್ರಿ ವ್ಯಾಪಾರಿ ಮಾನ್‌ಧನ್ ಯೋಜನೆ ಸಣ್ಣ ವ್ಯಾಪಾರಿಗಳಿಗೆ ಸಾಮಾಜಿಕ ಹಾಗೂ ಆರ್ಥಿಕ ಭದ್ರತೆಯನ್ನು ನೀಡುತ್ತಿವೆ ಎಂದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು,ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ.ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 12,000/- ರಿಂದ 15,000/-. ಬೆಂಗಳೂರು- 56.ಸಂಪರ್ಕಿಸಿ : 9606523337, 9606385001

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

ತಕ್ಷಣ ಬೇಕಾಗಿದ್ದಾರೆ ಕಂಪನಿ ಆಫೀಸ್‌ಗಳಿಗೆ, 5ನೇ, 10ನೇ,ಪಿಯುಸಿ, ಐಟಿಐಡಿಗ್ರಿ ಪಾಸ್/ಫೇಲ್ ನಗರ-ಗ್ರಾಮೀಣ ಹಳ್ಳಿಯುವಕರು ಯುವತಿಯರಿಗೆ, ವಸತಿಯೂಟದೊಂದಿಗೆ 16,900-45000. 9916799477, 9964140505

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ಸಂಪರ್ಕಿಸಿ: 9611227266 /9611221244

ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ ತಿಂಗಳಿಗೆ 18,000-22,000 ಸಂಪಾದಿಸಿ. ಕೊರಿಯರ್ ಇದೆ. 8050064329, 8050064330.

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000-20,000/ ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

ಪ್ರವಾಸ

Travel

ಹೆಸರಾಂತ ಪ್ರವಾಸಿ ಸಂಸ್ಥೆಯಿಂದ: ವಿಮಾನ/ ರೈಲು/ A/C ಬಸ್ 23.08.2023 06.09.2023 04.10.2023 ಕಾಶಿ,ಬುದ್ಧಗಯಾ,ಅಲಹಾಬಾದ್. 02.09.2023 20.09.2023 15.10.2023 ಚಾರ್‌ಧಾಮ್ ಸಮೇತ ಪ್ರವಾಸ. 19.10.2023 ದೆಹಲಿ,ಜೈಪುರ್ ಆಗ್ರಾ,ಹರಿದ್ವಾರ್ ಇತ್ಯಾದಿ. 29.09.2023 ಸೋಮನಾಥ್,ದ್ವಾರಕಾ ಓಂಕಾರೇಶ್ವರ ಮಹಾಕಾಳೇಶ್ವರ. ನಿಷ್ಕಳಂಕ ಮಹಾದೇವ. 23.09.2023 ನೇಪಾಳ,ಪೋಕ್ರ ಮುಕ್ತಿನಾಥ,ಲುಂಬಿನಿ. ಸಂಪರ್ಕಿಸಿ. ವಿಷ್ಣನ್ ಟ್ರಾವಲ್ ಏಜೆನ್ಸಿ ಕೆಳಮಹಡಿ ಬೆಂಗಳೂರು4. 26574131 7204173686 9686708171

ಭಾರತಪರಂಪರ ದರ್ಶನ 25.7.2023 7ದಿನ ರಾಮೇಶ್ವರಂ ನವಗ್ರಹಸಹಿತ ತಮಿಳುನಾಡು. 2.9.2023, 22.9.2023 14ದಿನ ಚಾರ್`ಧಾಮ್ ಯಾತ್ರೆ. 11ದಿನ ಗುಜರಾತ್ 9448792891.

ಬಿಲ್ಡರ್ ಎಸೆನ್ಷಿಯಲ್

Water Proofing

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

DH ಪ್ರಜಾವಾಣಿ
BOOK YOUR AD FOR SUNDAY & GET 50% OFF* ON WEEKDAYS
For Lineage & Single/ Multi Column Classifieds Display ads
For more information Contact:
9845114560 : 9731810277
9901641752 : 9886213331
080 - 45557163 / 164
*conditions apply

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ.
ಬೆಂಗಳೂರು

## ಫ್ರಾನ್ಸ್ ಅಧ್ಯಕ್ಷರಿಂದ 'ಗ್ರ್ಯಾಂಡ್ ಕ್ರಾಸ್ ಆಫ್ ದ ಲೀಜನ್ ಆಫ್ ಆನರ್' ಪ್ರಶಸ್ತಿ ಪ್ರದಾನ

# ಮೋದಿಗೆ ಫ್ರಾನ್ಸ್‌ನ ಅತ್ಯುನ್ನತ ನಾಗರಿಕ ಗೌರವ

ಪ್ಯಾರಿಸ್ (ಪಿಟಿಐ): ಫ್ರಾನ್ಸ್‌ನ ಅತ್ಯುನ್ನತ ನಾಗರಿಕ ಮತ್ತು ಸೇನಾ ಗೌರವ ಪ್ರಶಸ್ತಿ 'ಗ್ರ್ಯಾಂಡ್ ಕ್ರಾಸ್ ಆಫ್ ದ ಲೀಜನ್ ಆಫ್ ಆನರ್' ಅನ್ನು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪ್ರದಾನ ಮಾಡಿ ಫ್ರಾನ್ಸ್ ಸರ್ಕಾರ ಶುಕ್ರವಾರ ಗೌರವಿಸಿತು.

ಈ ಪ್ರಶಸ್ತಿಗೆ ಪಾತ್ರರಾದ ಭಾರತದ ಮೊದಲ ಗಣ್ಯರು ಎಂಬ ಹಿರಿಮೆಗೆ ಮೋದಿ ಪಾತ್ರರಾದರು. ಫ್ರಾನ್ಸ್‌ನ ಅಧ್ಯಕ್ಷ ಇಮ್ಯಾನುಯೆಲ್ ಮ್ಯಾಕ್ರನ್ ಅವರು ಇಲ್ಲಿನ ಎಲಿಸೀ ಪ್ಯಾಲೆಸ್‌ನಲ್ಲಿ ನಡೆದ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಿದರು.

ಫ್ರಾನ್ಸ್‌ನ ಈ ಪ್ರಶಸ್ತಿಗೆ ಈ ಮೊದಲು ದಕ್ಷಿಣ ಆಫ್ರಿಕಾದ ಮಾಜಿ ಅಧ್ಯಕ್ಷ ನೆಲ್ಸನ್ ಮಂಡೇಲಾ, ರಾಜ ಚಾರ್ಲ್ಸ್, ಜರ್ಮನಿಯ ಮಾಜಿ ಚಾನ್ಸೆಲರ್ ಅಂಗೆಲಾ ಮರ್ಕೆಲ್, ವಿಶ್ವಸಂಸ್ಥೆಯ ಮಾಜಿ ಮಹಾ ಪ್ರಧಾನ ಕಾರ್ಯದರ್ಶಿ ಬುಟ್ರೋಸ್ ಬುಟ್ರೋಸ್ ಘಾಲಿ ಭಾಜನರಾಗಿದ್ದರು.

'ನಮ್ರತೆಯಿಂದ ಈ ಅತ್ಯುನ್ನತ ನಾಗರಿಕ ಪ್ರಶಸ್ತಿ ಸ್ವೀಕರಿಸುತ್ತಿದ್ದೇನೆ. ಇದು, 140 ಕೋಟಿ ಭಾರತೀಯರಿಗೆ ಸಂದ ಗೌರವ. ಇದು, ಭಾರತದೆಡೆಗೆ ಇರುವ ಅಭಿಮಾನ ಮತ್ತು ಬಾಂಧವ್ಯವನ್ನು ಬಿಂಬಿಸುತ್ತದೆ' ಎಂದು ಪ್ರಶಸ್ತಿ ಕುರಿತು ಮೋದಿ ಟ್ವೀಟ್ ಮಾಡಿದ್ದಾರೆ.

'ಭಾರತ ಮತ್ತು ಫ್ರಾನ್ಸ್ ನಡುವಣ ಸ್ನೇಹಬಾಂಧವ್ಯ ಹಾಗೂ ಪರಸ್ಪರ ವಿಶ್ವಾಸ ಕಾಯ್ದುಕೊಳ್ಳುವಲ್ಲಿ ಪ್ರಧಾನಿ ಮೋದಿ ಅವರ ಪಾತ್ರ ಪ್ರಮುಖವಾದುದು' ಎಂದು ಫ್ರಾನ್ಸ್ ಅಧ್ಯಕ್ಷರ ಕಚೇರಿ ನೀಡಿರುವ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಮೋದಿ ಅವರಿಗೆ ಈ ವರ್ಷ ಈಜಿಪ್ಟ್‌ನ ನಾಗರಿಕ ಪ್ರಶಸ್ತಿ 'ಆರ್ಡರ್ ಆಫ್ ದ ನೈಲ್' ಗೌರವ ಸಂದಿತ್ತು. ಇದು, ಸೇರಿದಂತೆ ಹಲವು ಅಂತರರಾಷ್ಟ್ರೀಯ ಪ್ರಶಸ್ತಿಗಳಿಗೆ ಮೋದಿ ಅವರು ಭಾಜನರಾಗಿದ್ದು, ಆ ಪಟ್ಟಿಗೆ ಫ್ರಾನ್ಸ್‌ನ ಪ್ರಶಸ್ತಿಯು ಈಗ ಹೊಸ ಸೇರ್ಪಡೆಯಾಗಿದೆ.

ಫ್ರಾನ್ಸ್ ಸರ್ಕಾರ ಈ ಪ್ರಶಸ್ತಿಯನ್ನು 1802ರಲ್ಲಿ ಸ್ಥಾಪಿಸಿತ್ತು. ಮೋದಿ ಗೌರವಾರ್ಥ ಫ್ರಾನ್ಸ್‌ನ ಅಧ್ಯಕ್ಷ ಮತ್ತು ಅವರ ಪತ್ನಿ ಬ್ರಿಗಿಟೆ ಅವರು ಔತಣಕೂಟ ಆಯೋಜಿಸಿದ್ದರು.

ಫ್ರಾನ್ಸ್‌ನ ರಾಷ್ಟ್ರೀಯ ದಿನ ಸಮಾರಂಭದಲ್ಲಿ ಭಾಗವಹಿಸಿದ್ದ ನರೇಂದ್ರ ಮೋದಿ ಅವರಿಗೆ ಅಧ್ಯಕ್ಷ ಇಮ್ಯಾನುಯೆಲ್ ಮ್ಯಾಕ್ರನ್ ಪಥಸಂಚಲನದ ವಿವರ ನೀಡಿದರು. ಅಧ್ಯಕ್ಷರ ಪತ್ನಿ ಬ್ರಿಗಿಟೆ ಇದ್ದರು –ಪಿಟಿಐ ಚಿತ್ರ

### ಚೆಸ್ ಪಾನ್‌ಗಳ ಪ್ರತಿಕೃತಿ ಕೊಡುಗೆ

- ಸಿಖ್ ಯೋಧರೊಬ್ಬರಿಗೆ ಪರ್ಸಿಯನ್ ಮಹಿಳೆಯು ಹೂವು ನೀಡುವ 1916ರ ಛಾಯಾಚಿತ್ರದ ಪ್ರತಿ, 11ನೇ ಶತಮಾನದಲ್ಲಿ ಬಳಕೆಯಲ್ಲಿದ್ದ ಚೆಸ್ ಪಾನ್‌ಗಳ ಪ್ರತಿಕೃತಿಯನ್ನು ಅಧ್ಯಕ್ಷ ಇಮ್ಯಾನುಯೆಲ್ ಮ್ಯಾಕ್ರನ್ ಅವರು ಪ್ರಧಾನಿ ಮೋದಿ ಅವರಿಗೆ ನೀಡಿದರು.
- ಫ್ರೆಂಚ್ ಸಾಹಿತ್ಯದ ಪ್ರಮುಖ ಕೃತಿ ಎಂದು ಪರಿಗಣಿಸಿರುವ 1913-1927ರ ನಡುವೆ ಪ್ರಕಟಿಸಿರುವ 'ಇನ್ ಸರ್ಚ್ ಆಫ್ ಲಾಸ್ಟ್ ಟೈಮ್' ಕಾದಂಬರಿ ಪ್ರತಿಯನ್ನೂ ನೀಡಿದರು.
- **ಯೋಗ ಶಿಕ್ಷಕಿಗೆ ಶ್ಲಾಘನೆ:** 99ನೇ ವರ್ಷದಲ್ಲಿಯೇ ದೈಹಿಕ ಸ್ವಾಸ್ಥ್ಯ ರಕ್ಷಣೆಗೆ ಭಾರತೀಯ ಪ್ರಾಚೀನ ಯೋಗ ಪದ್ಧತಿ ಅನುಸರಿಸುತ್ತಿರುವ ಫ್ರಾನ್ಸ್‌ನ ಯೋಗ ಶಿಕ್ಷಕಿಯೊಬ್ಬರಿಗೆ ಮೋದಿ ಮೆಚ್ಚುಗೆ ಸೂಚಿಸಿದರು.
- ಪ್ಯಾರಿಸ್‌ನ ಚಾರ್ಲೋಟ್ ಚಾಪಿನ್ ಅವರು 50ನೇ ವಯಸ್ಸಿನಲ್ಲಿ ಯೋಗಾಭ್ಯಾಸ ಆರಂಭಿಸಿದರು. ಶೀಘ್ರವೇ 100ನೇ ವರ್ಷಕ್ಕೆ ಪದಾರ್ಪಣೆ ಮಾಡುವರು. ಯೋಗ ಅವರ ಆರೋಗ್ಯ ರಕ್ಷಣೆಗೆ ಪ್ರೇರೇಪಣೆಯಾಗಿದೆ ಎಂದರು.

ಅಲ್ಲದೆ, ಮೋದಿ ಫ್ರಾನ್ಸ್‌ನ ರಾಷ್ಟ್ರೀಯ ದಿನ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿಯೂ ಭಾಗವಹಿಸಿದ್ದರು.

ಪೊಲೀಸರಿಂದ ಬಾಲಕನ ಹತ್ಯೆ ಆರೋಪ ಪ್ರಕರಣದ ಹಿನ್ನೆಲೆಯಲ್ಲಿ ಜೂನ್ ಅಂತ್ಯದಲ್ಲಿ ಫ್ರಾನ್ಸ್‌ನಾದ್ಯಂತ ತೀವ್ರ ಹಿಂಸಾಚಾರ ನಡೆದಿದ್ದು, ಈ ಸಂಬಂಧ ದೇಶದಾದ್ಯಂತ ಸುಮಾರು 3,700 ಜನರನ್ನು ಬಂಧಿಸಲಾಗಿತ್ತು. ಆ ಕಹಿ ಘಟನೆಗಳ ನೆನಪಿನ ನಡುವೆಯೇ ರಾಷ್ಟ್ರೀಯ ದಿನ ಕಾರ್ಯಕ್ರಮವು ನಡೆಯಿತು. ಭದ್ರತಾ ಕಾರ್ಯಗಳಿಗೆ ಸುಮಾರು 45 ಸಾವಿರ ಪೊಲೀಸರನ್ನು ನಿಯೋಜಿಸಲಾಗಿತ್ತು.

1789ರಲ್ಲಿ ಫ್ರಾನ್ಸ್ ಮಹಾಕ್ರಾಂತಿಯ ಸಂದರ್ಭದಲ್ಲಿ ಬಾಸ್ಟಿಲ್ ಕಾರಾಗೃಹಕ್ಕೆ ಲಗ್ಗೆ ಹಾಕಿದ್ದ ಸಂದರ್ಭದ ನೆನಪಿಗೆ ರಾಷ್ಟ್ರೀಯ ದಿನ ಆಚರಿಸಲಾಗುತ್ತಿದೆ.

**'ಪಥಸಂಚಲನದಲ್ಲಿ ಭಾರತದ ಸೇನೆ':** ಶುಕ್ರವಾರ ನಡೆದ ಫ್ರಾನ್ಸ್‌ನ ರಾಷ್ಟ್ರೀಯ ದಿನ ಸಮಾರಂಭದ ಪಥಸಂಚಲನದಲ್ಲಿ ಭಾರತ ಸೇನೆಯ ನೌಕಾಪಡೆ, ವಾಯುಪಡೆ, ಭೂಸೇನೆ ಪಾಲ್ಗೊಂಡಿತ್ತು. ಪ್ರಧಾನಿ ಮೋದಿ ಹಾಗೂ ಫ್ರಾನ್ಸ್ ಅಧ್ಯಕ್ಷ ಇಮ್ಯಾನುಯೆಲ್ ಮ್ಯಾಕ್ರನ್ ಸಾಕ್ಷಿಯಾದರು.

ವಾಯುಪಡೆಯ ರಫೇಲ್ ಯುದ್ಧವಿಮಾನಗಳು ಕೂಡ ಫ್ರಾನ್ಸ್‌ನ ಯುದ್ಧ ವಿಮಾನಗಳ ಜೊತೆಗೂಡಿ ಅಲ್ಲಿನ ಬಾನಂಗಳದಲ್ಲಿ ಸಾಧನೆ ಮೆರೆದವು. ಸೇನೆಯ ಮೂರು ವಿಭಾಗದ ತುಕಡಿಗಳಿಗೆ ಸೇರಿದ 269 ಮಂದಿ 'ಸಾರೇ ಜಹಾಂ ಸೇ ಅಚ್ಛಾ...' ಹಿನ್ನೆಲೆ ಸಂಗೀತದೊಂದಿಗೆ ಹೆಜ್ಜೆಹಾಕಿದರು.

ರಫೇಲ್ ಯುದ್ಧ ವಿಮಾನವಲ್ಲದೆ ಸಿ–17 ಗ್ಲೋಬ್‌ಮಾಸ್ಟರ್ ಸಾಗಣೆ ವಿಮಾನ, ನೌಕಾಪಡೆಯ ಐಎನ್‌ಎಸ್ ಚೆನ್ನೈ ಕೂಡಾ ಪಥಸಂಚಲನದಲ್ಲಿ ಗಮನಸೆಳೆದವು.

ಈ ತುಕಡಿಗಳು ವೇದಿಕೆ ಮುಂಭಾಗದಿಂದ ಹಾದುಹೋದಾಗ ಪ್ರಧಾನಿ ನಮಸ್ಕರಿಸಿದರು. ಫ್ರಾನ್ಸ್ ರಾಷ್ಟ್ರೀಯ ದಿನ, ಪಥಸಂಚಲನದ ಮಾಹಿತಿಯನ್ನು ಫ್ರಾನ್ಸ್ ಅಧ್ಯಕ್ಷರು ಮೋದಿ ಜೊತೆಗೆ ಹಂಚಿಕೊಂಡಿದ್ದು ಕಂಡುಬಂದಿತು.

## ಗಡಿಯಾಚೆಗಿನ ಭಯೋತ್ಪಾದನೆ ತಡೆಗೆ ಕಠಿಣ ಕ್ರಮ: ಪ್ರಧಾನಿ

ಪ್ಯಾರಿಸ್ (ಪಿಟಿಐ): ಫ್ರಾನ್ಸ್–ಭಾರತ ಬಾಂಧವ್ಯ ವೃದ್ಧಿ, ಆರ್ಥಿಕತೆ ಮೇಲೆ ಉಕ್ರೇನ್–ರಷ್ಯಾ ಯುದ್ಧದ ಪರಿಣಾಮ ಸೇರಿ ವಿವಿಧ ವಿಷಯಗಳ ಕುರಿತು ಪ್ರಧಾನಿ ನರೇಂದ್ರ ಮೋದಿ ಅವರು ಶುಕ್ರವಾರ ಇಲ್ಲಿ ಅಧ್ಯಕ್ಷ ಇಮ್ಯಾನುಯೆಲ್ ಮ್ಯಾಕ್ರನ್ ಜೊತೆಗೆ ವಿಸ್ತೃತವಾಗಿ ಚರ್ಚಿಸಿದರು.

ಎಲಿಸೀ ಪ್ಯಾಲೆಸ್‌ಗೆ ಬಂದ ಮೋದಿ ಅವರನ್ನು ಮ್ಯಾಕ್ರನ್ ಸ್ವಾಗತಿಸಿದರು. 'ಉಭಯ ದೇಶಗಳ ಬಾಂಧವ್ಯಕ್ಕೆ 25 ವರ್ಷದ ಇತಿಹಾಸವಿದೆ. ಮುಂದಿನ 25 ವರ್ಷ ಬಾಂಧವ್ಯ ಬಲಪಡಿಸಲು ನೀಲನಕ್ಷೆ ರೂಪಿಸುತ್ತಿದ್ದೇವೆ' ಎಂದು ಮೋದಿ ಚರ್ಚೆ ಕುರಿತು ಪ್ರತಿಕ್ರಿಯಿಸಿದರು.

'ಉಭಯ ರಾಷ್ಟ್ರಗಳ ನಡುವಣ ಬಾಂಧವ್ಯಕ್ಕೆ ರಕ್ಷಣಾ ಕ್ಷೇತ್ರದ ಸಹಕಾರವೇ ಭದ್ರ ಅಡಿಪಾಯ. ಇದು, ಉಭಯ ರಾಷ್ಟ್ರಗಳು ಪರಸ್ಪರರ ಮೇಲೆ ಇಟ್ಟಿರುವ ವಿಶ್ವಾಸದ ದ್ಯೋತಕವೂ ಆಗಿದೆ. ಆತ್ಮನಿರ್ಭರ ಭಾರತ್ ನಿರ್ಮಾಣದಲ್ಲಿ ಫ್ರಾನ್ಸ್ ಮುಖ್ಯ ಪಾಲುದಾರ ರಾಷ್ಟ್ರವಾಗಿದೆ' ಎಂದರು. 'ಭಯೋತ್ಪಾದನೆಯ ವಿರುದ್ಧ ನಡೆಯುತ್ತಿರುವ ಯುದ್ಧದಲ್ಲಿ ಭಾರತ ಮತ್ತು ಫ್ರಾನ್ಸ್ ಒಟ್ಟಿಗಿದೆ. ಗಡಿಯಾಚೆಗೆ ಭಯೋತ್ಪಾದನೆ ಕೃತ್ಯಗಳಿಗೆ ಪ್ರೋತ್ಸಾಹ ನೀಡುವ ಪ್ರವೃತ್ತಿಯನ್ನು ತಡೆಯಲು ಕಠಿಣ ಕ್ರಮದ ಅಗತ್ಯವಿದೆ ಎಂಬುದು ಭಾರತದ ನಿಲುವು' ಎಂದು ಪ್ರಧಾನಿ ಹೇಳಿದರು. ಅಣುಶಕ್ತಿ ಕ್ಷೇತ್ರದಲ್ಲಿನ ಸಹಕಾರವನ್ನು ಇನ್ನಷ್ಟು ಬಲ ಪಡಿಸಲು ನಾವು ತೀರ್ಮಾನಿಸಿದ್ದೇವೆ ಎಂದು ಹೇಳಿದರು.

ರಷ್ಯಾ ಮತ್ತು ಉಕ್ರೇನ್ ನಡುವಿನ ಯುದ್ಧ ಹಾಗೂ ಕೋವಿಡ್ ಸ್ಥಿತಿಯ ಪರಿಣಾಮವನ್ನು ವಿಶ್ವದೆಲ್ಲೆಡೆ ಎದುರಿಸುವಂತಾಗಿದೆ ಎಂದು ಅಭಿಪ್ರಾಯಪಟ್ಟ ಮೋದಿ, 'ಅಗತ್ಯ ಬಿದ್ದರೆ ಎಲ್ಲ ದೇಶಗಳು ಒಗ್ಗೂಡಿ ಈ ಸಮಸ್ಯೆಗಳನ್ನು ಬಗೆಹರಿಸಬೇಕಾಗಿದೆ' ಎಂದು ಹೇಳಿದರು. ಎಲ್ಲ ವಿವಾದಗಳನ್ನು ಮಾತುಕತೆ ಮತ್ತು ರಾಜತಾಂತ್ರಿಕ ಮಾರ್ಗಗಳ ಮೂಲಕ ಬಗೆಹರಿಸಿಕೊಳ್ಳಬೇಕು ಎಂಬುದು ನಮ್ಮ ನಂಬಿಕೆ. ವಿಶ್ವದಲ್ಲಿ ಕಳೆದು ಹೋಗುತ್ತಿರುವ ಶಾಂತಿಯ ಮರುಸ್ಥಾಪನೆಗೆ ಅಗತ್ಯ ಕೊಡುಗೆಯನ್ನು ನೀಡಲು ಭಾರತ ಸಿದ್ಧವಿದೆ ಎಂದು ಪ್ರಧಾನಿ ಘೋಷಿಸಿದರು.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮ್ಯಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

# ಖಾಲಿಸ್ತಾನ್ ಬೆಂಬಲಿಗರಿಂದ ಭಾರತೀಯ ವಿದ್ಯಾರ್ಥಿ ಮೇಲೆ ಹಲ್ಲೆ

ಮೆಲ್ಬರ್ನ್(ಪಿಟಿಐ): ಖಾಲಿಸ್ತಾನ್‌ನ ಬೆಂಬಲಿಗರು ತಮ್ಮ ಕಾರ್ಯಚಟುವಟಿಕೆಯನ್ನು ವಿರೋಧಿಸಿದ್ದ ಭಾರತ ಮೂಲದ, 23 ವರ್ಷದ ವಿದ್ಯಾರ್ಥಿಗೆ ಕಬ್ಬಿಣದ ಸರಳುಗಳಿಂದ ತೀವ್ರವಾಗಿ ಥಳಿಸಿದ್ದಾರೆ ಎಂದು ಸ್ಥಳೀಯ ಮಾಧ್ಯಮ ವರದಿ ಮಾಡಿದೆ.

ಚಾಲಕನಾಗಿಯೂ ಕೆಲಸ ಮಾಡುತ್ತಿದ್ದ ವಿದ್ಯಾರ್ಥಿಯ ಮೇಲೆ 'ಖಾಲಿಸ್ತಾನ್ ಜಿಂದಾಬಾದ್' ಘೋಷಣೆ ಕೂಗುತ್ತಿದ್ದ ಗುಂಪು ಸಿಡ್ನಿಯ ಹೊರವಲಯದ ಮೆರ್ರಿಲ್ಯಾಂಡ್‌ನಲ್ಲಿ ಹಲ್ಲೆ ನಡೆಸಿದೆ ಎಂದು 'ಆಸ್ಟ್ರೇಲಿಯಾ ಟುಡೆ' ವೆಬ್ ಪೋರ್ಟಲ್ ವರದಿ ಮಾಡಿದೆ.

ಬೆಳಿಗ್ಗೆ 5.30ಕ್ಕೆ ಕೆಲಸಕ್ಕೆ ಹೋಗಲು ಕಾರು ಹತ್ತುತ್ತಿದ್ದಾಗ 3-4 ಮಂದಿ ತಡೆದು ಕಬ್ಬಿಣದ ಸರಳಿನಿಂದ ಹಲ್ಲೆ ನಡೆಸಿದರು ಎಂದು ಗುರುತು ಬಹಿರಂಗಪಡಿಸಿಕೊಳ್ಳಲು ಬಯಸದ ವಿದ್ಯಾರ್ಥಿ ಹೇಳಿಕೊಂಡಿದ್ದಾರೆ.

# ಲಿಂಗಪರಿವರ್ತನೆ ನಿಷೇಧ ಮಸೂದೆಗೆ ಅಸ್ತು

ಮಾಸ್ಕೊ (ರಾಯಿಟರ್ಸ್): ಕಾನೂನು ಅಥವಾ ವೈದ್ಯಕೀಯವಾಗಿ ಲಿಂಗ ಪರಿವರ್ತನೆ ಪ್ರಕ್ರಿಯೆಗೆ ನಿಷೇಧ ಹೇರುವ ಮಸೂದೆಗೆ ರಷ್ಯಾದ ಸಂಸತ್ತಿನ ಕೆಳಮನೆ ಶುಕ್ರವಾರ ಅನುಮೋದನೆ ನೀಡಿತು. ಈ ಮೂಲಕ ಎಲ್‌ಜಿಬಿಟಿ ವರ್ಗದ ಹಕ್ಕುಗಳಿಗೆ ಭಾಗಶಃ ನಿರ್ಬಂಧ ಹೇರಿದಂತಾಗಿದೆ.

1997ರಿಂದ ಸಿಂಧುವಾಗಿರುವ ಅಧಿಕೃತ ದಾಖಲೆಗಳಲ್ಲಿ ರಷ್ಯಾದ ನಾಗರಿಕರು ಲಿಂಗಪರಿವರ್ತನೆ ತಿದ್ದುಪಡಿ ಮಾಡಿಸಿಕೊಳ್ಳುವುದಕ್ಕೆ ಮಸೂದೆ ನಿರ್ಬಂಧ ಹೇರಲಿದೆ. ಹಾಗೂ ಲಿಂಗಪರಿವರ್ತನೆಯ ಶಸ್ತ್ರಚಿಕಿತ್ಸೆ ಹಾಗೂ ಹಾರ್ಮೋನ್ ಥೆರಪಿ ನಡೆಸುವುದನ್ನು ನಿಷೇಧಿಸಲಿದೆ.

ಕೆಳಮನೆಯಲ್ಲಿ ಗುರುವಾರ ಚರ್ಚೆಯ ಬಳಿಕ ಉದ್ದೇಶಿತ ಮಸೂದೆಗೆ ಹೆಚ್ಚುವರಿಯಾಗಿ ಕೆಲ ಅಂಶಗಳನ್ನು ಸೇರಿಸಲಾಯಿತು.

# ಐ.ಟಿ. ಗಳಿಕೆ: ಸೆನ್ಸೆಕ್ಸ್ ಏರಿಕೆ

ಮುಂಬೈ/ಬೆಂಗಳೂರು (ಪಿಟಿಐ/ರಾಯಿಟರ್ಸ್): ದೇಶದ ಮಾಹಿತಿ ತಂತ್ರಜ್ಞಾನ ವಲಯದ ಕಂಪನಿಗಳನ್ನು ಪ್ರತಿನಿಧಿಸುವ ಸೂಚ್ಯಂಕವು (ನಿಫ್ಟಿ ಐ.ಟಿ) ಶುಕ್ರವಾರದ ವಹಿವಾಟಿನಲ್ಲಿ ಶೇಕಡ 4.5ರಷ್ಟು ಏರಿಕೆ ಕಂಡಿತು. ಇದು 2020ರ ಸೆಪ್ಟೆಂಬರ್ ನಂತರದಲ್ಲಿ ಒಂದು ದಿನದಲ್ಲಿ ಆಗಿರುವ ಗರಿಷ್ಠ ಏರಿಕೆ. ಅಮೆರಿಕದಲ್ಲಿ ಬಡ್ಡಿ ದರ ಏರಿಕೆಗೆ ವಿರಾಮ ಹೇಳುವ ಕಾಲ ಸನ್ನಿಹಿತವಾಗಿದೆ ಎಂಬ ನಿರೀಕ್ಷೆಯು ಈ ಏರಿಕೆಗೆ ಒಂದು ಕಾರಣ.

'ಐ.ಟಿ. ಕಂಪನಿಗಳ ಹಣಕಾಸು ಸಾಧನೆ ಚೆನ್ನಾಗಿರುತ್ತದೆ, ಪ್ರಸಕ್ತ ಹಣಕಾಸು ವರ್ಷದ ದ್ವಿತೀಯಾರ್ಧದಲ್ಲಿ ಚೇತರಿಕೆಯು ಇನ್ನಷ್ಟು ಇರುತ್ತದೆ ಎಂಬ ನಿರೀಕ್ಷೆಯು ಐ.ಟಿ. ಷೇರುಗಳ ಏರಿಕೆಗೆ ಕಾರಣವಾಯಿತು' ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್‌ನ ಸಾಂಸ್ಥಿಕ ಸಂಶೋಧನಾ ವಿಭಾಗದ ಉಪಾಧ್ಯಕ್ಷ ಅಪೂರ್ವ ಪ್ರಸಾದ್ ಹೇಳಿದ್ದಾರೆ.

ಐ.ಟಿ. ಷೇರುಗಳಿಗೆ ಬೇಡಿಕೆ ಹೆಚ್ಚಾಗಿದ್ದರಿಂದ ಶುಕ್ರವಾರದ ವಹಿವಾಟಿನಲ್ಲಿ ದೇಶದ ಷೇರುಪೇಟೆ ಸೂಚ್ಯಂಕಗಳು ಹೊಸ ಎತ್ತರವನ್ನು ತಲುಪಿದವು. ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ ಇದೇ ಮೊದಲ ಬಾರಿಗೆ 66 ಸಾವಿರದ ಗಡಿಯನ್ನು ದಾಟಿ ವಹಿವಾಟು ಅಂತ್ಯಗೊಳಿಸಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ ಸಾರ್ವಕಾಲಿಕ ಗರಿಷ್ಠ ಮಟ್ಟವನ್ನು ತಲುಪಿತು.

ಬಿಎಸ್‌ಇ ಸೆನ್ಸೆಕ್ಸ್ 502 ಅಂಶ ಹೆಚ್ಚಾಗಿ 66,060 ಅಂಶಗಳಲ್ಲಿ ವಹಿವಾಟು ಅಂತ್ಯಗೊಳಿಸಿತು. ನಿಫ್ಟಿ 151 ಅಂಶ ಹೆಚ್ಚಾಗಿ 19,564 ಅಂಶಗಳಿಗೆ ತಲುಪಿತು. ಸೆನ್ಸೆಕ್ಸ್‌ನಲ್ಲಿ ಟಿಸಿಎಸ್ ಷೇರು ಶೇ 5.13ರಷ್ಟು, ಟೆಕ್ ಮಹೀಂದ್ರ ಶೇ 4.51, ಇನ್ಫೊಸಿಸ್ ಶೇ 4.40, ಎಚ್‌ಸಿಎಲ್ ಟೆಕ್ನಾಲಜೀಸ್ ಶೇ 3.80 ಮತ್ತು ವಿಪ್ರೊ ಶೇ 2.69ರಷ್ಟು ಏರಿಕೆ ಕಂಡವು.

ಸಗಟು ಹಣದುಬ್ಬರ ಸತತ ಇಳಿಕೆ ಕಂಡಿರುವುದು ಹಾಗೂ ವಿದೇಶಿ ಬಂಡವಾಳ ಒಳಹರಿವು ಗೂಳಿ ಓಟಕ್ಕೆ ಬೆಂಬಲ ನೀಡಿದವು ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

### ಬೆಳ್ಳಿ ₹1,400 ಏರಿಕೆ

ನವದೆಹಲಿ: ಇಲ್ಲಿನ ಚಿನಿವಾರ ಪೇಟೆಯಲ್ಲಿ ಸತತ ಎರಡನೇ ದಿನವೂ ಬೆಳ್ಳಿ ಧಾರಣೆ ಏರಿಕೆ ಕಂಡಿದೆ. ಶುಕ್ರವಾರ ಕೆ.ಜಿಗೆ ₹1,400ರಷ್ಟು ಹೆಚ್ಚಾಗಿದ್ದು ₹76,400ಕ್ಕೆ ತಲುಪಿದೆ. ಗುರುವಾರ ಕೆ.ಜಿಗೆ ₹2,300ರಷ್ಟು ಏರಿಕೆ ಕಂಡಿತ್ತು.

ಆದರೆ, ಚಿನ್ನದ ದರ ಕೆ.ಜಿಗೆ ₹100 ಇಳಿಕೆ ಕಂಡು 10 ಗ್ರಾಂಗೆ ₹60 ಸಾವಿರಕ್ಕೆ ತಲುಪಿದೆ.

ಶ್ರೀಹರಿಕೋಟಾದಲ್ಲಿ ಚಂದ್ರಯಾನ–3ರ ಉಡಾವಣೆ ಕಣ್ತುಂಬಿಕೊಳ್ಳಲು ನೆರೆದಿದ್ದ ಜನಸ್ತೋಮ – ಪಿಟಿಐ ಚಿತ್ರ

### ಆ.1ರಿಂದ ಚಂದ್ರನ ಕಕ್ಷೆಗೆ ಗಗನನೌಕೆ ಸೇರಿಸುವ ಕಾರ್ಯ: ಇಸ್ರೊ ಅಧ್ಯಕ್ಷ

# ಆ.23ಕ್ಕೆ 'ಸಾಫ್ಟ್ ಲ್ಯಾಂಡಿಂಗ್'

ಶ್ರೀಹರಿಕೋಟಾ (ಆಂಧ್ರಪ್ರದೇಶ) (ಪಿಟಿಐ): 'ಚಂದ್ರಯಾನ–3'ರ 'ಸಾಫ್ಟ್ ಲ್ಯಾಂಡಿಂಗ್'ಅನ್ನು ಆಗಸ್ಟ್ 23ರ ಸಂಜೆ 5.47ಕ್ಕೆ ನೆರವೇರಿಸಲು ಯೋಜಿಸಲಾಗಿದೆ ಎಂದು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ಅಧ್ಯಕ್ಷ ಎಸ್.ಸೋಮನಾಥ್ ಶುಕ್ರವಾರ ಹೇಳಿದರು.

'ಚಂದ್ರಯಾನ–3' ಉಡ್ಡಯನದ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಸಾಫ್ಟ್ ಲ್ಯಾಂಡಿಂಗ್ ತಾಂತ್ರಿಕವಾಗಿ ಬಹಳ ಸವಾಲಿನ ಕಾರ್ಯವಾಗಿದೆ' ಎಂದರು.

'ಗಗನನೌಕೆಯನ್ನು ಚಂದ್ರನ ಕಕ್ಷೆಗೆ ಸೇರಿಸುವ ಕಾರ್ಯವನ್ನು ಆಗಸ್ಟ್ 1ರಿಂದ ಆರಂಭಿಸಲು ಯೋಜಿಸಲಾಗಿದೆ' ಎಂದು ಹೇಳಿದರು. ಈ ಕಾರ್ಯಕ್ರಮದ ನಿರ್ದೇಶಕ ಎಸ್. ಮೋಹನಕುಮಾರ್, 'ಎಲ್‌ವಿಎಂ3 ರಾಕೆಟ್ ಮತ್ತೊಮ್ಮೆ ತನ್ನ ಸಾಮರ್ಥ್ಯವನ್ನು ಸಾಬೀತುಪಡಿಸಿದೆ' ಎಂದು ಹೇಳಿದರು.

'ಪ್ರೊಪಲ್ಷನ್ ಮಾಡ್ಯೂಲ್ ಹಾಗೂ ಲ್ಯಾಂಡರ್ ಮಾಡ್ಯೂಲ್‌ನಲ್ಲಿ ವಿದ್ಯುತ್ ಉತ್ಪಾದನೆ ಸೇರಿದಂತೆ ಗಗನನೌಕೆ ಕಾರ್ಯಾಚರಣೆಗೆ ಸಂಬಂಧಿಸಿದ ಎಲ್ಲ ಅಂಶಗಳು ಸುಸ್ಥಿತಿಯಲ್ಲಿವೆ' ಎಂದು ಯೋಜನಾ ನಿರ್ದೇಶಕ ಪಿ.ವೀರಮುತ್ತುವೇಲು ಹೇಳಿದರು.

ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಖಾತೆ ರಾಜ್ಯ ಸಚಿವ ಜಿತೇಂದ್ರ ಸಿಂಗ್, 'ಚಂದ್ರಯಾನ–3ಕ್ಕೆ ಅಂದಾಜು ₹ 600 ಕೋಟಿ ವೆಚ್ಚವಾಗಿದೆ' ಎಂದು ಹೇಳಿದರು.

'ಭಾರತದ ಬಾಹ್ಯಾಕಾಶ ಕಾರ್ಯಕ್ರಮದ ಪಿತಾಮಹ ಎಂದೇ ಕರೆಯಲಾಗುವ ದಿವಂಗತ ವಿಕ್ರಮ್ ಸಾರಾಭಾಯಿ ಅವರು ಆರು ದಶಕಗಳ ಹಿಂದೆಯೇ ಇಂಥ ಆಕಾಶಯಾನ ಕನಸು ಕಂಡಿದ್ದರು. ಅವರ ಕನಸು ಈ ದಿನ ಸಾಕಾರಗೊಂಡಂತಾಗಿದೆ' ಎಂದರು.

'ಇಂತಹ ಯೋಜನೆ ಅನುಷ್ಠಾನಕ್ಕೆ ಆಗ ಸಾರಾಭಾಯಿ ಅವರಿಗೆ ಹಣಕಾಸಿನ ಕೊರತೆ ಇದ್ದಿರಬಹುದು, ಆದರೆ, ಅವರಲ್ಲಿ ಆತ್ಮವಿಶ್ವಾಸ, ದೂರ ದೃಷ್ಟಿಗೆ ಕೊರತೆ ಇರಲಿಲ್ಲ' ಎಂದು ಸ್ಮರಿಸಿದರು.

### ಮುಗಿಲು ಮುಟ್ಟಿದ ಸಂಭ್ರಮ

ಶ್ರೀಹರಿಕೋಟಾ: ಆಂಧ್ರಪ್ರದೇಶ ಮಾತ್ರವಲ್ಲ, ಇತರ ರಾಜ್ಯಗಳಿಂದ ಬಂದಿದ್ದವರಲ್ಲಿ ಕುತೂಹಲ.. ಕ್ಷಣಗಳು ಉರುಳಿದಂತೆ ಆ ಕುತೂಹಲ ಹೆಚ್ಚುತ್ತಿತ್ತು. ಕೊನೆಗೆ ಆ ಘಳಿಗೆ ಬಂದೇ ಬಿಟ್ಟಿತು...

'ಚಂದ್ರಯಾನ–3' ನೌಕೆ ಉಡಾವಣಾ ನೆಲೆಯಿಂದ ಚಿಮ್ಮಿ, ಆಕಾಶದತ್ತ ಮುನ್ನುಗ್ಗುತ್ತಿರುವಂತೆಯೇ ಪ್ರೇಕ್ಷಕರ ಗ್ಯಾಲರಿಯಲ್ಲಿದ್ದವರ ಕುತೂಹಲ ಸಂಭ್ರಮವಾಗಿ ಮಾರ್ಪಟ್ಟಿತ್ತು.. ನೌಕೆ ಗಗನಮುಖಿಯಾಗಿದ್ದರೆ, ಇವರ ಚಪ್ಪಾಳೆ, ಹರ್ಷೋದ್ಗಾರ ಮುಗಿಲು ಮುಟ್ಟಿತ್ತು. ಜೋರಾಗಿ ಕೂಗುವ ಮೂಲಕ ಇಸ್ರೊದ ಕಾರ್ಯಕ್ಕೆ ತಮ್ಮ ಮೆಚ್ಚುಗೆಯ ಮುದ್ರೆವೊತ್ತಿದರು. ಹಲವರು ರಾಕೆಟ್‌ನ ಪಯಣವನ್ನು ತಮ್ಮ ಮೊಬೈಲ್‌ಗಳಲ್ಲಿ ಸೆರೆ ಹಿಡಿಯುತ್ತಿದ್ದುದು ಕೂಡ ಕಂಡುಬಂತು. ಅದರಲ್ಲೂ, ಪ್ರೊಪಲ್ಷನ್ ಮಾಡ್ಯೂಲ್ ರಾಕೆಟ್‌ನಿಂದ ಯಶಸ್ವಿಯಾಗಿ ಬೇರ್ಪಟ್ಟ ಬಗ್ಗೆ ನಿಯಂತ್ರಣ ಕೇಂದ್ರದಿಂದ ಘೋಷಣೆ ಕೇಳಿಬಂದಾಗ ಸಚಿವ ಸಿಂಗ್, ಇಸ್ರೊದ ಮಾಜಿ ಅಧ್ಯಕ್ಷರು ಸೇರಿದಂತೆ ಕೇಂದ್ರದಲ್ಲಿದ್ದವರ ಸಂತೋಷಕ್ಕೆ ಪಾರವೇ ಇರಲಿಲ್ಲ.

ಇಸ್ರೊ ಅಧ್ಯಕ್ಷ ಎಸ್.ಸೋಮನಾಥ್, ಸಚಿವ ಜಿತೇಂದ್ರ ಸಿಂಗ್ ಚಂದ್ರಯಾನ–3ರ ಉಡಾವಣಾ ವಾಹಕದ ಪ್ರತಿಕೃತಿ ಪ್ರದರ್ಶಿಸಿದರು – ಎಎಫ್‌ಪಿ ಚಿತ್ರ

### ಅವಶ್ಯಕ ವಸ್ತುಗಳನ್ನು ಪೂರೈಸಿದ ಕನ್ನಡಿಗರ ತಂಡ

# ಬೆಳಗಾವಿಯಿಂದ ಬಿಡಿ ಭಾಗ

• ಸಂತೋಷ ಈ. ಚಿನಗುಡಿ

ಬೆಳಗಾವಿ: 'ಚಂದ್ರಯಾನ–3' ಬಾಹ್ಯಾಕಾಶ ನೌಕೆಯ ಪ್ರಮುಖ ಬಿಡಿಭಾಗಗಳು ಬೆಳಗಾವಿಯಲ್ಲಿ ತಯಾರಾಗಿವೆ. ಇಲ್ಲಿನ ಸರ್ವೊ ಕಂಟ್ರೋಲ್ಸ್ ಏರೋಸ್ಪೇಸ್ ಇಂಡಿಯಾ ಲಿಮಿಟೆಡ್ ಕಂಪನಿ ಸಿದ್ಧಪಡಿಸಿದ ಬಿಡಿ ಭಾಗಗಳು ಈ ಖಗೋಳಯಾನದ ಪೂರ್ಣ ಪ್ರಕ್ರಿಯೆಯಲ್ಲಿ ಪ್ರಮುಖ ಪಾತ್ರ ವಹಿಸಲಿವೆ.

ಗಗನನೌಕೆಯಲ್ಲಿ ಬಳಸಿದ ಹೈಡ್ರಾಲಿಕ್ ಉಪಕರಣ, ವಾಲ್ವ್‌ಗಳು, ಸ್ಪೂಲ್ಸ್, ಸ್ಲೀವ್ಸ್, ಮ್ಯಾನಿಫೋಲ್ಡ್ ಬ್ಲಾಕ್ಸ್, ಎಲೆಕ್ಟ್ರಾನಿಕ್ ಸೆನ್ಸರ್‌ಗಳನ್ನು ಇದೇ ಕಂಪನಿಯಿಂದ ರವಾನಿಸಲಾಗಿದೆ. ಚಂದ್ರಯಾನದ ಮೊದಲ ಹೆಜ್ಜೆಯಿಂದ ಹಿಡಿದು ಪೂರ್ಣವಾಗುವವರೆಗೂ ಇಲ್ಲಿನ ಉಪಕರಣಗಳು ಬಳಕೆಯಾಗಲಿವೆ. 'ಹೈಡ್ರಾಲಿಕ್ ಉಪಕರಣವು ಗಗನನೌಕೆಯ ಪಥ ನಿರ್ವಹಣೆ (ನಾಜಲ್ ಕಂಟ್ರೋಲ್) ಮಾಡಲು ಸಹಕರಿಸುತ್ತದೆ. ನೌಕೆಯು ಚಂದ್ರನ ಕಕ್ಷೆಯಲ್ಲಿ ಸುತ್ತವಾಗ ಸೆನ್ಸರ್ ಕೆಲಸ ಮಾಡುತ್ತದೆ. ನೌಕೆಯಿಂದ ಚಂದ್ರನ ಮೇಲೆ ಇಳಿಯುವ ರೋವರ್‌ನಲ್ಲೂ ಈ ಸೆನ್ಸರ್ ಕೆಲಸ ಮಾಡಲಿದೆ' ಎಂದು ಕಂಪನಿಯ ಮಾಲೀಕ, ವ್ಯವಸ್ಥಾಪಕ ನಿರ್ದೇಶಕರೂ ಆದ ದೀಪಕ್ ಧಡೋತಿ ತಿಳಿಸಿದರು.

'ಬಾಹ್ಯಾಕಾಶ ಯಾನವು ಅತ್ಯಂತ ಕ್ಲಿಷ್ಟಕರ ಪ್ರಯೋಗ. ಒಂದೇ ಒಂದು ಸೆಕೆಂಡ್ ವ್ಯತ್ಯಾಸ ಆಗಬಾರದು. ಅದರ ಪ್ರತಿ ಬಿಡಿಭಾಗವೂ ಯಾನದ ಯಶಸ್ಸಿನಲ್ಲಿ ಸಮಾನ ಮಹತ್ವ ಪಡೆಯುತ್ತದೆ' ಎಂದರು.

ಈ ಕಂಪನಿಯು ಚಂದ್ರಯಾನ–2 ಹಾಗೂ ಮಂಗಳಯಾನಕ್ಕೂ ಬಿಡಿಭಾಗಗಳನ್ನು ಪೂರೈಸಿತ್ತು. 15 ವರ್ಷಗಳಿಂದ 'ಇಸ್ರೊ' ಸಂಸ್ಥೆಯೊಂದಿಗೆ ಈ ಕಂಪನಿ ಹೆಜ್ಜೆ ಇಡುತ್ತಿದೆ.

### ತಂಡದಲ್ಲಿ ಬೆಳಗಾವಿ ಪ್ರತಿಭೆ

ದೀಪಕ ಧಡೋತಿ

ಪ್ರಕಾಶ ಪಡಣೇಕರ್

ಖಾನಾಪುರ: ಬಹುನಿರೀಕ್ಷಿತ ಚಂದ್ರಯಾನ–3ರ ತಂತ್ರಜ್ಞರ ತಂಡದಲ್ಲಿ ಬೆಳಗಾವಿಯ ಯುವ ಪ್ರತಿಭೆ ಪ್ರಕಾಶ ಪಡಣೇಕರ್ ಕೂಡ ಇದ್ದಾರೆ. ಜಿಲ್ಲೆಯ ಖಾನಾಪುರ ತಾಲ್ಲೂಕಿನ ಅನಗಡಿ ಗ್ರಾಮದವರಾದ ಪ್ರಕಾಶ ರೈತ ಕುಟುಂಬದವರು.

ಬೆಳಗಾವಿಯ ಜಿಐಟಿ ಕಾಲೇಜಿನಲ್ಲಿ ಮೆಕ್ಯಾನಿಕಲ್ ಎಂಜಿನಿಯರಿಂಗ್ ಪದವಿ, ಮುಂಬೈನ ವಿವಿಡಿಪಿ ವಿಶ್ವವಿದ್ಯಾಲಯದಲ್ಲಿ ಅಂತರಿಕ್ಷ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. 32 ವರ್ಷದ ಪ್ರಕಾಶ 2019ರಿಂದ ಶ್ರೀಹರಿಕೋಟಾದಲ್ಲಿ ತಂತ್ರಜ್ಞಾನಿಯಾಗಿದ್ದಾರೆ. ಚಂದ್ರಯಾನ–2ರಲ್ಲೂ ಪ್ರಕಾಶ ಅವರು ಕಾರ್ಯ ನಿರ್ವಹಿಸಿದ್ದರು.

### ಪೋಷಕರ ಸಂಭ್ರಮ

ಲಖೀಂಪುರ (ಅಸ್ಸಾಂ) (ಪಿಟಿಐ): ಶ್ರೀಹರಿಕೋಟಾದಲ್ಲಿ ಚಂದ್ರಯಾನ 3 ಉಡ್ಡಯನಕ್ಕೆ ತಯಾರಿ ನಡೆದಿದ್ದರೆ ದೂರದ ಅಸ್ಸಾಂನ ಲಖಿಂಪುರದಲ್ಲಿ ವೃದ್ಧ ದಂಪತಿ ತಮ್ಮ ಪುಟ್ಟದೊಂದು ಮಳಿಗೆಯಲ್ಲಿ ಮೈಯೆಲ್ಲ ಕಣ್ಣಾಗಿಸಿ, ಉಸಿರು ಬಿಗಿಹಿಡಿದು ಇಡೀ ಕಾರ್ಯಕ್ರಮವನ್ನು ತಮ್ಮ ಮೊಬೈಲ್ ಪರದೆಯಲ್ಲಿ ನೋಡುತ್ತಿದ್ದರು.

ಕ್ಷಣಗಳು ಹತ್ತಿರವಾದಂತೆ ಅವರ ಸ್ನೇಹಿತರು, ಗ್ರಾಹಕರು ಬಂದು ಜೊತೆಯಾದರು. ಚಂದ್ರಯಾನದ ರಾಕೆಟ್ ಗಗನಕ್ಕೆ ಹಾರುವುದನ್ನು ಕಣ್ತುಂಬಿಕೊಳ್ಳುವಾಗಲೇ ಕಣ್ಣಸೆ. ತಮ್ಮ ಕರುಳಕುಡಿ ಈ ದೊಡ್ಡ ಯೋಜನೆಯ ಭಾಗವಾಗಿರುವ ಹೆಮ್ಮೆ ಅವರಲ್ಲಿ.

ಇವರು ಚಂದ್ರಯಾನ–3ರ ಉಡ್ಡಯನ ನಿಯಂತ್ರಣ ಕಾರ್ಯಾಚರಣೆ ವಿಭಾಗದ ಉಸ್ತುವಾರಿಯಾಗಿರುವ ಯೋಜನಾ ಉಪ ನಿರ್ದೇಶಕ ಚಯನ್ ದತ್ತ ಅವರ ಪೋಷಕರು. ರಂಜಿತ್ ದತ್ತ ದಂಪತಿಯ ಸಂಭ್ರಮ ಮೇರೆ ಮೀರಿದ್ದರೂ ಎಲ್ಲರ ಹಾರೈಕೆಗಾಗಿ ಕೃತಜ್ಞತೆ ಸಲ್ಲಿಸುತ್ತಿದ್ದರು.

### ಚಿಕ್ಕಬಳ್ಳಾಪುರದ ವಿಜ್ಞಾನಿಗಳು ಭಾಗಿ

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ಅತ್ತ ಶ್ರೀಹರಿಕೋಟಾದಲ್ಲಿ 'ಚಂದ್ರಯಾನ -3' ಗಗನನೌಕೆ ಆಕಾಶದತ್ತ ಹಾರುತ್ತಿದ್ದಂತೆ ಇತ್ತ ಗುಡಿಬಂಡೆ ತಾಲ್ಲೂಕಿನ ಜಂಗಾಲಹಳ್ಳಿ ಹಾಗೂ ಗೌರಿಬಿದನೂರು ತಾಲ್ಲೂಕಿನ ಡಿ. ಪಾಳ್ಯದಲ್ಲಿ ಸಂಭ್ರಮ ಮನೆ ಮಾಡಿತ್ತು.

ಜಂಗಾಲಹಳ್ಳಿಯ ಗುರ್ರಪ್ಪ ಮತ್ತು ಡಿ.ಪಾಳ್ಯದ ಆರ್.ಶ್ರೀನಾಥ್ 'ಚಂದ್ರಯಾನ–3' ಯೋಜನೆಯಲ್ಲಿ ಕೆಲಸ ನಿರ್ವಹಿಸಿದ ವಿಜ್ಞಾನಿಗಳಾಗಿದ್ದಾರೆ.

ಗುರ್ರಪ್ಪ ಅವರು ಮಿಷನ್ ನಿಯಂತ್ರಣ ಕೇಂದ್ರದಲ್ಲಿ ಕೆಲಸ ನಿರ್ವಹಿಸಲು ಅಗತ್ಯವಾದ ಸಾಧನ ಸಲಕರಣೆಗಳನ್ನು ನಿರ್ವಹಿಸುವ ತಂಡದ ಸದಸ್ಯರಾಗಿದ್ದರು. ಆರ್.ಶ್ರೀನಾಥ್, ಚಂದ್ರಯಾನದ ಮಾಹಿತಿ ಮತ್ತು ಅಂಕಿ–ಅಂಶಗಳನ್ನು ಕಲೆ ಹಾಕಿ ವಿಶ್ಲೇಷಣೆಗೆ ಒಳಪಡಿಸುವ ತಂಡದಲ್ಲಿ ಕೆಲಸ ಮಾಡುತ್ತಿದ್ದಾರೆ.

ಗೌರಿಬಿದನೂರು ತಾಲ್ಲೂಕಿನ ನ್ಯಾಮಗೊಂಡ್ಲು ಗ್ರಾಮದ ಗಿರೀಶ್ ಸಹ 'ಚಂದ್ರಯಾನ–3' ಯೋಜನೆಯಲ್ಲಿ ಕೆಲಸ ಮಾಡಿದ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

# ಚಂದಿರನತ್ತ ಯಾನ ಶುರು

ಒಂದನೇ ಪುಟದಿಂದ

ಈ ಮಹತ್ವಾಕಾಂಕ್ಷಿ ಅಂತರಿಕ್ಷ ಕಾರ್ಯಕ್ರಮದ ಮೂಲಕ ಭಾರತೀಯ ಬಾಹ್ಯಾಕಾಶ ಸಂಶೋಧನೆ ಸಂಸ್ಥೆ (ಇಸ್ರೊ) ಮತ್ತೊಂದು ಮೈಲಿಗಲ್ಲು ಸ್ಥಾಪಿಸಿದಂತಾಗಿದೆ. ಸಂಸ್ಥೆಯ ವಿಜ್ಞಾನಿಗಳು, ದೂರದ ಊರುಗಳಿಂದ ಬಂದಿದ್ದ ಶಾಲಾ–ಕಾಲೇಜು ವಿದ್ಯಾರ್ಥಿಗಳು, ಖಗೋಳವಿಜ್ಞಾನದಲ್ಲಿ ಆಸಕ್ತಿ ಹೊಂದಿರುವವರು ಈ ಉಡ್ಡಯನಕ್ಕೆ ಸಾಕ್ಷಿಯಾದರು.

ಭೂಮಿಯಿಂದ 3.84 ಲಕ್ಷ ಕಿ.ಮೀ. ದೂರದಲ್ಲಿರುವ ಚಂದ್ರನತ್ತ ಗಗನನೌಕೆಯನ್ನು ಕಳಿಸುವ ಈ ಆಕಾಶಯಾನಕ್ಕೆ ಗುರುವಾರ ಮಧ್ಯಾಹ್ನದಿಂದ ಕ್ಷಣಗಣನೆ ಆರಂಭವಾಗಿತ್ತು. ಸರಿಯಾಗಿ 25 ಗಂಟೆ 30 ನಿಮಿಷಗಳು ಕಳೆದ ನಂತರ ರಾಕೆಟ್ ಆಕಾಶದತ್ತ ಚಿಮ್ಮಿತು.

'ಫ್ಯಾಟ್ ಬಾಯ್' ಎಂಬ ಈ ರಾಕೆಟ್ ಠೀವಿಯಿಂದ ನಭೋಮಂಡಲದತ್ತ ವೇಗವಾಗಿ ಚಿಮ್ಮಿದಾಗ, ಅದರ ಇಂಧನ ದಹನವಾಗಿ ಹೊಮ್ಮಿದ ಕಿತ್ತಳೆ ಬಣ್ಣದ ದಟ್ಟ ಹೊಗೆ ಉಡಾವಣಾ ನೆಲೆಯನ್ನು ಆವರಿಸಿತ್ತು.

**ಕಾರ್ಯಾಚರಣೆ:** 'ಉಡ್ಡಯನಗೊಂಡ 16 ನಿಮಿಷಗಳ ನಂತರ ರಾಕೆಟ್‌ನಿಂದ ಪ್ರೊಪಲ್ಷನ್ ಮಾಡ್ಯೂಲ್ ಬೇರ್ಪಟ್ಟು, ಭೂಕಕ್ಷೆ ಸೇರಿತು. ನಂತರ ಅಂಡಾಕಾರದಲ್ಲಿ ಭೂಮಿಯ ಸುತ್ತ 5–6 ಬಾರಿ ಪರಿಭ್ರಮಿಸಿತು. ಅದು ಭೂಮಿಯಿಂದ ಅತಿ ಕಡಿಮೆ ಅಂತರ 170 ಕಿ.ಮೀ ದೂರದಲ್ಲಿ ಮತ್ತು 36,500 ಕಿ.ಮೀ.ನಷ್ಟು ಅತಿ ಹೆಚ್ಚು ದೂರದಲ್ಲಿ ಪರಿಭ್ರಮಿಸಲಿದೆ' ಎಂದು ಇಸ್ರೊ ಮೂಲಗಳು ಹೇಳಿವೆ.

'ಕ್ರಮೇಣ ತನ್ನ ವೇಗ ಹೆಚ್ಚಿಸಿಕೊಳ್ಳುವ ಪ್ರೊಪಲ್ಷನ್ ಮಾಡ್ಯೂಲ್, ಒಂದು ತಿಂಗಳ ಪಯಣದ ನಂತರ ಚಂದ್ರನ ಕಕ್ಷೆಯನ್ನು ಪ್ರವೇಶಿಸಲಿದೆ. ದಕ್ಷಿಣ ಧ್ರುವದಲ್ಲಿ ಪೂರ್ವನಿರ್ಧರಿತ ಸ್ಥಳದಲ್ಲಿ ಲ್ಯಾಂಡರ್ ಮಾಡ್ಯೂಲ್ ಇಳಿಯಲಿದೆ. ನಂತರ, ಅದರಿಂದ ಹೊರ ಬರುವ ರೋವರ್ ಚಂದಿರನ ಅಂಗಳದಲ್ಲಿ ಸಂಚರಿಸಲಿದೆ' ಎಂದು ಹೇಳಿವೆ.

**ಮನೆ ಮಾಡಿದ ಸಂಭ್ರಮ:** 'ಚಂದ್ರಯಾನ–3' ಗಗನನೌಕೆ ಭೂಕಕ್ಷೆಯನ್ನು ಕರಾರುವಾಕ್ಕಾಗಿ ಸೇರಿದ ನಂತರ ಇಲ್ಲಿನ 'ಮಿಷನ್ ನಿಯಂತ್ರಣ ಕೇಂದ್ರ'(ಎಂಸಿಸಿ) ದಲ್ಲಿ ಸಂಭ್ರಮ ಮನೆ ಮಾಡಿತ್ತು.

ನಿಯಂತ್ರಣ ಕೇಂದ್ರದಿಂದ ಮಾತನಾಡಿದ ಇಸ್ರೊ ಅಧ್ಯಕ್ಷ ಎಸ್.ಸೋಮನಾಥ್, ಭಾವಪರವಶರಾಗಿದ್ದರು. 'ಅಭಿನಂದನೆಗಳು ಭಾರತ. ಚಂದ್ರಯಾನ–3 ಚಂದ್ರನತ್ತ ತನ್ನ ಪ್ರಯಾಣ ಬೆಳೆಸಿದೆ. ಎಲ್‌ವಿಎಂ3 (ರಾಕೆಟ್) ಈ ವ್ಯೋಮನೌಕೆಯನ್ನು ಈಗಾಗಲೇ ಯಶಸ್ವಿಯಾಗಿ ಭೂಕಕ್ಷೆಯಲ್ಲಿ ಸೇರಿಸಿದೆ' ಎಂದು ಹೇಳಿದರು.

> ಇಸ್ರೊ ತಂಡಕ್ಕೆ ಪ್ರಾಮಾಣಿಕವಾಗಿ ಕೃತಜ್ಞತೆ ಸಲ್ಲಿಸುತ್ತೇವೆ. ಇದರಲ್ಲಿ ಭಾಗಿಯಾದ ಪ್ರತಿಯೊಬ್ಬರ ಬಗ್ಗೆಯೂ ಹೆಮ್ಮೆ ಪಡುತ್ತೇವೆ
>
> **ಮಲ್ಲಿಕಾರ್ಜುನ ಖರ್ಗೆ,** ಎಐಸಿಸಿ ಅಧ್ಯಕ್ಷ

> ಭಾರತದ ಪಾಲಿಗೆ ಇದು ಮರೆಯಲಾಗದ ದಿನ. ಶ್ರೀಹರಿಕೋಟಾದಲ್ಲಿ ಈ ಉಡ್ಡಯನಕ್ಕೆ ಸಾಕ್ಷಿಯಾದವರಿಗಂತೂ ಇದು ಅದೃಷ್ಟದ ಕ್ಷಣ
>
> **ಜಿತೇಂದ್ರ ಸಿಂಗ್,** ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಖಾತೆ ರಾಜ್ಯ ಸಚಿವ

### ಸುಪ್ರೀಂಕೋರ್ಟ್ ಪ್ರವೇಶದ್ವಾರದವರೆಗೂ ಪ್ರವಾಹ • ರಾಜ್‌ಘಾಟ್‌ಗೂ ನೆರೆ

# ದೆಹಲಿಯಲ್ಲಿ ಯಮುನೆಯ ರುದ್ರನರ್ತನ

ನವದೆಹಲಿ (ಪಿಟಿಐ): 45 ವರ್ಷದ ಹಿಂದಿನ ದಾಖಲೆಯನ್ನು ಮೀರಿ ರಾಷ್ಟ್ರ ರಾಜಧಾನಿಯಲ್ಲಿ ಮೂರು ದಿನದಿಂದ ಹರಿಯುತ್ತಿದ್ದ ಯಮುನೆಯ ನೀರಿನ ಮಟ್ಟ ಶುಕ್ರವಾರ ನಸುಕಿನಿಂದ ತುಸು ಇಳಿಮುಖವಾಗುತ್ತಿದೆ. ಆದರೂ ನಗರದ ಬಹುತೇಕ ಪ್ರಮುಖ ಪ್ರದೇಶಗಳು ಪ್ರವಾಹದಿಂದ ಮುಳುಗಡೆಯಾಗಿವೆ.

ವಾಯವ್ಯ ದೆಹಲಿಯ ಮುಕುಂದಪುರ ಪ್ರದೇಶದಲ್ಲಿ ಪ್ರವಾಹದಲ್ಲಿ ಸ್ನಾನ ಮಾಡುತ್ತಿದ್ದ ನಿಖಿಲ್ (10), ಪಿಯೂಷ್ (13), ಆಶಿಶ್ (13) ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾರೆ. ಇವರು ಈಶಾನ್ಯ ದೆಹಲಿಯ ಜಹಾಂಗೀರ್‌ಪುರಿ ನಿವಾಸಿಗಳು. ನೆರೆಯಿಂದ ದೆಹಲಿಯಲ್ಲಿ ಸಂಭವಿಸಿದ ಸಾವಿನ ಮೊದಲ ವರದಿಯಿದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಗುರುವಾರ ಸಂಜೆ 208.66 ಮೀಟರ್‌ನಷ್ಟಿದ್ದ ಯಮುನೆಯ ನೀರಿನ ಹರಿವಿನ ಮಟ್ಟ, ಶುಕ್ರವಾರ ನಸುಕಿನಿಂದಲೂ ಹಂತ ಹಂತವಾಗಿ ತಗ್ಗಿದೆ. ಸಂಜೆ 6 ಗಂಟೆಯಲ್ಲಿ 208.17 ಮೀಟರ್‌ನಷ್ಟಿತ್ತು. 1978ರಲ್ಲಿ 207.49 ಮೀಟರ್‌ನಷ್ಟಿದ್ದೆ ಇದೂವರೆಗಿನ ದಾಖಲೆಯಾಗಿತ್ತು. ಅಪಾಯದ ಮಟ್ಟ 205.33 ಮೀಟರ್.

ಇಂದ್ರಪ್ರಸ್ಥದಲ್ಲಿದ್ದ ನೀರಾವರಿ ಮತ್ತು ಪ್ರವಾಹ ನಿಯಂತ್ರಣ ಇಲಾಖೆಯ ನಿಯಂತ್ರಕ ಯಮುನೆಯ ರಭಸಕ್ಕೆ ಹಾನಿಗೀಡಾಗಿದ್ದರಿಂದ ಕೇಂದ್ರ ದೆಹಲಿಯಲ್ಲಿರುವ ಸುಪ್ರೀಂಕೋರ್ಟ್‌ನ ಪ್ರವೇಶದ್ವಾರಕ್ಕೂ ಪ್ರವಾಹ ನುಗ್ಗಿದೆ. ರಾಜ್‌ಘಾಟ್ ಸಹ ಮುಳುಗಡೆಯಾಗಿದೆ. ಪೂರ್ವ ದೆಹಲಿ–ಲುಟಿಯನ್ಸ್ ದೆಹಲಿ ಸಂಪರ್ಕಿಸುವ ಐಟಿಎಂ ರಸ್ತೆ ಜಲಾವೃತಗೊಂಡಿದ್ದರಿಂದ ವಾಹನ ಸಂಚಾರ ಅಸ್ತವ್ಯಸ್ತಗೊಂಡಿದೆ.

'ವಿಶ್ವಸಂಸ್ಥೆಯ ಕಚೇರಿ ಬಳಿ ಚರಂಡಿ ನೀರು ಉಕ್ಕಿ ಹರಿಯುತ್ತಿರುವುದರಿಂದ ಮಹಾತ್ಮಗಾಂಧಿ ರಸ್ತೆಯಲ್ಲಿ ವಾಹನ ಸಂಚಾರಕ್ಕೆ ಅವಕಾಶವಿಲ್ಲ' ಎಂದು ದೆಹಲಿ ಸಂಚಾರ ಪೊಲೀಸರು ಟ್ವೀಟ್ ಮಾಡಿದ್ದಾರೆ.

ಪುಟ್ಟ ನದಿಗಳಲ್ಲಿ ನೀರು ರಭಸವಾಗಿ ಹರಿಯುವಂತೆ ರಸ್ತೆಗಳಲ್ಲಿ ಪ್ರವಾಹ ಬಂದಿದೆ. ವಾಯವ್ಯ ದೆಹಲಿಯ ಕಿಂಗ್ಸ್‌ವೇ ಕ್ಯಾಂಪ್‌ನಲ್ಲಿರುವ ಅಂಧರ ಶಾಲೆಯ 60ಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ದೆಹಲಿ ಪೊಲೀಸರು ಸ್ಥಳಾಂತರಿಸಿದ್ದಾರೆ. ಎನ್‌ಡಿಆರ್‌ಎಫ್ ತಂಡವು ಮಯೂರ್ ವಿಹಾರ್ ಆಶ್ರಯಧಾಮದಲ್ಲಿ ಸಿಲುಕಿದ್ದ 60 ನಾಯಿ, 50 ಹಸುಗಳನ್ನು ದೋಣಿ ಬಳಸಿ ರಕ್ಷಿಸಿದೆ. ನದಿ ಸುತ್ತಮುತ್ತಲಿನ ಸ್ಮಶಾನಗಳು ಮುಳುಗಡೆಯಾಗಿವೆ.

ಯಮುನೆಯ ಪ್ರವಾಹದಲ್ಲೇ ತಮ್ಮ ವಸ್ತುಗಳನ್ನು ಹೊತ್ತು ಸುರಕ್ಷಿತ ಸ್ಥಳಕ್ಕೆ ತೆರಳಿದ ಸ್ಥಳೀಯರು – ಎಎಫ್‌ಪಿ ಚಿತ್ರ

### ಪ್ರವಾಹದ ಪ್ರಮುಖಾಂಶಗಳು...

- ಪ್ರವಾಹದಲ್ಲಿ ಸಿಲುಕಿದ ಪ್ರಯಾಣಿಕರಿಗೆ ನೆರವಾಗಲು 4,500 ಸಿಬ್ಬಂದಿ ನಿಯೋಜಿಸಿದ ದೆಹಲಿ ಪೊಲೀಸರು
- ನಿಗಮಬೋಧ್ ಘಾಟ್, ಗೀತಾ ಕಾಲೊನಿ, ವಜೀರಾಬಾದ್, ಸರಾಯ್ ಕಾಲೇಖಾನ್‌ನಲ್ಲಿನ ಸ್ಮಶಾನಗಳನ್ನು ಮುಚ್ಚಿದ ದೆಹಲಿ ಪಾಲಿಕೆ
- ದೆಹಲಿಯ ಕೇಂದ್ರ ವಲಯ ಮತ್ತು ನರೇಲಾ ವಲಯದಲ್ಲಿ ಪರಿಹಾರ ಶಿಬಿರ ಸ್ಥಾಪನೆ
- ಪಂಜಾಬ್, ಹರಿಯಾಣದಲ್ಲಿ ಚುರುಕು ಪಡೆದ ಪರಿಹಾರ ಕಾರ್ಯಾಚರಣೆ
- ಪಂಜಾಬ್‌ನಲ್ಲಿ 14 ಜಿಲ್ಲೆ ಬಾಧಿತ; 2.40 ಲಕ್ಷ ಹೆಕ್ಟೇರ್ ಭತ್ತದ ಬೆಳೆಗೆ ಹಾನಿ, ಪ್ರವಾಹ ಪೀಡಿತ ಪ್ರದೇಶದಿಂದ 19 ಸಾವಿರ ಜನರ ಸ್ಥಳಾಂತರ
- ಜಲಾವೃತಗೊಂಡ ಪ್ರದೇಶದಿಂದ ನೀರು ಹೊರಹಾಕಲು ಮೋಟರ್ ಪಂಪ್ ಬಳಕೆ
- ಹರಿಯಾಣದಲ್ಲಿ 10 ಜಿಲ್ಲೆ ಬಾಧಿತ; 3,674 ಜನರ ಸ್ಥಳಾಂತರ, 1.24 ಲಕ್ಷ ಹೆಕ್ಟೇರ್‌ಗೂ ಹೆಚ್ಚು ಬೆಳೆ ಹಾನಿ, 12 ಪರಿಹಾರ ಶಿಬಿರಗಳಲ್ಲಿ 1,819 ಜನರಿಗೆ ಆಸರೆ

### ಗವರ್ನರ್–ಸಚಿವ ಜಟಾಪಟಿ

ದೆಹಲಿಯ ಪ್ರವಾಹ ಪೀಡಿತ ಸ್ಥಳಕ್ಕೆ ಲೆಫ್ಟಿನೆಂಟ್ ಗವರ್ನರ್ ವಿ.ಕೆ.ಸಕ್ಸೇನಾ, ನೀರಾವರಿ ಮತ್ತು ಪ್ರವಾಹ ನಿಯಂತ್ರಣ ಸಚಿವ ಸೌರಭ್ ಭಾರದ್ವಾಜ್ ಭೇಟಿ ನೀಡಿ, ಪರಿಶೀಲಿಸುವ ವೇಳೆಯಲ್ಲೇ ಮಾತಿನ ಜಟಾಪಟಿ ನಡೆಸಿದ್ದಾರೆ.

'ಎನ್‌ಡಿಆರ್‌ಎಫ್ ನಿಯೋಜಿಸುವಲ್ಲಿ ವಿಳಂಬವಾಗಿದ್ದರಿಂದಲೇ ನೀರು ನಿಯಂತ್ರಕ ಹಾನಿಗೊಳಗಾಗಿದೆ. ಇದರಿಂದಾಗಿಯೇ ನೆರೆ ಹೆಚ್ಚಿದೆ. ಸಮಸ್ಯೆ ಉಲ್ಬಣಗೊಂಡಿದೆ. ನಮ್ಮ ಮನವಿಗೆ ಅಧಿಕಾರಿಗಳು ಸ್ಪಂದಿಸದಾಗಿದ್ದಾರೆ' ಎಂದು ಭಾರದ್ವಾಜ್ ದೂರಿದ್ದಕ್ಕೆ; 'ಇದು ದೂಷಣೆಯ ಸಮಯವಲ್ಲ. ತಂಡವಾಗಿ ಕೆಲಸ ಮಾಡಬೇಕಿದೆ. ನನಗೂ ಹೇಳಲು ಬಹಳಷ್ಟು ವಿಷಯಗಳಿವೆ. ಈಗ ಅದರ ಅಗತ್ಯವಿಲ್ಲ' ಎಂದು ಸಕ್ಸೇನಾ ತಿರುಗೇಟು ನೀಡಿದ್ದಾರೆ.

### ಓಖ್ಲಾ ಘಟಕ ಪುನರಾರಂಭ

ಯಮುನಾ ನದಿಯ ನೀರಿನ ಮಟ್ಟ ಇಳಿಮುಖಗೊಳ್ಳುತ್ತಿದ್ದಂತೆ; ಓಖ್ಲಾ ನೀರು ಶುದ್ಧೀಕರಣ ಘಟಕವನ್ನು ಪುನರಾರಂಭಿಸಲಾಗುತ್ತಿದೆ ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಶುಕ್ರವಾರ ತಿಳಿಸಿದ್ದಾರೆ.

ನೀರಿನ ಹರಿವಿನ ಮಟ್ಟ ಹೆಚ್ಚಿದ್ದರಿಂದ ವಜೀರಾಬಾದ್, ಚಂದ್ರವಾಲ್, ಓಖ್ಲಾ ನೀರು ಶುದ್ಧೀಕರಣ ಘಟಕಗಳನ್ನು ಸರ್ಕಾರ ಮುಚ್ಚಿತ್ತು. ಇದರಿಂದ ರಾಷ್ಟ್ರ ರಾಜಧಾನಿಯ ಕೆಲವು ಪ್ರದೇಶಗಳಲ್ಲಿ ಕುಡಿಯುವ ನೀರಿಗೆ ಕೊರತೆ ಎದುರಾಗಿತ್ತು.

ನೀರು ನಿಯಂತ್ರಕದ ದುರಸ್ತಿ ಅಹೋರಾತ್ರಿ ನಡೆದಿದೆ. ಪರಿಸ್ಥಿತಿ ನಿಯಂತ್ರಣಕ್ಕೆ ಬರಲಿದೆ ಎಂದು ಕೇಜ್ರಿವಾಲ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

# ಅಜಿತ್ ಪವಾರ್‌ಗೆ ಹಣಕಾಸು ಜತೆಗೆ ಯೋಜನಾ ಖಾತೆ

ಅಜಿತ್ ಪವಾರ್

ಅದಿತಿ ತತ್ಕರೆ

ಮುಂಬೈ (ಪಿಟಿಐ): ಎನ್‌ಸಿಪಿಯಿಂದ ಹೊರಬಂದು ಮಹಾರಾಷ್ಟ್ರ ಸರ್ಕಾರದಲ್ಲಿ ಉಪ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ್ದ ಅಜಿತ್ ಪವಾರ್ ಅವರಿಗೆ ಶುಕ್ರವಾರ ಹಣಕಾಸು ಮತ್ತು ಯೋಜನಾ ಖಾತೆಯನ್ನು ನೀಡಲಾಗಿದೆ.

ಅಜಿತ್ ಪವಾರ್ ಅವರೊಂದಿಗೆ ಎನ್‌ಸಿಪಿಯಿಂದ ಹೊರಬಂದಿದ್ದ ಎಂಟು ಶಾಸಕರು ಜುಲೈ 2ರಂದು ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ್ದರು. ಅವರಿಗೂ ಖಾತೆಗಳನ್ನು ಹಂಚಿಕೆ ಮಾಡಲಾಗಿದೆ ಎಂದು ಮುಖ್ಯಮಂತ್ರಿ ಶಿಂದೆ ಕಚೇರಿಯ ಪ್ರಕಟಣೆಯು ತಿಳಿಸಿದೆ.

ಧನಂಜಯ್ ಮುಂಡೆ (ಕೃಷಿ), ದಿಲೀಪ್ ವಾಲ್ಸೆ ಪಾಟೀಲ್ (ಸಹಕಾರ), ಹಸನ್ ಮುಶ್ರಫ್ (ವೈದ್ಯಕೀಯ ಶಿಕ್ಷಣ), ಛಗನ್ ಭುಜಬಲ್ (ಆಹಾರ ಮತ್ತು ನಾಗರಿಕ ಪೂರೈಕೆ), ಧರ್ಮರಾವ್ ಅತ್ರಂ (ಆಹಾರ ಮತ್ತು ಔಷಧೀಯ ಆಡಳಿತ), ಸಂಜಯ್ ಬನ್ಸೊಡೆ (ಕ್ರೀಡೆ), ಅದಿತಿ ತತ್ಕರೆ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ), ಅನಿಲ್ ಪಾಟೀಲ್ (ಪರಿಹಾರ, ಪುನರ್ವಸತಿ ಮತ್ತು ವಿಪತ್ತು ನಿರ್ವಹಣೆ) ಸಚಿವ ಸ್ಥಾನಗಳನ್ನು ನೀಡಲಾಗಿದೆ ಎಂದೂ ಪ್ರಕಟಣೆಯಲ್ಲಿ ತಿಳಿಸಲಾಗಿದೆ. ಎನ್‌ಸಿಪಿಯ 9 ಸಚಿವರ ಸೇರ್ಪಡೆಯೊಂದಿಗೆ ಮಹಾರಾಷ್ಟ್ರದಲ್ಲೀಗ 29 ಕ್ಯಾಬಿನೆಟ್ ಸಚಿವರಿದ್ದಾರೆ. ಶಿಂದೆ ನೇತೃತ್ವದ ಶಿವಸೇನಾ ಬಣದ ಶಾಸಕರು ಪವಾರ್ ಅವರಿಗೆ ಹಣಕಾಸು ಮತ್ತು ಯೋಜನೆ ಖಾತೆ ಹಂಚಿಕೆ ಮಾಡಿದ್ದಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

# ಮಹಾರಾಷ್ಟ್ರ ಸ್ಪೀಕರ್‌ಗೆ 'ಸುಪ್ರೀಂ' ನೋಟಿಸ್

ನವದೆಹಲಿ (ಪಿಟಿಐ): ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ ಹಾಗೂ ಶಿವಸೇನಾದ ಇತರ ಶಾಸಕರ ಅನರ್ಹತೆ ವಿರುದ್ಧದ ಅರ್ಜಿಗಳಿಗೆ ಸಂಬಂಧಿಸಿದಂತೆ ತ್ವರಿತವಾಗಿ ತೀರ್ಪು ನೀಡಲು ಕೋರಿ ಸಲ್ಲಿಸಲಾಗಿರುವ ಮನವಿ ಪ್ರಕರಣ ಸಂಬಂಧ ಸುಪ್ರೀಂ ಕೋರ್ಟ್ ಮಹಾರಾಷ್ಟ್ರ ಸ್ಪೀಕರ್ ಅವರಿಗೆ ಪ್ರತಿಕ್ರಿಯಿಸುವಂತೆ ಶುಕ್ರವಾರ ನೋಟಿಸ್ ನೀಡಿದೆ.

2022ರ ಜೂನ್‌ನಲ್ಲಿ ರಾಜ್ಯದಲ್ಲಿ ಹೊಸ ಸರ್ಕಾರ ರಚಿಸಲು ಶಿಂದೆ ಮತ್ತು ಶಿವಸೇನಾ ಇತರ ಶಾಸಕರು ಬಿಜೆಪಿಯ ಜತೆಗೂಡಿದ್ದರು.

